ಮಂಗಳೂರು
ಶುಕ್ರವಾರ, 1 ಮೇ 2026
ಸಂಪುಟ 48, ಸಂಚಿಕೆ 43 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ





ಚಿತ್ರದುರ್ಗದ ಪುಣ್ಯಭೂಮಿಯಲ್ಲಿ ಮಾಜಿ ಮುಖ್ಯಮಂತ್ರಿ, ರೈತ ನೇತಾರ, ಛಲದಂಕ ಮಲ್ಲ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವವು ಮೇ 9 ರಂದು ನಡೆಯಲಿದೆ. ಕಳೆದ 50 ವರ್ಷಗಳಿಂದ ತಮ್ಮ ಜೀವನವನ್ನು ಸಮಾಜಕ್ಕೆ ಮುಡಿಪಾಗಿಟ್ಟು ರಾಜ್ಯದ ಬಡವರು, ದೀನದಲಿತರು, ಪರಿಶಿಷ್ಟ ಜಾತಿ, ಪಂಗಡದವರು, ಹಿಂದುಳಿದವರು, ಮಹಿಳೆಯರ ಏಳಿಗೆಗಾಗಿ ಶ್ರಮಿಸಿದ್ದಾರೆ. ರಾಜ್ಯದ ಬಡವರ ಧ್ವನಿಯಾಗಿ ತಮ್ಮನ್ನು ಸಮರ್ಪಿಸಿಕೊಂಡ ಏಕೈಕ ನಾಯಕ ಬಿ.ಎಸ್.ಯಡಿಯೂರಪ್ಪ. ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲಾಗಿ ಕರ್ನಾಟಕ ಎಂಬಂತೆ ಬೆಳೆಸಿದರು. ಆ ಕಾರಣಕ್ಕೋಸ್ಕರ ನಗರಕ್ಕೆ ಸೀಮಿತವಾದ ಪಕ್ಷ ಎನಿಸಿಕೊಂಡಿದ್ದ ಹಾಗೂ ಮುಂದುವರೆದ ಸಮಾಜಗಳಿಗೆ ಸೀಮಿತವಾದ ಪಕ್ಷ ಎನಿಸಿಕೊಂಡಿದ್ದ ಪಕ್ಷವನ್ನು ಬಡವರ, ರೈತರ, ಕೃಷಿ ಕಾರ್ಮಿಕರ, ಶೋಷಿತ ವರ್ಗಗಳ ಧ್ವನಿಯಾಗಿ ಹೋರಾಟ ಮಾಡುವ ಮುಖೇನ ಬಿಜೆಪಿಯನ್ನು ದಕ್ಷಿಣ ಭಾರತದ ಹೆಬ್ಬಾಗಿಲಾಗಿ ಕರ್ನಾಟಕ ಬಿಂಬಿಸಿ, ಇಡೀ ದೇಶಕ್ಕೆ ಸಾರುವ ಕೆಲಸವನ್ನು ಮಾಡಿದವರು ಸನ್ಮಾನ್ಯ ಯಡಿಯೂರಪ್ಪ.



ಕರ್ನಾಟಕದಲ್ಲಿ ಬಿಜೆಪಿಯ ಶಿಲ್ಪಿ

ಬಿ. ಎಸ್. ಯಡಿಯೂರಪ್ಪ

ಬೂಕನಕೆರೆ ಸಿದ್ಧಲಿಂಗಪ್ಪ ಯಡಿಯೂರಪ್ಪ, ಅಕ್ಷರಶಃ BSY ಎಂದೇ ಕರ್ನಾಟಕದ ಮನೆಮಾತು. ಅಕ್ಕಿ ಗಿರಣಿಯ ಗುಮಾಸ್ತನಾಗಿ ಜೀವನ ಆರಂಭಿಸಿದ ಅವರು, ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ರಾಜ್ಯದ ಚುಕ್ಕಾಣಿ ಹಿಡಿದದ್ದು ಸಾಮಾನ್ಯ ಸಾಧನೆಯಲ್ಲ. ಬಿಜೆಪಿಗೆ ದಕ್ಷಿಣದ ಹೆಬ್ಬಾಗಿಲು ತೆರೆದವರು. 1983ರಲ್ಲಿ ಕೇವಲ 2 ಶಾಸಕರನ್ನು ಹೊಂದಿದ್ದ ಬಿಜೆಪಿಯನ್ನು 2008ರಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ತಂದು ನಿಲ್ಲಿಸಿದ ಕೀರ್ತಿ ಯಡಿಯೂರಪ್ಪ ಅವರದು. ''ದಕ್ಷಿಣ ಭಾರತದಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವೇ ಇಲ್ಲ'' ಎಂಬ ಮಾತನ್ನು ಸುಳ್ಳು ಮಾಡಿ, ಕರ್ನಾಟಕವನ್ನು ಬಿಜೆಪಿಯ ''ದಕ್ಷಿಣದ ಹೆಬ್ಬಾಗಿಲು'' ಆಗಿ ರೂಪಿಸಿದ ಶಿಲ್ಪಿ ಅವರೇ. ತಳಮಟ್ಟದಿಂದ ಮುಖ್ಯಮಂತ್ರಿ ಗದ್ದುಗೆಯವರೆಗಿನ ಅವರ 50 ವರ್ಷಗಳ ಪಯಣ, ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆ.



ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಬಿಎಸ್‌ವೈಯವರು ಜಾರಿಗೊಳಿಸಿದ ಐತಿಹಾಸಿಕ ಯೋಜನೆಗಳು



₹25,000 ಕೋಟಿ ರೈತರ ಕೃಷಿ ಸಾಲಮನ್ನಾ

10 HP ವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ₹25,000 ಕೋಟಿ ಕೃಷಿ ಸಾಲಮನ್ನಾ, ಭತ್ತ-ರಾಗಿಗೆ ಬೆಂಬಲ ಬೆಲೆ ಹೆಚ್ಚಳ. ಅವರ ಅವಧಿಯಲ್ಲಿ ನೀರಾವರಿ ಬಜೆಟ್ ₹2,000 ಕೋಟಿಯಿಂದ ₹17,000 ಕೋಟಿಗೆ ಏರಿತು.



20,000 ಲಕ್ಷ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ

ಹೆಣ್ಣು ಮಗು ಜನಿಸಿದರೆ ₹10,000 ಬಾಂಡ್, 18 ವರ್ಷಕ್ಕೆ ₹1 ಲಕ್ಷ. 20 ಲಕ್ಷ ಹೆಣ್ಣು ಮಕ್ಕಳ ಬದುಕಿಗೆ ಭದ್ರತೆ.

₹3,92,000 ಕೋಟಿ ಹೂಡಿಕೆ-ಜಾಗತಿಕ ಮನ್ನಣೆ



2010ರ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹3.92 ಲಕ್ಷ ಕೋಟಿ ಹೂಡಿಕೆ ಪ್ರಸ್ತಾಪ.

ಸಾಮಾಜಿಕ ಭದ್ರತೆ



ಶಾದಿ ಭಾಗ್ಯ, ಸಂಧ್ಯಾ ಸುರಕ್ಷಾ ಪಿಂಚಣಿ, ಕಿಸಾನ್ ಸಮ್ಮಾನ್ ಅಡಿ ರಾಜ್ಯದ ₹4,000 + ಕೇಂದ್ರದ ₹6,000 ಸೇರಿ ವರ್ಷಕ್ಕೆ ₹10,000.

₹1,86,90,000 ರೂ. ಉ.ಕ. ಪ್ರವಾಹಕ್ಕೆ ತುರ್ತು ಪರಿಹಾರ:



ಕೋವಿಡ್‌ನ ಎರಡೂ ಅಲೆಗಳಲ್ಲಿ ಬೆಂಗಳೂರನ್ನು ಲಸಿಕಾ ಅಭಿಯಾನದಲ್ಲಿ ಮುಂಚೂಣಿಗೆ ತಂದರು. 2019ರ ಉತ್ತರ ಕರ್ನಾಟಕ ಪ್ರವಾಹಕ್ಕೆ ₹1,869 ಕೋಟಿ ತುರ್ತು ಪರಿಹಾರ.

ಮೂಲಸೌಕರ್ಯ ಕ್ರಾಂತಿ



ಬೆಂಗಳೂರು ಮೆಟ್ರೋ ಹಂತ-1ಕ್ಕೆ ಚಾಲನೆ, 8-ಪಥದ ಬೆಂಗಳೂರು-ಮೈಸೂರು ಹೆದ್ದಾರಿಗೆ ಅಡಿಗಲ್ಲು, ಮಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್, ಅಪ್ಪರ್ ಭದ್ರಾ ಮತ್ತು ಎತ್ತಿನಹೊಳೆ ಯೋಜನೆಗಳಿಗೆ ವೇಗ. ಬೆಂಗಳೂರು ಸಬ್-ಅರ್ಬನ್ ರೈಲು, ಪೆರಿಫೆರಲ್ ರಿಂಗ್ ರಸ್ತೆ, ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ ಯೋಜನೆಗಳಿಗೆ ಅನುಮೋದನೆ ನೀಡಿ ಮುಂದಿನ ಪೀಳಿಗೆಗೆ ದೂರದೃಷ್ಟಿಯ ಕೊಡುಗೆ ನೀಡಿದರು.

₹35,00,00,00,000 ಅನುದಾನ ನೀಡುವ ಮೂಲಕ ಬೆಳ್ತಂಗಡಿಯ ಚಿತ್ರಣವನ್ನೇ ಬದಲಿಸಿದ ಅಭಿವೃದ್ಧಿ ಹರಿಕಾರ

2007, 2008-2011 ಮತ್ತು 2019-2021ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಅವರು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಸುಮಾರು ₹3,500 ಕೋಟಿ ಅನುದಾನ ನೀಡಿ ತಾಲೂಕಿನ ಭಾಗ್ಯರೇಖೆಯನ್ನೇ ಬದಲಿಸಿದರು. ಶಾಸಕ ಹರೀಶ್ ಪೂಂಜ ಅವರು ತಾಲೂಕಿನ ಅಭಿವೃದ್ಧಿಗೆ ಸಲ್ಲಿಸಿದ ಪ್ರತಿಯೊಂದು ಬೇಡಿಕೆಗೂ ಯಡಿಯೂರಪ್ಪ ಅವರು ಮುಕ್ತ ಮನಸ್ಸಿನಿಂದ ಸಹಿ ಹಾಕುತ್ತಿದ್ದರು. ಕಾಲುಸಂಕ ನಿರ್ಮಾಣದಿಂದ ಹಿಡಿದು ಹೆದ್ದಾರಿವರೆಗೆ ಅವರ ಕೊಡುಗೆ ಅಪಾರ. ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ಜಾಲ, ಚೆಕ್‌ಡ್ಯಾಮ್, ಕಿಂಡಿ ಅಣೆಕಟ್ಟುಗಳ ಮೂಲಕ ನೀರಾವರಿಗೆ ಉತ್ತೇಜನ, ಶಾಲಾ ಕಟ್ಟಡ ದುರಸ್ತಿ, ಹೊಸ ಕೊಠಡಿಗಳ ನಿರ್ಮಾಣ,ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೇಲ್ದರ್ಜೆಗೇರಿಸುವಿಕೆ, ಪರಿಶಿಷ್ಟ ಪಂಗಡ ಕಾಲೊನಿಗಳಿಗೆ ಮೂಲಸೌಕರ್ಯ''ಆಡಳಿತ ಪಕ್ಷವೋ, ವಿಪಕ್ಷವೋ ಎನ್ನದೆ ಎಲ್ಲ ಶಾಸಕರ ಕ್ಷೇತ್ರಕ್ಕೂ ಅಭಿವೃದ್ಧಿ ಅನುದಾನ ನೀಡಿದ ಏಕೈಕ ಮುಖ್ಯಮಂತ್ರಿ'' ಎಂಬ ಹೆಗ್ಗಳಿಕೆ ಅವರದು. ಕೋಟಿ ಕೋಟಿ ಅನುದಾನದ ಮಳೆ ಸುರಿಸಿ ರಾಜ್ಯದ ಅಭಿವೃದ್ಧಿಗೆ ವೇಗ ನೀಡಿದವರು ಈ ರೈತಬಂಧು, ಜನನಾಯಕ ಯಡಿಯೂರಪ್ಪ



ಅಕ್ಕಿ ಗಿರಣಿಯ ಗುಮಾಸ್ತನಿಂದ ನಾಲ್ಕು ಬಾರಿ ಮುಖ್ಯಮಂತ್ರಿಯಾಗುವವರೆಗಿನ BSY ಅವರ 50 ವರ್ಷಗಳ ರಾಜಕೀಯ ಪಯಣ ಆಧುನಿಕ ಕರ್ನಾಟಕವನ್ನು ರೂಪಿಸಿದೆ. ಅವರಿಲ್ಲದಿದ್ದರೆ, ದಕ್ಷಿಣ ಭಾರತದಲ್ಲಿ ಬಿಜೆಪಿ ವಿಸ್ತರಣೆಯ ಕನಸು ನನಸಾಗುತ್ತಿರಲಿಲ್ಲ. 2028ರಲ್ಲಿ ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಸ್ಥಾಪನೆಯಾಗುವ ವಿಶ್ವಾಸವಿದೆ. ಅದಕ್ಕೆ ಸ್ಫೂರ್ತಿ ಮತ್ತು ಶಕ್ತಿ ಬಿ.ಎಸ್. ಯಡಿಯೂರಪ್ಪ ಅವರೇ.

ಮೇ 9ರಂದು ನಡೆಯುವ ಅವರ 50 ವರ್ಷಗಳ ರಾಜಕೀಯ ಪಯಣದ ಸುವರ್ಣ ಸಂಭ್ರಮದಲ್ಲಿ ನಾವೆಲ್ಲರೂ ಪಾಲ್ಗೊಂಡು, ಕರ್ನಾಟಕದ ಈ ಅಪ್ರತಿಮ ನಾಯಕನಿಗೆ ಗೌರವ ಸಲ್ಲಿಸೋಣ.

ಹರೀಶ್ ಪೂಂಜ

ಶಾಸಕರು, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ

ಮಂಗಳೂರು
ಶುಕ್ರವಾರ, 1 ಮೇ 2026
ಸಂಪುಟ 48, ಸಂಚಿಕೆ 43 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕ್ಷಮೆಯಾಚಿಸಿದ ನೇಪಾಳ ಏರ್‌ಲೈನ್ಸ್ | ೦೭
ದೇಸಿ ತಂತ್ರಜ್ಞಾನಕ್ಕೆ ಉತ್ತೇಜನ | ೦೭
8,000 ಕೋಟಿ ಯೋಜನೆಗಳಿಗೆ ಶೀಘ್ರ ಚಾಲನೆ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಹುಣ್ಣಿಮೆ, ನಕ್ಷತ್ರ: ಸ್ವಾತಿ

ದಿನದ ಮಾತು

ಅರ್ಹರ ಮುಂದೆ ಕೊಂಕಿಲ್ಲದ ತಪ್ಪೊಪ್ಪಿಗೆ, ಮತ್ತೆ ಮಾಡೆನೆಂಬ ಭರವಸೆ. ಇದೇ ನಿಜವಾದ ಪಶ್ಚಾತ್ತಾಪ.
▲ ಗಾಂಧೀಜಿ

ಬುದ್ಧ ಪೂರ್ಣಿಮೆ; ಕರುಣೆಯ ಸಾಕ್ಷಾತ್ಕಾರ

ಲೇಖನ
• ಸಿ. ಪಿ. ರಾಧಾಕೃಷ್ಣನ್

• ಪುಟ ೬

ಕಿರುಸುದ್ದಿ

ಇರಾನ್ ಕದನದಿಂದ ಪಾಕ್ ಆರ್ಥಿಕತೆಗೆ ಪೆಟ್ಟು: ಷರೀಫ್

• ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಸಾಧಿಸಿದ ಆರ್ಥಿಕ ಪ್ರಗತಿಗೆ ಭಾರಿ ಹಿನ್ನಡೆ ಉಂಟುಮಾಡಿದೆ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಬುಧವಾರ ತಿಳಿಸಿದ್ದಾರೆ. ಸಂಪುಟ ಸಭೆಯಲ್ಲಿ ಮಾತನಾಡಿದ ಷರೀಫ್, ಯುದ್ಧದ ಹಿನ್ನೆಲೆಯಲ್ಲಿ ಪಾಕ್‌ನ ತೈಲ ಆಮದು ವೆಚ್ಚ 300 ಮಿಲಿಯನ್ ಡಾಲರ್‌ನಿಂದ 800 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಒತ್ತಡ ಹೇರಿದೆ. ಪ್ರಸ್ತುತ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಪ್ರತಿದಿನ ಕಾರ್ಯಪಡೆಯೊಂದು ಪರಿಶೀಲನೆ ನಡೆಸುತ್ತಿದೆ ಎಂದು ಅವರು ಖಚಿತಪಡಿಸಿದ್ದಾರೆ.

• ಪುಟ ೭

ಬಂಗಾಳ: ಬಿಜೆಪಿಗೆ ಐತಿಹಾಸಿಕ ಜಯ?

• ಪುಟ ೭

ಭಾರತ-ಇಟಲಿ ರಕ್ಷಣಾ ಸಹಯೋಗಕ್ಕೆ ಸಹಿ

• ಪುಟ ೭

ಅಮೆರಿಕನ್ನರಿಗೆ ಅರ್ಹ ಜಾಗ ಸಮುದ್ರದಾಳ: ಮೊಜ್ತಬಾ

• ಪುಟ ೭

ಸಶಸ್ತ್ರ ಪಡೆಗೆ ಸಾವಯವ ಆಧರಿತ ಆಹಾರ ಪೂರೈಕೆ

• ಪುಟ ೫

ಅಲ್ಪಸಂಖ್ಯಾತರ ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.

• ಪುಟ ೫



ಗಂಗಾ ಎಕ್ಸ್‌ಪ್ರೆಸ್‌ವೇ: ಉ.ಪ್ರದೇಶದ ಸೇತು

• ಪುಟ ೭

ಸುದ್ದಿ ಸಮಗ್ರ

ಆರೋಗ್ಯ ಇಲಾಖೆ ಇಇ ಅಮಾನತು, ಬೌರಿಂಗ್ ಮುಖ್ಯಸ್ಥರಿಗೆ ನೋಟಿಸ್ | ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ ಪ್ರಧಾನಿ

ಕಠಿಣ ಕ್ರಮಕ್ಕೆ ಆದೇಶ

• ಬೆಂಗಳೂರು: ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ಏಳು ಜನರ ಸಾವಿಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗದ ಇಇ ಅಮಾನತಿಗೆ ಹಾಗೂ ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಈ ನಡುವೆ ಮೃತರ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಸಂತಾಪ ಸೂಚಿಸಿದ್ದು, ತಲಾ ಎರಡು ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ.



ಬೌರಿಂಗ್ ದುರಂತ

ಭಾರೀ ಮಳೆಯಿಂದ ಬೌರಿಂಗ್ ಆಸ್ಪತ್ರೆ ದುರಂತದ ಹಿನ್ನೆಲೆಯಲ್ಲಿ ಗುರುವಾರ ವಿಧಾನ ಸೌಧದಲ್ಲಿ ಸಿಎಂ ಅಧ್ಯಕ್ಷತೆಯಲ್ಲಿ ಜಿಬಿಎ ಆಯುಕ್ತರುಗಳ ಸಭೆ ನಡೆ ಯಿತು. ಗೋಡೆಗೆ ಹಾನಿ ಆಗಲಿದೆ ಎಂದು ತಿಳಿದಿದ್ದರೂ ಕಾಮಗಾರಿ ನಡೆಯುವಾಗ ಮಣ್ಣು ಸುರಿದದ್ದು ಏಕೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಗೋಡೆಗೆ ಹಾನಿಯಾಗುವಂತೆ ಮಣ್ಣು ಸುರಿದದ್ದು ನೀವು ಏಕೆ ನೋಡಿಕೊಳ್ಳಲಿಲ್ಲ ಎಂದು ಆಸ್ಪತ್ರೆ ಮುಖ್ಯಸ್ಥರನ್ನು ಹಾಗೂ ಸಂಬಂಧಿಸಿದ ಇಂಜನೀಯರ್ ಅವರನ್ನು ಸಿಎಂ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ನೋಟಿಸ್ ನೀಡಲು ಸೂಚಿಸಿದ ಮುಖ್ಯಮಂತ್ರಿಗಳು, ಬೆಂಗಳೂರಿನಲ್ಲಿ ಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದರು. ಬುಧವಾರ ಬೆಂಗಳೂರಿನಲ್ಲಿ ಉಂಟಾದ ಮಳೆಯಲ್ಲಿ ಸಾಕಷ್ಟು ಹಾನಿಯಾಗಿದ್ದು, 250ಕ್ಕೂ ಹೆಚ್ಚು ಮರಗಳು ಬಿದ್ದಿವೆ. ಏಳು ಜನ ಸಾವನ್ನಪ್ಪಿದ್ದಾರೆ. ಈಗಾಗಲೇ ಸತ್ತವರ ಕುಟುಂಬದವರಿಗೆ 5 ಲಕ್ಷ ಪರಿಹಾರ ಘೋಷಣೆ ಮಾಡಲಾಗಿದೆ.

➡ ಪುಟ ೪

ಪ್ರಧಾನಿ ಮೋದಿ ಸಂತಾಪ

• ಹೊಸದಿಲ್ಲಿ/ಬೆಂಗಳೂರು: ಬೆಂಗಳೂರಿನಲ್ಲಿ ಬುಧವಾರ ಸಂಜೆ ಸುರಿದ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ದುರಂತ ಸಂಭವಿಸಿದ್ದು, ಘಟನೆಗೆ ಪ್ರಧಾನಿ ನರೇಂದ್ರ ಮೋದಿಯವರು ತೀವ್ರ ಸಂತಾಪ ಸೂಚಿಸಿದ್ದಾರೆ.

➡ ಪುಟ ೪



ಸಿಎಂ ಸೂಚನೆಗಳು

- ರಾಜಕಾಲುವೆಗಳಲ್ಲಿ ಹೂಳು ತೆಗೆಯುವುದು
- ಪ್ರವಾಹ ಉಂಟಾಗದಂತೆ ಕ್ರಮ ತೆಗೆದುಕೊಳ್ಳುವುದು
- ಮಳೆಯಿಂದ ರಸ್ತೆಯಲ್ಲಿ ಬಿದ್ದಿರುವ ಕಸ, ರೆಂಬೆಗಳನ್ನು ತೆರವು ಮಾಡುವುದು
- ಅಂಡರ್‌ಪಾಸ್‌ಗಳಲ್ಲಿ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳುವುದು
- ಜನ ಅಂಡರ್‌ಪಾಸ್ ಬಳಸದಂತೆ ಬ್ಯಾರಿಕೇಡ್ ಹಾಕುವುದು

ರಾಜ್ಯಾದ್ಯಂತ ಶಿಥಿಲ ಆಸ್ಪತ್ರೆ ಕಟ್ಟಡ ಪರಿಶೀಲನೆ

• ಬೆಂಗಳೂರು: ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲ ಆಸ್ಪತ್ರೆಯ ಕಟ್ಟಡಗಳನ್ನು ಹಾಗೂ ಕಾಂಪೌಂಡ್ ಪರಿಶೀಲಿಸಿ ಅಧ್ಯಯನ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ. ಮಳೆಯಿಂದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ ಮಾತನಾಡಿದ ಅವರು, ಬೌರಿಂಗ್ ಆಸ್ಪತ್ರೆ ದುರಂತದ ಕುರಿತು ಪಿಡಬ್ಲುಡಿ ಇಲಾಖೆ ಮುಖ್ಯ ಇಂಜನೀಯರ್ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ. ವರದಿ ಬಂದ ನಂತರ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು ಎಂದು ಪಾಟೀಲ್ ತಿಳಿಸಿದರು.

➡ ಪುಟ ೪

ತನಿಖೆಗೆ ಆದೇಶಿಸಿದ ಸರ್ಕಾರ

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿತ ಪ್ರಕರಣದ ತನಿಖೆಗೆ ಸರ್ಕಾರ ಆದೇಶಿಸಿದೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದು, ಸರ್ಕಾರಕ್ಕೆ 7 ದಿನದೊಳಗಾಗಿ ತನಿಖೆ ನಡೆಸಿ ವರದಿ ನೀಡಲು ಸೂಚಿಸಿದೆ. ಈ ಸಮಿತಿಯಲ್ಲಿ ತಹಶೀಲ್ದಾರ್ ಹಾಗೂ ಪಿಡಬ್ಲ್ಯುಡಿ ಇಲಾಖೆಯ ನಿವೃತ್ತ ಮುಖ್ಯ ಇಂಜಿನಿಯರ್ ಸೇರಿದಂತೆ ಆರು ತಜ್ಞರ ನೇಮಕ ಮಾಡಲಾಗಿದೆ.

ಕುಟುಂಬಗಳಿಗೆ ಮೃತದೇಹ ಹಸ್ತಾಂತರ

• ಪುಟ ೫

ಕೇಂದ್ರ ರೈಲ್ವೆ ಸಚಿವ ವೈಷ್ಣವ್ ಹಸಿರು ನಿಶಾನೆ

ಜಮ್ಮು-ಕಾಶ್ಮೀರಕ್ಕೆ ವಂದೇಭಾರತ್ ಸೇತು



• ಶ್ರೀನಗರ: ಜಮ್ಮುವನ್ನು ಕಾಶ್ಮೀರದೊಂದಿಗೆ ಸಂಪರ್ಕಿಸುವ ಪ್ರಥಮ ನೇರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಹಸಿರು ನಿಶಾನೆ ತೋರಿದರು. ಕಣಿವೆ ರಾಜ್ಯದ ದುರ್ಗಮ ಪ್ರದೇಶಗಳಾದ ಪೂಂಛ್, ರಾಜೌರಿ, ಉರಿ ವಲಯಗಳನ್ನು ದೇಶದ ರೈಲ್ವೆ ಜಾಲದೊಂದಿಗೆ ಜೋಡಿಸಲು ಆದ್ಯತೆ ನೀಡುವುದಾಗಿ ಸಚಿವರು ಇದೇ ಸಂದರ್ಭ ಆಶ್ವಾಸನೆ ನೀಡಿದರು.

ಮಹತ್ವಾಕಾಂಕ್ಷಿ ಉಧಮ್‌ಪುರ-ಶ್ರೀನಗರ-ಬಾರಾಮುಲ್ಲಾ ರೈಲ್ವೆ ಲಿಂಕ್ ಯೋಜನೆ ಪೂರ್ತಿಯಾದ ಬಗ್ಗೆ ಮಾಹಿತಿ ನೀಡಿ, ಪೂಂಛ್ ಮತ್ತು ರಾಜೌರಿ ವಲಯವನ್ನು ರಾಷ್ಟ್ರೀಯ ರೈಲ್ವೆ ಜಾಲದೊಂದಿಗೆ ಜೋಡಿಸುವ ಮತ್ತು ಉರಿ ವಲಯಕ್ಕೂ ರೈಲ್ವೆ ಲೈನ್ ವಿಸ್ತರಿಸುವ ಯೋಜನೆಗಳ ಬಗ್ಗೆ ವಿವರವಾದ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

ಪೂಂಛ್ ಮತ್ತು ರಾಜೌರಿಯನ್ನು ರೈಲ್ವೆ ಜಾಲದೊಂದಿಗೆ ಜೋಡಿಸಲು ಆದ್ಯತೆ ನೀಡಲಿದ್ದೇವೆ. ಉರಿಗೂ ರೈಲು ಸೌಲಭ್ಯ ಕಲ್ಪಿಸುವ ಯೋಜನೆ ಕೈಗೆತ್ತಿಕೊಳ್ಳುತ್ತೇವೆ. ಈ ಯೋಜನೆಗಳಿಗೆ ಸಂಬಂಧಿತ ಡಿಪಿಆರ್‌ಗಳು ಸಿದ್ಧವಾಗಿದ್ದು, ಆದಷ್ಟು ಶೀಘ್ರ ಕಾಮಗಾರಿ ಶುರು ಮಾಡಲು ಪ್ರಯತ್ನಿಸುತ್ತೇವೆ ಎಂದವರು ವಂದೇ ಭಾರತ್ ರೈಲು ಉದ್ಘಾಟನೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.



ರೈಲ್ವೆ ಸೇವೆ ಮಹತ್ವದ ಮೈಲಿಗಲ್ಲು

ಜಮ್ಮು-ಶ್ರೀನಗರ ವಂದೇ ಭಾರತ್ ಎಕ್ಸ್‌ಪ್ರೆಸ್ ಒಂದು ಮಹತ್ವದ ಮೈಲಿಗಲ್ಲಿನ ಸಾಧನೆಯಾಗಿದೆ ಮತ್ತು ಜಮ್ಮು ಕಾಶ್ಮೀರದ ಜೀವನಾಡಿಯಾಗಿದೆ. ಜಮ್ಮು ಕಾಶ್ಮೀರದ ಜನರ ಪಾಲಿಗೆ ರೈಲ್ವೆ ಸೇವೆ ನಿಜಕ್ಕೂ ಮಹತ್ವದ ಮೈಲಿಗಲ್ಲು ಎಂದು ಸಚಿವ ಅಶ್ವಿನಿ ವೈಷ್ಣವ್ ಬಣ್ಣಿಸಿದರು.

➡ ಪುಟ ೪

ರಾಜಕೀಯ ಜೀವನದ 50 ವರ್ಷಗಳ ಪಯಣ

ಬಿಎಸ್‌ವೈ ಅಭಿಮಾನೋತ್ಸವ ಹಲವೆಡೆ ಪೂರ್ವಭಾವಿ ಸಭೆ



• ತುಮಕೂರು/ಹಾವೇರಿ: ಅಪ್ರತಿಮ ಹೋರಾಟಗಾರ, ರೈತ ನಾಯಕ, ಬಡವರ ಕಣ್ಮಣಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳ ಪಯಣ ಪೂರೈಸಿದ ಶುಭ ಘಳಿಗೆಯಲ್ಲಿ ಬಿ.ಎಸ್.ವೈ. ಅವರ ಅಭಿಮಾನೋತ್ಸವವನ್ನು ನಡೆಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ತುಮಕೂರಿನ ಸ್ನೇಹಸಂಗಮ ಬ್ಯಾಂಕ್ ಸಭಾಂಗಣದಲ್ಲಿ ಗುರುವಾರ ನಡೆದ ಅಭಿಮಾನೋತ್ಸವದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಹೋರಾಟಕ್ಕೆ ಮತ್ತೊಂದು ಹೆಸರು ಎಂದು ಅವರು ವಿಶ್ಲೇಷಿಸಿದರು. ಪರಿಶ್ರಮ, ಛಲಕ್ಕೆ ಅವರು ಹೆಸರು ಪಡೆದವರು. ಬಡವರು, ಶೋಷಿತ- ಪೀಡಿತರು, ರೈತರ ಪರವಾಗಿ ಅವರ ಧ್ವನಿಯಾಗಿ 5 ದಶಕಗಳಿಂದ ನಿರಂತರವಾಗಿ ಕೆಲಸ ಮಾಡಿದ್ದಾರೆ ಎಂದು ನುಡಿದರು.

➡ ಪುಟ ೪

ಹುಕ್ಕೇರಿ ಶ್ರೀಗಳಿಗೆ ಸಂಸದ ರಾಘವೇಂದ್ರ ಆಹ್ವಾನ

• ಹಾವೇರಿ: ಜಿಲ್ಲೆಯ ಸುಪ್ರಸಿದ್ಧ ಧಾರ್ಮಿಕ ಮತ್ತು ದಾಸೋಹ ಕೇಂದ್ರವಾದ ಹುಕ್ಕೇರಿ ಮಠಕ್ಕೆ ಗುರುವಾರ ಸಂಸದ ರಾಘವೇಂದ್ರ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಭೇಟಿ ನೀಡಿ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಸದಾಶಿವ ಶ್ರೀಗಳಿಗೆ ಆಹ್ವಾನ ನೀಡಿದರು.

ನಾಯಕತ್ವ ಬದಲಾವಣೆ ಗೊಂದಲಕ್ಕೆ ಶೀಘ್ರ ತೆರೆ

• ಕಲಬುರಗಿ: ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತು ಉಂಟಾಗಿರುವ ಗೊಂದಲವನ್ನು ಶೀಘ್ರದಲ್ಲೇ ಪರಿಹರಿಸಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು. ಮುಖ್ಯಮಂತ್ರಿ ಬದಲಾವಣೆ ವಿಚಾರ ಪ್ರಸ್ತುತ ಎದುರಾಗಿಲ್ಲ. ಈಗಾಗಲೇ ರಾಜ್ಯದಲ್ಲಿ ಸಿಎಂ ಇದ್ದಾರೆ. ಭವಿಷ್ಯದಲ್ಲಿ ಈ ವಿಷಯ ಎದುರಾದರೆ ಪಕ್ಷದೊಳಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ಪಕ್ಷದ ನಿರ್ಣಯಗಳಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ಸಲಹೆ ಮಹತ್ವದ್ದಾಗಿದೆ ಎಂದು ಹೇಳಿದರು.



ಸಿಎಂ ಬದಲಾವಣೆ ವಿಚಾರ ಪ್ರಸ್ತುತ ಚರ್ಚೆ ಇಲ್ಲ

ಅಸ್ಸಾಂನಲ್ಲಿ ಕೈಗೆ ಹಿನ್ನಡೆ: ಪಂಚರಾಜ್ಯ ಚುನಾವಣೆಗಳ ಎಕ್ಸಿಟ್ ಪೋಲ್ ಬಗ್ಗೆ ಮಾತನಾಡಿದ ಖರ್ಗೆ, ತಮಿಳ್ನಾಡಿನಲ್ಲಿ ಡಿಎಂಕೆ, ಕೇರಳ ದಲ್ಲಿ ಯುಡಿಎಫ್ ಅಧಿಕಾರಕ್ಕೆ ಬರಬಹುದು.

➡ ಪುಟ ೪

ಎಲ್ಲಾ ಭಾರತೀಯರದ್ದೂ ಮಹಾದೇವನ ಡಿಎನ್‌ಎ

- ಜಾಮಿಯಾ ಉಪಕುಲಪತಿ ಹೇಳಿಕೆಗೆ ಬಿಜೆಪಿ ಬೆಂಬಲ
- ವಿಭಜನಕಾರಿ ಮಾತಲ್ಲ, ದೇಶ ಒಗ್ಗೂಡಿಸುವ ಹೇಳಿಕೆ: ಮಾಳವೀಯ

• ಹೊಸದಿಲ್ಲಿ: ಎಲ್ಲಾ ಭಾರತೀಯರ ಡಿಎನ್‌ಎಗೂ ಭಗವಾನ್ ಮಹಾದೇವನೊಂದಿಗೆ ಸಂಬಂಧವಿದೆ ಎಂಬ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಉಪ ಕುಲಪತಿ ಮಝರ್ ಆಸಿಫ್ ಹೇಳಿಕೆಯನ್ನು ಬಿಜೆಪಿ ಬೆಂಬಲಿಸಿದೆ. ಭಾರತೀಯ ಜನತಾ ಪಕ್ಷ, ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಕುಲಪತಿ ಮಝರ್ ಆಸೀಫ್ ಅವರ ಮಹಾದೇವನ ಡಿಎನ್‌ಎ ಕುರಿತಾದ ಹೇಳಿಕೆಯನ್ನು ಬೆಂಬಲಿಸಿದ್ದು, ಇದು ನಾಗರಿಕತೆಯ ರೂಪಕವೇ ಹೊರತು ವಿಭಜನೆಯ ಮಾತಲ್ಲ. ಬದಲಾಗಿ ಇದು ದೇಶ ಒಗ್ಗೂಡಿಸುವ ಹೇಳಿಕೆ ಎಂದು ಗುರುವಾರ ಹೇಳಿದೆ.



➡ ಪುಟ ೪

ಕೇಂದ್ರ ಪರಿಸರ ಇಲಾಖೆಗೆ ದಂಡಸಹಿತ ಹಣ ಸೇರಿದ ತಕ್ಷಣ ಕೆಲಸ ಶುರು: ಡಿಕೆಶಿ

ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ

• ಬೆಂಗಳೂರು: ಕೇಂದ್ರ ಪರಿಸರ ಇಲಾಖೆಯವರು ದಂಡ ಹಾಗೂ ಮಿಟಿಗೇಷನ್ ಪ್ಲಾನ್ ಸೇರಿ 257 ಕೋಟಿ ರೂ. ಹಣ ಸಂದಾಯ ಮಾಡಬೇಕು ಎಂದು ಸೂಚಿಸಿದ್ದಾರೆ. ತಕ್ಷಣವೇ ಈ ಹಣ ಪಾವತಿ ಮಾಡಿ ಎಂದು ನಿರ್ದೇಶಿಸಿದ್ದೇನೆ. ಈ ವಾರದೊಳಗೆ ಎತ್ತಿನಹೊಳೆ ಕೆಲಸ ಪ್ರಾರಂಭ ಮಾಡಿ ಎಂದು ಗುತ್ತಿಗೆದಾರರಿಗೆ ಸೂಚಿಸಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಎತ್ತಿನಹೊಳೆ, ಮೇಕೆದಾಟು, ಭದ್ರಾ ಮೇಲ್ದಂಡೆ ವಿಚಾರವಾಗಿ ವಿಧಾನಸೌಧದಲ್ಲಿ ಗುರುವಾರ ನಡೆದ ಸಭೆಯ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಎತ್ತಿನಹೊಳೆ ಯೋಜನೆಗೆ ಕೇಂದ್ರ ಪರಿಸರ ಇಲಾಖೆಯವರು ಒಂದಷ್ಟು ಷರತ್ತುಗಳನ್ನು ವಿಧಿಸಿ ಕಡತವನ್ನು ವಾಪಸ್ ಕಳುಹಿಸಿದ್ದರು. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಬದಲಿ ಭೂಮಿಯನ್ನು ಹಸ್ತಾಂತರ ಮಾಡಲಾಗುತ್ತಿದೆ. ಶೇ.10ರಷ್ಟು ಭೂಮಿ ವರ್ಗಾವಣೆ ಬಾಕಿಯಿತ್ತು.

➡ ಪುಟ ೪



5,300 ಎಕರೆ ಅರಣ್ಯ ಇಲಾಖೆಗೆ

ಮೇಕೆದಾಟು ವಿಚಾರವಾಗಿ ಡಿಪಿಆರ್ ಸಿದ್ಧವಾಗಿದ್ದು ಅದನ್ನು ಸಹ ಸಮಿತಿ ಮುಂದೆ ಸಲ್ಲಿಸಲಾಗುವುದು. ಮತ್ತೊಮ್ಮೆ ವೆಚ್ಚ ಪರಿಷ್ಕರಣೆ ಮಾಡಿದ್ದೇವೆ. ಸುಮಾರು 5,300 ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ನೀಡಬೇಕಿದೆ. ಈ ಬಗ್ಗೆಯೂ ಕಂದಾಯ ಇಲಾಖೆ ಜತೆ ಮಾತನಾಡಲಾಗುವುದು ಎಂದರು.

ಗಂಗಾವತಿ ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣ

ಆರು ಅಪರಾಧಿಗಳಿಗೆ ಮರಣದಂಡನೆ

• ಕೊಪ್ಪಳ: ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿಯ ಒಂದನೇ ಹೆಚ್ಚುವರಿ ಸತ್ರ ನ್ಯಾಯಾಲಯವು ಮಹತ್ವದ ತೀರ್ಮ ನೀಡಿದ್ದು, ಹತ್ಯೆ ಪ್ರಕರಣದಲ್ಲಿ ದೋಷಿಗಳೆಂದು ಸಾಬೀತಾದ ಆರು ಮಂದಿಗೆ ನ್ಯಾಯಾಲಯವು ಗಲ್ಲು ಶಿಕ್ಷೆ ವಿಧಿಸಿ ಗುರುವಾರ ಆದೇಶ ಹೊರಡಿಸಿದೆ.

ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ಗಂಗಾವತಿ ಒಂದನೇ ಹೆಚ್ಚುವರಿ ಸತ್ರ ನ್ಯಾಯಾಲಯ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯಕ ಅವರು ಆರು ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಇದರ ಜೊತೆಗೆ ಆರು ಜನರಿಗೆ ತಲಾ ಮೂರು ಲಕ್ಷ ದಂಡ ವಿಧಿಸಿದ್ದಾರೆ. ರವಿ, ವಿಜಯ್ ಅಲಿಯಾಸ್ ಮೈಲಾರಿ, ಧನರಾಜ್, ಭೀಮ್ ಅಲಿಯಾಸ್ ಭರತ್, ಸಲೀಮ್ ಮಹಮ್ಮದ್ ರಫೀಕ್, ಗಂಗಾಧರ ಗೌಳಿ ಗಲ್ಲು ಶಿಕ್ಷೆಗೆ ಗುರಿಯಾದವರು.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿಯ ದೃಶ್ಯಾವಳಿ ಪರಿಶೀಲಿಸಿದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್, ಅಪರಾಧಿಗಳು ಈ ಹಿಂದೆ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಹಿನ್ನೆಲೆಯ ಬಗ್ಗೆಯೂ ಪರಿಶೀಲನೆ ನಡೆಸಿದರು.



ಏನಿದು ಪ್ರಕರಣ?

ಗಂಗಾವತಿ ನಗರದ ರಾಣಾ ಪ್ರತಾಪ್ ಸಿಂಗ್ ವೃತ್ತದಲ್ಲಿರುವ ಖಾಸಗಿ ಆಸ್ಪತ್ರೆ ಬಳಿ 2025ರ ಅಕ್ಟೋಬರ್ 8ರ ಮಧ್ಯರಾತ್ರಿ ಬಿಜೆಪಿ ಯುವ ಮೋರ್ಚಾದ ನಗರ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ (32) ಅವರನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು. ಅ.8ರ ತಡರಾತ್ರಿ ಊಟ ಮುಗಿಸಿಕೊಂಡು ಸ್ನೇಹಿತರೊಂದಿಗೆ ದ್ವಿಚಕ್ರ ವಾಹನದಲ್ಲಿ ವೆಂಕಟೇಶ ತೆರಳುತ್ತಿದ್ದ ವೇಳೆ ಕಾರಿನಲ್ಲಿ ಹಿಂಬಾಲಿಸಿದ ಯುವಕರ ಗುಂಪು, ದ್ವಿಚಕ್ರ ವಾಹನಕ್ಕೆ ಗುದ್ದಿ ಬೀಳಿಸಿದ್ದರು. ಬಳಿಕ ಕೆಳಕ್ಕೆ ಬಿದ್ದ ವೆಂಕಟೇಶನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿ ಕೊಚ್ಚಿ ಕೊಲೆ ಮಾಡಿದ್ದರು.

ತೀರ್ಪಿನಲ್ಲಿ ಏನಿದೆ?

ಗಂಗಾವತಿಯ ರೈಲ್ವೆ ನಿಲ್ದಾಣದ ಬಳಿ ನಡೆದಿದ್ದ ಮಾರುತಿ ಎಂಬ ಯುವಕನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ ಪ್ರಕರಣದಲ್ಲಿ ವೆಂಕಟೇಶ ಪ್ರತ್ಯಕ್ಷ ಸಾಕ್ಷಿಯಾಗಿದ್ದರು. ಅಲ್ಲದೆ, ಮಾರುತಿ ಚಿಕಿತ್ಸೆಗೆ ಕೊನೆಯವರೆಗೂ ಬೆಂಬಲವಾಗಿ ನಿಂತಿದ್ದ ಎಂಬ ಕಾರಣಕ್ಕೆ ವೆಂಕಟೇಶನನ್ನು ಕೊಲೆ ಮಾಡಿದ್ದೀರಿ. ಸಭ್ಯ ನಾಗರಿಕ ಸಮಾಜ ಇಂತಹ ಕೃತ್ಯಗಳನ್ನು ಒಪ್ಪುವುದಿಲ್ಲ. ಅಪರಾಧ ಕೃತ್ಯಗಳ ಹಿನ್ನೆಲೆ ಪರಿಗಣಿಸಿ ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ.

ಮೇ ಅಂತ್ಯಕ್ಕೆ 191 ತಾಲ್ಲೂಕಲ್ಲಿ ಪುರಾತತ್ವ ಇಲಾಖೆ ಕಾರ್ಯ ಪೂರ್ಣ

ರಾಜ್ಯದಲ್ಲಿ ಪುರಾತನ ವಸ್ತುಗಳ ಸರ್ವೇ

▸ ವೀರಣ್ಣ ಬಳಿಗಾರ

• ಬೆಂಗಳೂರು: ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರಾಜ್ಯದಲ್ಲಿ ಪುರಾತನ ವಸ್ತು ಮತ್ತು ಕಟ್ಟಡಗಳ ಸರ್ವೇ ಕಾರ್ಯ ಕೈಗೊಂಡಿದ್ದು, ಈ ಸಮೀಕ್ಷೆ ರಾಜ್ಯದ 191 ತಾಲ್ಲೂಕುಗಳನ್ನು ಒಳಗೊಂಡಿದೆ. ಈಗಾಗಲೇ 50 ಸಾವಿರಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ದಾಖಲಿಸಲಾಗಿದೆ.

ಪುರಾತನ ವಸ್ತುಗಳ ರಕ್ಷಣೆಯು ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸುವ ಅಗತ್ಯ ಪ್ರಕ್ರಿಯೆಯಾಗಿದೆ. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆಯು ಸ್ಮಾರಕಗಳು, ಶಿಲಾಶಾಸನಗಳು ಮತ್ತು ಕಲಾಕೃತಿಗಳನ್ನು ಸಂರಕ್ಷಿಸುವುದರ ಜತೆ ಸ್ಥಳ, ವಸ್ತುವಿನ ಮಹತ್ವವನ್ನು ನಾಗರಿಕರಿಗೆ ತಿಳಿಸಲು ಸರ್ವೇ ಕೈಗೊಂಡಿದೆ. ಶಾಸನಗಳು, ಪುರಾತತ್ವ ವಸ್ತುಗಳು, ಸ್ಮಾರಕಗಳು, ಪೂಜಾ ಸ್ಥಳಗಳು, ಕೋಟೆಗಳು, ಇತಿಹಾಸಿಕ ಮಹತ್ವ ಹೊಂದಿರುವ ಇತರ ಕಟ್ಟಡಗಳ ಸರ್ವೇ ನಡೆಯಲಿದ್ದು, ಮೇನಲ್ಲಿ ಸರ್ವೇ ಪೂರ್ಣಗೊಳ್ಳುವ ನಿರೀಕ್ಷೆಯಿದೆ. 21 ಮಾನದಂಡ ಆಧರಿಸಿ ಸರ್ವೇ ಮಾಡಲಾಗುತ್ತಿದೆ. ಭೌಗೋಳಿಕ ಹಿನ್ನೆಲೆ, ಪ್ರಸ್ತುತ ಸ್ಥಿತಿ, ಇತಿಹಾಸಿಕ ಮಹತ್ವ ಸೇರಿದಂತೆ ಮುಂತಾದ ಅಂಶಗಳು ಇರಲಿವೆ. ಸಮೀಕ್ಷಕರು ಸರ್ವೇ ಸಂದರ್ಭದಲ್ಲಿ ಪುರಾತನ ಸ್ಥಳದ ಸಂರಕ್ಷಣೆ ಅಗತ್ಯಗಳನ್ನು ದಾಖಲಿಸುವುದರ ಜತೆಗೆ ಪ್ರತಿ ಸ್ಥಳದ ಫೋಟೋಗಳನ್ನು ಕೂಡ ತೆಗೆದುಕೊಳ್ಳುತ್ತಾರೆ.

➡ ಪುಟ ೪



ಪ್ರಮುಖಾಂಶಗಳು

- ರಾಜ್ಯದ 191 ತಾಲ್ಲೂಕುಗಳಲ್ಲಿ ಸರ್ವೇ
- 21 ಮಾನದಂಡಗಳ ಆಧಾರದ ಮೇಲೆ ಸ್ಥಳ ಪರಿಶೀಲನೆ
- ಸಂರಕ್ಷಣೆ ಅಗತ್ಯತೆಗಳ ಬಗ್ಗೆ ಫೋಟೋ ದಾಖಲೆ
- 1 ಲಕ್ಷಕ್ಕೂ ಹೆಚ್ಚು ಪುರಾತತ್ವ ವಸ್ತುಗಳ ಪಟ್ಟಿ ತಯಾರಿ
- ಈ ತಿಂಗಳಲ್ಲಿ ಸರ್ವೇ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ

ಸರ್ವೇ ದತ್ತಾಂಶ ವೆಬ್‌ಸೈಟ್‌ಗೆ ಅಪ್ಲೋಡ್

ÓÜರ್ವೇಯನ್ನು ಸಂಶೋಧನಾ ಸಹಾಯಕರು ಮತ್ತು ಸಂರಕ್ಷಣಾ ತಜ್ಞರ ಸಹಾಯದಿಂದ ನಡೆಸಲಾಗುತ್ತಿದೆ. ಸರ್ವೇಯಲ್ಲಿ ಕರ್ನಾಟಕದ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್ ಅಭಿವೃದ್ಧಿಪಡಿಸಿದ ಅಪ್ಲಿಕೇಶನ್ ಬಳಸಲಾಗುತ್ತಿದೆ. ದತ್ತಾಂಶ ಪೂರ್ಣಗೊಂಡ ಬಳಿಕ ಅದನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ನಗರೀಕರಣ ಪರಿಣಾಮದಿಂದ ಕನಿಷ್ಠ ಶೇ.30 ಪುರಾತತ್ವ ವಸ್ತುಗಳು ಕಳೆದುಹೋಗಿವೆ, ಸ್ಥಳಾಂತರಗೊಂಡಿವೆ.

➡ ಪುಟ ೪

ಮಂಗಳೂರು
ಶುಕ್ರವಾರ, 1 ಮೇ 2026
ಸಂಪುಟ 48, ಸಂಚಿಕೆ 43 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಯುವಶಕ್ತಿ ಭಾರತದ ಅಭಿವೃದ್ಧಿಯ ಇಂಜಿನ್ | ೦೫
ಸುಪ್ರೀಂ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಅಭಿಯಾನ | ೦೫
ಇಂದು ವಿಶ್ವ ಕಾರ್ಮಿಕರ ದಿನ

ಪಾಕ್‌ನಲ್ಲಿ ಐಟಿ ಎಂದರೆ ಇಂಟರ್‌ನ್ಯಾಷನಲ್ ಟೆರರಿಸಂ: ರಾಜನಾಥ್

ಐಟಿಗೆ ಟೆರರ್‌ನ ಅರ್ಥ



ಹೊಸದಿಲ್ಲಿ: ಭಾರತ ಮತ್ತು ಪಾಕಿಸ್ತಾನ ಒಂದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆದವು. ಆದರೆ ಇಂದು ಭಾರತವು ಇನ್ಫಾರ್ಮೇಶನ್ ಟೆಕ್ನಾಲಜಿಗಾಗಿ ಜಗತ್ತಿನಲ್ಲಿ ಪ್ರಸಿದ್ಧವಾಗಿದ್ದರೆ, ಪಾಕಿಸ್ತಾನ ಇಂಟರ್‌ನ್ಯಾಷನಲ್ ಟೆರರಿಸಮ್‌ಗಾಗಿ ಗುರುತಿಸಿಕೊಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಿಡಿಕಾರಿದರು.

ಭಯೋತ್ಪಾದನೆ ಎಂಬುದು 'ವಿಕೃತ ಹಾಗೂ ವಕ್ರ ಮನೋಭಾವದಿಂದ' ಹುಟ್ಟಿಕೊಳ್ಳುವ ದುಷ್ಟ ಶಕ್ತಿಯಾಗಿದ್ದು, ಅದನ್ನು ಎದುರಿಸುವ ಹೋರಾಟವು ಕೇವಲ ರಾಷ್ಟ್ರೀಯ ಭದ್ರತೆಗಾಗಿ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನು ರಕ್ಷಿಸುವ ಮೂಲ ಹೋರಾಟವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟದ ದೃಷ್ಟಿಕೋನದಲ್ಲಿ ಮಹತ್ವದ ಬದಲಾವಣೆ ಉಂಟಾಗಿದೆ ಎಂದು ಅವರು ತಿಳಿಸಿದ್ದಾರೆ.

ಆಪರೇಷನ್ ಸಿಂದೂರ ಮೂಲಕ ಭಾರತವು ಇನ್ನು ಮುಂದೆ ಕೇವಲ ರಾಜತಾಂತ್ರಿಕ ಹೇಳಿಕೆಗಳಲ್ಲೇ ಸೀಮಿತವಾಗಿರುವ ದೇಶವಲ್ಲ ಎಂಬುದನ್ನು ವಿಶ್ವಕ್ಕೆ ಸ್ಪಷ್ಟ ಸಂದೇಶ ನೀಡಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾತಿನ ಮಟ್ಟದಲ್ಲೇ ಉಳಿಯದೆ, ದೃಢವಾದ ಕ್ರಮಗಳ ಮೂಲಕ ತನ್ನ ಬದ್ಧತೆಯನ್ನು ತೋರಿಸಿದೆ ಎಂದು ಅವರು ಹೇಳಿದರು. ➡ಪುಟ ೪

ಉಗ್ರವಾದ ಸಹಿಸಲ್ಲ

ಯಾವ ಸಂದರ್ಭದಲ್ಲಾದರೂ ಭಯೋತ್ಪಾದನೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ ಎಂಬ ದೃಢ ನಿಲುವನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಅವರು ಪುನರುಚ್ಚರಿಸಿದರು. 'ಭಯೋತ್ಪಾದನೆ ಮಾನವಕುಲದ ಮೇಲೆ ಕಪ್ಪು ಮಸಿ ಎರಚುವಂತಹುದು. ಇದು ಪ್ರತಿಯೊಂದು ಮಾನವೀಯ ಮೌಲ್ಯಕ್ಕೂ ವಿರುದ್ಧವಾಗಿರುವ ಕ್ರೂರ ಚಿಂತನೆ' ಎಂದರು. ಭಯೋತ್ಪಾದನೆಗೆ ಧಾರ್ಮಿಕ ಬಣ್ಣ ನೀಡುವುದು ಸರಿಯಲ್ಲ. ➡ಪುಟ ೪

ಕಠಿಣ ಕ್ರಮಕ್ಕೆ ಸಿಎಂ ಆದೇಶ

ಬೆಂಗಳೂರು: ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ಏಳು ಜನರ ಸಾವಿಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗದ ಇಇ ಅಮಾನತಿಗೆ, ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಮೃತರ ಕುಟುಂಬಕ್ಕೆ ಪ್ರಧಾನಿ ಸಂತಾಪ ಸೂಚಿಸಿದ್ದು, ತಲಾ 2 ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ. ವಿವರ ಪುಟ ೨

400 ರೋಸ್ಟರ್ ಬಿಂದು ನಿಗದಿ

• **ಬೆಂಗಳೂರು:** ಪರಿಶಿಷ್ಟ ಜಾತಿ ಒಳಮೀಸಲಾತಿ ಅನುಷ್ಠಾನಕ್ಕೆ 400 ರೋಸ್ಟರ್ ಬಿಂದುಗಳನ್ನು ತೀರ್ಮಾನಿಸಲಾಗಿದೆ. ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿರುವ ಅಧಿಸೂಚನೆಗಳನ್ನು ಹೊರತುಪಡಿಸಿ, ಇನ್ನುಳಿದ ಹುದ್ದೆಗಳಿಗೆ ಹೊಸದಾಗಿ ಅಧಿಸೂಚನೆ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮದವರಿಗೆ ತಿಳಿಸಿದರು.

ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿದ ಶೇ.15 ಮೀಸಲಾತಿಯಲ್ಲಿ ಪ್ರವರ್ಗ–ಎ, ಪ್ರವರ್ಗ–ಬಿ, ಪ್ರವರ್ಗ–ಸಿಗಳಿಗೆ ಒಳಮೀಸಲಾತಿಯನ್ನು ಕ್ರಮವಾಗಿ ಶೇ. 5.25, ಶೇ. 5.25 ಮತ್ತು ಶೇ.4.5 ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಈ ಪ್ರಮಾಣವನ್ನು ಅನುಷ್ಠಾನಗೊಳಿಸಲು 400 ರೋಸ್ಟರ್ ಬಿಂದುಗಳನ್ನು ಅನುಪಾಲಿಸಲಾಗುತ್ತದೆ. ಯಾವುದೇ ವೃಂದದಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಪರಿಶಿಷ್ಟ ಜಾತಿ ಸಾಮಾನ್ಯ ಎಂದು ಪರಿಗಣಿಸಿ ನೇಮಕಾತಿ ಮಾಡುವಂತೆ ಸಂಪುಟದಲ್ಲಿ ತೀರ್ಮಾನಿಸಲಾಗಿದೆ ಎಂದರು.

ವಿಶೇಷ ಸಭೆಗೆ ತೀರ್ಮಾನ: ರಾಜ್ಯ ಶಿಕ್ಷಣ ನೀತಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಇದು ಮಹತ್ವದ ಮತ್ತು ಗಂಭೀರವಾದ ವಿಷಯವಾದ್ದರಿಂದ ವಿವರವಾಗಿ ಚರ್ಚಿಸುವುದಕ್ಕಾಗಿ ವಿಶೇಷ ಸಭೆ ನಡೆಸಲು ನಿರ್ಣಯಿಸಲಾಯಿತು. ಶೀಘ್ರದಲ್ಲೇ ಸಭೆ ನಡೆಸಲಾಗುತ್ತದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಮುಂದಿನ ಆ.21ರಿಂದ 23ರವರೆಗೆ ನಡೆಯುವ ಸಮಾಧಾನ್ ಸಮಾರೋಹ್ ಕ್ರಿಯಾಯೋಜನೆಯಂತೆ ಸುಪ್ರೀಕೋರ್ಟ್‌ನಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಚಿವ ಸಂಪುಟ ಸಭೆ ಒಪ್ಪಿದೆ.

ರಾಮ ಬಾಣ



ಬಿಎಸ್‌ವೈ ಅಭಿಮಾನೋತ್ಸವ ಹಲವೆಡೆ ಪೂರ್ವಭಾವಿ ಸಭೆ

ಪುಟ 9➡ಸಂಸದ ಗೋವಿಂದ ಕಾರಜೋಳ ಅವರು ಮಾತನಾಡಿ, ಒಂದು ಶಾಸಕ ಸ್ಥಾನದಿಂದ 110 ಸ್ಥಾನ ತಲುಪಿ ಬಿಜೆಪಿ ಅಧಿಕಾರಕ್ಕೆ ತರಲು ಪ್ರಮುಖ ಕಾರಣಕರ್ತರು ಯಡಿಯೂರಪ್ಪನವರು. ಅವರು ಕಟ್ಟಿದ ಪಕ್ಷದ ಫಲಾನುಭವಿಗಳು ನಾವೆಲ್ಲ ಎಂದು ಹೇಳಿದರು. ಈ ಕಾರ್ಯಕ್ರಮಕ್ಕೆ 10 ಲಕ್ಷಕ್ಕೂ ಹೆಚ್ಚು ಜನರನ್ನು ನಿರೀಕ್ಷಿಸಿರುವುದಾಗಿ ತಿಳಿಸಿದರು.

ಬಿಎಸ್‌ವೈ ಧೀಮಂತ ನಾಯಕ

• **ಹಾವೇರಿ:** ಅಧಿಕಾರ ಮತ್ತು ಆದರ್ಶದ ನಡುವೆ ಯಾವಾಗಲೂ ಸಂಘರ್ಷ ಇರುತ್ತದೆ. ಆದರೆ, ಅಧಿಕಾರ ಬಂದಾಗಲೂ ಕೂಡ ಆದರ್ಶಗಳನ್ನು ಬಿಡದೆ ಅಧಿಕಾರವನ್ನು ಆದರ್ಶದ ಪಾಲನೆಗೆ ಉಪಯೋಗ ಮಾಡಿಕೊಂಡವರು ಧೀಮಂತ ನಾಯಕರಾಗುತ್ತಾರೆ. ಅವರು ಯಡಿಯೂರಪ್ಪನವರು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಗುರುವಾರ ಹಾವೇರಿಯ ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಕಾರ್ಯಾಲಯದಲ್ಲಿ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ನನ್ನ ನೆಚ್ಚಿನ ನಾಯಕರಾದ ಬಿಎಸ್‌ವೈ ಅಭಿಮಾನೋತ್ಸವ ಕಠಿಣ ಪರಿಶ್ರಮದ ಫಲ. ಗುರು ಸಾಧನೆಯ ಛಲದಿಂದ ನಿರಂತರವಾಗಿ ಜನರ ಜತೆಗಿದ್ದು, ಪರಿಶ್ರಮದ ನಾಯಕರು ಯಾರಾದರೂ ಇದ್ದರೆ ಅದು ಕರ್ನಾಟಕದ ರಾಜಾಹುಲಿ ಯಡಿಯೂರಪ್ಪ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗೆ ನ್ಯಾಯಾಲಯ ನೀಡಿದ ಶಿಕ್ಷೆ ಸ್ವಾಗತಾರ್ಹ. ಇಂಥವನನ್ನು ಅಂದು ಬ್ರದರ್ಸ್, ಅಮಾಯಕರು ಅಂತ ಸಮರ್ಥನೆ ಮಾಡಿದವರು ಈಗ ಆತ್ಮವಿಮರ್ಶೆ ಮಾಡಿಕೊಳ್ಳಲಿ –**ವೇದವ್ಯಾಸ ಕಾಮತ್**

– ಆತ್ಮವಿಮರ್ಶೆ ಮಾಡಿಕೊಳ್ಳಲು ಅವರಲ್ಲಿ ಆತ್ಮವೇ ಇಲ್ಲವಲ್ಲ, ಬಹಳ ಹಿಂದೆಯೇ ಅವರು ಅದನ್ನು ಅಧಿಕಾರಕ್ಕಾಗಿ ಮಾರಿ ಬಿಟ್ಟಿದ್ದಾರೆ!

ದಿನ ಭವಿಷ್ಯ

ಮೇಷ
ನಿರಾಶೆ ಬಿಡಿ, ಇಂದು ನಿಮಗೆ ಒಳ್ಳೆಯದಾಗುವ ಕಾಲ. ಗುರಿ ಸಾಧನೆ. ಚಿಂತೆ ಪರಿಹಾರ. ಉದ್ಯೋಗದ ಆತಂಕ ನಿವಾರಣೆ. ಕೌಟುಂಬಿಕ ಸಮರಸತೆ.

ವೃಷಭ
ವೃತ್ತಿಯಲ್ಲಿ ನೀವು ಬಯಸಿದ ಬೆಳವಣಿಗೆ. ನಿಮ್ಮ ಕ್ಷಮತೆ ಮೆಚ್ಚುಗೆಗೆ ಪಾತ್ರವಾಗಲಿದೆ. ಆಸ್ತಿ ಯಾ ವಾಹನ ಖರೀದಿಗೆ ಕಾಲ ಕೂಡಿಬರಲಿದೆ.

ಮಿಥುನ
ವೃತ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ದಂಪತಿಗಳ ವಿರಸ ಶಮನಕ್ಕೆ ನಿಧಾನಗತಿ ಹಿಡಿದೀತು. ಈ ಹಂತದಲ್ಲಿ ಮೌನ ಸಾಧಿಸಿ.

ಕಟಕ
ಚಿಂತೆ ತಂದ ವಿಷಯವೊಂದು ಇಂದು ಇತ್ಯರ್ಥ ಕಾಣಲಿದೆ. ಹಿರಿಯರ ಮಾತಿಗೆ ಪ್ರತಿಯಾಡದಿರಿ. ಹಣದ ಕೊರತೆ ನೀಗುವುದು.

ಸಿಂಹ
ಹೊಸತನಕ್ಕೆ ತುಡಿಯುವಿರಿ. ಜೀವನಶೈಲಿ ಬದಲಿಸಲು ಮನಸ್ಸು ಮಾಡಿ. ಪ್ರಗತಿಗೆ ಅಡ್ಡಿ ತರುವ ಸಂಗತಿ ತ್ಯಜಿಸಿರಿ. ಧನವ್ಯಯ.

ಕನ್ಯಾ
ಅನಪೇಕ್ಷಿತ ಬೆಳವಣಿಗೆ. ಆಪ್ತರ ಜತೆ ವಿಶ್ವಾಸದಲ್ಲಿ ಕೊರತೆ. ನಿಮ್ಮ ಸಾಧನೆಗೆ ತೃಪ್ತಿ ಪಡಿ. ಸಾಧ್ಯವಾಗದ್ದಕ್ಕೆ ಕೊರಗುತ್ತಾ ಕೂರದಿರಿ.

ತುಲಾ
ನಿಮ್ಮ ಸಾಧನೆಗೆ ಮೆಚ್ಚುಗೆ ಪಡೆಯುವಿರಿ. ಆತ್ಮೀಯರ ಸ್ನೇಹದಲ್ಲಿ ಹುಳಿ ಹಿಂಡಲು ಕೆಲವರ ಯತ್ನ. ಅದಕ್ಕೆ ಆಸ್ಪದ ಕೊಡಬೇಡಿ.

ವೃಶ್ಚಿಕ
ನಿರೀಕ್ಷಿಸಿದ್ದಕ್ಕಿಂತ ಹೆಚ್ಚೇ ನಿಮಗಿಂದು ಒಳಿತಾಗಲಿದೆ. ಮನಸ್ಸಿಗೆ ಉಲ್ಲಾಸ. ಆತ್ಮೀಯರ ಜತೆ ಕಾಲಕ್ಷೇಪ. ಕೌಟುಂಬಿಕ ಸಮಾರಂಭದಲ್ಲಿ ಭಾಗಿ.

ಧನು
ಮನಸ್ಸಿನ ಶಾಂತಿ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಚಾರಕ್ಕೆ ಜಗಳ ಮಾಡಬೇಡಿ. ಎಲ್ಲರ ಜತೆ ಹೊಂದಾಣಿಕೆಯಿರಲಿ. ಮಕ್ಕಳ ಸಾಧನೆ ತೃಪ್ತಿಕರ.

ಮಕರ
ಇತರರ ಜತೆ ಮಾತನಾಡುವಾಗ ಎಚ್ಚರ ವಹಿಸಿ. ಹದತಪ್ಪಿದ ಮಾತು ದೊಡ್ಡ ಜಗಳಕ್ಕೆ ಕಾರಣವಾದೀತು. ಆರ್ಥಿಕ ಉನ್ನತಿ ಸಾಧಿಸುವಿರಿ.

ಕುಂಭ
ನಿಮ್ಮ ಕೌಶಲದ ಕೆಲಸಕ್ಕೆ ಮೆಚ್ಚುಗೆ. ವೃತ್ತಿಯಲ್ಲಿ ತೋರುವ ಪೈಪೋಟಿಯಲ್ಲಿ ಗೆಲ್ಲುವಿರಿ. ದಂಪತಿ ಮಧ್ಯೆ ಅನವಶ್ಯ ಜಗಳವಾದೀತು.

ಮೀನ
ವೃತ್ತಿಯಲ್ಲಿ ಹೊಸ ಯೋಜನೆ ಅಳವಡಿಸಲು ಸಕಾಲ. ಒತ್ತಡವು ನಿಮ್ಮ ಏಕಾಗ್ರತೆಗೆ ಭಂಗ ತಂದೀತು. ಏಕಾಂಗಿಗಳಿಗೆ ವಿವಾಹ ಬಂಧ ಸಂಭವ.

ರಾಹುಕಾಲ : 10.30–12.00
ಗುಳಿಕಕಾಲ : 7.30–9.00

ಅದೃಷ್ಟ ಸಂಖ್ಯೆ : 4,9,2,5

ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ಕೇಂದ್ರ ಸ್ಥಾಪನೆ: ಎಂಬಿಪಾ

3 ಕಡೆ ಡೇಟಾ ಪಾರ್ಕ್



• **ಬೆಂಗಳೂರು:** ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸುಸ್ಥಿರ ಡೇಟಾ ಕೇಂದ್ರಗಳು(ಸಸ್ಟೇನಬಲ್ ಡೇಟಾ ಸೆಂಟರ್ಸ್) ಅಗತ್ಯವಿದ್ದು ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ ಡೇಟಾ ಪಾರ್ಕ್ ಸ್ಥಾಪಿಸಲು ಗುರುವಾರ ನಡೆದ ಸಂಬಂಧಿತ ಸಚಿವರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಗುರುವಾರ ಶಕ್ತಿ ಭವನದಲ್ಲಿ ನಡೆದ ಈ ಪ್ರಾಥಮಿಕ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮತ್ತು ಐಟಿ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಂಡಿದ್ದರು.

ಬಳಿಕ ಮಾತನಾಡಿದ ಸಚಿವ ಎಂ.ಬಿ.ಪಾಟೀಲ್, ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ. ಜತೆಗೆ ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂ.ಎಲ್.ಡಿ ನೀರು ಪೂರೈಕೆಗೆ ತೊಂದರೆ ಇಲ್ಲ ಎಂದು ತಿಳಿಸಿದೆ. ಸ್ವತಃ ಉದ್ಯಮಗಳೇ ಈ ನೀರಿನ ಮೂರನೇ ಹಂತದ ಶುದ್ಧೀಕರಣ ಮಾಡಿಕೊಳ್ಳುತ್ತವೆ. ಈ ಮೂರೂ ಪಾರ್ಕ್‌ಗಳ ಒಟ್ಟು ಸಾಮರ್ಥ್ಯ 1,000 ಮೆಗಾವ್ಯಾಟ್ ಇರಲಿದೆ ಎಂದರು.

ಮಂಗಳೂರಿನಲ್ಲಿ ಕೂಡ ಡೇಟಾ ಪಾರ್ಕ್ ಸ್ಥಾಪನೆಗೆ ಭೂಮಿಯು ಲಭ್ಯವಿದೆ. ಅಲ್ಲಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಗೆ ಸೇರಿದ 350 ಎಕರೆ ಇದೆ. ಮೈಸೂರಿನಲ್ಲಿ ಈ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಲಾಗುವುದು ಎಂದು ಅವರು ವಿವರಿಸಿದ್ದಾರೆ.

> **ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ.**
> ■ **ಎಂ.ಬಿ. ಪಾಟೀಲ್,** ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ಈ ಪಾರ್ಕ್‌ಗಳಲ್ಲಿ ಯಾರೇ ಬಂದು ಡಾಟಾ ಸೆಂಟರ್ ಸ್ಥಾಪನೆಗೆ ಹೂಡಿಕೆ ಮಾಡಿದರೆ ಅವರಿಗೆ ವಿದ್ಯುತ್ ಮತ್ತು ನೀರು ನೀಡಲಾಗುವುದು. ಇದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸದ್ಯದಲ್ಲೇ ಹೂಡಿಕೆದಾರರ ಜತೆಗೂ ಸಭೆ ಮಾಡಲಾಗುವುದು ಎಂದು ಪಾಟೀಲ್ ತಿಳಿಸಿದರು.

ಮುಂದಿನ ಸಭೆಯಲ್ಲಿ ಜಲಸಂಪನ್ಮೂಲ ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಇನ್ನೊಂದು ಸಚಿವರ ಮತ್ತು ಉನ್ನತ ಅಧಿಕಾರಿಗಳ ತಂಡವನ್ನೂ ಈ ಸಂಬಂಧ ರಚಿಸಲಾಗುವುದು. ಒಟ್ಟಿನಲ್ಲಿ ತ್ವರಿತವಾಗಿ ಈ ಡೇಟಾ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ಎಂದರು.

ಸಭೆಯಲ್ಲಿ ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಐಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಕೆಎಸ್ಐಐಡಿಸಿ ಎಂಡಿ ಖುಷ್ಬು ಗೋಯಲ್, ಕೆಐಎಡಿಬಿ ಆಯುಕ್ತ ಡಾ.ಮಹೇಶ್, ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷ ರಾಮಪ್ರಸಾತ್ ಮನೋಹರ್, ಐಟಿ ನಿರ್ದೇಶಕ ರಾಹುಲ್ ಸಂಕನೂರು ಭಾಗವಹಿಸಿದ್ದರು.

ಮರುಪರೀಕ್ಷೆ ಬರೆಯಲು ಅವಕಾಶ

▸▸ ಸಿಇಟಿ ವೇಳೆ ಜನಿವಾರ, ಹಿಜಾಬ್ ತೆಗೆಸಿದ ಪ್ರಕರಣ

• **ಬೆಂಗಳೂರು:** ಸಿಇಟಿ ವೇಳೆ ಜನಿವಾರ ಮತ್ತು ಹಿಜಾಬ್ ತೆಗೆಯುವಂತೆ ಸೂಚಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, ಸಿಬ್ಬಂದಿಗೆ ಡ್ರೆಸ್ ಕೋಡ್ ಬಗ್ಗೆ ತರಬೇತಿ ನೀಡಲಾಗಿತ್ತು. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ 2ಗಂಟೆ ಮುಂಚಿತವಾಗಿ ತಲುಪಬೇಕು ಎಂಬ ಸೂಚನೆಯೂ ನೀಡಲಾಗಿತ್ತು. ಆದರೆ, ಬೆಂಗಳೂರಿನ ಕೃಪಾನಿಧಿ ಪದವಿಪೂರ್ವ ಕಾಲೇಜು, ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜು ಮತ್ತು ಬಿಜಿಎಸ್ ಕಾಲೇಜಿನ ಸಿಬ್ಬಂದಿ ನಿಯಮ ಉಲ್ಲಂಘಿಸಿದ್ದಾರೆ ಎಂದು ಅಸಮಧಾನ ವ್ಯಕ್ತಪಡಿಸಿದರು. ಈ ವರ್ಷ ನಾಲ್ವರು ವಿದ್ಯಾರ್ಥಿಗಳಿಗೆ ಜನಿವಾರ ಮತ್ತು ಓರ್ವ ವಿದ್ಯಾರ್ಥಿನಿಗೆ ಹಿಜಾಬ್ ತೆಗೆಯುವಂತೆ ಸೂಚಿಸಲಾಗಿದೆ. ಈ ಘಟನೆಯಿಂದ ನಮಗೆ ತೊಂದರೆಯಾಯಿತು ಮತ್ತು ಪರೀಕ್ಷೆಯ ಮೇಲೆ ಗಮನ ಹರಿಸಲು ಸಾಧ್ಯವಾಗಲಿಲ್ಲ, ಆದ್ದರಿಂದ ಕೃಪಾಂಕ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ರಚಿಸಿದ ಸಮಿತಿಯು ಸಲ್ಲಿಸಿದ ವರದಿಯನ್ನು ನಾವು ಪರಿಶೀಲಿಸುತ್ತಿದ್ದೇವೆ ಎಂದರು.

ರೈಲ್ವೆ ಸೇವೆ ಮಹತ್ವದ ಮೈಲಿಗಲ್ಲು

ಪುಟ 1➡ಕಳೆದ ವರ್ಷ ಜೂ.6ರಂದು ಕತ್ರಾ ಮತ್ತು ಕಾಶ್ಮೀರ ಸಂಪರ್ಕಿಸುವ ವಂದೇ ಭಾರತ್ ರೈಲು ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದರು. ಪ್ರಸಕ್ತ ಈ ರೈಲಿನ ಓಡಾಟ ವ್ಯಾಪ್ತಿಯನ್ನು ಜಮ್ಮುತಾವಿ ರೈಲು ನಿಲ್ದಾಣವರೆಗೆ ವಿಸ್ತರಿಸಲಾಗಿದೆ. ಈ ರೈಲು ಬಲು ಜನಪ್ರಿಯತೆಯನ್ನೂ ಗಳಿಸಿದೆ ಎಂದು ಗಮನ ಸೆಳೆದರು. ರೈಲಿನ ಪ್ರಯಾಣಿಕ ಸಾಮರ್ಥ್ಯ ಹೆಚ್ಚಿಸಲು ಬಲು ಬೇಡಿಕೆಯಿದೆ ಎಂದು ಹೇಳಿದರು.

ಈ ಹಿಂದೆ ಎಂಟು ಬೋಗಿಗಳ ರೈಲು ಓಡಾಡುತ್ತಿತ್ತು. ಸಾಮರ್ಥ್ಯ ಹೆಚ್ಚಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ಪ್ರಸ್ತುತ ವಂದೇ ಭಾರತ್ ರೈಲಿಗೆ 20 ಕೋಚ್‌ಗಳನ್ನು ಅಳವಡಿಸಲಾಗಿದೆ. ರೈಲಲ್ಲಿ ಸಿಮೆಂಟ್, ಕಾರುಗಳು, ಬೈಕ್‌ಗಳೇ ಇತ್ಯಾದಿ ವಸ್ತುಗಳ ಸಾಗಣೆಗೆ ಅವಕಾಶವಿರುವ ಕಾರಣ ಕಾಶ್ಮೀರ ಜನತೆಗೆ ತುಂಬು ಪ್ರಯೋಜನವಾಗಲಿದೆ ಎಂದು ಸಚಿವರು ವಿವರಿಸಿದರು. ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಪ್ರಧಾನಿ ಕಾರ್ಯಾಲಯದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಕಾರ್ಯಕ್ರಮದಲ್ಲಿದ್ದರು. ಶ್ರೀನಗರ–ಜಮ್ಮು ನಡುವಣ ನೇರ ರೈಲು ಸೇವೆಗಳು ಪ್ರಯಾಣದ ಸಮಯವನ್ನು ಕುಗ್ಗಿಸಲಿವೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ವೇಗ ಕೊಡಲಿವೆ. ಅಲ್ಲದೆ, ಸರ್ವಋತು ಭೂಸಾರಿಗೆ ಸಂಪರ್ಕವನ್ನೂ ಕಲ್ಪಿಸಲಿವೆ.

ರಾಜ್ಯದಲ್ಲಿ ಪುರಾತನ ವಸ್ತುಗಳ ಸರ್ವೇ

ಪುಟ 9➡ಸಾರ್ವಜನಿಕ ಸಾರಿಗೆ ಮೂಲಕ ಸ್ಥಳಕ್ಕೆ ಹೇಗೆ ತಲುಪಬೇಕು ಎಂಬ ವಿವರಗಳು, ಉದಾಹರಣೆಗೆ ಹತ್ತಿರದ ಬಸ್ ನಿಲ್ದಾಣ ಮತ್ತು ರೈಲು ನಿಲ್ದಾಣ ವಿವರಗಳನ್ನೂ ವರದಿಯಲ್ಲಿ ಸೇರಿಸಲಾಗುತ್ತದೆ.

> **ತಾಲ್ಲೂಕು ಮಟ್ಟದಲ್ಲಿ ಸರ್ವೇ ಕೈಗೊಂಡಿದ್ದೇವೆ. ಸಮೀಕ್ಷೆ ನಿಖರವಾದ ದತ್ತಾಂಶವನ್ನು ಒದಗಿಸುತ್ತದೆ. ಇದರ ಆಧಾರದ ಮೇಲೆ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬಹುದು.**
> ■ **ಎ. ದೇವರಾಜ್,** ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ

ಸರ್ವೇ ದತ್ತಾಂಶ ವೆಬ್ ಸೈಟ್‌ಗೆ ಅಪ್ಲೋಡ್

ಪುಟ 9➡ಅಥವಾ ಆಕ್ರಮಣಕ್ಕೆ ಒಳಗಾಗಿವೆ. ಕೆಲವು ಸ್ಥಳಗಳಿಗೆ ಭೇಟಿ ನೀಡಿದಾಗ, ಜನರು ಶಾಸನಗಳನ್ನು ಧ್ವಂಸಮಾಡಿದ ಅಥವಾ ಕಲ್ಲುಗಳನ್ನು ಬೇರೆ ಕಟ್ಟಡಗಳಿಗೆ ಬಳಸಿದ ಉದಾಹರಣೆಗಳು ಇವೆ. ಇವುಗಳನ್ನು ಪತ್ತೆ ಮಾಡಿ ಸರ್ವೆ ಮಾಡುವುದು ಇಲಾಖೆಗೆ ಸವಾಲಾಗಿದೆ. ಈ ಸರ್ವೇ ಪೂರ್ಣಗೊಂಡ ಬಳಿಕ ರಾಜ್ಯಾದ್ಯಂತ 1 ಲಕ್ಷಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ಪಟ್ಟಿ ಮಾಡುವ ನಿರೀಕ್ಷೆಯಿದೆ. ಈ ಮಾಹಿತಿಗಳು ಸಂರಕ್ಷಣೆ, ಸ್ಮಾರಕ ರಕ್ಷಣೆ ಅಕ್ರಮ ಮತ್ತು ಆಕ್ರಮಣಗಳ ವಿರುದ್ಧ ಕ್ರಮ ಕೈಗೊಳ್ಳಲು ಸಹಕಾರಿಯಾಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ

ಪುಟ 9➡ಮುಂದಿನ ಒಂದು ವಾರದೊಳಗೆ ಈ ಪ್ರಕ್ರಿಯೆ ನಡೆಯಲಿದೆ ಎಂದರು. ತುಮಕೂರು ಭಾಗದಲ್ಲೂ ಭೂಸ್ವಾಧೀನಕ್ಕೆ ಸರ್ವೇ ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಆದಷ್ಟು ಬೇಗ ಚಿಕ್ಕಬಳ್ಳಾಪುರ ಹಾಗೂ ಕೋಲಾರಕ್ಕೆ ನೀರನ್ನು ತೆಗೆದುಕೊಂಡು ಹೋಗಲಾಗುವುದು. ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಹಾಗೂ ಮೇಕೆದಾಟು ವಿಚಾರವಾಗಿ ಸಂಬಂಧಪಟ್ಟ ಶಾಸಕರ, ಅಧಿಕಾರಿಗಳ ಸಭೆ ನಡೆಸಿದ್ದೇವೆ. ಈ ಸಭೆಯಲ್ಲಿ ಕಂದಾಯ, ಅರಣ್ಯ ಹಾಗೂ ಗೃಹಸಚಿವರು ಭಾಗವಹಿಸಿದ್ದರು. ಎತ್ತಿನಹೊಳೆ ವಿಚಾರವಾಗಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿದ್ದೆ. ನಾವು ಅವರ ಷರತ್ತುಗಳನ್ನು ಒಪ್ಪಿಕೊಂಡು ಮುಂದುವರಿದಿದ್ದೇವೆ ಎಂದು ತಿಳಿಸಿದರು.

ಸಭೆಯಲ್ಲಿ ಸಚಿವರಾದ ಡಾ. ಜಿ. ಪರಮೇಶ್ವರ, ಕೃಷ್ಣಬೈರೇಗೌಡ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಠಿಣ ಕ್ರಮಕ್ಕೆ ಆದೇಶ

ಪುಟ 9➡ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಮುಂಗಾರು ಮಳೆಗೂ ಮೊದಲೇ ಸಿದ್ಧತೆ ಕೈಗೊಳ್ಳಿ: ಮುಂಗಾರು ಮಳೆ ಪ್ರಾರಂಭವಾಗುವ ಮೊದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಬೆಂಗಳೂರಿನ ಐದೂ ವಲಯಗಳ ಆಯುಕ್ತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಒಣಗಿರುವ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ರಿಜ್ವಾನ್ ಅರ್ಷದ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಬಿಎ ಆಯುಕ್ತ ಮಹೇಶ್ವರ ರಾವ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಇದ್ದರು.

ರಾಜ್ಯಾದ್ಯಂತ ಶಿಥಿಲ ಆಸ್ಪತ್ರೆ ಕಟ್ಟಡ ಪರಿಶೀಲನೆ

ಪುಟ 9➡ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಸೇರಿದಂತೆ ರಾಜ್ಯದಲ್ಲಿರುವ ಎಲ್ಲ ಆಸ್ಪತ್ರೆ ಕಟ್ಟಡಗಳನ್ನು ಹಾಗೂ ಕಾಂಪೌಂಡ್‌ಗಳನ್ನು ತಜ್ಞರ ತಂಡ ಪರಿಶೀಲನೆ ನಡೆಸಲು ಆದೇಶಿಸಲಾಗಿದೆ ಎಂದರು.



ಪ್ರಧಾನಿ ಮೋದಿ ಸಂತಾಪ

ಪುಟ 9➡ದುರ್ಘಟನೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಬೆಂಗಳೂರಿನಲ್ಲಿ ಗೋಡೆ ಕುಸಿತದಿಂದ ಸಂಭವಿಸಿದ ಅನಾಹುತವು ಅತ್ಯಂತ ದುರದೃಷ್ಟಕರ. ದುಃಖಿತಪ್ತ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸುವೆ ಎಂದು ಅಧಿಕೃತ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ. ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಕೇಂದ್ರ ಸರ್ಕಾರ ಪರಿಹಾರ ಘೋಷಿಸಿದೆ. ಮೃತರ ಕುಟುಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ 50,000 ರೂಪಾಯಿಗಳ ಪರಿಹಾರ ನೀಡುವುದಾಗಿ ತಿಳಿಸಿದೆ.

ನಾಯಕತ್ವ ಬದಲಾವಣೆ ಗೊಂದಲಕ್ಕೆ ಶೀಘ್ರ ತೆರೆ

ಪುಟ 9➡ಅಸ್ಸಾಂನಲ್ಲಿ ಕಾಂಗ್ರೆಸ್‌ಗೆ ಸ್ವಲ್ಪ ಹಿನ್ನಡೆ ಕಾಣುತ್ತಿದೆ. ಪುದುಚೇರಿನಲ್ಲಿ ಬಿಜೆಪಿ ವಿರುದ್ಧ ಸಮಬಲ ಹೋರಾಟ ನಡೆದಿದ್ದು ಫಲಿತಾಂಶ ಟಫ್ ಆಗಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮುನ್ನಡೆ ಸಾಧಿಸುವ ಸಾಧ್ಯತೆ ಇದೆ. ಬಿಜೆಪಿ ಕಠಿಣ ಸ್ಪರ್ಧೆ ನೀಡಿದೆ ಎಂದ ಅವರು, ಮೂರು ದಿನಗಳಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಹೇಳಿದರು.

ಬೌರಿಂಗ್ ದುರಂತ- ಕ್ರಮಕ್ಕೆ ಸೂಚನೆ: ಬೆಂಗಳೂರು ನಗರದ ಬೌರಿಂಗ್ ಆಸ್ಪತ್ರೆ ಆವರಣದಲ್ಲಿ ಕಾಂಪೌಂಡ್ ಕುಸಿದು ಏಳು ಮಂದಿ ಮೃತಪಟ್ಟ ಘಟನೆಗೆ ಖರ್ಗೆ ಸಂತಾಪ ವ್ಯಕ್ತಪಡಿಸಿದರು. ಹಳೆಯ ಹಾಗೂ ಮಣ್ಣಿನ ಗೋಡೆಯಾಗಿದ್ದ ಕಾಂಪೌಂಡ್ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದು, ಮೃತರ ಕುಟುಂಬಗಳಿಗೆ ಪರಿಹಾರ ನೀಡಲು ಸೂಚಿಸಲಾಗಿದೆ ಎಂದರು.

ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು. ಕಾಂಪೌಂಡ್ ಬಳಿ ಅನಧಿಕೃತವಾಗಿ ತರಕಾರಿ ಮಾರಾಟ ಮಾಡದಂತೆ ನೋಡಿಕೊಳ್ಳಬೇಕು. ಪಾದಚಾರಿ ಮಾರ್ಗದಲ್ಲಿ ಕುಳಿತು ವ್ಯಾಪಾರ ಮಾಡುವವರಿಗೂ ಸೂಕ್ತ ಸ್ಥಳ ಕಲ್ಪಿಸುವುದು ಪಾಲಿಕೆಯ ಜವಾಬ್ದಾರಿ ಎಂದು ಹೇಳಿದರು. ಬೆಂಗಳೂರಿನಲ್ಲಿ ನಡೆದ ಈ ಘಟನೆ ಇತರೆಡೆ ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಜೆಡಿಎಸ್‌ನಿಂದ ತಲಾ ಒಂದು ಲಕ್ಷ ಪರಿಹಾರ

ಬೌರಿಂಗ್ ಆಸ್ಪತ್ರೆ ಬಳಿ ಸಂಭವಿಸಿದ ದುರ್ಘಟನೆಯಲ್ಲಿ ಮೃತಪಟ್ಟವರ ಮನೆಗಳಿಗೆ ಹಾಗೂ ಆಸ್ಪತ್ರೆಗೆ ವಿಧಾನ ಪರಿಷತ್‌ನ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ ಟಿ.ಎ.ಶರವಣ ನೇತೃತ್ವದ ಜೆಡಿಎಸ್ ನಿಯೋಗ ಭೇಟಿ ನೀಡಿತು. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ನಿಯೋಗವು, ಗಾಯಾಳುಗಳ ಆರೋಗ್ಯ ವಿಚಾರಿಸಿತು. ಜೆಡಿಎಸ್ ಪಕ್ಷದಿಂದ ಮೃತರ ಕುಟುಂಬಸ್ಥರಿಗೆ ತಲಾ 1 ಲಕ್ಷ ರೂ.ಗಳಂತೆ 7 ಲಕ್ಷ ರೂ. ಹಾಗೂ ಗಾಯಾಳುಗಳ ಕುಟುಂಬಗಳಿಗೆ ತಲಾ 25 ಸಾವಿರ ರೂ. ಪರಿಹಾರವನ್ನು ಶರವಣ ಘೋಷಣೆ ಮಾಡಿದರು.

ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚಿಸುವುದು ಖಚಿತ



• **ಬೆಂಗಳೂರು:** ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚನೆಯಾಗುವುದು ಖಚಿತ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಬಂಗಾಳದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮೇಲೆ ಜನತೆ ವಿಶ್ವಾಸ ಇಟ್ಟಿದ್ದಾರೆ. ಅಸ್ಸಾಂನಲ್ಲಿ ಮತದಾರರು ಮೂರನೇ ಬಾರಿ ಸೇವೆ ಮಾಡುವ ಅವಕಾಶ ನೀಡಲಿದ್ದಾರೆ ಎಂದು ತಿಳಿಸಿದರು. ಬಂಗಾಳದಲ್ಲಿ ಈ ಬಾರಿ ರಾಷ್ಟ್ರವಾದಿಗಳ ಸರ್ಕಾರ ರಚನೆ ಆಗಲಿದೆ ಎಂದು ನುಡಿದರು. ಪುದುಚೇರಿಯಲ್ಲಿ ಎನ್‌ಡಿಎ ಸರ್ಕಾರ ಬರಲಿದೆ. ತಮಿಳುನಾಡಿನಲ್ಲಿ ಒಳ್ಳೆಯದೇ ಆಗಲಿದೆ. ಕೇರಳದಲ್ಲಿ ಬಿಜೆಪಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತದೆ ಎಂದು ವಿವರಿಸಿದರು.

ಐಟಿಗೆ ಟೆರರ್‌ನ ಅರ್ಥ

ಪುಟ 1➡**ಸಮನ್ವಯದ ಸಾಧನೆ:** ಆಪರೇಶನ್ ಸಿಂಧೂರ್ ಅನ್ನು ಭಾರತೀಯ ರಕ್ಷಣಾ ಪಡೆಗಳ ಸಮನ್ವಯ ಹಾಗೂ ಏಕತೆಯ ಉಜ್ವಲ ಉದಾಹರಣೆಯಾಗಿದೆ ಎಂದು ಹೇಳಿದರು. ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಯು ಏಕೀಕೃತ ಯೋಜನೆ ಯಲ್ಲಿ ಕಾರ್ಯನಿರ್ವಹಿಸಿ, ಭಾರತವು ಈಗ ಒಗ್ಗಟ್ಟಿನ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿದೆ ಎಂದರು.

ಆಪರೇಷನ್ ಸಿಂದೂರನ್ನು ಭಾರತ ತನ್ನದೇ ಷರತ್ತು ಗಳಲ್ಲಿ, ತನ್ನದೇ ಸಮಯದಲ್ಲಿ ನಡೆಸಿ, ತನ್ನದೇ ನಿರ್ಧಾರ ದಲ್ಲಿ ಸ್ಥಗಿತಗೊಳಿಸಿತು ಎಂದು ಅವರು ತಿಳಿಸಿದರು. ಕಾರ್ಯಾಚರಣೆಯ ವೇಳೆ ಕೇವಲ ದಾಳಿಗೆ ಕಾರಣರಾದವರನ್ನೇ ನಿಖರವಾಗಿ ಗುರಿಯಾಗಿಸಲಾಗಿದೆ ಎಂದು ಹೇಳಿದರು.

ಉತ್ಪಾದನಾ ಕ್ಷೇತ್ರದ ಸಾಧನೆ


ಭಾರತದ ರಕ್ಷಣಾ ಉತ್ಪಾದನಾ ಕ್ಷೇತ್ರವೂ ವೇಗವಾಗಿ ಬೆಳೆಯುತ್ತಿದ್ದು, 2025–26 ಹಣಕಾಸು ವರ್ಷದಲ್ಲಿ ರಕ್ಷಣಾ ಉತ್ಪನ್ನಗಳ ರಫ್ತು 38,424 ಕೋಟಿ ರೂ.ಗೆ ಏರಿಕೆಯಾಗಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.62.66 ಹೆಚ್ಚಳವಾಗಿದೆ ಎಂದು ರಾಜ್‌ನಾಥ್ ಸಿಂಗ್ ಅವರು ಮಾಹಿತಿ ನೀಡಿದರು. ಹೊಸ ಜಾಗತಿಕ ವ್ಯವಸ್ಥೆಯಲ್ಲಿ ಹೊಸ ಭಾರತ ಯಾವುದೇ ಭಯೋತ್ಪಾದಕನಿಗೂ ಹಾಗೂ ಅದನ್ನು ಪ್ರೋತ್ಸಾಹಿಸುವವರನ್ನು ವಿಭಿನ್ನವಾಗಿ ನೋಡುವುದಿಲ್ಲ ಎಂಬ ಸ್ಪಷ್ಟ ನೀತಿಯನ್ನು ಅನುಸರಿಸುತ್ತಿದೆ ಎಂದು ಅವರು ಹೇಳಿದರು.

ಉಗ್ರವಾದ ಸಹಿಸಲ್ಲ

ಭಯೋತ್ಪಾದನೆಗೆ ನಕ್ಸಲಿಸಂ ಮೊದಲಾದ ಹಿಂಸಾತ್ಮಕ ಸಿದ್ಧಾಂತಗಳೊಂದಿಗೆ ಸಂಪರ್ಕಿಸುವುದು ಅತ್ಯಂತ ಅಪಾಯಕರ ಎಂದು ಅವರು ಎಚ್ಚರಿಸಿದರು. ಇದು ಭಯೋತ್ಪಾದಕರಿಗೆ ಪರೋಕ್ಷ ಬೆಂಬಲ ನೀಡುವಂತಾಗುತ್ತದೆ ಎಂದರು.

ಮೋದಿ ನಾಯಕತ್ವಕ್ಕೆ ಶ್ಲಾಘನೆ

ಪ್ರಧಾನಿ ನರೇಂದ್ರ ಮೋದಿ ನಾಯಕತ್ವವನ್ನು ಕೊಂಡಾಡಿ, ಭಯೋತ್ಪಾದನೆ ಬಗ್ಗೆ ಶೂನ್ಯ ಸಹಿಷ್ಣುತೆಯ ಮೋದಿ ಸರಕಾರದ ಧೋರಣೆ ಪ್ರಶಂಸಾರ್ಹ. ಭಾರತ ಯಾವ ಕಾರಣಕ್ಕೂ ಪರಮಾಣು ದಾಳಿ ಬೆದರಿಕೆಗಳಿಗೆ ಹೆದರಲ್ಲ, ಜಗ್ಗಲ್ಲವೆಂದು ಪುನರುಚ್ಚರಿಸಿದರು.



ಅಣ್ವಸ್ತ್ರ ದಾಳಿ ಬೆದರಿಕೆಗೆ ಭಾರತ ತಲೆಬಾಗಿಲ್ಲ

ಭಾರತವು ಯಾವುದೇ ಅಣು ದಾಳಿಯ ಬೆದರಿಕೆಗೆ ತಲೆಬಾಗದೆ ತನ್ನ ಗುರಿಗಳನ್ನು ಸಾಧಿಸಿದೆ. ಅಗತ್ಯವಿದ್ದರೆ ದೀರ್ಘಕಾಲದ ಸಂಘರ್ಷಕ್ಕೂ ಸಿದ್ಧವಾಗಿರುವ ಸಾಮರ್ಥ್ಯ ಭಾರತಕ್ಕಿದೆ. ಪರಮಾಣು ದಾಳಿ ಬೆದರಿಕೆಗೆ ನಾವು ಹೆದರಿಕೊಂಡು ಸಿಂದೂರ ಕಾರ್ಯಾಚರಣೆಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿಲ್ಲ ಎಂದೂ ರಾಜನಾಥ್ ಗುಡುಗಿದ್ದಾರೆ.

ಎಲ್ಲಾ ಭಾರತೀಯರದ್ದೂ ಮಹಾದೇವನ ಡಿಎನ್‌ಎ

ಪುಟ 9➡**ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಹೇಳಿಕೆ:** ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) 100ನೇ ವರ್ಷಾಚರಣೆ ಅಂಗವಾಗಿ ಮಂಗಳವಾರ ಆಯೋಜಿಸಲಾಗಿದ್ದ ಯುವ ಕುಂಭ ಕಾರ್ಯಕ್ರಮದಲ್ಲಿ ಮಜರ್ ಆಸೀಫ್ ಮಾತನಾಡುತ್ತಾ, ಎಲ್ಲಾ ಭಾರತೀಯರ ಡಿಎನ್‌ಎ ಭಗವಾನ್ ಮಹಾದೇವನೊಂದಿಗೆ ಸಂಬಂಧ ಹೊಂದಿದೆ ಎಂದು ಹೇಳಿದ್ದರು.



ಮಜರ್ ಆಸೀಫ್ ನೀಡಿದ ಹೇಳಿಕೆಯ ವೀಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ವಿವಾದಕ್ಕೆ ಕಾರಣವಾಗಿತ್ತು. ವಿವಿಧ ಭಾಷೆ, ಧರ್ಮ ಮತ್ತು ಭೌಗೋಳಿಕ ಹಿನ್ನೆಲೆ ಹೊಂದಿದ್ದರೂ, ಭಾರತೀಯರು ಸಾಮಾನ್ಯ ಡಿಎನ್‌ಎ ಮೂಲಕ ಪರಸ್ಪರ ಸಂಬಂಧ ಹೊಂದಿದ್ದಾರೆ ಎಂದು ಅವರು ಪ್ರತಿಪಾದಿಸಿದ್ದರು.

ರಾಜಕೀಯ ಸಮರ್ಥನೆ: ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಆಸೀಫ್ ಹೇಳಿಕೆಯನ್ನು ಶಬ್ದಶಃ ಅರ್ಥೈಸುವ ಬದಲು ಅದನ್ನು ನಾಗರಿಕತೆಯ ಸಂಕೇತವಾಗಿ ನೋಡಬೇಕು ಎಂದು ತಿಳಿಸಿದ್ದಾರೆ. ಹಂಚಿ ಹೋಗಿರುವ ಪೂರ್ವಜರು ಮತ್ತು ಸಾಂಸ್ಕೃತಿಕ ನಿರಂತರತೆಯನ್ನು ಈ ಹೇಳಿಕೆ ಪ್ರತಿಬಿಂಬಿಸುತ್ತದೆ ಎಂದು ಅವರು ವಿವರಿಸಿದ್ದಾರೆ. ಇಂತಹ ಹೇಳಿಕೆಗಳನ್ನು ಅವೈಜ್ಞಾನಿಕ ಎಂದು ಟೀಕಿಸುವುದು ನಾಗರಿಕತೆಯ ಕಲ್ಪನೆಗಳ ಬಗ್ಗೆ ಇರುವ ಅಸಹಿಷ್ಣುತೆಯನ್ನು ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ.

ಐತಿಹಾಸಿಕ ಮತ್ತು ಸಾಂಸ್ಕೃತಿಕ ಉಲ್ಲೇಖ: ಭಾರತದ ಸಮ್ಮಿಶ್ರ ಸಂಸ್ಕೃತಿಯನ್ನು ಬೆಂಬಲಿಸಲು ಮಾಳವೀಯ, ಮೌಲಾನಾ ಅಬುಲ್ ಕಲಾಂ ಅಜಾದ್ ಮತ್ತು ಮೌಲಾನಾ ವಹೀದುದ್ದೀನ್ ಖಾನ್‌ರಂತಹ ನಾಯಕರನ್ನು ಉಲ್ಲೇಖಿಸಿದ್ದಾರೆ. ಮತಾಂತರ ಒಬ್ಬರ ಜನಾಂಗ ಅಥವಾ ಮೂಲವನ್ನು ಬದಲಿಸುವುದಿಲ್ಲ ಎಂದು ವಹೀದುದ್ದೀನ್ ಖಾನ್ ಹೇಳಿದ್ದರು. ಅಲ್ಲದೆ, ಕವಿ ಮುಹಮ್ಮದ್ ಇಕ್ಬಾಲ್, ಭಗವಾನ್ ರಾಮನನ್ನು 'ಇಮಾಮ್–ಎ–ಹಿಂದ್' ಎಂದು ಬಣ್ಣಿಸಿರುವುದನ್ನೂ ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ.

ಸುಪ್ರೀಂ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಅಭಿಯಾನ

ಬೆಂಗಳೂರು: ದೇಶಾದ್ಯಂತ ಬಾಕಿ ಇರುವ ಪ್ರಕರಣಗಳ ಸೌಹಾರ್ದಯುತ ಇತ್ಯರ್ಥಕ್ಕಾಗಿ ಸಮಾಧಾನ ಸಮಾರೋಹ ವಿಶೇಷ ಲೋಕ ಅದಾಲತ್ ಅಭಿಯಾನವನ್ನು ಸುಪ್ರೀಂಕೋರ್ಟ್ ಹಮ್ಮಿಕೊಂಡಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್.ದೇವದಾಸ್ ತಿಳಿಸಿದರು.

ಹೈಕೋರ್ಟ್‌ನ ಕಾರ್ಯನಿರ್ವಾಹಕ ಮುಖ್ಯಸ್ಥರ ಸಭಾ ಕೊಠಡಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ ಲೋಕ್ ಅದಾಲತ್‌ಗಳ ಮೂಲಕ ಪ್ರಕರಣಗಳ ವಿಲೇವಾರಿ ನಡೆಯುತ್ತದೆಯಾದರೂ, ಈ ಬಾರಿ ವಿಶೇಷವಾಗಿ ಸುಪ್ರೀಂ ಕೋರ್ಟ್ ಪ್ರಕರಣಗಳಿಗಾಗಿಯೇ ಪ್ರಥಮಬಾರಿ ಈ ಪ್ರತ್ಯೇಕ ಅಭಿಯಾನವನ್ನು ರೂಪಿಸಲಾಗಿದೆ. ಆಗಸ್ಟ್ 21, 22 ಮತ್ತು 23ರಂದು ನಡೆಯಲಿದ್ದು, ಇದಕ್ಕೆ ಪೂರಕವಾದ ಪೂರ್ವ ಸಮಾಧಾನ ಪ್ರಕ್ರಿಯೆಗಳು ಈಗಾಗಲೇ ಆರಂಭಗೊಂಡಿವೆ ಎಂದು ತಿಳಿಸಿದರು.

ಕರ್ನಾಟಕದಿಂದ 4,328 ಪ್ರಕರಣ: ಈ ಮಹತ್ವದ ಅಭಿಯಾನದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಒಟ್ಟು 4,328 ಪ್ರಕರಣಗಳನ್ನು ಪೂರ್ವ ಸಮಾಧಾನ ಪ್ರಕ್ರಿಯೆಗಾಗಿ ಗುರುತಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು 1,245 ಪ್ರಕರಣಗಳು ಹಾಗೂ ಬೆಳಗಾವಿಯಲ್ಲಿ 517, ಚಾಮರಾಜನಗರ ಜಿಲ್ಲೆಯಲ್ಲಿ ಕನಿಷ್ಠ 4 ಪ್ರಕರಣಗಳು ಹಾಗೂ ಯಾದಗಿರಿಯಲ್ಲಿ 14 ಪ್ರಕರಣಗಳು ಪಟ್ಟಿಯಲ್ಲಿವೆ.



ಸುಪ್ರೀಂ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಇದೊಂದು ಸುವರ್ಣಾವಕಾಶ. ಈಗಾಗಲೇ 4,128 ಪ್ರಕರಣಗಳನ್ನು ಗುರುತಿಸಲಾಗಿದ್ದು, ಪಟ್ಟಿಯಲ್ಲಿ ಹೆಸರಿಲ್ಲದಿದ್ದರೂ ರಾಜಿ ಸಂಧಾನಕ್ಕೆ ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದು.
■ **ನ್ಯಾ. ದೇವದಾಸ್, ಹೈಕೋರ್ಟ್ ಜಡ್ಜ್**

ಇವುಗಳಲ್ಲಿ ಸರ್ಕಾರವೇ ಒಂದು ಪಕ್ಷಗಾರರಾಗಿರುವ 937ಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಕ್ಕೆ ಯೋಗ್ಯವೆಂದು ಗುರುತಿಸಲಾಗಿದೆ.

ಇತ್ಯರ್ಥಕ್ಕೆ ಲಭ್ಯವಿರುವ ಪ್ರಕರಣಗಳ ವಿಧಗಳು: ಬ್ಯಾಂಕಿಂಗ್ ಮತ್ತು ವಿಮೆ, ಮೋಟಾರು ಅಪಘಾತ ಪರಿಹಾರ, ನಾಗರಿಕ ಕಾನೂನು, ಗ್ರಾಹಕ ವ್ಯಾಜ್ಯಗಳು, ಕ್ರಿಮಿನಲ್ ಪ್ರಕರಣಗಳು, ಕೌಟುಂಬಿಕ ವಿವಾದಗಳು, ಭೂಸ್ವಾಧೀನ, ಆಸ್ತಿ ತೆರಿಗೆ ಮತ್ತು ಸೇವಾ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಈ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ.

ಪ್ರಕ್ರಿಯೆ ಮತ್ತು ಸೌಲಭ್ಯಗಳು: ಪಕ್ಷಗಾರರ ಅನುಕೂಲಕ್ಕಾಗಿ ಸ್ಥಳೀಯ ಜಿಲ್ಲಾ ಮತ್ತು ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಭೌತಿಕವಾಗಿ ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಲು ವ್ಯವಸ್ಥೆ ಮಾಡಲಾಗಿದೆ. ಒಂದು ವೇಳೆ ಪಕ್ಷಗಾರರು ಬೇರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದರೂ ಸಹ ವರ್ಚುವಲ್ ವಿಧಾನದ ಮೂಲಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು.

ಲೋಕ ಅದಾಲತ್‌ನ ಲಾಭಗಳು: ಈ ಪ್ರಕ್ರಿಯೆಯಲ್ಲಿ ಯಾವುದೇ ನ್ಯಾಯಾಲಯದ ಶುಲ್ಕವಿರುವುದಿಲ್ಲ. ಒಂದು ವೇಳೆ ಈಗಾಗಲೇ ಶುಲ್ಕ ಪಾವತಿಸಿದ್ದರೆ, ಪ್ರಕರಣ ಇತ್ಯರ್ಥವಾದ ನಂತರ ಅದನ್ನು ಹಿಂದಿರುಗಿಸಲಾಗುತ್ತದೆ. ಲೋಕ ಅದಾಲತ್‌ನಲ್ಲಿ ನೀಡಲಾಗುವ ಆದೇಶವು ಅಂತಿಮವಾಗಿದ್ದು, ಇದನ್ನು ಮತ್ತೆ ಎಲ್ಲಿಯೂ ಪ್ರಶ್ನಿಸಲು ಅವಕಾಶವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ: ವಕೀಲರು ಮತ್ತು ಪಕ್ಷಗಾರರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್ (www.kslsa.kar.nic.in) ಅಥವಾ ಸುಪ್ರೀಂ ಕೋರ್ಟ್‌ನ ಅಧಿಕೃತ ಜಾಲತಾಣದಲ್ಲಿ ಹೆಚ್ಚಿನ ವಿವರ ಪಡೆಯಬಹುದು.

ಅಭಿಮಾನೋತ್ಸವ



ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ 50 ವರ್ಷ ತುಂಬಿದ ಸವಿನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವದ ಸ್ಟಿಕರ್‌ನ್ನು ಶಿವಮೊಗ್ಗದ ಬಿಜೆಪಿ ಕಚೇರಿಯಲ್ಲಿ ಬಿಡುಗಡೆಗೊಳಿಸಲಾಯಿತು. ಸಂಸದ ಬಿ.ವೈ. ರಾಘವೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಪ್ರಮುಖರಾದ ದತ್ತಾತ್ರಿ, ಧನಂಜಯ ಸರ್ಜಿ, ಜ್ಯೋತಿಪ್ರಕಾಶ್, ಎಂ.ಬಿ. ಹರಿಕೃಷ್ಣ ಮತ್ತಿತರರಿದ್ದರು.

ಕಿರುಸುದ್ದಿ

ಆದಿತ್ಯ ಪ್ರಕರಣ ಸಿಬಿಐಗೆ ವಹಿಸಲು ಬೆಲ್ಲದ ಆಗ್ರಹ

ಧಾರವಾಡ: ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಮೂವರನ್ನು ಅಮಾನತು ಮಾಡಿದರೆ ಸಾಲದು. ಸಮಗ್ರ ತನಿಖೆಗೆ ಸಿಐಡಿ ಇಲ್ಲವೇ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ವಿಧಾನಸಭೆ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆಗ್ರಹಿಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಕಿರುಕುಳದಿಂದ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಕಾನ್ಸ್‌ಟೇಬಲ್‌ರನ್ನ ಅಮಾನತು ಮಾಡಲಾಗಿದೆ. ತಪ್ಪಿನ ಮೂಲ ಬೇರು ಪತ್ತೆ ಹಚ್ಚಲು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿದರು.

ಸರ್ಕಾರಿ ನೌಕರಿ ನೀಡಿ: ಎರಡು ದಿನಗಳೊಳಗೆ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳದಿದ್ದರೆ, ಧಾರವಾಡದಿಂದ ಹೋರಾಟ ಮಾಡುವ ಎಚ್ಚರಿಕೆ ನೀಡಿದ ಬೆಲ್ಲದ, ಮೃತನ ತಾಯಿಗೆ ಸರ್ಕಾರ 50 ಲಕ್ಷ ರೂ. ಪರಿಹಾರ ಹಾಗೂ ಸರ್ಕಾರಿ ನೌಕರಿ ನೀಡಬೇಕು ಎಂದು ಆಗ್ರಹಿಸಿದರು.

ಪತ್ನಿಯನ್ನು ಕೊಲೆ ಮಾಡಿ ಪೊಲೀಸರಿಗೆ ಶರಣಾದ ಪತಿ

ಮೈಸೂರು: ಪತಿಯೇ ತನ್ನ ಪತ್ನಿಯನ್ನು ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಮೈಸೂರಿನ ಹಳೆ ಕೆಸರೆ ಗ್ರಾಮದಲ್ಲಿ ನಡೆದಿದೆ. ಮಹೇಶ್ ಎಂಬಾತನೇ ತನ್ನ ಪತ್ನಿ ಪುಷ್ಪ ಎಂಬಾಕೆಯನ್ನು ಕೊಲೆ ಮಾಡಿದವ. ಖಾಸಗಿ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪುಷ್ಪ ಅವರು ಪ್ರತಿ ದಿನ ಕೆಲಸ ಮುಗಿಸಿ ರಾತ್ರಿ ಮನೆಗೆ ಬರುತ್ತಿದ್ದರು. ಎಂದಿನಂತೆ ಕಳೆದ ರಾತ್ರಿ ಪುಷ್ಪ ಕೆಲಸ ಮುಗಿಸಿ ಮನೆಗೆ ಬಂದಾಗ ದಂಪತಿ ನಡುವೆ ತೀವ್ರ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗುತ್ತಿದ್ದಂತೆ ಆಕ್ರೋಶಗೊಂಡ ಮಹೇಶ್ ಕೊಡಲಿಯಿಂದ ಕೊಚ್ಚಿ ಪುಷ್ಪಾಳನ್ನು ಕೊಲೆ ಮಾಡಿದ್ದಾನೆ. ಪತ್ನಿಯನ್ನು ಕೊಂದ ನಂತರ ಮಹೇಶ್, ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ನರಸಿಂಹರಾಜ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಆಯುಕ್ತರ ಕಚೇರಿಯಲ್ಲೇ ವ್ಯಕ್ತಿ ಆತ್ಮಹತ್ಯೆಗೆ ಯತ್ನ

ಬೆಳಗಾವಿ: ಜಮೀನು ಭೂ ಪರಿವರ್ತನೆ(ಎನ್‌ಎ) ಸಂಬಂಧ ಸಮಸ್ಯೆ ಹಿನ್ನೆಲೆ ವ್ಯಕ್ತಿಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಡೆದಿದೆ. ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ರುದ್ರಯ್ಯ ಅಮ್ಮಿನಬಾವಿಮಠ(50) ಎಂಬವರು ಎರಡು ಎಕರೆ ಜಮೀನನ್ನು ಎನ್‌ಎ ಮಾಡಲು ಅರ್ಜಿ ಸಲ್ಲಿಸಿ ಹಲವು ದಿನಗಳಿಂದ ಕಚೇರಿಗಳಿಗೆ ಅಲೆದಾಡುತ್ತಿದ್ದರು. ಹಾವೇರಿ ಡಿಸಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರೂ, ಲ್ಯಾಂಡ್ ಯೂಸ್ ಚೇಂಜ್ ಆಗುವವರೆಗೂ ಎನ್‌ಎ ಮಾಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಚೇರಿಗೆ ಹಲವು ಬಾರಿ ಭೇಟಿ ನೀಡಿ ಮನವಿ ಮಾಡಿದ್ದ ರುದ್ರಯ್ಯ, ಗುರುವಾರ ಪ್ರಾದೇಶಿಕ ಆಯುಕ್ತ ಜಾನಕಿ ಅವರನ್ನು ಭೇಟಿ ಮಾಡಲು ಮತ್ತೊಮ್ಮೆ ಆಗಮಿಸಿದ್ದರು. ಆದರೆ, ಆಯುಕ್ತ ಕಚೇರಿಯಲ್ಲಿ ಲಭ್ಯವಿಲ್ಲ ಎಂಬ ಮಾಹಿತಿ ತಿಳಿದ ಬಳಿಕ ಮನನೊಂದು ಕಚೇರಿಯಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಕ್ಷಣವೇ ಅವರನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಯೋಜನೆಗೆ ಅಸ್ತು

ಅಲ್ಪಸಂಖ್ಯಾತರಿಗೆ ಬಂಪರ್

ಬೆಂಗಳೂರು: ರಾಜ್ಯದ ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರ ಬಂಪರ್ ಕೊಡುಗೆ ನೀಡಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿಧಾನಸಭಾ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತರು ವಾಸಿಸುತ್ತಿರುವ ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಕ್ರಿಯಾ ಯೋಜನೆ ರೂಪಿಸಿ ಕಾಮಗಾರಿಗಳನ್ನು ಅನುಷ್ಠಾನಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಕುರಿತು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮದವರಿಗೆ ವಿವರ ನೀಡಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರದೇಶಗಳಲ್ಲಿನ ಅತೀ ಹಿಂದುಳಿದ ಅಲ್ಪಸಂಖ್ಯಾತರು ವಾಸಿಸುತ್ತಿರುವ ನಗರ ಪ್ರದೇಶಗಳಲ್ಲಿ ಅತೀ ಹಿಂದುಳಿದ ಕಾಲೊನಿಗಳನ್ನು ಮಾದರಿ ಕಾಲೊನಿಗಳನ್ನಾಗಿ ಅಭಿವೃದ್ಧಿ ಪಡಿಸಬೇಕಿದೆ. ಇದಕ್ಕಾಗಿ ರಾಜ್ಯದ 11 ಕಾರ್ಪೊರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಂ ಅಥವಾ ಕಾಲೊನಿ ಅಭಿವೃದ್ಧಿ ಯೋಜನೆ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ 2026-27 ಮತ್ತು 2027-28ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಒಪ್ಪಿಗೆಯಂತೆ 600 ಕೋಟಿ ರೂ.ಗಳಿಗೆ ಕ್ರಿಯಾ ಯೋಜನೆ ರೂಪಿಸಿದೆ ಎಂದರು.

ಹೈಸ್ಪೀಡ್ ರೈಲು ಕಾರಿಡಾರ್‌ಗೆ ತಾತ್ವಿಕ ಅನುಮೋದನೆ: ಕರ್ನಾಟಕ ರಾಜ್ಯದೊಳಗೆ ಹೈದರಾಬಾದ್-ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್ ಕೈಗೊಳ್ಳಲು ಮತ್ತು ಅನುಷ್ಠಾನಗೊಳಿಸಲು ಸಚಿವ ಸಂಪುಟವು ತಾತ್ವಿಕ ಅನುಮೋದನೆ ನೀಡಿದೆ. ಅದರ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತಾತ್ಮಕ ಮತ್ತು ಶಾಸನಬದ್ಧ ಬೆಂಬಲ ನೀಡಲು ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಅಧಿಕಾರ ನೀಡಲಾಗಿದೆ. ಈ ಕಾರಿಡಾರ್ ಒಟ್ಟು 607.03 ಕಿ.ಮೀ. ಉದ್ದವಿದೆ. ತುಮಕೂರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 101.03 ಕಿ.ಮೀ. ಕರ್ನಾಟಕದ ಒಳಗಡೆ ಇರುತ್ತದೆ. ಒಟ್ಟು 15 ನಿಲ್ದಾಣಗಳ ಪೈಕಿ 3 ನಿಲ್ದಾಣಗಳೆಂದರೆ ಅಲಿಪುರ, ದೇವನಹಳ್ಳಿ ಮತ್ತು ಕೋಡಿಹಳ್ಳಿ ಕರ್ನಾಟಕದಲ್ಲಿರುತ್ತವೆ ಎಂದು ತಿಳಿಸಿದರು.

ಅದೇ ರೀತಿ ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್ ಕೈಗೊಳ್ಳುವುದಕ್ಕೂ ಸಚಿವ ಸಂಪುಟ ತಾತ್ವಿಕ ಅನುಮತಿ ನೀಡಿದೆ ಎಂದರು.

ಸಚಿವ ಸಂಪುಟದ ಇತರೆ ನಿರ್ಣಯಗಳು

- ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಲ್ಲಿ 6 ಎಂಆರ್‌ಐ ಯಂತ್ರಗಳನ್ನು 81 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಖರೀದಿಸಿ, ಜಿಲ್ಲಾಸ್ಪತ್ರೆಗಳಿಗೆ ಪೂರೈಸಲು ಅನುಮೋದನೆ
- ಬೀದರ್-ಬೆಂಗಳೂರು ಮತ್ತು ಕಲಬುರಗಿ-ಬೆಂಗಳೂರು ಮಾರ್ಗಗಳಲ್ಲಿ ವಿಮಾನ ಸೇವೆಗಳಿಗೆ 28.47 ಕೋಟಿ ರೂ. ಸಬ್ಸಿಡಿ ಸಹಾಯ
- ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ 2026-27ನೇ ಸಾಲಿನಲ್ಲಿ 115.84 ಕೋಟಿ ರೂ.ಗಳ ವೆಚ್ಚದಲ್ಲಿ ಶಾಲಾ ಕಿಟ್‌ಗಳನ್ನು ಒದಗಿಸಲು ಒಪ್ಪಿಗೆ
- 2025-26ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ರಾಜ್ಯದ ರೈತರಿಂದ ಬಿಳಿಜೋಳ ಖರೀದಿಸಲು ಅವಶ್ಯವಿರುವ ಹೆಚ್ಚುವರಿ ಗೋಣಿ ಚೀಲಗಳನ್ನು 21.35 ಕೋಟಿ ರೂ. ವೆಚ್ಚದಲ್ಲಿ ಖರೀದಿ ಮಾಡಲು ಸಮ್ಮತಿ
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯವಿರುವ 80 ನಗರ ಸಾರಿಗೆ ಬಸ್ಸುಗಳನ್ನು 32 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ
- ಭಾರತ ಸರ್ಕಾರದ ಅರ್ಬನ್ ಚಾಲೆಂಜ್ ಫಂಡ್‌ನ ಕಾರ್ಯಕ್ರಮ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಮತ್ತು ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ರಚಿಸಲು ಸಮ್ಮತಿ

ಉನ್ನತ ಶಿಕ್ಷಣ ಸಚಿವ ಸುಧಾಕರ್ ಮಾಹಿತಿ

ಶೈಕ್ಷಣಿಕ ಸಂಯೋಜಕ ಹುದ್ದೆಗೆ ಅತಿಥಿ ಶಿಕ್ಷಕರು

ಬೆಂಗಳೂರು: ಯುಜಿಸಿ ಅರ್ಹತೆ ಪಡೆಯದೇ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕನಿಷ್ಠ 5 ವರ್ಷ ಕಾರ್ಯನಿರ್ವಹಿಸಿರುವಂತಹ ಉಪನ್ಯಾಸಕರಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಮೂರು ವರ್ಷಗಳ ಕಾಲ ರಾಜ್ಯ ಸರ್ಕಾರವು ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಿಸಿದೆ.

ಗುರುವಾರ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು, ಅತಿಥಿ ಉಪನ್ಯಾಸಕರನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಿಸಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು. ಅಲ್ಲದೇ, ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ಬಯಸುವವರಿಗೆ ನೆಟ್ ಮತ್ತು ಕೆ-ಸೆಟ್ ಪಡೆಯಲು ಬೇಕಾದ ಆನ್‌ಲೈನ್ ತರಬೇತಿ ನೀಡಲಾಗುತ್ತದೆ. ಇದನ್ನು ಬಳಸಿಕೊಂಡು ಮತ್ತೆ ಉಪನ್ಯಾಸಕ ಸೇವೆಗೆ ಮರಳಬಹುದು ಎಂದರು. 5 ರಿಂದ 10 ವರ್ಷ ಸೇವೆ ಸಲ್ಲಿಸಿರುವವರಿಗೆ 28 ಸಾವಿರ ರೂ., 10 ರಿಂದ 15 ವರ್ಷ ಸೇವೆ ಸಲ್ಲಿಸಿರುವವರಿಗೆ 29 ಸಾವಿರ ರೂ. ಮತ್ತು 15 ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯ ನಿರ್ವಹಿಸುವವರಿಗೆ ಮಾಸಿಕ 30 ಸಾವಿರ ರೂ. ಗೌರವಧನ ನಿಗದಿ ಮಾಡಲಾಗಿದೆ. ವಾರ್ಷಿಕ 10 ತಿಂಗಳ ಅವಧಿಗೆ ಮಾತ್ರ ಗೌರವಧನ ನೀಡಲಾಗುತ್ತದೆ. ನಿವೃತ್ತಿ ವೇಳೆ 5 ಲಕ್ಷ ರೂ. ಇಡುಗಂಟು ನೀಡಲಾಗುತ್ತದೆ. ಶೈಕ್ಷಣಿಕ ಸಂಯೋಜಕರಿಗೆ ವಾರ್ಷಿಕ 95.08 ಕೋಟಿ ರೂ. ಅನುದಾನ ನೀಡಲಾಗುತ್ತದೆ ಎಂದರು.

10,335 ಕರ್ತವ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರು

5,267 ಯುಜಿಸಿ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರು



5,068 ಯುಜಿಸಿ ಅರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರು

3,853 ಯುಜಿಸಿ ಅರ್ಹತೆ ಹೊಂದದ ಕೌನ್ಸಿಲಿಂಗ್ ಮೂಲಕ ಆಯ್ಕೆಯಾದ ನಂತರ ಲಭ್ಯವಾದ ಅತಿಥಿ ಉಪನ್ಯಾಸಕರು

ಕೌನ್ಸೆಲಿಂಗ್ ಆಧಾರಿತ ವರ್ಗಾವಣೆ ವ್ಯವಸ್ಥೆ ಜಾರಿ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಬಿಎಂಆರ್‌ಡಿಎ ಮತ್ತು ನಗರ ನಿಗಮಗಳಲ್ಲಿನ ಎಲ್ಲಾ ಉಪ-ನೋಂದಣಾಧಿಕಾರಿಗಳ ವರ್ಗಾವಣೆಯನ್ನು ಪಾರದರ್ಶಕ, ಪ್ರಭಾವವಿಲ್ಲದ, ಯಾರದ್ದೂ ಹಸ್ತಕ್ಷೇಪವಿಲ್ಲದ ಕೌನ್ಸೆಲಿಂಗ್ ಆಧಾರಿತ ವರ್ಗಾವಣಾ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಚಿವರು, ಈ ಪ್ರಕ್ರಿಯೆಯನ್ನು 2 ವರ್ಷಗಳ ಹಿಂದೆಯೇ ಪ್ರಾರಂಭಿಸಿದ್ದೇವೆ. ನಗರಗಳಲ್ಲಿ ಹೆಚ್ಚು ವರ್ಷ ಸೇವೆ ಸಲ್ಲಿಸಿದ 33 ಉಪ ನೋಂದಣಿದಾರರನ್ನು 2024ರಲ್ಲಿ ಕಡ್ಡಾಯವಾಗಿ ವರ್ಗಾವಣೆ ಮಾಡಿ ಕೌನ್ಸೆಲಿಂಗ್ ಮೂಲಕ ಜಾಗ ನೀಡಲಾಗಿತ್ತು. ವರ್ಗಾವಣೆಯಿಂದ ಖಾಲಿಯಾಗಿದ್ದ ನಗರ ಭಾಗದ ಹುದ್ದೆಗಳನ್ನು ಮುಕ್ತ ಮತ್ತು ಪಾರದರ್ಶಕ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಲಾಯಿತು. ಈ ಪಾರದರ್ಶಕ ಪ್ರಕ್ರಿಯೆಯಲ್ಲಿ ಒಟ್ಟು 90 ಅಧಿಕಾರಿಗಳನ್ನು ವರ್ಗಾಯಿಸಲಾಯಿತು ಎಂದಿದ್ದಾರೆ. 2024ರಲ್ಲಿ ಈ ವ್ಯವಸ್ಥೆಯನ್ನು ಒಮ್ಮೆ ಪ್ರಾಯೋಗಿಕವಾಗಿ ಪ್ರಾರಂಭಿಸಿದ್ದೆವು. ಈಗ, ನಾವು ಮುಂದಿನ ಪ್ರಮುಖ ಹೆಜ್ಜೆ ಇಡುತ್ತಿದ್ದೇವೆ. 2024ರಲ್ಲಿ ಒಂದು-ಬಾರಿ ಕ್ರಮವಾಗಿದ್ದನ್ನು ಈಗ ನಿಯಮಿತ ಮತ್ತು ಶಾಶ್ವತ ವ್ಯವಸ್ಥೆಯಾಗಿ ಮಾಡಲಾಗುತ್ತಿದೆ. ಇಂದಿನಿಂದ ಪ್ರತಿ ವರ್ಷ ಇದನ್ನು ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ತಿದ್ದುಪಡಿ ಅಥವಾ ನಿಯಮಗಳನ್ನು ತಂದಿದ್ದೇವೆ ಎಂದಿದ್ದಾರೆ.

ಪ್ರಮುಖ ನಗರ ಪ್ರದೇಶಗಳಲ್ಲಿ 5 ವರ್ಷಗಳನ್ನು ಪೂರ್ಣಗೊಳಿಸಿದ ಅಧಿಕಾರಿಗಳನ್ನು ಕೌನ್ಸೆಲಿಂಗ್ ಮೂಲಕ ನಗರೇತರ ಪ್ರದೇಶಗಳಿಗೆ ವರ್ಗಾಯಿಸಲಾಗುತ್ತದೆ. ಕೆಲಸದ ವಾತಾವರಣವನ್ನು ಸೃಷ್ಟಿಸುವ ನ್ಯಾಯಯುತ ಮತ್ತು ಪಾರದರ್ಶಕ ವ್ಯವಸ್ಥೆಯನ್ನು ರಚಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

7 ಜನರ ಮೃತದೇಹ ಹಸ್ತಾಂತರ

ಬೆಂಗಳೂರು: ಭಾರೀ ಗಾಳಿ ಮಳೆಗೆ ಆಸ್ಪತ್ರೆಯ ತಡೆಗೋಡೆ ಕುಸಿದು ದುರ್ಮರಣಕ್ಕೀಡಾದ ಏಳು ಜನರ ಮೃತದೇಹಗಳನ್ನ ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ತಡರಾತ್ರಿ ಪೊಲೀಸರ ಭದ್ರತೆಯೊಂದಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಳಿಸಲಾಗಿದ್ದು, ಸೋಮವಾರ ಮುಂಜಾನೆ ವೇಳೆಗೆ ಮೃತ ದೇಹಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಈ ದುರಂತಕ್ಕೆ ಸಂಬಂಧಿಸಿದಂತೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ (ಯುಡಿಆರ್) ದಾಖಲಿಸಿಕೊಳ್ಳಲಾಗಿದೆ.

ಬುಧವಾರ ಸಂಜೆ ವೇಳೆಗೆ ನಗರದಲ್ಲಿ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದಿತ್ತು. ಪರಿಣಾಮ ಪಕ್ಕದ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಿದ್ದ ಮೊಹಮ್ಮದ್ ಅಬ್ದುಲ್ ಹಕ್(52), ಫಯಾಜ್ ಅಹಮ್ಮದ್(39), ಹೆಣ್ಣು ಮಗು ಮುಸಾವೀರ್ ಬೇಗಂ(6), ಕೇರಳದ ಪ್ರವಾಸಿಗರಾದ ಲತಾ(57), ಸ್ಮಿತಾ(47), ಉತ್ತರಪ್ರದೇಶದ ಮೊಹಮದ್ ಸಲಾವುದ್ದೀನ್ ಅನ್ಸಾರಿ(36) ಹಾಗೂ ಅಸ್ಸಾಂನ ನಸೀಮುಲ್ಲಾ(19) ಸ್ಥಳದಲ್ಲೇ ಮೃತಪಟ್ಟಿದ್ದರು. ಅಲ್ಲದೇ ಕೇರಳ ಮೂಲದ ಪ್ರೀತಿ (51), ಸಿಜಾ (45) ಹಾಗೂ ಮಾಯಾ(51) ಎಂಬ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಅವರಿಗೆ ಚಿಕಿತ್ಸೆ ಮುಂದುವರಿದಿದೆ.

ಭಾರೀ ಗಾಳಿ ಮಳೆಗೆ ತಡೆಗೋಡೆ ಕುಸಿದು ದುರ್ಘಟನೆ



ಉನ್ನತ ಮಟ್ಟದ ತನಿಖೆಗೆ ಆಗ್ರಹ

ಬೌರಿಂಗ್ ಆಸ್ಪತ್ರೆ ಕಟ್ಟಡ ಹಳೆಯದಾಗಿದ್ದರೂ ಜಿಬಿಎ ಅಧಿಕಾರಿಗಳಾಗಲಿ, ಶಾಸಕರಾಗಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದೇ ದುರಂತಕ್ಕೆ ಕಾರಣ ಎಂದು ವಿಪಕ್ಷಗಳು ಆರೋಪಿಸಿವೆ. ಏಳು ಮಂದಿ ಅಮಾಯಕರ ಸಾವಿಗೆ ಆಡಳಿತದ ನಿರ್ಲಕ್ಷ್ಯವೇ ಕಾರಣವಾಗಿದ್ದು, ಜಿಬಿಎ ಅಧಿಕಾರಿಗಳು, ಸ್ಥಳೀಯ ಶಾಸಕರನ್ನು ಹೊಣೆಗಾರರನ್ನಾಗಿಸಬೇಕು. ಜತೆಗೆ ದುರಂತ ಕುರಿತಂತೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಉನ್ನತ ಮಟ್ಟದ ತನಿಖೆ ನಡೆಸಬೇಕು. ಸಂತ್ರಸ್ತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕು ಎಂದು ವಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ಸಶಸ್ತ್ರ ಪಡೆಗೆ ಸಾವಯವ ಪೂರಿತ ಆಹಾರ ಪೂರೈಕೆ



ಕೇಂದ್ರ ಆಹಾರ ಸಚಿವ ಜೋಶಿ ಹೇಳಿಕೆ

ಹೊಸದಿಲ್ಲಿ: ದೇಶದ ಸಶಸ್ತ್ರ ಪಡೆಗಳಿಗೆ ಸಾವಯವ ಪೂರಿತ ಆಹಾರ ಪೂರೈಕೆಗೆ ಕೇಂದ್ರ ಸರ್ಕಾರ ಒತ್ತು ನೀಡಿದ್ದು, ಭಾರತ್ ಬ್ರ್ಯಾಂಡ್ ಪೌಷ್ಟಿಕ ಆಹಾರ, ಬಾಸ್ಮತಿ ಅಕ್ಕಿ ಪೂರೈಕೆಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ದಿಲ್ಲಿಯ ಕೃಷಿ ಭವನದಲ್ಲಿ ಗುರುವಾರ, ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ಈ ಸಂಬಂಧ ಭಾರತೀಯ ಸೇನೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪೌಷ್ಟಿಕ ಆಹಾರ ಪೂರೈಕೆ ಬಗ್ಗೆ ಚರ್ಚಿಸಿದರು. ಸಶಸ್ತ್ರ ಪಡೆಗಳಿಗೆ ಗುಣಮಟ್ಟದ ಮತ್ತು ಸಾವಯವ ಪಡಿತರ ಆಹಾರ ಧಾನ್ಯ ಪೂರೈಸುವ ಬಗ್ಗೆ ಗಮನ ಹರಿಸಿದ ಸಚಿವರು, ಭಾರತ್ ಬ್ರ್ಯಾಂಡ್ ಅಕ್ಕಿ ಮತ್ತು ಗೋಧಿ ಉತ್ಪನ್ನ ಸರಬರಾಜು ವಿಸ್ತರಣೆಗೆ ಮಹತ್ವದ ಚರ್ಚೆ ನಡೆಸಿದರು.

ಅಕ್ಕಿ ಮತ್ತು ಗೋಧಿಯಂತಹ ಭಾರತ್ ಬ್ರ್ಯಾಂಡ್ ಉತ್ಪನ್ನಗಳ ವಿಸ್ತರಣೆ ಜತೆಗೆ ಉತ್ತಮ ಗುಣಮಟ್ಟದ ಬಾಸ್ಮತಿ ಅಕ್ಕಿ ಸಂಗ್ರಹಣೆ ಸೇರಿದಂತೆ ಸಶಸ್ತ್ರ ಪಡೆಗಳಿಗೆ ಅಗತ್ಯ ವಸ್ತುಗಳ ಖರೀದಿ ಕುರಿತು ಸಚಿವ ಜೋಶಿ ಅವರು ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಿದರು. ಇದೇ ವೇಳೆ ಸಚಿವ ಜೋಶಿ ಅವರು, ರೈತರನ್ನು ಪ್ರೋತ್ಸಾಹಿಸುವಲ್ಲಿ ಮತ್ತು ಬೆಂಬಲಿಸುವಾಗ ಮತ್ತು ಸಶಸ್ತ್ರ ಪಡೆಗಳಿಗೆ ಉತ್ತಮ ಗುಣಮಟ್ಟದ, ಪೌಷ್ಟಿಕ ಆಹಾರ ಪೂರೈಕೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದರು.

ನಾವೀನ್ಯತಾ ಸೃಷ್ಟಿ ಸಮಾರೋಪದಲ್ಲಿ ಸಚಿವೆ ಕರಂದ್ಲಾಜೆ ಅಭಿಮತ


ಯುವಶಕ್ತಿ ಭಾರತದ ಅಭಿವೃದ್ಧಿಯ ಇಂಜಿನ್

ಧಾರವಾಡ: ಯುವಶಕ್ತಿ ದೇಶದ ಅಭಿವೃದ್ಧಿ ಇಂಜಿನ್. ನಾವೀನ್ಯತೆ, ತಂತ್ರಜ್ಞಾನದ ಸದ್ಬಳಕೆ, ಜಾಗತಿಕ ಮಟ್ಟದಲ್ಲಿ ಭಾರತ ಅಗ್ರಸ್ಥಾನಕ್ಕೆ ಏರಿಸಬೇಕು ಎಂದು ಕೇಂದ್ರ ಕಾರ್ಮಿಕ ಇಲಾಖೆಯ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಸಲಹೆ ನೀಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಗರದ ಅಭಿಯಾಂತ್ರಿಕ-ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೂರು ದಿನ ನಡೆದ ರಾಜ್ಯಮಟ್ಟದ ನಾವೀನ್ಯತಾ ಸೃಷ್ಟಿ-2026 ಕಾರ್ಯಕ್ರಮದಲ್ಲಿ ಗುರುವಾರ ಸಮಾರೋಪ ಭಾಷಣ ಮಾಡಿದರು.

ನಾವೀನ್ಯತೆಗೆ ಒತ್ತು: ಸಂಶೋಧನೆಗಳು ಕೇವಲ ಪ್ರಯೋಗಾಲಯಕ್ಕೆ ಸೀಮಿತ ಆಗದೆ ಸಾಮಾನ್ಯ ಜನರ ಸಮಸ್ಯೆಗಳಿಗೆ ಪರಿಹಾರ ನೀಡುವಂತಿರಬೇಕು. ಕೃಷಿ, ರಕ್ಷಣೆ, ಕೈಗಾರಿಕಾ ವಲಯಗಳಲ್ಲಿ ಸ್ಥಳೀಯ ತಂತ್ರಜ್ಞಾನಕ್ಕೆ ಒತ್ತು ನೀಡಬೇಕಿದೆ ಎಂದರು.

ಆತ್ಮನಿರ್ಭರ ಭಾರತ: ಪ್ರಧಾನಿ ಮೋದಿ ಅವರ 'ಆತ್ಮನಿರ್ಭರ ಭಾರತ'ದ ಕನಸನ್ನು ನನಸು ಮಾಡಲು ಇಂಜಿನಿಯರಿಂಗ್ ವಿದ್ಯಾರ್ಥಿಗಳ ಕೊಡುಗೆ ಅಪಾರ. ಹೊಸ ಆಲೋಚನೆಗಳಿಗೆ ಸರ್ಕಾರ ಸ್ಟಾರ್ಟ್‌ಅಪ್ ಮೂಲಕ ವೇದಿಕೆ ಕಲ್ಪಿಸುತ್ತಿದೆ ಎಂದು ತಿಳಿಸಿದರು.



ತಂತ್ರಜ್ಞಾನವು ಮನುಷ್ಯನ ಜೀವನ ಸುಲಭಗೊಳಿಸುವ ಜತೆಗೆ ನಾವೀನ್ಯತೆಗಳು ಗ್ರಾಮೀಣ ಭಾರತದ ಸಬಲೀಕರಣಕ್ಕೂ ಪೂರಕವಾಗಿರಬೇಕು. ಶೈಕ್ಷಣಿಕ ಸಂಸ್ಥೆ ಮತ್ತು ಉದ್ಯಮಗಳ ನಡುವೆ ಸಮನ್ವಯ ಸಾಧಿಸಿದಾಗ ಹೊಸ ಆವಿಷ್ಕಾರಗಳು ಮಾರುಕಟ್ಟೆಗೆ ಬರಲು ಸಾಧ್ಯ.
■ **ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ**

ಶೈಕ್ಷಣಿಕ ಪರಂಪರೆ: ಧಾರವಾಡವು ವಿದ್ಯಾಕಾಶಿಯಾಗಿದ್ದು, ಇಲ್ಲಿನ ಎಸ್‌ಡಿಎಂ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗೆ ಮಾದರಿ. ವಿಕಸಿತ ಮತ್ತು ಆತ್ಮನಿರ್ಭರ ಭಾರತಕ್ಕೆ ಪೂರಕ ಶಿಕ್ಷಣ ನೀಡುತ್ತಿರುವುದಾಗಿಯೂ ಶೋಭಾ ಶ್ಲಾಘಿಸಿದರು. ಧಾರವಾಡ ಐಐಐಟಿ ನಿರ್ದೇಶಕ ಡಾ.ಮಹಾದೇವ ಪ್ರಸನ್ನ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೊಸ ಆಲೋಚನೆಗಳಿಗೆ ಹೆಚ್ಚಿನ ಬೆಲೆ ಎಂದರು.

ಅತ್ಯುತ್ತಮ ಮಾದರಿಗಳಿಗೆ ಪ್ರಶಸ್ತಿ

ಮೂರು ದಿನ ನಡೆದ ಸೃಷ್ಟಿ ನಾವೀನ್ಯತಾ ರಾಜ್ಯಮಟ್ಟದ ಈ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ನಾವೀನ್ಯತೆ ಪ್ರದರ್ಶಿಸಿದರು. ಅಲ್ಲದೇ, ಅತ್ಯುತ್ತಮ ಮಾದರಿಗಳಿಗೆ ಸಚಿವರು ಪ್ರಶಸ್ತಿ ನೀಡಿ ಗೌರವಿಸಿದರು.

ಅಭಿವೃದ್ಧಿ ಹೆಜ್ಜೆ ಇರಿಸಿ: ಎಬಿವಿಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಬಾಲಕೃಷ್ಣ ಮಾತನಾಡಿ, ಪ್ರತಿಭೆಗಳನ್ನು ಗುರುತಿಸುವ ತಾಣವಾಗಿಯೂ ಸೃಷ್ಟಿ ಬೆಳೆದಿದೆ ಎಂದರು. ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂಧರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ, ಸೃಷ್ಟಿ ಸಂಚಾಲಕ ದರ್ಶನ್ ವಿ., ದರ್ಶನ ಹೆಗಡೆ, ಡಾ.ಬಸವರಾಜ ಕುಬಗಡ್ಡಿ, ವಿಜಯಲಕ್ಷ್ಮೀ ಮಾನೆ, ಪ್ರೊ.ಇಂದಿರಾ ಉಮರ್ಜಿ ಇದ್ದರು.

ಸಚಿವ ಶರಣಪ್ರಕಾಶ ಪಾಟೀಲ್ ವಿರುದ್ಧ ನಿಖಿಲ್ ಕುಮಾರಸ್ವಾಮಿ ಕಿಡಿ

ಮಹಿಳಾ ಮೀಸಲಾತಿ ಬಿಲ್‌ಗೆ ಕೈ ವಿರೋಧ

ಕಲಬುರಗಿ: ಹಿಂದೆ ಮೂರು ಬಾರಿ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ತಮ್ಮ ಸ್ವಂತ ಕ್ಷೇತ್ರ ಸೇಡಂಗೆ ಒಂದು ಸುಸಜ್ಜಿತ ಸರ್ಕಾರಿ ಆಸ್ಪತ್ರೆ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ. ಇಲ್ಲಿನ ಜನರು ತುರ್ತು ಚಿಕಿತ್ಸೆಗೆ ಕಲಬುರಗಿ ಅಥವಾ ಹೈದರಾಬಾದ್‌ಗೆ ಹೋಗಬೇಕಾದ ದುಸ್ಥಿತಿ ಇದೆ. ಜನರ ಆರೋಗ್ಯಕ್ಕಿಂತ ಇವರಿಗೆ ರಾಜಕೀಯವೇ ಮುಖ್ಯವಾಗಿದೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ಜಿಲ್ಲೆಯ ಸೇಡಂ ತಾಲೂಕಿನ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಆದೇಶ ನೀಡಿದರೂ, ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುತ್ತಿಲ್ಲ. ಒಂದಲ್ಲ ಒಂದು ಸಬೂಬು ಹೇಳಿ ಚುನಾವಣೆಯನ್ನು ಮುಂದೂಡುತ್ತಲೇ ಬಂದಿದೆ. ಚುನಾವಣೆ ನಡೆಯದೆ ಇರುವುದರಿಂದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಸ್ಥಗಿತಗೊಂಡಿವೆ. ಜೆಡಿಎಸ್ ಈ ಕೂಡಲೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದರು.



ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ರೈತರ ಸಂಪೂರ್ಣ ಸಾಲ ಮನ್ನಾ ಮಾಡಿ ಅನ್ನದಾತರ ನೆರವಿಗೆ ನಿಂತರು. ಆದರೆ, ಕಾಂಗ್ರೆಸ್ ಸರ್ಕಾರಕ್ಕೆ ಯಾವುದೇ ಒತ್ತಡ ಇಲ್ಲದಿದ್ದರೂ, ತಮ್ಮ ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಪಾಸ್ ಮಾಡಲು ಮುಂದಾದಾಗ, ಕಾಂಗ್ರೆಸ್ ತಿರಸ್ಕರಿಸಿದೆ. ಈಗ ಮಹಿಳೆಯರಿಗೆ ತಿಂಗಳಿಗೆ 2,000 ರೂ. ಕೊಟ್ಟು ಸಬಲೀಕರಣ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಮಹಿಳೆಯರನ್ನು ನಿಜವಾಗಿ ಸಬಲೀಕರಣಗೊಳಿಸಿದವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು. ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ 50% ಮೀಸಲಾತಿ ಜಾರಿಗೆ ತಂದು, ಗ್ರಾಮ ಪಂಚಾಯಿತಿಯಿಂದ ಲೋಕಸಭೆಯವರೆಗೆ ಮಹಿಳೆಯರು ನಾಯಕತ್ವ ವಹಿಸಲು ದಾರಿ ಮಾಡಿಕೊಟ್ಟರು ಎಂದರು.

ಕೋರ್ ಕಮಿಟಿ ಅಧ್ಯಕ್ಷ ಜೆ.ಕೆ ಕೃಷ್ಣಾರೆಡ್ಡಿ, ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ರಾಜ ವೆಂಕಟಪ್ಪ ನಾಯಕ್, ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಸಂಪಾದಕೀಯ

ಸಾರಿಗೆ ಹೋರಾಟ: ತಾತ್ಕಾಲಿಕ ತೇಪೆಗಳಿಗೆ ಅಂತ್ಯ ಯಾವಾಗ?

ರಾಜ್ಯದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಹೃದಯವಾಗಿರುವ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ಕಾರ್ಮಿಕರ ಪ್ರತಿಭಟನೆ ಆಗಾಗ ಕೇಳಿಬರುತ್ತಿರುವ ಸುದ್ದಿಯಾಗಿಬಿಟ್ಟಿದೆ. ಪ್ರತಿಬಾರಿಯೂ ಕಾರ್ಮಿಕರು ಹೋರಾಟದ ಹಾದಿ ಹಿಡಿದಾಗ, ರಾಜ್ಯ ಸರ್ಕಾರ ತಾತ್ಕಾಲಿಕ ಭರವಸೆಗಳ ಮೂಲಕ ಪರಿಸ್ಥಿತಿಯನ್ನು ತಣಿಸುವ ಪ್ರಯತ್ನ ಮಾಡುತ್ತಿದೆ. ಆದರೆ, ಇಂತಹ ತಾತ್ಕಾಲಿಕ ಪರಿಹಾರಗಳು ಮೂಲ ಸಮಸ್ಯೆಗಳನ್ನು ನಿವಾರಿಸಲು ವಿಫಲವಾಗುತ್ತಿವೆ.



ಕಾರ್ಮಿಕರ ಪ್ರಮುಖ ಬೇಡಿಕೆಗಳಲ್ಲಿ ವೇತನ ಪರಿಷ್ಕರಣೆ, ಬಾಕಿ ಸೌಲಭ್ಯಗಳ ಪಾವತಿ, ಕೆಲಸದ ಒತ್ತಡದ ಕಡಿತ ಹಾಗೂ ಸೇವಾ ಭದ್ರತೆ ಪ್ರಮುಖವಾಗಿವೆ. ಇವು ಉದ್ಯೋಗದ ಗೌರವ ಮತ್ತು ಬದುಕಿನ ಭದ್ರತೆಯೊಂದಿಗೆ ನೇರವಾಗಿ ಸಂಬಂಧ ಹೊಂದಿವೆ. ಆದರೂ, ಸರ್ಕಾರವು ಹಣಕಾಸಿನ ಅಡಚಣೆಗಳನ್ನೋ ಅಥವಾ ಆಡಳಿತಾತ್ಮಕ ಸವಾಲುಗಳನ್ನೋ ಕಾರಣವಾಗಿ ಮುಂದಿಟ್ಟುಕೊಂಡು ನಿರಂತರವಾಗಿ ಈ ಬೇಡಿಕೆಗಳನ್ನು ಮುಂದೂಡುತ್ತಿರುವುದು ಸಮಸ್ಯೆಯನ್ನು ಗಾಢಗೊಳಿಸಿದೆ. ಇದರಿಂದಾಗಿ, ಕಾರ್ಮಿಕರಲ್ಲಿ ಅಸಮಾಧಾನ ಹೆಚ್ಚುತ್ತಿದೆ ಮತ್ತು ಹೋರಾಟದ ಮಾರ್ಗವೇ ಏಕೈಕ ಆಯ್ಕೆ ಎಂಬ ಭಾವನೆ ಬಲವಾಗುತ್ತಿದೆ. ಈ ಸ್ಥಿತಿ ಸಾರ್ವಜನಿಕ ಸಾರಿಗೆ ಸೇವೆಯ ನಿರಂತರತೆಗೆ ಕೂಡ ಅಪಾಯಕಾರಿಯಾಗಿದೆ. ಪ್ರಯಾಣಿಕರಿಗೂ ಇದು ಅನಾನುಕೂಲಕಾರಿಯಾಗಿದೆ.

ಇಂತಹ ಸಂದರ್ಭದಲ್ಲಿ, ಸರ್ಕಾರವು ದೀರ್ಘಕಾಲೀನ ದೃಷ್ಟಿಕೋನವನ್ನು ಅಳವಡಿಸಿಕೊಂಡು, ಕಾರ್ಮಿಕ ಸಂಘಟನೆಗಳೊಂದಿಗೆ ಪ್ರಾಮಾಣಿಕ ಮಾತುಕತೆಗೆ ಮುಂದಾಗಬೇಕು. ಕೇವಲ ತಾತ್ಕಾಲಿಕ ಸಮಾಧಾನವಲ್ಲ, ಒಂದು ಸಮಗ್ರ ಮತ್ತು ಶಾಶ್ವತ ಪರಿಹಾರ ಕಂಡುಹಿಡಿಯುವ ಪ್ರಯತ್ನ ಅಗತ್ಯ. ಪರಸ್ಪರ ವಿಶ್ವಾಸ ಮತ್ತು ಸಹಕಾರದ ಆಧಾರದಲ್ಲಿ ಕೈಗೊಂಡ ಮಾತುಕತೆ ಮಾತ್ರ ಈ ಸಮಸ್ಯೆಗೆ ಅಂತಿಮ ಪರಿಹಾರ ನೀಡಬಲ್ಲದು.

ಆದರೆ, ಇಲ್ಲಿ ಒಂದು ಕಠಿಣ ಪ್ರಶ್ನೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಎಷ್ಟರವರೆಗೆ ಇದೇ ಚಕ್ರ ಮುಂದುವರಿಯಬೇಕು? ಪ್ರತೀ ಪ್ರತಿಭಟನೆಗೂ 'ಸಭೆ–ಭರವಸೆ–ವಿಳಂಬ' ಎಂಬ ಮಾದರಿಯೇ ಮುಂದುವರಿದರೆ, ಅದು ಆಡಳಿತದ ದೌರ್ಬಲ್ಯವೋ ಅಥವಾ ನೀತಿ ಸ್ಪಷ್ಟತೆಯ ಕೊರತೆಯೋ ಎಂಬ ಅನುಮಾನ ಸಹಜವಾಗುತ್ತದೆ. ಸಮಸ್ಯೆಗಳನ್ನು ಕಾಲಹರಣ ಮಾಡುವ ಧೋರಣೆ ತಾತ್ಕಾಲಿಕವಾಗಿ ಸುಲಭದಂತಾಗಬಹುದು, ಆದರೆ ದೀರ್ಘಾವಧಿಯಲ್ಲಿ ಅದು ಇನ್ನಷ್ಟು ದೊಡ್ಡ ಸಂಕಷ್ಟಕ್ಕೆ ದಾರಿ ಮಾಡಿಕೊಡುತ್ತದೆ. ಇದೇ ವೇಳೆ, ಕಾರ್ಮಿಕ ಸಂಘಟನೆಗಳೂ ತಮ್ಮ ಹೋರಾಟವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಮತೋಲನದಲ್ಲಿಡಬೇಕಾಗಿದೆ. ಆದರೆ, ಈ ಸಮತೋಲನವನ್ನು ಸಾಧಿಸಲು ಸರ್ಕಾರವೇ ಮೊದಲ ಹೆಜ್ಜೆ ಇಡುವುದು ಸೂಕ್ತ. ನಿರ್ಧಾರಗಳಲ್ಲಿ ಸ್ಪಷ್ಟತೆ, ಸಮಯಬದ್ಧ ಕ್ರಮಗಳು ಮತ್ತು ಜವಾಬ್ದಾರಿತನ ಈ ಮೂರು ಅಂಶಗಳು ಸೇರಿ ಬಂದಾಗ ಮಾತ್ರ, ಸಾರಿಗೆ ವ್ಯವಸ್ಥೆಯ ಈ ಮರುಕಳಿಸುವ ಸಂಕಷ್ಟಕ್ಕೆ ಶಾಶ್ವತ ಪರಿಹಾರ ದೊರೆಯಬಹುದು. ಹಾಗಂತ ಇಲ್ಲಿ ಸರ್ಕಾರದ್ದು ತಪ್ಪು, ಕಾರ್ಮಿಕ ಸಂಘಟನೆಗಳ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಇಬ್ಬರೂ ಕುಳಿತು ಬಗೆಹರಿಸಿಕೊಳ್ಳಬೇಕು ಅಷ್ಟೇ.

ಬುದ್ಧ ಪೂರ್ಣಿಮೆ; ಕರುಣೆಯ ಸಾಕ್ಷಾತ್ಕಾರ

ಸಿ. ಪಿ. ರಾಧಾಕೃಷ್ಣನ್, ಉಪರಾಷ್ಟ್ರಪತಿ



ದೇವಾಲಯಗಳಲ್ಲಿ ಉತ್ಸವಗಳನ್ನು ಆಚರಿಸಲಾಗುವ ಚಿತ್ರಾ ಪೌರ್ಣಮಿಯ ಈ ಶುಭ ದಿನದಂದು ಪ್ರತಿ ಮನೆಯಲ್ಲೂ ಸಮೃದ್ಧಿ ಬೆಳೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲಾ ಸಹೋದರ ಸಹೋದರಿಯರಿಗೆ ಬುದ್ಧ ಪೂರ್ಣಿಮೆಯ ಹೃತ್ಪೂರ್ವಕ ಶುಭಾಶಯಗಳು.

ಭಾರತವು ಜಗತ್ತಿಗೆ ನೀಡಿದ ಅನೇಕ ಶ್ರೇಷ್ಠ ಕೊಡುಗೆಗಳಲ್ಲಿ ಬೌದ್ಧಧರ್ಮವು ಪ್ರಮುಖವಾದುದು. ಭಗವಾನ್ ಬುದ್ಧನ ಜೀವನ ಮತ್ತು ಅಮೂಲ್ಯ ಬೋಧನೆಗಳು ಪ್ರಪಂಚಾದ್ಯಂತ ಕೋಟ್ಯಂತರ ಜನರ ಬದುಕಿಗೆ ಬೆಳಕಾಗಿದೆ. 'ತನ್ನನ್ನು ತಾನು ಅರಿಯುವುದು' ಅಥವಾ ಆತ್ಮಸಾಕ್ಷಾತ್ಕಾರದ ಮಹತ್ವವನ್ನು ಭಾರತವು ಇಡೀ ಜಗತ್ತಿಗೆ ಕಲಿಸಿಕೊಟ್ಟಿದೆ. ಬುದ್ಧ ಎಂಬ ಪದದ ಅರ್ಥವೇ ಜಾಗೃತಗೊಂಡವನು ಅಥವಾ ಅರಿವು ಪಡೆದವನು ಎಂದಾಗಿದೆ. ಮಾನವಕುಲಕ್ಕೆ ಆತ್ಮದ ಅರಿವು ಮೂಡಿಸಲು ಶ್ರಮಿಸಿದ ಈ ಮಹಾತ್ಮನ ಜನನ ಮತ್ತು ಜ್ಞಾನೋದಯ ಎರಡೂ ಒಂದೇ ದಿನದಂದು ಸಂಭವಿಸಿರುವುದು ಅತ್ಯಂತ ವಿಶೇಷವಾಗಿದೆ.



ರಾಜಕುಮಾರ ಸಿದ್ಧಾರ್ಥ ಎಲ್ಲಾ ಸುಖ–ಸೌಲಭ್ಯಗಳ ನಡುವೆ ಬೆಳೆದವರು. ಆದರೆ, ತಮ್ಮ 29ನೇ ವಯಸ್ಸಿನಲ್ಲಿ ಅರಮನೆಯ ವೈಭೋಗ, ಪತ್ನಿ, ಮಗ ಮತ್ತು ಸಕಲ ಸಂಪತ್ತನ್ನು ತ್ಯಜಿಸಿ ಸತ್ಯದ ಹುಡುಕಾಟಕ್ಕೆ ಹೊರಟರು. ಆರು ವರ್ಷಗಳ ಕಠಿಣ ತಪಸ್ಸಿನ ನಂತರ, ಬೋಧಗಯಾದ ಬೋಧಿ ವೃಕ್ಷದ ಅಡಿಯಲ್ಲಿ ಅವರಿಗೆ ಪರಮ ಜ್ಞಾನೋದಯವಾಯಿತು. ಅಂದಿನಿಂದ ಅವರು ಬುದ್ಧ ಎಂದು ಪ್ರಸಿದ್ಧರಾದರು. ಬೌದ್ಧ ಧರ್ಮದ ನಾಲ್ಕು 'ಉದಾತ್ತ ಸತ್ಯಗಳು' ಮತ್ತು ನೈತಿಕ ಜೀವನದ ಹಾದಿಯು ಒಂದು ಹೊಸ ತತ್ತ್ವಶಾಸ್ತ್ರಕ್ಕೆ ನಾಂದಿ ಹಾಡಿತು. ಇದು ವಿಶ್ವ ಇತಿಹಾಸದಲ್ಲಿ ಭಾರತದ ಗೌರವವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ವಾರಾಣಸಿಯ ಸಮೀಪವಿರುವ ಸಾರನಾಥದಲ್ಲಿ, ಅವರು ಐವರು ಬಿಕ್ಕುಗಳಿಗೆ ತಮ್ಮ ಮೊದಲ ಬೋಧನೆಯನ್ನು ನೀಡಿದರು. ಧರ್ಮಚಕ್ರ ಪ್ರವರ್ತನ ಎಂದು ಕರೆಯಲ್ಪಡುವ ಈ ಬೋಧನೆಯು ಬೌದ್ಧಧರ್ಮದ ಅಡಿಪಾಯವಾಯಿತು ಮತ್ತು ಬೌದ್ಧಧರ್ಮದ ಔಪಚಾರಿಕ ಆರಂಭಕ್ಕೆ ದಾರಿಯಾಯಿತು. ಕಾಲಾನಂತರದಲ್ಲಿ, ಬುದ್ಧನ ಬೋಧನೆಗಳಿಗೆ ಮಾರುಹೋಗಿ ಅನೇಕರು ಅನುಯಾಯಿಗಳಾದರು. ಮಗಧದ ರಾಜ ಬಿಂಬಿಸಾರನು ರಾಜಗೃಹದ 'ವೇಣುವನ' (ಬಿದಿರಿನ ತೋಪು) ವನ್ನು ದಾನವಾಗಿ ನೀಡಿದರೆ, ಅನಾಥಪಿಂಡಿಕ ಎಂಬ ಶ್ರೀಮಂತ ವ್ಯಾಪಾರಿಯು ಇಡೀ 'ಜೇತವನ'ವನ್ನು ಚಿನ್ನದ ನಾಣ್ಯಗಳಿಂದ ಮುಚ್ಚಿ ಬೌದ್ಧವಿಹಾರವನ್ನು ನಿರ್ಮಿಸಿಕೊಟ್ಟನು. ಇಂತಹ ಕಾರ್ಯಗಳು ಅಂದಿನ ಭಾರತದಲ್ಲಿದ್ದ ಧರ್ಮದ ಮೇಲಿನ ಅಚಲ ನಂಬಿಕೆಯನ್ನು ತೋರಿಸುತ್ತವೆ.

ಭೂತಕಾಲದ ಬಗ್ಗೆ ಚಿಂತಿಸಬೇಡಿ, ವರ್ತಮಾನದಲ್ಲಿ ಬದುಕಿ. ಸತ್ಯಕ್ಕೆ ಹೆಚ್ಚಿನ ಶಕ್ತಿಯಿದೆ. ಮನಸ್ಸು ಎಲ್ಲಾ ಕ್ರಿಯೆಗಳ ಮೂಲವಾಗಿದೆ, ಆದ್ದರಿಂದ ಸಕಾರಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳಿ. ಕಷ್ಟ ಬಂದಾಗ ಹೆದರಿ ಓಡಬೇಡಿ. ಜೀವನದ ಪಯಣವು ಅಂತಿಮವಾಗಿ ವೈಯಕ್ತಿಕವಾದುದು. ಅದನ್ನು ಆಧ್ಯಾತ್ಮಿಕ ಹಾದಿಯಲ್ಲಿ ಮುನ್ನಡೆಸಿ. ಮಾತುಗಳು ನೋಯಿಸಬಹುದು, ಆದ್ದರಿಂದ ಮೃದುವಾಗಿ ಮಾತನಾಡಿ. ಪ್ರೀತಿ ಮತ್ತು ಅಹಿಂಸೆ ಅತ್ಯಗತ್ಯ. ಯಾವಾಗಲೂ ಕಲಿಕೆಯನ್ನು ಮುಂದುವರಿಸಿ ಎಂದಿಗೂ ನಿಲ್ಲಿಸಬೇಡಿ ಎನ್ನುವ ಉದಾತ್ತ ಚಿಂತನೆಗಳನ್ನು ಭಾರತೀಯ ತತ್ತ್ವಶಾಸ್ತ್ರಕ್ಕೆ ಸೇರಿಸಿದ ಶ್ರೇಯಸ್ಸು ಬೌದ್ಧ ಧರ್ಮದ್ದು. ತಮಿಳು ಸಾಹಿತ್ಯದ ಶ್ರೇಷ್ಠ ಕೃತಿಗಳಾದ ಮಣಿಮೇಖಲೈ ಮತ್ತು ಕುಂಡಲಕೇಸಿ ಬೌದ್ಧ ತತ್ತ್ವಶಾಸ್ತ್ರವನ್ನು ಸುಂದರವಾಗಿ ಚಿತ್ರಿಸಿವೆ. ಕಾಲಗತಿಯಲ್ಲಿ ಅನೇಕ ಗ್ರಂಥಗಳು ನಾಶವಾಗಿದ್ದರೂ ಅವು ನೀಡಿದ ಸಂದೇಶಗಳು ಇಂದಿಗೂ ಅಮೂಲ್ಯವಾಗಿವೆ. "ಬುದ್ಧಿಯನ್ನು ಮಬ್ಬುಗೊಳಿಸುವ ಮಾದಕ ದ್ರವ್ಯಗಳು ಮತ್ತು ಜೀವಹಿಂಸೆಯನ್ನು ಜ್ಞಾನಿಗಳು ಯಾವತ್ತೂ ಒಪ್ಪುವುದಿಲ್ಲ; ಅರಿವುಳ್ಳವರು ಇವುಗಳಿಂದ ದೂರವಿರುತ್ತಾರೆ. ಹುಟ್ಟು–ಸಾವುಗಳು ಮತ್ತು ಸಾವಿನ ನಂತರದ ಮರುಜನ್ಮವು ನಿದ್ರೆ ಮತ್ತು ಎಚ್ಚರದಷ್ಟೇ ಸಹಜವಾದ ಸತ್ಯ. ಯಾರು ಸತ್ಕರ್ಮಗಳನ್ನು ಮಾಡುತ್ತಾರೋ ಅವರು ಉನ್ನತ ಗತಿಯನ್ನು ಪಡೆಯುತ್ತಾರೆ, ಕೆಟ್ಟ ಕೆಲಸ ಮಾಡುವವರು ಅಪಾರ ಸಂಕಟಕ್ಕೆ ಗುರಿಯಾಗುತ್ತಾರೆ. ಈ ಸತ್ಯವನ್ನು ಅರಿತ ವಿವೇಚನಾಶೀಲರು ಲೌಕಿಕ ವ್ಯಾಮೋಹಗಳನ್ನು ಕಡಿದುಕೊಳ್ಳುತ್ತಾರೆ" ಹೀಗೆ ತಮಿಳು ಮಹಾಕಾವ್ಯ ಮಣಿಮೇಖಲೈ ಬೌದ್ಧಧರ್ಮದ ಸಾರವನ್ನು ವಿವರಿಸುತ್ತದೆ. (ಅಧಿಶೈ ಪಿಕ್ಷೈಯಿಟ್ಟ ಕಾದೈ: 84–90)

ಬುದ್ಧನು ಐದು ಪ್ರಮುಖ ನೈತಿಕ ಸೂತ್ರಗಳನ್ನು (ಪಂಚಶೀಲ) ಬೋಧಿಸಿದನು: ಅಹಿಂಸೆ, ಕಳ್ಳತನ ಮಾಡದಿರುವುದು, ನೈತಿಕ ನಡವಳಿಕೆ, ಸತ್ಯಸಂಧತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವುದು. ಕೇವಲ ಧರ್ಮವನ್ನಷ್ಟೇ ಅಲ್ಲದೆ, ಮನಸ್ಸೇ ಎಲ್ಲದಕ್ಕೂ ಮೂಲ ಎಂಬ ಮನೋವೈಜ್ಞಾನಿಕ ಸತ್ಯವನ್ನು ಅವರು ತಿಳಿಸಿಕೊಟ್ಟರು. ಒಳ್ಳೆಯ ಆಲೋಚನೆ ಮತ್ತು ನಡವಳಿಕೆಗಳು ಸಮಾಜದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡುತ್ತವೆ. ಕಂಗೆಟ್ಟ ಮನಸ್ಸುಗಳಿಗೆ ಸ್ಪಷ್ಟತೆ ಮತ್ತು ಜ್ಞಾನದ ಬೆಳಕು ನೀಡಿದ ಕಾರಣಕ್ಕಾಗಿ ಅವರನ್ನು ಏಷ್ಯಾದ ಬೆಳಕು ಎಂದು ಕರೆಯಲಾಗುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಹೇಳಿದ ಮಾತುಗಳು ಇಲ್ಲಿ ನೆನಪಿಗೆ ಬರುತ್ತವೆ: ಭಗವಾನ್ ಗೌತಮ ಬುದ್ಧನ ಜೀವನ ಸಂದೇಶವು ಇಂದಿಗೂ ಪ್ರಸ್ತುತವಾಗಿದೆ. ಶಾಂತಿಯು ನಮ್ಮೊಳಗಿನಿಂದಲೇ ಶುರುವಾಗುತ್ತದೆ ಎಂದು ಅವರು ಕಲಿಸಿದರು. ನಮ್ಮನ್ನು ನಾವು ಗೆಲ್ಲುವುದೇ ಜಗತ್ತಿನ ಶ್ರೇಷ್ಠ ವಿಜಯ ಎಂದು ಅವರು ತೋರಿಸಿಕೊಟ್ಟರು. ಇಂದಿನ ಜಗತ್ತಿನ ಸಂಘರ್ಷ ಮತ್ತು ಉದ್ವಿಗ್ನತೆಗಳ ನಡುವೆ ಬುದ್ಧನ ಬೋಧನೆಗಳು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿವೆ. ಅಶೋಕನು ಕೇವಲ ದೇಶದೊಳಗೆ ಮಾತ್ರವಲ್ಲದೆ, ಬಿಕ್ಕುಗಳ ಸಹಾಯದೊಂದಿಗೆ ಏಷ್ಯಾದಾದ್ಯಂತ ಬೌದ್ಧ ಧರ್ಮವನ್ನು ಹರಡಿದನು. ಆತನ ಮಗ ಮಹಿಂದನು ಶ್ರೀಲಂಕಾಕ್ಕೆ ಬುದ್ಧನ ಸಂದೇಶಗಳನ್ನು ಕೊಂಡೊಯ್ದನು. ಬೌದ್ಧ ಬಿಕ್ಕುಗಳು ತಮಿಳುನಾಡಿನಲ್ಲೂ ಧರ್ಮ ಪ್ರಚಾರ ಮಾಡಿದ್ದರು ಎಂಬುದಕ್ಕೆ ಅಲ್ಲಿನ ಹಲವಾರು ಪ್ರದೇಶಗಳಲ್ಲಿ ಇಂದಿಗೂ ಕಂಡುಬರುವ ಬೌದ್ಧಧರ್ಮದ ಕುರುಹುಗಳೇ ಸಾಕ್ಷಿ.

ಬೌದ್ಧ ಬಿಕ್ಕುಗಳು ಯಾವುದೇ ತಾರತಮ್ಯವಿಲ್ಲದೆ ಜನರಿಗೆ ಉಚಿತವಾಗಿ ವೈದ್ಯಕೀಯ ನೆರವು ಮತ್ತು ಶಿಕ್ಷಣವನ್ನು ನೀಡುತ್ತಿದ್ದರು. ಅವರು ಪವಿತ್ರ ತ್ರಿಪಿಟಕ ಗ್ರಂಥಗಳನ್ನು ಬೋಧಿಸುತ್ತಾ, ಆಕರ್ಷಕವಾದ ಜಾತಕ ಕಥೆಗಳನ್ನು ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ಜನರಲ್ಲಿ ಅರಿವು ಮೂಡಿಸಲು ಮತ್ತು ಮಾನಸಿಕ ಶಾಂತಿಗಾಗಿ ಧ್ಯಾನದ ಅಭ್ಯಾಸಗಳನ್ನು ಕಲಿಸಿಕೊಡುತ್ತಿದ್ದರು.

ದಾನ ಮಾಡುವುದು, ಅದರಲ್ಲೂ ವಿಶೇಷವಾಗಿ ಹಸಿದವರಿಗೆ ಅನ್ನದಾನ ಮಾಡುವುದು ಒಂದು ಪರಮ ಧರ್ಮವೆಂದು ಪರಿಗಣಿಸಲಾಗಿತ್ತು. ಹಸಿದವರಿಗೆ ಊಟ ಹಾಕುವುದು ಎಂದರೆ ಅವರಿಗೆ ಮರುಜೀವ ನೀಡುವುದಕ್ಕೆ ಸಮಾನ ಎಂಬ ಉದಾತ್ತ ಚಿಂತನೆಯನ್ನು ಬೌದ್ಧ ಸಾಹಿತ್ಯವು ಸಾರುತ್ತದೆ. ನಮ್ಮ ಈ ಪುಣ್ಯಭೂಮಿಯಲ್ಲಿ ಸಾವಿರಾರು ವರ್ಷಗಳಿಂದ ವಿವಿಧ ಆಧ್ಯಾತ್ಮಿಕ ಚಿಂತನೆಗಳು ಮತ್ತು ತತ್ತ್ವಶಾಸ್ತ್ರಗಳು ಹುಟ್ಟಿ ಬೆಳೆದಿವೆ. ಅದು ಬೌದ್ಧಧರ್ಮವಿರಲಿ ಅಥವಾ ಜೈನಧರ್ಮವಿರಲಿ, ಯಾವುದೇ ಧರ್ಮವನ್ನಾದರೂ ಭಾರತಾದ್ಯಂತ ಏಕತೆಯ ಭಾವದಿಂದ ಸ್ವೀಕರಿಸಲಾಗಿದೆ. ಇದು ನಮ್ಮ ದೇಶವು ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಮೊದಲಿನಿಂದಲೂ ಒಂದೇ ಎಂಬ ಸತ್ಯವನ್ನು ಸಾಬೀತುಪಡಿಸುತ್ತದೆ. ನಿರಂತರ ಕಲಿಕೆಗೆ ಒತ್ತು ನೀಡಿದ ಬೌದ್ಧಧರ್ಮವು, ಅತ್ಯಂತ ದೊಡ್ಡ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ಗ್ರಂಥಾಲಯಗಳನ್ನು ನಿರ್ಮಿಸಿತು. ಸುಮಾರು 5 ಶತಮಾನದಷ್ಟು ಹಿಂದೆಯೇ ನಳಂದಾ ವಿಶ್ವವಿದ್ಯಾನಿಲಯವು ಜಗತ್ತಿನ ಶ್ರೇಷ್ಠ ಕಲಿಕಾ ಕೇಂದ್ರವಾಗಿ ಹೊರಹೊಮ್ಮಿತ್ತು. ಅಲ್ಲಿ ಸುಮಾರು 10,000 ವಿದ್ಯಾರ್ಥಿಗಳು ಮತ್ತು 1,500 ಶಿಕ್ಷಕರು ಅಧ್ಯಯನ ಹಾಗೂ ಬೋಧನೆಯಲ್ಲಿ ತೊಡಗಿದ್ದರು ಎಂಬುದು ಹೆಮ್ಮೆಯ ವಿಷಯ.

ನಳಂದಾದಂತೆಯೇ, ತಮಿಳುನಾಡಿನ ಕಾಂಚೀಪುರಂನಲ್ಲೂ ಒಂದು ಸುಪ್ರಸಿದ್ಧ ವಿಶ್ವವಿದ್ಯಾನಿಲಯವಿತ್ತು ಎಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ವಿಕ್ರಮಶಿಲಾ ಮತ್ತು ಓದಂತಪುರಿಯಂತಹ ವಿಶ್ವವಿದ್ಯಾನಿಲಯಗಳು ಹಾಗೂ ಅಲ್ಲಿ ರಚಿತವಾದ ಅಪಾರ ಸಾಹಿತ್ಯ ಕೃತಿಗಳು, ಭಾರತದ ಬೌದ್ಧಿಕ ಶಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸಿದವು.

ಬೌದ್ಧ ಶಿಕ್ಷಣ ಕೇಂದ್ರಗಳಲ್ಲಿ ಕಲಿಯಲು ಏಷ್ಯಾದ ಮೂಲೆ ಮೂಲೆಗಳಿಂದ ವಿದ್ವಾಂಸರು ಭಾರತಕ್ಕೆ ಬರುತ್ತಿದ್ದರು. ಚೀನಾದ ಪ್ರಸಿದ್ಧ ಬಿಕ್ಕು ಫಾಹಿಯಾನ್, ಬೌದ್ಧಧರ್ಮದ ಅಧ್ಯಯನಕ್ಕಾಗಿಯೇ ಭಾರತದಲ್ಲಿ 15 ವರ್ಷಗಳ ಕಾಲ ಸಂಚರಿಸಿದ್ದರು. ಮತ್ತೊಬ್ಬ ಚೀನೀ ಬಿಕ್ಕು ಹ್ಯುಯೆನ್ ತ್ಸಾಂಗ್ ಅವರು 16 ವರ್ಷಗಳ ಕಾಲ ಭಾರತದಲ್ಲಿದ್ದು, ನಳಂದಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದ್ದಲ್ಲದೆ ಅಮೂಲ್ಯ ಗ್ರಂಥಗಳನ್ನು ಸಂಗ್ರಹಿಸಿ ತಮ್ಮ ದೇಶಕ್ಕೆ ಕೊಂಡೊಯ್ದರು.ಹ್ಯುಯೆನ್ ತ್ಸಾಂಗ್ ಬರೆದಿರುವ ಪ್ರವಾಸ ಕಥನಗಳ ಪ್ರಕಾರ, ಅವರು ತಮಿಳುನಾಡಿನ ಕಾಂಚೀಪುರಂಗೆ ಭೇಟಿ ನೀಡಿದ್ದರು. ಅಲ್ಲಿನ ಬೌದ್ಧ ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಂಡು ಹಸ್ತಪ್ರತಿಗಳನ್ನು ನಕಲು ಮಾಡಿಕೊಂಡಿದ್ದರು. ಅಷ್ಟೇ ಅಲ್ಲದೆ, ಅಲ್ಲಿನ ವಿದ್ಯಾರ್ಥಿಗಳಿಗಾಗಿ ಅವರು ವಿಶೇಷ ಉಪನ್ಯಾಸಗಳನ್ನು ನೀಡಿದ್ದರು ಎಂಬ ಮಾಹಿತಿ ಇದೆ.

ತೀವ್ರವಾದ ತಪಸ್ಸಿನಿಂದಾಗಿ ಬುದ್ಧನು ದೈಹಿಕವಾಗಿ ಬಹಳ ಬಳಲಿದ್ದನು. ಆತನ ಸ್ಥಿತಿಯನ್ನು ಕಂಡು ಕನಿಕರಗೊಂಡ ಸುಜಾತೆ, ಪ್ರೀತಿಯಿಂದ ಹಾಲಿನ ಪಾಯಸವನ್ನು (ಕ್ಷೀರಾನ್ನ) ಅರ್ಪಿಸಿದಳು. ಇದು ಬುದ್ಧನಿಗೆ ಪುನಶ್ಚೇತನ ನೀಡಿ ಪ್ರಾಣ ಉಳಿಸಿದ್ದಲ್ಲದೆ, ಬೋಧಿ ವೃಕ್ಷದ ಅಡಿಯಲ್ಲಿ ಜ್ಞಾನೋದಯಕ್ಕಾಗಿ ಧ್ಯಾನ ಮಾಡಲು ಬೇಕಾದ ಶಕ್ತಿಯನ್ನು ನೀಡಿತು. ಆಕೆಯ ಈ ಮಮತೆ ಮತ್ತು ದಯೆಯ ನೆನಪಿಗಾಗಿ, ಇಂದಿಗೂ ಬುದ್ಧ ಪೂರ್ಣಿಮೆಯ ದಿನದಂದು ಪಾಯಸವನ್ನು ತಯಾರಿಸಿ ಅರ್ಪಿಸುವ ಸಂಪ್ರದಾಯವಿದೆ. ಪ್ರೀತಿಯೇ ಸಂತೋಷದ ಸೆಲೆ, ಪ್ರೀತಿಯೇ ಜಗತ್ತಿನ ಬೆಳಕು ಮತ್ತು ಪ್ರೀತಿಯೇ ಎಲ್ಲಕ್ಕಿಂತ ದೊಡ್ಡ ಶಕ್ತಿ ಎಂಬ ಬುದ್ಧನ ಬೋಧನೆಗಳು ಇಂದಿನ ಆಧುನಿಕ ಜಗತ್ತಿಗೂ ಅತ್ಯಂತ ಅಗತ್ಯವಾಗಿವೆ. ಈ ಜಗತ್ತಿನಾದ್ಯಂತ ಪ್ರೀತಿ ಮತ್ತು ಶಾಂತಿ ಸದಾ ನೆಲಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಸಂದೇಹವಿದ್ದರೂ ನಂಬಿಕೆಯನ್ನಿಡಬೇಕು

ಸಂದೇಹೋಽಸ್ತಿ ಸದಾ ದೈವೇ ಧರ್ಮೇ ನ್ಯಾಯೇ ಗುರೌ ತಥಾ ।
ತಥಾಪಿ ಕೃತ್ವಾ ವಿಶ್ವಾಸಂ ಮಾನವೋ ಭುವಿ ಸಂಚರೇತ್॥ –ಸುವಚನ ಶತಕಂ

ದೇವರು, ಧರ್ಮ, ನ್ಯಾಯ, ಗುರು– ಇತ್ಯಾದಿಗಳಲ್ಲಿ ಸದಾ ಸಂದೇಹವೇ? ಆದರೂ ಅವುಗಳಲ್ಲಿ ನಂಬಿಕೆಯನ್ನಿಟ್ಟು ಮನುಷ್ಯನು ಲೋಕದಲ್ಲಿ ನಡೆದುಕೊಳ್ಳಬೇಕು –ಎಂಬುದು ಶ್ಲೋಕಾರ್ಥ.

ಕೊನೆಗೂ ಫಲ ಕೊಡುವುದು ವಿಶ್ವಾಸವೇ. ವಿಶ್ವಾಸವಿಲ್ಲದ ಯಾವ ಕ್ರಿಯೆಯೂ ಫಲವನ್ನೀಯುವುದಿಲ್ಲ. ಫಲ ಬೇಕಾದರೆ ವಿಶ್ವಾಸವಿರಿಸಿ ಮುನ್ನುಗ್ಗಬೇಕು. ಆದ್ದರಿಂದಲೇ 'ವಿಶ್ವಾಸೋ ಫಲದಾಯಕಃ' ಎಂದಿದ್ದಾರೆ.

ಮಾನವನ ಜೀವನವೇ ಪರಸ್ಪರ ವಿಶ್ವಾಸದಿಂದ ಸಾಗಬೇಕಾಗಿದೆ. ವಿಶ್ವಾಸವಿಲ್ಲದಿದ್ದರೆ ಸಾಧಿಸುವುದಕ್ಕೆ ಸುತರಾಂ ಸಾಧ್ಯವಿಲ್ಲ. ನಮ್ಮೆದುರು ಸಾಧನೆ ಮಾಡಿದ ಎಷ್ಟೊಂದು ವ್ಯಕ್ತಿಗಳಿಲ್ಲ. ವಿಶ್ವಾಸದಿಂದ ಮುಂದುವರಿಯದೇ ಅವರೇನನ್ನೂ ಸಾಧಿಸಿಲ್ಲ. ವಿಶ್ವಾಸವೇ ಬೇಡಿಕೆಯ, ಸಾಧನೆಯ ತಾಯಿ.



ಸಂದೇಹಿಸುವುದು ಮನುಷ್ಯರ ಸಹಜ ಸ್ವಭಾವ ಎಂಬಂತಾಗಿದೆ. ಯಾವುದೇ ವಿಷಯವಿರಲಿ, ಅದರ ಕುರಿತು ವಿಶ್ವಾಸಕ್ಕಿಂತ ಮೊದಲು ಸಂದೇಹವೇ ಹುಟ್ಟಿಕೊಳ್ಳುತ್ತದೆ. ಮೊದಲು ಸಂದೇಹಿಸಿ ಅನಂತರ ಮುಂದುವರೆಸುವ ಜಾಯಮಾನ. ಯಾವುದರ ಬಗ್ಗೂ ಸರಿಯಾಗಿ ತಿಳಿದುಕೊಳ್ಳದಿರುವುದರಿಂದ ಸಂದೇಹ, ಸಂಶಯ ತಲೆ ಎತ್ತುತ್ತದೆ.

ಆದರಲ್ಲಿಯೂ ದೇವರು, ಧರ್ಮ, ನ್ಯಾಯ, ಗುರು... ಇತ್ಯಾದಿಗಳಲ್ಲಿ ಸದಾ ಸಂದೇಹವೇ. ಸಂದೇಹಿಸುವುದಕ್ಕೆ ಕಾರಣವಿಲ್ಲದಿಲ್ಲ. ದೇವರ ಕುರಿತು ಎಲ್ಲರೂ ಮಾತನಾಡುವವರೇ. ಆದರೆ ದೇವರನ್ನು ಕಂಡವರು ಯಾರು ಇಲ್ಲ. ಗ್ರಂಥಗಳಲ್ಲಿ ಬರೆದದ್ದನ್ನು ಓದಿಯೋ, ಹಿರಿಯರು ಹೇಳಿದ್ದನ್ನು ಕೇಳಿಯೋ ಒಂದಿಷ್ಟು ತಿಳಿದುಕೊಳ್ಳುತ್ತೇವೆ.

ಧರ್ಮದ ಕುರಿತಾಗಿಯೂ ಅನೇಕರು ಅನೇಕ ಬಗೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಧರ್ಮದ, ದೇವರ ಮೂಲತತ್ವ ತಿಳಿಯದಿದ್ದರೂ ಮಾತನಾಡುವವರಿಗೆ ಕೊರತೆಯಿಲ್ಲ. ನಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುವ ಕೆಲಸ ಮಾಡುತ್ತಾರೆ. ಇವುಗಳ ಕುರಿತು ಹೇಳುವುದೂ ಕಷ್ಟ. ಅರ್ಥ ಮಾಡಿಕೊಳ್ಳುವುದೂ ಕಷ್ಟ. ಆದರೆ ಇವುಗಳ ಬಗ್ಗೆ ನಂಬಿಕೆ ಇಟ್ಟುಕೊಂಡರೆ ನಷ್ಟವೇನೂ ಆಗದು. ದೇವರು, ಧರ್ಮಗಳ ಹೆಸರಿನಲ್ಲಿ ಒಳಿತನ್ನೇ ಹೇಳುವುದರಿಂದ, ಅದನ್ನು ನಾವು ಅನುಸರಿಸುವದರಿಂದ ಒಂದೊಮ್ಮೆ ಒಳಿತಾಗದಿದ್ದರೂ ಅದರಿಂದ ಕೆಡುಕಂತೂ ಆಗುವುದಿಲ್ಲ. ನ್ಯಾಯದ ವಿಷಯದಲ್ಲಿ ಗೊಂದಲವಿದ್ದರೂ ನಂಬಿಕೆಯನ್ನು ಕಳೆದುಕೊಳ್ಳಬಾರದು. ಕೆಲವೊಮ್ಮೆ ನ್ಯಾಯ ನೀಡುವವನ ಮಾನಸಿಕ ಸ್ಥಿತಿ, ಒತ್ತಡ ಇತ್ಯಾದಿಗಳಿಂದಾಗಿ ಅಲ್ಪಸ್ವಲ್ಪ ಬದಲಾಗಬಹುದು ಅಥವಾ ವಿಳಂಬವಾಗಬಹುದು. ಆದರೂ ನಂಬಿಕೆಯನ್ನು ಬಿಡಬಾರದು.

ಗುರುವಾದವನು ಹೇಳುವ ಮಾತುಗಳಲ್ಲಿ ಕೆಲವಷ್ಟು ಸಂದೇಹ ಬರಬಹುದು. ಆಗ ಕುಳಿತು ಚರ್ಚಿಸಿ ಮುಂದುವರಿಯಬೇಕು. ಕೆಲವೊಮ್ಮೆ ಪರಿಸ್ಥಿತಿಯ ಒತ್ತಡದಿಂದ ಪ್ರಮಾದವಾಗಲೂಬಹುದು. ಅಷ್ಟಕ್ಕೆ ಗುರುವನ್ನು ನಿಂದಿಸುವುದಾಗಲಿ, ಜರೆಯುವುದನ್ನಾಗಲಿ ಮಾಡಬಾರದು. ಗುರುತ್ವವೇ ಗುರುವಿನ ಹಿರಿಮೆಯ ದ್ಯೋತಕವಾದ್ದರಿಂದ ಅವನೆಂದೂ ವಂಚಿಸಲಾರ, ದ್ರೋಹವೆಸಗಲಾರ ಎಂಬ ನಂಬಿಕೆ ನಮ್ಮದಾಗಬೇಕು.

ಇಂತಹ ಬಲವಾದ ನಂಬಿಕೆ, ದೃಢ ವಿಶ್ವಾಸ ಇವೇ ನಮ್ಮನ್ನು ಮೇಲೆತ್ತುತ್ತವೆ. ಉತ್ತಮ ಸ್ಥಾನದಲ್ಲಿ ನಿಲ್ಲುವಂತೆ ಮಾಡುತ್ತವೆ.

ಪಶ್ಚಿಮ ಬಂಗಾಳ: ಮತದಾರನ ಸಂದೇಶವೇನು?

ಅರವಿಂದ ಶೆಣೈ

> ಬಿಜೆಪಿಯ ತಾಳ್ಮೆ ಮತ್ತು ಸಂಘಟನಾ ಚತುರತೆ ಈ ಬಾರಿಯ ಚುನಾವಣೆಯಲ್ಲಿ ಫಲ ನೀಡುವುದೆ, ತೃಣಮೂಲದ ಕೋಟೆಯನ್ನು ಭೇದಿಸುವುದೇ ?

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ಕುರಿತಂತೆ ಎಕ್ಸಿಟ್ ಪೋಲ್‌ಗಳು ನುಡಿದಿರುವ ಭವಿಷ್ಯಗಳು ಎಲ್ಲರ ಕುತೂಹಲವನ್ನು ಇಮ್ಮಡಿಗೊಳಿಸಿದೆ. ಪ.ಬಂಗಾಳದಲ್ಲಿ ಮಮತಾ ಬ್ಯಾನರ್ಜಿಗೆ ಇದಿರಿಲ್ಲ ಎಂದು ಬಹುತೇಕ ಮಂದಿ ಭಾವಿಸಿದ್ದರೆ, ಕೆಲವು ಎಕ್ಸಿಟ್ ಪೋಲ್‌ಗಳು ಮಮತಾಗೆ ಈ ಬಾರಿ ಸೋಲಾಗುವ ಹಾಗೂ ಬಿಜೆಪಿಯೇ ಅಧಿಕಾರ ಹಿಡಿಯುವ ಸಾಧ್ಯತೆಯಿದೆ ಎಂದು ತಿಳಿಸಿರುವುದು ರೋಚಕತೆ ಸೃಷ್ಟಿಸಿದೆ. ಇನ್ನು ಕೆಲವು ಎಕ್ಸಿಟ್ ಪೋಲ್‌ಗಳು ಟಿಎಂಸಿಯೇ ಅಧಿಕಾರ ಹಿಡಿಯುವುದೆಂದು ನುಡಿದಿದ್ದರೂ ಬಿಜೆಪಿ ನಿರ್ವಹಣೆಯೂ ಉನ್ನತ ಮಟ್ಟದಲ್ಲಿರುವುದೆಂದು ತಿಳಿಸಿವೆ.

34 ಲಕ್ಷ ಹೆಚ್ಚುವರಿ ಮತಗಳು ಯಾರ ಪರ?

ಪ.ಬಂಗಾಳದಲ್ಲಿ ಈ ಬಾರಿ ಶೇ.90ಕ್ಕಿಂತ ಹೆಚ್ಚು ಮತದಾನ ಆಗಿರುವುದು ಎಲ್ಲರ ಹುಬ್ಬೇರಿಸಿದೆ. ಇದು 'ಎಸ್‌ಐಆರ್' ಫಲ ಎಂಬುದಾಗಿ ಕೆಲವರು ವಿಶ್ಲೇಷಿಸುತ್ತಾರೆ. ಆದರೆ ಅದಷ್ಟೇ ನಿಜವಲ್ಲ. 2021ಕ್ಕೆ ಹೋಲಿಸಿದರೆ ಈ ಬಾರಿ 34 ಲಕ್ಷ ಹೆಚ್ಚು ಮತದಾರರು ಮತ ಹಾಕಿದ್ದಾರೆ. 2021ರಲ್ಲಿ 5.98 ಕೋಟಿ ಮತದಾರರು ಮತ ಚಲಾಯಿಸಿದ್ದರೆ, ಈ ಬಾರಿ ಮತ ಚಲಾಯಿಸಿದವರ ಸಂಖ್ಯೆ 6.31 ಕೋಟಿ. ಎಸ್‌ಐಆರ್‌ನಲ್ಲಿ 90 ಲಕ್ಷ ಮತದಾರರ ಹೆಸರು ತೆಗೆದು ಹಾಕಿದ ಹೊರತಾಗಿಯೂ 34 ಲಕ್ಷ ಹೆಚ್ಚುವರಿ ಮತದಾರರು ಮತದಾನ ಮಾಡಿರುವುದು ಗಮನಾರ್ಹ.



2021ರಲ್ಲಿ ತೃಣಮೂಲ ಕಾಂಗ್ರೆಸಿಗೆ ಬಿಜೆಪಿಗಿಂತ ಒಟ್ಟು 60 ಲಕ್ಷ ಹೆಚ್ಚು ಮತ ಬಿದ್ದಿತ್ತು. ಆಗಿನ ಮತದಾರರು ಈಗಲೂ ಅದೇ ರೀತಿ ಮತ ಚಲಾಯಿಸಿದ್ದಾರೆ ಎಂದುಕೊಂಡರೂ, ಹೆಚ್ಚುವರಿ 34 ಲಕ್ಷ ಮತದಾರರು ಫಲಿತಾಂಶವನ್ನೆ ಬದಲಿಸಿಬಿಡುವ ಸಾಮರ್ಥ್ಯ ಹೊಂದಿದ್ದಾರೆ.

ಈ ಮತದಾರರು ಯಾವ ಪಕ್ಷದೆಡೆಗೆ ಒಲವು ತೋರಿದ್ದಾರೆ ಎನ್ನುವುದು ಒಟ್ಟು ಫಲಿತಾಂಶದ ಮೇಲೆ ನಿರ್ಣಾಯಕ ಪರಿಣಾಮ ಬೀರಲೂಬಹುದು.

"ಈ ಬಾರಿ ಮತದಾರರು ತೃಣಮೂಲದ ಬೆದರಿಕೆಗೆ ಮಣಿಯದೆ ನಿರ್ಭೀತಿಯಿಂದ ಮತಗಟ್ಟೆಗೆ ಬಂದಿದ್ದಾರೆ. ಇದೆಲ್ಲ ಆಡಳಿತ ವಿರೋಧಿ ಮತಗಳು" ಎಂಬುದಾಗಿ ಬಿಜೆಪಿ ಬಣ್ಣಿಸುತ್ತಿದೆ. ಆದರೆ ತೃಣಮೂಲ ಈ ವಾದವನ್ನು ತಳ್ಳಿ ಹಾಕಿ, ಎಸ್‌ಐಆರ್ ವಿರುದ್ಧ ತಮ್ಮ ಆಕ್ರೋಶ ಹೊರಹಾಕಲು ಬಂದ ಮತದಾರರಿವರು ಎಂದು ಹೇಳಿಕೊಂಡಿದೆ.

ಸರಕಾರ ರೂಪಿಸುವ ಆ ಐದು ಜಿಲ್ಲೆಗಳು

ಕೆಲವು ದಶಕಗಳಿಂದ ಪ.ಬಂಗಾಳದಲ್ಲಿ ಯಾವ ಪಕ್ಷ ಆಡಳಿತಕ್ಕೆ ಬರುವುದೆಂಬುದನ್ನು ಐದು ಜಿಲ್ಲೆಗಳು ನಿರ್ಧರಿಸುತ್ತವೆ. ಈ ಬಾರಿಯೂ ಚಿತ್ರಣ ಬದಲಾಗಿಲ್ಲ. ಈ ಐದು ಜಿಲ್ಲೆಗಳೇ ಪ.ಬಂಗಾಳದ ಆಡಳಿತ ಯಾರ ಕೈಗೆ ಬರಬಹುದೆಂಬುದನ್ನು ನಿರ್ಧರಿಸುವಂತಿದೆ. ಈ ಐದು ಜಿಲ್ಲೆಗಳನ್ನು 'ಪ್ರೆಸಿಡೆನ್ಸಿ ವಲಯ' ಎಂದು ಕರೆಯಲಾಗುತ್ತದೆ. ಎರಡನೇ ಹಂತದಲ್ಲಿ ಅಂದರೆ, ಏ.29ರಂದು ಈ ಪ್ರದೇಶದಲ್ಲಿ ಮತದಾನ ನಡೆದಿದ್ದು, ಅಲ್ಲೂ ಭಾರೀ ಪ್ರಮಾಣದ ಮತದಾನ ನಡೆದಿದೆ.

ಈ ಐದು ಜಿಲ್ಲೆಗಳು ಪ್ರತಿಬಾರಿಯೂ ಒಂದು ಪಕ್ಷಕ್ಕೆ ಭಾರೀ ಬೆಂಬಲ ನೀಡಿ ಮತ್ತೊಂದು ಪಕ್ಷವನ್ನು ನೆಲಕಚ್ಚಿಸುವ ರೂಢಿ ಹೊಂದಿವೆ. 1977ರಲ್ಲಿ ಎಡಪಕ್ಷಗಳು ಅಧಿಕಾರಕ್ಕೇರಿದಂದಿನಿಂದ ಇದೇ ಕಥೆ ನಡೆದಿದೆ. ಈ ಐದು ಜಿಲ್ಲೆಗಳೆಂದರೆ– ಕೊಲ್ಕತಾ, ಹೌರಾ, 24 ಉತ್ತರ ಪರಗಣ, 24 ದಕ್ಷಿಣ ಪರಗಣ ಮತ್ತು ನಾಡಿಯಾ. ಮೊದಲೇ ಹೇಳಿದಂತೆ ಈ ಐದು ಜಿಲ್ಲೆಗಳು ಯಾವುದಾದರೂ ಒಂದು ಪಕ್ಷವನ್ನು ಪೂರ್ಣವಾಗಿ ಬೆಂಬಲಿಸುತ್ತವೆ. ಮಹತ್ವದ ವಿಚಾರವೆಂದರೆ ಪ.ಬಂಗಾಳದ ಒಟ್ಟು 294 ಸ್ಥಾನಗಳಲ್ಲಿ 108 ಸ್ಥಾನಗಳು ಈ ಐದು ಜಿಲ್ಲೆಗಳಲ್ಲಿವೆ. ಹಾಗಾಗಿ ಈ ಕ್ಷೇತ್ರಗಳು ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ.

ಈ ಪ್ರದೇಶದ ವಿಶೇಷವೆಂದರೆ ಪ.ಬಂಗಾಳದ ಮುಖ್ಯಮಂತ್ರಿಗಳೂ ಇದೇ ಜಿಲ್ಲೆಗಳಿಂದ ಆಯ್ಕೆಯಾಗುತ್ತಿರುವುದು. ಪ.ಬಂಗಾಳದ ಸಾಂಸ್ಕೃತಿಕ ಮತ್ತು ಬೌದ್ಧಿಕ ಕೇಂದ್ರ ಕೂಡಾ ಇದೇ ಪ್ರದೇಶವಾಗಿದೆ. ವಿಪರ್ಯಾಸವೆಂದರೆ ಹಿಂಸಾಚಾರ, ಅಪರಾಧ, ಬೆದರಿಕೆ ಮುಂತಾದವುಗಳಲ್ಲೂ ಇದೇ ಪ್ರದೇಶ ಕುಖ್ಯಾತಿ ಪಡೆದಿದೆ. 1984ರಲ್ಲಿ ಅತ್ಯಂತ ನಿಷ್ಠ ಪೊಲೀಸ್ ಅಧಿಕಾರಿಯಾಗಿದ್ದ ಸಂಜೀವ್ ಮೆಹ್ತಾ ಅವರನ್ನು ಹೌರಾದಲ್ಲಿ ಗೂಂಡಾಗಳ ತಂಡವೊಂದು ಕಡಿದು ಕೊಲೆಗೈದಿತ್ತು. ಮೊನ್ನೆ ಮೊನ್ನೆ ಚುನಾವಣಾ ಕಾರ್ಯಕ್ಕೆ ನಿಯುಕ್ತರಾಗಿದ್ದ ಉತ್ತರ ಪ್ರದೇಶದ ಪೊಲೀಸ್ ಅಧಿಕಾರಿ 'ಸಿಂಗಂ' ಖ್ಯಾತಿಯ ಅಜಯ್ ಶರ್ಮಾ ತೃಣಮೂಲದ ಅಭ್ಯರ್ಥಿ ಜಹಾಂಗೀರ್ ಖಾನ್‌ಗೆ ಚುನಾವಣಾ ಅಕ್ರಮ ನಡೆಸದಂತೆ ಎಚ್ಚರಿಕೆ ನೀಡಿದ, ಅದಕ್ಕೆ ಪ್ರತಿಯಾಗಿ ಜಹಾಂಗೀರ್ ಖಾನ್ ಕೂಡಾ ಬೆದರಿಕೆ ಹಾಕಿದ ಘಟನೆ ನಡೆದಿದೆ.

ಮಾಜಿ ಮುಖ್ಯಮಂತ್ರಿ ಜ್ಯೋತಿಬಸು ದಕ್ಷಿಣ ಪರಗಣ ಜಿಲ್ಲೆಯ ಸತ್‌ಗಾಚಿಯಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಬುದ್ಧದೇವ್ ಭಟ್ಟಾಚಾರ್ಯ ಜಾದವ್‌ಪುರದಿಂದ ಸ್ಪರ್ಧಿಸಿದ್ದರು. ಮಮತಾ ಬ್ಯಾನರ್ಜಿ ಕೊಲ್ಕತ್ತಾದ ಭವಾನಿಪುರದಿಂದ ಸ್ಪರ್ಧಿಸುತ್ತಿದ್ದಾರೆ. ಆಕೆಯ ವಿರುದ್ಧವಾಗಿ ಬಿಜೆಪಿಯ ಸುವೇಂದು ಅಧಿಕಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

2006ರಲ್ಲಿ ಎಡರಂಗವು ಕಟ್ಟಕಡೆಯದಾಗಿ ಚುನಾವಣೆ ಜಯಿಸಿದಾಗ ಅದು ಈ ಐದು ಜಿಲ್ಲೆಗಳ 108 ಸ್ಥಾನಗಳಲ್ಲಿ 72ನ್ನು ಗೆದ್ದಿತ್ತು. ಮಮತಾ ಬ್ಯಾನರ್ಜಿ ಅಬ್ಬರದ ಪ್ರಚಾರ ನಡೆಸಿದ ಹೊರತಾಗಿಯೂ ಕಮ್ಯುನಿಸ್ಟ್ ಕೋಟೆಯನ್ನು ಭೇದಿಸಲು ವಿಫಲರಾಗಿದ್ದರು. ಎಡರಂಗದ ಬುದ್ಧದೇವ್ ಮುಖ್ಯಮಂತ್ರಿಯಾಗಿ ಮುಂದುವರಿದಿದ್ದರು. ಆದರೆ 2011ರಲ್ಲಿ ಇಲ್ಲಿ ಕಮ್ಯುನಿಸ್ಟ್ ಕೋಟೆ ಧರಾಶಾಹಿಯಾಯಿತು. ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿ ಕಮ್ಯುನಿಸ್ಟರನ್ನು ಧೂಳೀಪಟ ಮಾಡಿದವು. ಈ ಪ್ರದೇಶದ 82 ಸ್ಥಾನಗಳನ್ನು ಗೆಲ್ಲಲು ಈ ಮೈತ್ರಿಕೂಟ ಸಫಲವಾಯಿತು. ಆ ಕಾಲದಲ್ಲಿ ಹಲವಾರು ರಾಜಕೀಯ ವಿಶ್ಲೇಷಕರು ಇದೊಂದು ಅನಿರೀಕ್ಷಿತ ಬೆಳವಣಿಗೆ. ಮುಂದಿನ ಚುನಾವಣೆಯಲ್ಲಿ ಮತ್ತೆ ಎಡರಂಗ ಅಧಿಕಾರಕ್ಕೆ ಬರಲಿದೆ ಎಂದು ಮಾತನಾಡಿಕೊಂಡಿದ್ದರು.ಆದರೆ ಅವರ ಭವಿಷ್ಯ ಸುಳ್ಳಾಯಿತು. ಬಳಿಕ ಎಡರಂಗ ಅಧಿಕಾರಕ್ಕೆ ಬರಲೇ ಇಲ್ಲ.

ಅಲ್ಲಿಂದ ಬಳಿಕ ಈ ಪ್ರೆಸಿಡೆನ್ಸಿ ಪ್ರದೇಶವು ತೃಣಮೂಲದ ಭದ್ರಕೋಟೆಯಾಯಿತು. 2016ರ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದ ತೃಣಮೂಲ ಕಾಂಗ್ರೆಸ್ 91 ಸ್ಥಾನಗಳನ್ನು ಇಲ್ಲಿ ಗೆದ್ದಿತು. 2021ರಲ್ಲಿ ಬಿಜೆಪಿಯ ಪ್ರಬಲ ಹೋರಾಟದ ಹೊರತಾಗಿಯೂ 97 ಸ್ಥಾನಗಳನ್ನು ಗೆದ್ದಿತು. ಒಂದು ವಲಯದಿಂದಲೇ 80–90 ಸ್ಥಾನಗಳನ್ನು ಗೆದ್ದರೆ, ಮತ್ತೆ ಬಹುಮತಕ್ಕೆ ಬೇಕಾದ 148 ಸ್ಥಾನಗಳನ್ನು ಗಳಿಸುವುದು ಕಷ್ಟವೇನಲ್ಲ. ಕಳೆದ ಕೆಲವು ದಶಕಗಳಿಂದ ಆಗುತ್ತಿರುವುದು ಇದುವೆ. ಆಡಳಿತ ಪಕ್ಷವು ಈ ಐದು ಜಿಲ್ಲೆ ಗಳಲ್ಲಿ ಅಧಿಕ ಸ್ಥಾನಗಳನ್ನು ಗೆಲ್ಲುವ ಮೂಲಕ ಇಡೀ ರಾಜ್ಯದ ಚುಕ್ಕಾಣಿ ಹಿಡಿಯುವಂತಾಗಿದೆ.

ಅದಕ್ಕಾಗಿಯೇ ಬಿಜೆಪಿ ಕೂಡಾ ಈ ಬಾರಿ ಈ ಪ್ರೆಸಿಡೆನ್ಸಿ ವಲಯದಲ್ಲಿ ಉತ್ತಮ ನಿರ್ವಹಣೆ ನೀಡಲು ಹೆಚ್ಚು ಶ್ರಮ ಹಾಕಿರುವುದು. ಈ ಪ್ರದೇಶದಲ್ಲಿ ಮಮತಾ ಕೋಟೆಯನ್ನು ಭೇದಿಸಿದರೆ ಪ.ಬಂಗಾಳವನ್ನು ಗೆಲ್ಲುವುದು ಕಷ್ಟವಲ್ಲವೆಂದು ಬಿಜೆಪಿ ಕೂಡಾ ಅರಿತಿದೆ. 2011ರಲ್ಲಿ ಕಮ್ಯುನಿಸ್ಟರು ಧೂಳೀಪಟವಾದಂತೆಯೇ ಈ ಬಾರಿ ತೃಣಮೂಲ ಕಾಂಗ್ರೆಸ್ ಧೂಳೀಪಟವಾಗಬಹುದೆಂದು ಬಿಜೆಪಿ ನಿರೀಕ್ಷಿಸುತ್ತಿದೆ. ಆದರೆ ಅದು ಅಷ್ಟು ಸುಲಭವಲ್ಲ ಎಂಬುದೂ ನಿಜವೆ. ಯಾಕೆಂದರೆ ಈ ಪ್ರದೇಶದಲ್ಲಿ ಮುಸ್ಲಿಮರ ಸಂಖ್ಯೆಯೂ ಅಧಿಕವಿದೆ. ಮಮತಾ ಪಕ್ಷವಂತೂ ಮುಸ್ಲಿಮರನ್ನು ಅತಿಯಾಗಿ ಓಲೈಸುತ್ತಿದೆ.

ಬಿಜೆಪಿ ತಾಳ್ಮೆಯುತ ಸಿದ್ಧತೆ

ಬಿಜೆಪಿಯೇನೂ ಹಠಾತ್ತನೆ ಪ.ಬಂಗಾಳದಲ್ಲಿ ಸ್ಪರ್ಧೆಗೆ ಧುಮುಕುತ್ತಿರುವುದಲ್ಲ. 2021ರಲ್ಲಿ ಈ ಐದು ಜಿಲ್ಲೆಗಳಲ್ಲಿ ಬಿಜೆಪಿ ಸೋಲಲು ಕಾರಣ ಅದಕ್ಕೆ ಅಭ್ಯರ್ಥಿಗಳು ದೊರಕದಿದ್ದುದು. ತೃಣಮೂಲದಿಂದ ಅತೃಪ್ತರಾಗಿ ಬಂದ ವ್ಯಕ್ತಿಗಳಿಗೆ ಬಿಜೆಪಿ ಟಿಕೆಟ್ ನೀಡಲಾಗಿತ್ತು. ಅವರೆಲ್ಲರೂ ಸೋತಿದ್ದರು. ಸೋತ ಬಳಿಕ ಅವರೆಲ್ಲ ಮತ್ತೆ ತೃಣಮೂಲ ಪಕ್ಷವನ್ನು ಸೇರಿಕೊಂಡಿದ್ದರು. ಬಿಜೆಪಿ ಇದರಿಂದ ಪಾಠ ಕಲಿತುಕೊಂಡಿತ್ತು. ಕಳೆದ ಐದು ವರ್ಷಗಳಿಂದ ಬಿಜೆಪಿ ಈ ಪ್ರದೇಶದಲ್ಲಿ ತನ್ನದೇ ಆದ ಬಲಿಷ್ಠ ಅಭ್ಯರ್ಥಿಗಳನ್ನು ಬೆಳೆಸುವ ಪ್ರಯತ್ನ ನಡೆಸಿದೆ. ಈ ಬಾರಿಯ ಅಭ್ಯರ್ಥಿ ಪಟ್ಟಿಯಲ್ಲಿ ಸ್ಥಳೀಯ ಮುಖಂಡರೇ ಹೆಚ್ಚು ಕಾಣುತ್ತಿದ್ದಾರೆ.

ತಾಳ್ಮೆ ಹಾಗೂ ವ್ಯವಸ್ಥಿತ ಸಿದ್ಧತೆ ರಾಜ್ಯ ಗೆಲ್ಲಲು ಮುಖ್ಯ ಎಂಬುದನ್ನು ಬಿಜೆಪಿ ಅರಿತಿದೆ. ಈಗ ಬಿಜೆಪಿ ಪ್ರಬಲವಾಗಿರುವ ಪ್ರತಿಯೊಂದು ರಾಜ್ಯದಲ್ಲಿ ಕೂಡಾ ಆರಂಭದಲ್ಲಿ ಪಕ್ಷವು ಸೋಲು ಕಂಡಿತ್ತು.

ಹಿನ್ನಡೆ ಅನುಭವಿಸಿತ್ತು. ಆ ಸೋಲುಗಳಿಂದಲೇ ಪಾಠ ಕಲಿತು ಮೇಲೇರಿ ಬಂದಿತ್ತು. ಮಹಾರಾಷ್ಟ್ರದಲ್ಲಿ ಪಕ್ಷ ಬೆಳೆಸುವ ಕಾರ್ಯ 1970ರಿಂದಲೇ ಆರಂಭವಾಗಿತ್ತು. ಕರ್ನಾಟಕದಲ್ಲಿ 1990ರಲ್ಲಿ ಇಂತಹ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ತನ್ನ ಹಿಂದೆ ಬಲಿಷ್ಠ ಸಂಘಟನಾ ಸಾಮರ್ಥ್ಯವಿದೆ ಎಂದು ಖಚಿತವಾದ ಬಳಿಕವೇ ಬಿಜೆಪಿ ಚುನಾವಣೆ ಗೆಲ್ಲುವ ಮತ್ತು ಸರಕಾರ ರಚಿಸುವ ಕುರಿತಂತೆ ಗಂಭೀರ ಚಿಂತನೆ ನಡೆಸುವುದು. ಬಿಜೆಪಿಯ ತಾಳ್ಮೆ ಮತ್ತು ಸಂಘಟನಾ ಚತುರತೆ ಈ ಬಾರಿಯ ಚುನಾವಣೆಯಲ್ಲಿ ಫಲ ನೀಡುವುದೆ, ತೃಣಮೂಲದ ಕೋಟೆಯನ್ನು ಭೇದಿಸುವುದೇ ಎಂಬುದನ್ನು ಮೇ 4ರ ಫಲಿತಾಂಶ ತಿಳಿಸಲಿದೆ.

ಕಟ್ಟಡ ಉಪವಿಧಿಗಳ ತಿದ್ದುಪಡಿಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ

ಡಾ. ಎಂ.ಕೆ.ಶ್ರೀಧರನ್, ಸಾರ್ವಜನಿಕ ವ್ಯವಹಾರಗಳ ವಿಶ್ಲೇಷಕರು

ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ತನ್ನ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳ ಉಪವಿಧಿಗಳ ತಿದ್ದುಪಡಿಗಾಗಿ ಕರಡು ಅಧಿಸೂಚನೆ ರೂಪಿಸಿ ದಿನಾಂಕ 1 ನೇ ಏಪ್ರಿಲ್ 2026 ರಂದು ಐದೂ ನಗರ ಪಾಲಿಕೆಗಳ ಮೂಲಕ ಪ್ರಕಟಿಸಿ ಮುಂದಿನ 30 ದಿನಗಳಲ್ಲಿ ಆಯಾ ನಗರ ಪಾಲಿಕೆಗಳಲ್ಲಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಅವಕಾಶ ಕಲ್ಪಿಸಿದೆ. ಈ ಅಧಿಸೂಚನೆಯಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ ಹಲವಾರು ಕಟ್ಟಡ ನಿರ್ಮಾಣಗಳಲ್ಲಿನ ಉಲ್ಲಂಘನೆ ಮಿತಿಯನ್ನು ಹಾಲಿ ಇರುವ ಶೇ. 5 ರಿಂದ ಶೇ.15ಕ್ಕೆ ಹೆಚ್ಚಿಸುವ ಪ್ರಸ್ತಾಪವನ್ನು ಮಾಡಲಾಗಿದೆ. ನಕ್ಷೆಯ ಉಲ್ಲಂಘನೆ ಮಾಡಿರುವ ಕಟ್ಟಡಗಳ ಸಂಖ್ಯೆ ಹೆಚ್ಚಾಗಿದ್ದು, ಅವುಗಳಿಗೆ ನೀರು ಮತ್ತು ವಿದ್ಯುತ್ ಸಂಪರ್ಕ ಸಿಗದಿರುವುದರಿಂದ ಜನರಿಗೆ ತೊಂದರೆ ಆಗುತ್ತಿದ್ದು ಅದನ್ನು ಪರಿಹರಿಸಲು ಈ ಅಧಿಸೂಚನೆ ಸಹಕಾರಿ ಎಂಬುದು ಸರ್ಕಾರದ ನಿಲುವು.

ಆದರೆ ನಿಯಮ ಉಲ್ಲಂಘನೆ ಮಾಡಿದ ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಕ್ರಮ ಹಲವು ಅನಪೇಕ್ಷಿತ ಪರಿಣಾಮಗಳನ್ನು ಉಂಟುಮಾಡುತ್ತವೆ ಎಂದು ವಿಷಯ ಪರಿಣಿತರು ಎಚ್ಚರಿಸುತ್ತಾರೆ. ಮೊದಲನೆಯದು ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವುದು ಒಳ್ಳೆಯ ಆಡಳಿತದ ಲಕ್ಷಣವಲ್ಲ. ಇಂಥ ಕ್ರಮಗಳನ್ನು ನ್ಯಾಯಾಲಯಗಳು ಪದೇ ಪದೇ ಸ್ಥಗಿತಮಾಡಿವೆ ಮತ್ತು ರದ್ದುಗೊಳಿಸಿವೆ. ಯೋಜನಾಬದ್ಧವಾದ ನಗರದ ಬೆಳವಣಿಗೆ ಇದು ಮಾರಕವೂ ಹೌದು. ಜೊತೆಗೆ ನಿಯಮಗಳನ್ನು ಅನುಸರಿಸಿ ಮನೆ–ಕಟ್ಟಡ ಕಟ್ಟಿರುವ ಎಲ್ಲಾ ನಾಗರಿಕರನ್ನೂ ಅಗೌರವಿಸಿದಂತೆ ಭಾಸವಾಗುವ ಪರಿಣಾಮ ಈ ಅಧಿಸೂಚನೆಯಿಂದ ಆಗುತ್ತದೆ. ಕಾನೂನಿಗೆ ಅನುಗುಣವಾಗಿ ಇಷ್ಟು ಸಂಖ್ಯೆಯ ಕಟ್ಟಡಗಳು ಏಕೆ ನಿರ್ಮಾಣವಾದವು ಎಂಬ ಪ್ರಶ್ನೆ ಇಲ್ಲಿ ಪ್ರಸ್ತುತ. ಪಾಲಿಕೆಯ ಮತ್ತು ಸರ್ಕಾರದ ಅಧಿಕಾರಿಗಳು ಕಾನೂನುಗಳ ಪಾಲನೆಯಲ್ಲಿ ವಿಫಲವಾಗಿರುವುದೇ ಇದಕ್ಕೆ ಮೂಲ ಕಾರಣ. ಭ್ರಷ್ಟಾಚಾರವು ಕಾನೂನುಗಳ ಅನುಷ್ಠಾನವನ್ನು ಸಡಿಲಗೊಳಿಸಿದೆ ಎಂಬುದು ವ್ಯಾಪಕವಾಗಿರುವ ಅಭಿಪ್ರಾಯವಾಗಿದೆ. ಜನಪ್ರತಿನಿಧಿಗಳ ಸಮ್ಮತಿ ಇಲ್ಲದೇ ಈ ವೈಫಲ್ಯ ಸಾಧ್ಯವಾಗುವುದಾಗಲೀ ಅಥವಾ ಮುಂದುವರೆಯುವುದಾಗಲೀ ಅಸಂಭವ.

ಕಳೆದ ಎರಡು ದಶಕಗಳಿಂದ ಕರ್ನಾಟಕದ ಸರ್ಕಾರಗಳು ಉಲ್ಲಂಘನೆ ಮಾಡಿದ ಕಟ್ಟಡಗಳನ್ನು ಕ್ರಮಬದ್ಧಗೊಳಿಸಲು ಪ್ರಯತ್ನಿಸುತ್ತಿವೆ. 2004 ರಲ್ಲಿ ಧರ್ಮ ಸಿಂಗ್ ಮುಖ್ಯಮಂತ್ರಿಯಾಗಿದ್ದು, ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿಯಾಗಿದ್ದಾಗ ಕ್ರಮಬದ್ಧಗೊಳಿಸುವ ನಿಯಮಗಳನ್ನು ರೂಪಿಸುವ ಮತ್ತು ಜಾರಿಮಾಡುವ ಪ್ರಯತ್ನಗಳು ಪ್ರಾರಂಭವಾದವು. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆದ ಕೂಡಲೇ, 2007 ರಲ್ಲಿ ಮೂರು ತಿಂಗಳ ಅವಧಿಯಲ್ಲಿ ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಅವಕಾಶ ನೀಡಲಾಯಿತು. 2013 ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕ್ರಮಬದ್ಧಗೊಳಿಸುವ ಪ್ರಯತ್ನವನ್ನು ಮತ್ತೊಮ್ಮೆ ಮಾಡಲಾಯಿತು. 2013–2014 ಅವಧಿಯಲ್ಲಿ ಜಾರಿಗೆ ತರಲಾದ ಕಾನೂನು ಶೇ 50ರಷ್ಟು ನಿಯಮ ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವ ಅವಕಾಶ ನೀಡಿತ್ತು. ಆದರೆ, 2017 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಇದಕ್ಕೆ ತಡೆ ನೀಡಿತು. 2020–2021 ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಬಿ–ಖಾತಾ ಸಕ್ರಮಗೊಳಿಸುವ, ಮತ್ತು ಮಾರ್ಗದರ್ಶೀ ಮೌಲ್ಯಾಧಾರಿತ ಶುಲ್ಕದೊಂದಿಗೆ ಉಲ್ಲಂಘನೆಗಳನ್ನು ಕ್ರಮಬದ್ಧಗೊಳಿಸುವ ಪ್ರಯತ್ನ ಮಾಡಲಾಯಿತು. ನ್ಯಾಯಲಾಲಯಗಳು ಈ ಪ್ರಯತ್ನಗಳಿಗೆ ಮನ್ನಣೆ ನೀಡುತ್ತಿಲ್ಲ. ಏಕೆಂದರೆ, ಈ ಬದಲಾವಣೆಗಳು ನಗರದ ಬೆಳವಣಿಗೆಯಲ್ಲಿ ಅವ್ಯವಸ್ಥೆಯನ್ನು ತರಲಿದ್ದು ಅದು ಸಂವಿಧಾನದ ಆಶಯಗಳಿಗೆ ಅನುಗುಣವಾಗಿಲ್ಲ ಎಂಬುದೇ ಆಗಿದೆ.

ಹಾಗಾದರೆ, ಸರ್ಕಾರಗಳು ಏಕೆ ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವ ಪ್ರಯತ್ನಗಳನ್ನು ಸತತವಾಗಿ ಮಾಡುತ್ತಿವೆ ಎಂಬ ಪ್ರಶ್ನೆಗೂ ಕೂಡ ಉತ್ತರ ಅಗತ್ಯ. ಮೊದಲನೆಯದಾಗಿ, ನಿಯಮಗಳ ಉಲ್ಲಂಘನೆಯನ್ನು ತಡೆಯದ ಸರ್ಕಾರಗಳು ಅಂಥಹಾ ಕಟ್ಟಡಗಳ ಸಂಖ್ಯೆ ಹೆಚ್ಚಾದಂತೆ ಸಾರ್ವಜನಿಕರ ಒತ್ತಡಕ್ಕೆ ಒಳಗಾಗುತ್ತವೆ. ಅವರಿಗೆ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ಕಾನೂನು ಬದಲಾವಣೆಗೆ ಸರ್ಕಾರಗಳು ಮುಂದಾಗಬಹುದು. ಕಟ್ಟಡ ಉಲ್ಲಂಘನೆಯು ವ್ಯಾಪಕವಾಗಿ ನಡೆಯುತ್ತಿದ್ದು ಇದನ್ನು ತಡೆಯುವುದು ಹೇಗೆ ಎನ್ನುವ ಬಗ್ಗೆ ಚಿಂತನೆ ಅಗತ್ಯವಿದೆ. ಕಾನೂನುಗಳ ಸಮರ್ಪಕ ನಿರ್ವಹಣೆ ಆಗಬೇಕಿದ್ದು ಅದಕ್ಕಾಗಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಸಾಧ್ಯಮಾಡುವುದು ಅಪೇಕ್ಷಿತ ಪರಿಣಾಮಗಳನ್ನು ತರಬಹುದು. ಸೆಟ್ ಬ್ಯಾಕ್ ಉಲ್ಲಂಘನೆಗಳು, ನೆರೆಹೊರೆಯವರಲ್ಲಿ ಅವುಗಳಿಂದ ಉಂಟಾಗುವ ವಿವಾದಗಳನ್ನು ಪರಿಹರಿಸಲು ಕಟ್ಟಡ ನಿಯಂತ್ರಣ ಸಮಿತಿಗಳನ್ನು ಸ್ಥಾಪಿಸಬೇಕು. ನಿಯಮಿತ ಪರಿಶೀಲನೆಗಳನ್ನು ಸಾರ್ವಜನಿಕರೇ ಪ್ರಾರಂಭಿಸಲು ಅನುಮತಿಸುವ ಕಾನೂನು ನಿಯಮಗಳನ್ನು ಜಾರಿಮಾಡಬಹುದು. ಈ ಸಮಿತಿಗಳಿಗೆ ತಾಂತ್ರಿಕ ಪರಿಶೀಲನೆ ನಡೆಸುವ ಮತ್ತು ನಿಯಮಗಳ ಪಾಲನೆಯ ಕರ್ತವ್ಯ ಇರುವ ಅಧಿಕಾರಿಗಳನ್ನು ಉಲ್ಲಂಘನೆಗಳಿಗೆ ಹೊಣೆಯಾಗಿಸುವ ಅಧಿಕಾರಗಳನ್ನು ನೀಡಬಹುದು.

ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಮುನ್ನ ಹೊಸ ಕಟ್ಟಡಗಳ ನಿರ್ಮಾಣದಲ್ಲಿ ನಿಯಮಗಳನ್ನು ವಿನಾಯಿತಿ ಇಲ್ಲದಂತೆ ಜಾರಿ ಮಾಡುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೇಕಾದರೆ ನಿವೇಶನದ ಸುತ್ತಾ ಖಾಲಿ ಬಿಡಲೇಬೇಕಾದ ಜಾಗವನ್ನು ಹೊಸದಾಗಿ ನಿರ್ದೇಶಿಸಬಹುದು. ಖಾಲಿ ಜಾಗವನ್ನು ಮಿತಿಗೊಳಿಸಬಹುದಾದರೂ ನಾಲ್ಕೂ ದಿಕ್ಕುಗಳಲ್ಲಿ ಜಾಗ ಬಿಡುವುದರಿಂದ ವ್ಯಾಜ್ಯಗಳನ್ನು ಕಡಿಮೆ ಮಾಡಬಹುದು. ನಂತರ ಅದೇ ನಿಯಮಗಳನ್ನು ಉಲ್ಲಂಘಿಸಿದ ಕಟ್ಟಡಗಳೂ ಅಳವಡಿಸಿಕೊಳ್ಳಬೇಕಾದ ಸಕ್ರಮ ಕಾನೂನನ್ನು ಜಾರಿ ಮಾಡಬೇಕಾದದ್ದು ಸೂಕ್ತ. ಈ ಕ್ರಮ ಸೂಕ್ತ ಆಡಳಿತದ ವಿಧಾನವಾಗಿದ್ದು ನ್ಯಾಯಾಲಯಗಳೂ ಅದನ್ನು ಅಂಗೀಕರಿಸುವ ಸಾಧ್ಯತೆ ಹೆಚ್ಚು.

ಕಳೆದ ಒಂದು ತಿಂಗಳಲ್ಲಿ ಸಾರ್ವಜನಿಕರಿಂದಲೂ, ಸಂಘ–ಸಂಸ್ಥೆಗಳಿಂದಲೂ ಸಕಾರಣಗಳೊಂದಿಗೆ ಹಲವಾರು ಆಕ್ಷೇಪಗಳನ್ನು ಐದೂ ಪಾಲಿಕೆಗಳಿಗೆ ಸಲ್ಲಿಕೆಯಾಗಿದೆ. ಈಗ ಜನಾಭಿಪ್ರಾಯವನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಶಾಸಕಾಂಗದ ಮೇಲೆ ಇದೆ.

ಚಾಣಕ್ಯ ಸಮೀಕ್ಷೆ: ಬಿಜೆಪಿಗೆ 192 ಸ್ಥಾನಗಳ ನಿರೀಕ್ಷೆ

ಬಂಗಾಳ: ಬಿಜೆಪಿಗೆ ಐತಿಹಾಸಿಕ ಜಯ?

- ಟಿಎಂಸಿಗೆ 100 ಸ್ಥಾನಗಳಷ್ಟೇ ಸಾಧ್ಯತೆ
- ಇತರ ಪಕ್ಷಗಳಿಗೆ ಅಲ್ಪ ಅವಕಾಶ
- ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಸಾಧ್ಯತೆ

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ರಾಜ್ಯ ರಾಜಕೀಯದಲ್ಲಿ ದೊಡ್ಡ ಬದಲಾವಣೆಯ ಸೂಚನೆ ನೀಡುತ್ತಿವೆ. ಟುಡೇಸ್ ಚಾಣಕ್ಯ ಸಮೀಕ್ಷೆಯ ಪ್ರಕಾರ, ಭಾರತೀಯ ಜನತಾ ಪಕ್ಷ (ಬಿಜೆಪಿ) ಭಾರೀ ಬಹುಮತದೊಂದಿಗೆ ಅಧಿಕಾರಕ್ಕೆ ಏರುವ ಸಾಧ್ಯತೆ ವ್ಯಕ್ತವಾಗಿದೆ.

ಈ ಸಮೀಕ್ಷೆ ಪ್ರಕಾರ, 294 ಸ್ಥಾನಗಳ ವಿಧಾನಸಭೆಯಲ್ಲಿ ಬಿಜೆಪಿ ಸುಮಾರು 192 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಇದು ಸ್ಪಷ್ಟ ಬಹುಮತಕ್ಕಿಂತ ಬಹಳ ಹೆಚ್ಚಾಗಿದ್ದು, ರಾಜ್ಯದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಸ್ಥಾಪನೆಯ ದಾರಿಯನ್ನು ಸುಗಮಗೊಳಿಸಬಹುದು.

ಇನ್ನೊಂದೆಡೆ, ಸಿಎಂ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಸುಮಾರು 100 ಸ್ಥಾನಗಳಷ್ಟೇ ಸಿಗುವ ಸಾಧ್ಯತೆ ಇದೆ ಎಂದು ಅಂದಾಜಿಸ ಲಾಗಿದೆ. ಇತರ ಪಕ್ಷಗಳಿಗೆ ಅತಿ ಕಡಿಮೆ ಸ್ಥಾನಗಳು ಸಿಗುವ ಸಾಧ್ಯತೆ ಇದೆ. ಚಾಣಕ್ಯ ಸಮೀಕ್ಷೆ ಬಿಜೆಪಿ ಪರ ಸ್ಪಷ್ಟ ಅಲೆ ಇದೆ ಎಂದು ಸೂಚಿಸುತ್ತಿದ್ದು, ಇದು ಬಂಗಾಳ ರಾಜಕೀಯದಲ್ಲಿ ಐತಿಹಾಸಿಕ ಬದಲಾವಣೆಗೆ ಕಾರಣವಾಗಬಹುದು ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಇದೇ ವೇಳೆ, ಇತರ ಕೆಲವು ಸಮೀಕ್ಷೆಗಳು ಮಿಶ್ರ ಚಿತ್ರಣ ನೀಡುತ್ತಿದ್ದರೂ, ಬಹುತೇಕ ಎಕ್ಸಿಟ್ ಪೋಲ್‌ಗಳು ಬಿಜೆಪಿ ಮುನ್ನಡೆಯನ್ನೇ ಸೂಚಿಸುತ್ತಿವೆ. ಕೆಲವು ಸಮೀಕ್ಷೆಗಳು ಕಠಿಣ ಪೈಪೋಟಿಯನ್ನೂ ಸೂಚಿಸುತ್ತಿವೆ. ಇಲ್ಲಿ ಎರರ್ ಮಾರ್ಜಿನ್ 11 ಸ್ಥಾನಗಳನ್ನು ನೀಡಲಾಗಿದೆ.



ಕೇರಳದಲ್ಲಿ ಕಠಿಣ ಪೈಪೋಟಿ: ಹಾಗೆಯೇ, ಕೇರಳದಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ನಡುವೆ ಕಠಿಣ ಪೈಪೋಟಿ ಇದೆ ಎಂದು ಈ ಸಮೀಕ್ಷೆ ಹೇಳಿದೆ. ಯುಡಿಎಫ್‌ಗೆ 69, ಎಲ್‌ಡಿಎಫ್‌ಗೆ 64, ಬಿಜೆಪಿಗೆ 7, ಇತರೆ 1 ಸ್ಥಾನ ಸಿಗಬಹುದು ಎಂದಿದೆ. ಇಲ್ಲಿ ಎರರ್ ಮಾರ್ಜಿನ್ 9 ಸ್ಥಾನಗಳಿವೆ.

ಡಿಎಂಕೆಗೆ ಗೆಲುವು: ತಮಿಳುನಾಡಿನಲ್ಲಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಮತ್ತೆ ಸರ್ಕಾರ ರಚಿಸುವ ಸಾಧ್ಯತೆಗಳಿವೆ ಎಂದು ಈ ಸಮೀಕ್ಷೆ ಹೇಳಿದೆ. ಇದರ ಪ್ರಕಾರ, ಟಿವಿಕೆಯ ವಿಜಯ್ ಎಐಎಡಿಎಂಕೆ ಮತ ಕಬಳಿಸಿದ್ದಾರೆ ಎಂದಿದೆ. ಇಲ್ಲಿ ಡಿಎಂಕೆ 125, ಎಐಎಡಿಎಂಕೆ 45, ಟಿವಿಕೆ 63, ಇತರೆ 1 ಸ್ಥಾನ ಗೆಲ್ಲಬಹುದು ಎಂದಿದೆ. ಇಲ್ಲೂ ಎರರ್ ಮಾರ್ಜಿನ್ 11 ಸೀಟುಗಳನ್ನು ನೀಡಲಾಗಿದೆ.

ಅಸ್ಸಾಂನಲ್ಲಿ ಬಿಜೆಪಿ: ಈಶಾನ್ಯ ರಾಜ್ಯ ಅಸ್ಸಾಂನಲ್ಲಿ ಬಿಜೆಪಿಯೇ ಮತ್ತೆ ಅಧಿಕಾರ ಹಿಡಿಯಲಿದೆ ಎಂಬುದು ಟುಡೇಸ್ ಚಾಣಕ್ಯದ ಭವಿಷ್ಯ. ಇಲ್ಲಿ ಬಿಜೆಪಿ 102, ಕಾಂಗ್ರೆಸ್ 23 ಮತ್ತು ಇತರ 1 ಸ್ಥಾನದಲ್ಲಿ ಗೆಲ್ಲಬಹುದು ಎಂದಿದೆ. ಇಲ್ಲಿ ಎರರ್ ಮಾರ್ಜಿನ್ 9 ಸ್ಥಾನಗಳನ್ನು ನೀಡಲಾಗಿದೆ.




ಉತ್ತರ ಪ್ರದೇಶದ ಮೂಲಸೌಕರ್ಯ ಕ್ಷೇತ್ರದಲ್ಲಿ ಇಂದು ಹೊಸ ಮೈಲಿಗಲ್ಲು ಸ್ಥಾಪನೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ, 594 ಕಿ.ಮೀ. ಉದ್ದದ ಗಂಗಾ ಎಕ್ಸ್‌ಪ್ರೆಸ್ ವೇಯನ್ನು ಉದ್ಘಾಟಿಸಿದ್ದಾರೆ. ಪಶ್ಚಿಮದ ಮೀರತ್ ಮತ್ತು ಪೂರ್ವದ ಪ್ರಯಾಗ್‌ರಾಜ್ ಅನ್ನು ಸಂಪರ್ಕಿಸುವ ಈ ಆರು ಪಥಗಳ ನಿಯಂತ್ರಿತ ಹೆದ್ದಾರಿ, ಈಗ ರಾಜ್ಯದ ಅತಿ ಉದ್ದದ ಎಕ್ಸ್ ಪ್ರೆಸ್‌ವೇ ಆಗಿದೆ. ಸುಮಾರು 36,230 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಈ ಯೋಜನೆ, ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುವ ಮೂಲಕ ಮತ್ತು ಪ್ರದೇಶದ ಸಂಚಾರ ಮತ್ತು ಸರಕು ಸಾಗಣೆಯನ್ನು ಅನ್ನು ಸುಧಾರಿಸುವ ಮೂಲಕ ಗ್ರಾಮೀಣ ಮತ್ತು ನಗರ ಉತ್ತರ ಪ್ರದೇಶದ ಆರ್ಥಿಕ ಚಿತ್ರಣವನ್ನು ಬದಲಿಸುವ ಗುರಿ ಹೊಂದಿದೆ. ಈ ಸಂಪರ್ಕ ಸೇತುವಿನ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಗಂಗಾ ಎಕ್ಸ್‌ಪ್ರೆಸ್‌ವೇ ಉ.ಪ್ರದೇಶದ ಸೇತು

ರಾಜ್ಯದಾದ್ಯಂತ ಸಂಚಾರ ದೂರ ಕಡಿತ

ವಾಹನ ಸವಾರರಿಗೆ ಈ ಯೋಜನೆಯ ಪ್ರಮುಖ ಆಕರ್ಷಣೆಯೆಂದರೆ ಪ್ರಯಾಣದ ಸಮಯದ ಕಡಿತ. ಪ್ರಸ್ತುತ, ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಮೂಲಕ ಮೀರತ್‌ನಿಂದ ಪ್ರಯಾಗ್‌ರಾಜ್‌ಗೆ ಪ್ರಯಾಣಿಸಲು 10 ರಿಂದ 12 ಗಂಟೆಗಳ ಸಮಯ ಬೇಕಾಗುತ್ತದೆ. ಗಂಗಾ ಎಕ್ಸ್ ಪ್ರೆಸ್‌ವೇ ಪ್ರಾರಂಭದೊಂದಿಗೆ, ಈ ಸಮಯ ಕೇವಲ 6 ಅಥವಾ 7 ಗಂಟೆಗಳಿಗೆ ಇಳಿಕೆಯಾಗುವ ನಿರೀಕ್ಷೆಯಿದೆ. ಗಂಟೆಗೆ 120 ಕಿಮೀ ವೇಗಕ್ಕೆ ಅನುಗುಣವಾಗಿ ಇದನ್ನು ವಿನ್ಯಾಸಗೊಳಿಸಲಾಗಿದ್ದು, ದೆಹಲಿ-ಎನ್‌ಸಿಆರ್‌ನಿಂದ ಬರುವ ಪ್ರಯಾಣಿಕರು ದೆಹಲಿ-ಮೀರತ್ ಎಕ್ಸ್ ಪ್ರೆಸ್‌ವೇ ಮೂಲಕ ಸುಲಭವಾಗಿ ಈ ರಸ್ತೆಯನ್ನು ಸಂಪರ್ಕಿಸಬಹುದು.



ಹೃದಯಭಾಗದ ಮೂಲಕ ಸಾಗುವ ಮಾರ್ಗ

ಈ ಎಕ್ಸ್‌ಪ್ರೆಸ್‌ವೇ ಹಾಪುರ್, ಬುಲಂದ್‌ಶಹರ್, ಅಮ್ರೋಹಾ, ಸಂಭಲ್, ಬದೌನ್, ಷಹಜಹಾನ್‌ಪುರ, ಹರ್ದೋಯಿ, ಉನ್ನಾವೊ, ರಾಯ್‌ಬರೇಲಿ ಮತ್ತು ಪ್ರತಾಪ್‌ಗಢ ಸೇರಿದಂತೆ 12 ಪ್ರಮುಖ ಜಿಲ್ಲೆಗಳ ಮೂಲಕ ಹಾದುಹೋಗುತ್ತದೆ. ಇದು 500ಕ್ಕೂ ಹೆಚ್ಚು ಹಳ್ಳಿಗಳನ್ನು ಜೋಡಿಸುವ ಮೂಲಕ ಹಿಂದೆ ಅಭಿವೃದ್ಧಿಯಿಂದ ವಂಚಿತವಾಗಿದ್ದ ಪ್ರದೇಶಗಳಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸುವ ನಿರೀಕ್ಷೆಯಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳೊಂದಿಗೆ ಸಂಪರ್ಕ ಸಾಧಿಸಲು ಇಲ್ಲಿ 21 ಇಂಟರ್‌ಚೇಂಜ್‌ಗಳನ್ನು ನೀಡಲಾಗಿದೆ.

594 ಕಿ.ಮೀ. ಒಟ್ಟು ಉದ್ದ

ಮಾರ್ಗ: ಮೀರತ್ (ಬಿಜೌಲಿ)ಯಿಂದ ಪ್ರಯಾಗ್‌ರಾಜ್

36,230 ರೂ. ಕೋಟಿ ಅಂದಾಜು ಯೋಜನಾ ವೆಚ್ಚ

120 ಕಿಮೀ ಪ್ರತಿ ಗಂಟೆಗೆ ವೇಗದ ಮಿತಿ

ಹಾದುಹೋಗುವ ಜಿಲ್ಲೆ: 12 (ಮೀರತ್, ಉನ್ನಾವೊ, ರಾಯ್‌ಬರೇಲಿ, ಪ್ರಯಾಗ್‌ರಾಜ್ ಸೇರಿ)

ಪ್ರಮುಖ ನಿರ್ಮಾಣ: 960 ಮೀ ಗಂಗಾ ಸೇತುವೆ; 3.5 ಕಿಮೀ ವಾಯುಪಡೆ ಏರ್‌ಸ್ಟ್ರಿಪ್

ಪಥಗಳು: 6 (8ಕ್ಕೆ ವಿಸ್ತರಿಸಬಹುದಾದ)

ಅಂದಾಜು ಪ್ರಯಾಣ ಸಮಯ: 6ರಿಂದ 7 ಗಂಟೆ

ಎಂಜಿನಿಯರಿಂಗ್, ಕಾರ್ಯತಂತ್ರದ ವೈಶಿಷ್ಟ್ಯ

ಈ ಬೃಹತ್ ಯೋಜನೆಯಲ್ಲಿ ಗಂಗಾ ನದಿಯ ಮೇಲೆ 960 ಮೀಟರ್ ಮತ್ತು ರಾಮಗಂಗಾ ನದಿಯ ಮೇಲೆ 720 ಮೀಟರ್ ಉದ್ದದ ಸೇತುವೆಗಳನ್ನು ನಿರ್ಮಿಸಲಾಗಿದೆ. ನಾಗರಿಕ ಸಾರಿಗೆಯ ಜೊತೆಗೆ, ಈ ಹೆದ್ದಾರಿ ರಕ್ಷಣಾ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಷಹಜಹಾನ್‌ಪುರದಲ್ಲಿ 3.5 ಕಿ.ಮೀ. ಉದ್ದದ ತುರ್ತು ರನ್‌ವೇ (ಏರ್‌ಸ್ಟ್ರಿಪ್) ನಿರ್ಮಿಸಲಾಗಿದೆ. ಇದನ್ನು ಈಗಾಗಲೇ ಭಾರತೀಯ ವಾಯುಪಡೆ ಪರೀಕ್ಷಿಸಿದ್ದು, ತುರ್ತು ಸಂದರ್ಭಗಳಲ್ಲಿ ಯುದ್ಧ ವಿಮಾನಗಳ ಕಾರ್ಯಾಚರಣೆಗೆ ಇದು ಸಹಕಾರಿಯಾಗಲಿದೆ.

ಭವಿಷ್ಯದ ವಿಸ್ತರಣೆ, ಪ್ರಯಾಣಿಕರ ಸೌಲಭ್ಯ

ಪ್ರಸ್ತುತ ಇದು ಆರು ಪಥಗಳ ರಸ್ತೆಯಾಗಿದ್ದರೂ, ಭವಿಷ್ಯದಲ್ಲಿ ಎಂಟು ಪಥಗಳಿಗೆ ವಿಸ್ತರಿಸುವಂತೆ ವಿನ್ಯಾಸಗೊಳಿಸಲಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಇಂಧನ ಕೇಂದ್ರಗಳು, ಫುಡ್ ಕೋರ್ಟ್‌ಗಳು ಮತ್ತು ವಿಶ್ರಾಂತಿ ಕೊಠಡಿಗಳನ್ನು ಒಳಗೊಂಡ ಒಂಬತ್ತು ಸಾರ್ವಜನಿಕ ಸೇವಾ ಸಂಕೀರ್ಣಗಳನ್ನು ನಿರ್ಮಿಸಲಾಗಿದೆ. ಅಲ್ಲದೆ, ಈ ಎಕ್ಸ್ ಪ್ರೆಸ್‌ವೇಯನ್ನು ಹರಿದ್ವಾರದವರೆಗೆ ಇನ್ನೂ 146 ಕಿ.ಮೀ. ವಿಸ್ತರಿಸುವ ಯೋಜನೆಯೂ ಜಾರಿಯಲ್ಲಿದೆ.



ಆರ್ಥಿಕ ಪ್ರಭಾವ ಮತ್ತು ಟೋಲ್

ಅದಾನಿ ಎಂಟರ್‌ಪ್ರೈಸಸ್ ಮತ್ತು ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ಸಹಯೋಗದೊಂದಿಗೆ ಪಿಪಿಪಿ ಮಾದರಿಯಲ್ಲಿ ಈ ಯೋಜನೆ ಕಾರ್ಯನಿರ್ವಹಿಸುತ್ತಿದೆ. ಟೋಲ್ ದರಗಳನ್ನು ಇನ್ನೂ ಅಂತಿಮಗೊಳಿಸಲಾಗುತ್ತಿದೆಯಾದರೂ, ರಾಜ್ಯದ ಇತರ ಎಕ್ಸ್ ಪ್ರೆಸ್‌ವೇಗಳಂತೆ ಪ್ರತಿ ಕಿಲೋಮೀಟರ್‌ಗೆ ರೂ.2ರಿಂದ ರೂ.3 ಇರಬಹುದು ಎಂದು ಅಂದಾಜಿಸಲಾಗಿದೆ. ಈ ಎಕ್ಸ್ ಪ್ರೆಸ್‌ವೇಯು 594 ಕಿ.ಮೀ. ಉದ್ದ, ಸರಕು ಸಾಗಣೆಗೆ ಅತ್ಯಂತ ಸೂಕ್ತ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದು ಸರಕುಗಳನ್ನು ರಸ್ತೆಯ ಮೂಲಕ ಸಾಗಿಸಲು ತುಂಬಾ ಅನುಕೂಲಕರ. ಈ ಯೋಜನೆಯಿಂದ ಉದ್ಯೋಗಾವಕಾಶಗಳು ಹೆಚ್ಚಲಿವೆ, ಸಾಗಣೆ ವೆಚ್ಚ ಕಡಿಮೆಯಾಗಲಿದೆ ಮತ್ತು ಉತ್ತರ ಪ್ರದೇಶದ ಕೈಗಾರಿಕಾ ಕ್ಷೇತ್ರವು ಮತ್ತಷ್ಟು ಬಲಗೊಳ್ಳಲಿದೆ ಎಂದು ರಾಜ್ಯ ಸರ್ಕಾರ ನಿರೀಕ್ಷಿಸಿದೆ. ಮುಂಬರುವ ವರ್ಷಗಳಲ್ಲಿ ಇದು ರಾಜ್ಯದ ಆರ್ಥಿಕತೆಯ ಮೇಲೆ ದೊಡ್ಡ ಮಟ್ಟದ ಧನಾತ್ಮಕ ಪರಿಣಾಮ ಬೀರಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಗಂಗಾ ಎಕ್ಸ್ ಪ್ರೆಸ್‌ವೇಯನ್ನು ಒಂದು ಪರಿವರ್ತಕ ಮೂಲಸೌಕರ್ಯ ಯೋಜನೆ ಎಂದೇ ನೋಡಲಾಗುತ್ತಿದೆ. ಇದು ಪಶ್ಚಿಮ, ಮಧ್ಯ ಮತ್ತು ಪೂರ್ವ ಭಾಗಗಳನ್ನು ಒಂದೇ ಹೈ-ಸ್ಪೀಡ್ ಕಾರಿಡಾರ್ ಮೂಲಕ ಜೋಡಿಸುವ ಮೂಲಕ ಉತ್ತರ ಪ್ರದೇಶದ ಆರ್ಥಿಕ ಭೂಪಟವನ್ನೇ ಬದಲಿಸುವ ನಿರೀಕ್ಷೆಯಿದೆ.

ತೆಲಂಗಾಣದಲ್ಲಿ ₹8,000 ಕೋಟಿ ಯೋಜನೆಗಳಿಗೆ ಶೀಘ್ರ ಚಾಲನೆ

- ಮೇ 10ಕ್ಕೆ ಮೋದಿ ತೆಲಂಗಾಣ ಭೇಟಿ

ಸಿಕಂದರಾಬಾದ್: ಪ್ರಧಾನಮಂತ್ರಿ ನರೇಂದ್ರ ಮೋದಿ, ಮೇ 10 ರಂದು ತೆಲಂಗಾಣಕ್ಕೆ ಭೇಟಿ ನೀಡಲಿದ್ದು, 8,000 ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ.



ಇದು ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ರಾಜ್ಯಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಲಿದೆ.

ಮೂಲಸೌಕರ್ಯ ಮತ್ತು ಸಾರ್ವಜನಿಕ ಸಂಪರ್ಕ: ಅಧಿಕೃತ ವೇಳಾಪಟ್ಟಿಯ ಪ್ರಕಾರ, ಪ್ರಧಾನಿ ಬೀಬಿನಗರದ ಏಮ್ಸ್ ನೂತನ ಸೌಲಭ್ಯಗಳು, ಎಂಎಂಟಿಎಸ್ ಹಂತ 2 ರ ವಿಸ್ತರಣೆ, ಹಾಗೂ ವಿವಿಧ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.

ಬೇಗಂಪೇಟೆ ವಿಮಾನ ನಿಲ್ದಾಣದಲ್ಲಿ ಅಧಿಕೃತ ಕಾರ್ಯಕ್ರಮಗಳ ನಂತರ, ಸಿಕಂದರಾಬಾದ್‌ನ ಪರೇಡ್ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಸುಮಾರು ಎರಡು ಲಕ್ಷ ಜನರನ್ನು ಸೇರಿಸುವ ಗುರಿಯನ್ನು ಹೊಂದಲಾಗಿದೆ.

ರಾಜಕೀಯ ಹಿನ್ನೆಲೆ

ತೆಲಂಗಾಣದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಹಿನ್ನೆಲೆಯಲ್ಲಿ ಈ ಭೇಟಿ ರಾಜಕೀಯವಾಗಿ ಮಹತ್ವ ಪಡೆದಿದೆ. ಈ ಹಿಂದೆ ಜಿಎಚ್‌ಎಂಸಿ ಚುನಾವಣೆಯಲ್ಲಿ ಬಿಜೆಪಿ 48 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನರಿಗೆ ತಲುಪಿಸುವುದು ಮತ್ತು ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಹಾಗೂ ಹಿಂದಿನ ಬಿಆರ್‌ಎಸ್ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವುದು ಈ ಭೇಟಿಯ ಪ್ರಮುಖ ಉದ್ದೇಶ ಎಂದು ಹೇಳಲಾಗುತ್ತಿದೆ.

ಕಿರುಸುದ್ದಿ

ಅಮೆರಿಕನ್ನರಿಗೆ ಅರ್ಹ ಜಾಗ ಸಮುದ್ರದಾಳ: ಮೊಜ್ತಬಾ

ದುಬೈ: ಅಮೆರಿಕನ್ನರಿಗೆ ಮಧ್ಯಪ್ರಾಚ್ಯದಲ್ಲಿ ಯಾವುದೇ ಜಾಗವಿಲ್ಲ, ಹಾಗೊಂದು ವೇಳೆ ಮಧ್ಯಪ್ರಾಚ್ಯದಲ್ಲಿ ಅಮೆರಿಕನ್ನರಿಗೆ ಅರ್ಹವಾದ ಜಾಗವೆಂದರೆ ಅದು ನಮ್ಮ ಸಮುದ್ರದಾಳ. ಯಾವುದೇ ಕಾರಣಕ್ಕೂ ನಮ್ಮ ಅಣ್ವಸ್ತ್ರ ಮತ್ತು ಕ್ಷಿಪಣಿ ಸಾಮರ್ಥ್ಯ ಬಿಟ್ಟುಕೊಡುವುದಿಲ್ಲ. ಇರಾನ್ ತನ್ನ ಅಣ್ವಸ್ತ್ರ ಮತ್ತು ಕ್ಷಿಪಣಿ ಸಾಮರ್ಥ್ಯವನ್ನು ರಾಷ್ಟ್ರೀಯ ಆಸ್ತಿಯನ್ನಾಗಿ ಸಂರಕ್ಷಿಸಿಕೊಳ್ಳಲಿದೆ ಎಂದು ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಗುರುವಾರ ಘೋಷಿಸಿದ್ದಾರೆ. ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಅಮೆರಿಕನ್ನರಿಗೆ ಸ್ಥಾನವಿಲ್ಲ ಮತ್ತು ಹರ್ಮುಜ್ ಜಲಸಂಧಿ ಇರಾನ್‌ನ ಸಂಪೂರ್ಣ ನಿಯಂತ್ರಣದಲ್ಲಿದೆ ಎಂದು ಖಮೇನಿ ಹೇಳಿದ್ದಾರೆ.



ಜರ್ಮನಿ ಸರಿ ಮಾಡಿಕೊಳ್ಳಿ ಮರ್ಝ್‌ಗೆ ಟ್ರಂಪ್ ಮತ್ತೆ ತಿವಿತ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಜರ್ಮನ ಚಾನ್ಸಲರ್ ಫ್ರೆಡ್ರಿಕ್ ಮರ್ಝ್ ವಿರುದ್ಧ ಮತ್ತೆ ತೀವ್ರ ಟೀಕೆ ವ್ಯಕ್ತಪಡಿಸಿದ್ದಾರೆ. 'ತಮ್ಮ ದೇಶದ ಸಮಸ್ಯೆಗಳನ್ನು ಸಂಪಡಿಸಿಕೊಳ್ಳುವುದರಲ್ಲಿ ಹೆಚ್ಚು ಸಮಯ ಕಳೆಯಲಿ' ಎಂದು ಟ್ರಂಪ್ ತಿವಿದಿದ್ದಾರೆ. ಇರಾನ್ ಸಂಬಂಧಿತ ಯುದ್ಧದ ವಿಚಾರದಲ್ಲಿ ಮರ್ಝ್ ನೀಡುತ್ತಿರುವ ಪ್ರತಿಕ್ರಿಯೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಟ್ರಂಪ್, ಜರ್ಮನಿಯ ವಲಸೆ ಹಾಗೂ ಇಂಧನ ನೀತಿಗಳಲ್ಲಿ ಗಂಭೀರ ಸಮಸ್ಯೆಗಳಿವೆ ಎಂದು ಆರೋಪಿಸಿದರು.

ಟಿವಿಕೆಯೊಂದಿಗೆ ಮೈತ್ರಿಗೆ ಎಐಎಡಿಎಂಕೆ ಚಿಂತನೆ

ಚೆನ್ನೈ: ತಮಿಳುನಾಡು ಚುನಾವಣೆಯಲ್ಲಿ ಮತದಾನೋತ್ತರ ಫಲಿತಾಂಶಗಳಲ್ಲಿ ಟಿವಿಕೆ ಪಕ್ಷಕ್ಕೆ ಉತ್ತಮ ಆರಂಭವನ್ನು ಸೂಚಿಸಿದ ಹಿನ್ನೆಲೆಯಲ್ಲಿ ಎಐಎಡಿಎಂಕೆ ಪಕ್ಷವು ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಜೊತೆ ಮೈತ್ರಿ ಮಾತುಕತೆಗಳನ್ನು ಆರಂಭಿಸಲು ಚಿಂತನೆ ನಡೆಸುತ್ತಿದೆ. ಮತದಾನೋತ್ತರ ಸಮೀಕ್ಷೆಗಳ ಪ್ರಕಾರ, ಟಿವಿಕೆ ತಮಿಳುನಾಡಿನಲ್ಲಿ ರಾಜಕೀಯ ಅಲೆಯನ್ನು ಸೃಷ್ಟಿಸಿದೆ ಎಂದು ಸೂಚಿಸಲಾಗಿದೆ. ಮುಖ್ಯಮಂತ್ರಿ ಅಭ್ಯರ್ಥಿಗಳ ಪಟ್ಟಿಯಲ್ಲಿ ವಿಜಯ್ ಅತ್ಯಂತ ಜನಪ್ರಿಯರಾಗಿದ್ದಾರೆ. ಆಕ್ಸಿಸ್ ಮೈ ಇಂಡಿಯಾ ಪ್ರಕಾರ, ವಿಜಯ್ ಪಕ್ಷಕ್ಕೆ 98ರಿಂದ 120 ಸ್ಥಾನಗಳು ದೊರೆಯಬಹುದು. ಡಿಎಂಕೆ-ಐಎನ್‌ಸಿ ಮೈತ್ರಿಗೆ 92ರಿಂದ 110 ಸ್ಥಾನಗಳು, ಎನ್‌ಡಿಎಗೆ 22ರಿಂದ 32 ಸ್ಥಾನಗಳು ಲಭಿಸುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಶೀಘ್ರ ಮೋದಿ 4 ರಾಷ್ಟ್ರಗಳ ಪ್ರವಾಸ


ಹೊಸದಿಲ್ಲಿ: ಪ್ರಧಾನ ನರೇಂದ್ರ ಮೋದಿ ಅವರು ಮೇನಲ್ಲಿಯೋರೋಪಿನ ನಾಲ್ಕು ರಾಷ್ಟ್ರಗಳ ಪ್ರವಾಸ ಕೈಗೊಳ್ಳಲಿದ್ದು, ಇಂಧನ ಭದ್ರತೆ, ಪಶ್ಚಿಮ ಏಷ್ಯಾ ಸಂಕಷ್ಟದಿಂದ ಉಂಟಾಗಿರುವ ವಾಣಿಜ್ಯ ವ್ಯತ್ಯಯಗಳ ನಿಯಂತ್ರಣ ಹಾಗೂ ಪ್ರಮುಖ ತಂತ್ರಜ್ಞಾನಗಳಲ್ಲಿ ಸಹಕಾರ ವೃದ್ಧಿ ಪ್ರಮುಖ ಅಜೆಂಡಾಗಳಾಗಿವೆ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

ಮೇ15ರಿಂದ20ರವರೆಗೆನಡೆಯಲಿರುವ ಈ ಪ್ರವಾಸದಲ್ಲಿ ಮೋದಿ ಅವರು ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿ ದೇಶಗಳಿಗೆ ಭೇಟಿ ನೀಡಲಿದ್ದಾರೆ. ಪ್ರವಾಸದ ಆರಂಭ ಅಥವಾ ಅಂತ್ಯದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಸ್ವಲ್ಪ ಸಮಯ ತಂಗುವ ಸಾಧ್ಯತೆಯೂ ಇದೆ ಎಂದು ತಿಳಿದುಬಂದಿದೆ. ಆದರೆ ಈ ಕುರಿತು ಅಧಿಕೃತ ಘೋಷಣೆ ಇನ್ನಷ್ಟೇ ಹೊರಬೀಳಬೇಕಾಗಿದೆ.

ಪಹಲ್ಗಾಮ್ ಉಗ್ರ ದಾಳಿ ಹಿನ್ನೆಲೆಯಲ್ಲಿ ಕಳೆದ ವರ್ಷ ಮುಂದೂಡಲ್ಪಟ್ಟ ಈ ಶೃಂಗಸಭೆಯಲ್ಲಿ ನವೀನತೆ, ಹಸಿರು ಬೆಳವಣಿಗೆ, ಹವಾಮಾನ ಸ್ನೇಹಿ ಪರಿಹಾರಗಳು ಹಾಗೂ ಪರಸ್ಪರ ಪ್ರಯೋಜನಕಾರಿ ವಾಣಿಜ್ಯ, ಹೂಡಿಕೆ ಮೇಲೆ ಚರ್ಚೆ ನಡೆಯಲಿದೆ. ಇದೇ ವೇಳೆ ಡೆನ್ಮಾರ್ಕ್, ಫಿನ್ಲ್ಯಾಂಡ್, ಐಸ್ಲ್ಯಾಂಡ್, ನಾರ್ವೆ, ಸ್ವೀಡನ್ ದೇಶಗಳ ನಾಯಕರೊಂದಿಗೆ ಪ್ರಧಾನಿಗಳು ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸುವ ಸಾಧ್ಯತೆಇದೆ. ಭಾರತ ಮತ್ತು ಐರೋಪ್ಯ ಒಕ್ಕೂಟ ಜನವರಿಯಲ್ಲಿ ಮಹತ್ವಾಕಾಂಕ್ಷಿ ಮುಕ್ತ ವಾಣಿಜ್ಯ ಒಪ್ಪಂದವನ್ನು ಅಂತಿಮಗೊಳಿಸಿದ ಬಳಿಕ ನಡೆಯುತ್ತಿರುವ ಇದು ಮೊದಲ ಯುರೋಪ್ ಪ್ರವಾಸವಾಗಿದ್ದು, ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ಗತಿ ಸಿಗುವ ನಿರೀಕ್ಷೆಯಿದೆ.

ಇರಾನ್ ಕದನದಿಂದ ಪಾಕ್‌ಗೆ ಆರ್ಥಿಕ ಪೆಟ್ಟು

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಸಾಧಿಸಿದ ಆರ್ಥಿಕ ಪ್ರಗತಿಗೆ ಭಾರಿ ಹಿನ್ನಡೆ ಉಂಟುಮಾಡಿದೆ, ಎಂದು ಪ್ರಧಾನಿ ಶೆಹಬಾಜ್ ಷರೀಫ್ ಬುಧವಾರ ತಿಳಿಸಿದ್ದಾರೆ.



ಸಂಪುಟ ಸಭೆಯಲ್ಲಿ ಮಾತನಾಡಿದ ಷರೀಫ್, ಯುದ್ಧದ ಹಿನ್ನೆಲೆಯಲ್ಲಿ ಪಾಕ್‌ನ ತೈಲ ಆಮದು ವೆಚ್ಚ 300 ಮಿಲಿಯನ್ ಡಾಲರ್‌ನಿಂದ 800 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಒತ್ತಡ ಹೇರಿದೆ. ಪ್ರಸ್ತುತ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಪ್ರತಿದಿನ ಕಾರ್ಯಪಡೆಯೊಂದು ಪರಿಶೀಲನೆ ನಡೆಸುತ್ತಿದೆ ಎಂದು ಅವರು ಖಚಿತಪಡಿಸಿದ್ದಾರೆ.

ರಾಜತಾಂತ್ರಿಕ ಸಂಧಾನ ಪ್ರಯತ್ನ: ಪ್ರಾದೇಶಿಕ ಸ್ಥಿರತೆಯನ್ನು ಉತ್ತೇಜಿಸಲು ಇಸ್ಲಾಮಾಬಾದ್ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಪಾಕ್ ಪ್ರಧಾನಿ ತಿಳಿಸಿದರು. ಏ.11ರಂದು ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಇರಾನ್ ಮತ್ತು ಅಮೆರಿಕ ನಡುವಿನ 21 ಗಂಟೆಗಳ ಸುದೀರ್ಘ ಸಂಧಾನ ಸಭೆ ಮಹತ್ವದ ರಾಜತಾಂತ್ರಿಕ ಯಶಸ್ಸನ್ನು ತಂದಿದೆ ಎಂದು ಬಣ್ಣಿಸಿದ್ದಾರೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಕಳೆದ ವಾರಾಂತ್ಯದಲ್ಲಿ ಪಾಕ್ ಭೇಟಿ ನೀಡಿ ಷರೀಫ್ ಮತ್ತು ಮುನೀರ್ ಜತೆ ಮಾತುಕತೆ ನಡೆಸಿದ್ದರು. ಮಧ್ಯಪ್ರಾಚ್ಯ ಯುದ್ಧ ಆರಂಭಕ್ಕೂ ಮೊದಲೇ ಆರ್ಥಿಕ ಸಮಸ್ಯೆಯಿಂದ ಬಳಲುತ್ತಿದ್ದ ಪಾಕಿಸ್ತಾನಕ್ಕೆ ಮತ್ತಷ್ಟು ಪೆಟ್ಟು ಬಿದ್ದಂತಾಗಿದ್ದು, ಸಂಧಾನ ಸಭೆಗೂ ಹಣವಿಲ್ಲದೆ ಪೇಚಿಗೆ ಸಿಲುಕಿತ್ತು.

ರೇಡಿಯೋಆ್ಯಕ್ಟಿವ್ ವಸ್ತು ಇಟ್ಟಿದ್ದಾಗಿ ಹುಸಿ ಬೆದರಿಕೆ

ನಾಗಪುರ: ಆರ್‌ಎಸ್‌ಎಸ್ ಮುಖ್ಯ ಕಚೇರಿ ಸೇರಿ ವಿವಿಧ ಸ್ಥಳಗಳಲ್ಲಿ ರೇಡಿಯೋಆ್ಯಕ್ಟಿವ್ ವಸ್ತುಗಳನ್ನು ಇಡಲಾಗಿದೆ ಎಂಬ ಅನಾಮಧೇಯ ಪತ್ರದ ಬೆದರಿಕೆಯಿಂದಾಗಿ ಭಾರೀ ಭದ್ರತಾ ಎಚ್ಚರಿಕೆ ಘೋಷಿಸಲಾಗಿದೆ.

- ಆರ್‌ಎಸ್‌ಎಸ್ ಕೇಂದ್ರ ಕಚೇರಿ ಸೇರಿ ಪ್ರಮುಖ ಸ್ಥಳಗಳಿಗೆ ಬೆದರಿಕೆ ಪತ್ರ

ಪೊಲೀಸ್ ಆಯುಕ್ತ ಡಾ. ರವೀಂದರ್ ಸಿಂಗಲ್ ಅವರ ಕಚೇರಿಗೆ ಏ.27ರಂದು ಈ ಪತ್ರ ಬಂದಿದ್ದು, ತಕ್ಷಣವೇ ನಗರಾದ್ಯಂತ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪತ್ರದಲ್ಲಿ ಉಲ್ಲೇಖಿಸಿದ ಸ್ಥಳಗಳಲ್ಲಿ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಲಾಗಿದ್ದು ಇದುವರೆಗೆ ಯಾವುದೇ ರೇಡಿಯೋಆ್ಯಕ್ಟಿವ್ ವಸ್ತುಗಳ ಸುಳಿವು ಸಿಕ್ಕಿಲ್ಲ.

ಪೊಲೀಸರು ಈ ಪತ್ರವನ್ನು ಹುಸಿ ಬೆದರಿಕೆ ಆಗಿರಬಹುದೆಂದು ಅನುಮಾನಿಸುತ್ತಿದ್ದರೂ, ಅತ್ಯಂತ ಗಂಭೀರವಾಗಿ ತನಿಖೆ ಮುಂದುವರಿಸಿದ್ದಾರೆ. ಡಿಸಿಪಿ ಎಸ್ ಎಂಬ ಸಂಕ್ಷಿಪ್ತ ಹೆಸರಿನಲ್ಲಿ ಇಂಗ್ಲಿಷ್‌ನಲ್ಲಿ ಈ ಪತ್ರ ಬರೆಯಲಾಗಿದ್ದು ಅವಮಾನಕಾರಿ ಸಂಗತಿಗಳೂ ಸೇರಿವೆ ಎಂದು ಮೂಲಗಳು ತಿಳಿಸಿವೆ. ಪತ್ರದಲ್ಲಿ ಅತ್ಯಂತ ಅಪಾಯಕಾರಿ ರೇಡಿಯೋಆ್ಯಕ್ಟಿವ್ ವಸ್ತುವಾದ ಸೀಸಿಯಂ-137 ಅನ್ನು ನಗರದಲ್ಲಿ ಹಲವೆಡೆ ಇಡಲಾಗಿದೆ ಎಂದು ಹೇಳಲಾಗಿದೆ. ವಿಶೇಷವಾಗಿ ಆರ್‌ಎಸ್‌ಎಸ್ ಕೇಂದ್ರ, ಸ್ಮೃತಿ ಮಂದಿರ (ಡಾ. ಕೆ.ಬಿ. ಹೆಡ್ಗೇವಾರ್ ಹಾಗೂ ಎಂ.ಎಸ್. ಗೋಳ್ವಾಲ್ಕರ್ ಸ್ಮಾರಕ), ಗಣೇಶ ಪೇಠ್‌ನ ಬಿಜೆಪಿ ಕಚೇರಿ ಮುಂತಾದ ಸ್ಥಳಗಳನ್ನು ಉಲ್ಲೇಖಿಸಲಾಗಿದೆ. ಇದಲ್ಲದೆ, ಮೆಟ್ರೋನ ಆರೆಂಜ್ ಮತ್ತು ಆಕ್ವಾ ಲೈನ್‌ಗಳಲ್ಲಿನ ರೈಲುಗಳ ಸೀಟುಗಳ ಕೆಳಭಾಗದಲ್ಲಿ ಹಾಗೂ ಗಣೇಶ ಪೇಠ್ ಬಸ್ ಸ್ಟ್ಯಾಂಡ್‌ನಲ್ಲಿಯೂ ಈ ವಸ್ತುಗಳನ್ನು ಇರಿಸಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಕ್ಷಮೆಯಾಚಿಸಿದ ನೇಪಾಳ ಏರ್‌ಲೈನ್ಸ್

ಹೊಸದಿಲ್ಲಿ: ನೇಪಾಳದ ರಾಷ್ಟ್ರೀಯ ವಿಮಾನ ಸಂಸ್ಥೆ ನೇಪಾಳ ಏರ್‌ಲೈನ್ಸ್, ಜಮ್ಮು ಮತ್ತು ಕಾಶ್ಮೀರವನ್ನು ಪಾಕ್‌ನ ಭಾಗವೆಂದು ತೋರಿಸಿ, ಆಕ್ರೋಶ ವ್ಯಕ್ತವಾದ ಬಳಿಕ ಅದನ್ನು ಅಳಿಸಿ ಕ್ಷಮೆಯಾಚಿಸಿದೆ. ಕ್ಯಾಲೆಂಡರ್‌ನಲ್ಲಿ ಗುರುವಾರ ಈ ಕುರಿತು ಪ್ರತಿಕ್ರಿಯೆ ನೀಡಿದ ಸಂಸ್ಥೆ, ತನ್ನ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿದ ನಕ್ಷೆಯಲ್ಲಿ ದೋಷಗಳಿದ್ದವು ಎಂಬುದನ್ನು ಒಪ್ಪಿಕೊಂಡಿದ್ದು, ಇದು ನೇಪಾಳ ಸರ್ಕಾರದ ಅಧಿಕೃತವಲ್ಲ ಎಂದು ಸ್ಪಷ್ಟಪಡಿಸಿದೆ. ಈ ವಿವಾದಿತ ಪೋಸ್ಟ್ ಅನ್ನು ಬುಧವಾರವೇ ಅಳಿಸಲಾಗಿದೆ. ವಿಷಯ ಗಂಭೀರವಾಗುತ್ತಿದ್ದಂತೆ ಸಂಸ್ಥೆ ತಕ್ಷಣ ಕ್ರಮ ಕೈಗೊಂಡಿದ್ದು, ತಪ್ಪು ಆಗಿದ್ದು ಹೇಗೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಆಂತರಿಕ ಪರಿಶೀಲನೆ ಪ್ರಾರಂಭಿಸಿರುವುದಾಗಿ ತಿಳಿಸಿದೆ. 'ನಮ್ಮ ನೆರೆ ರಾಷ್ಟ್ರಗಳು ಮತ್ತು ಸ್ನೇಹಿತ ದೇಶಗಳೊಂದಿಗೆ ಇರುವ ಬಲವಾದ ಸಂಬಂಧಗಳಿಗೆ ನಾವು ಮಹತ್ವ ನೀಡುತ್ತೇವೆ. ಈ ಪೋಸ್ಟ್‌ನಿಂದ ಯಾರಿಗಾದರೂ ಅನನುಕೂಲ ಉಂಟಾಗಿದ್ದರೆ ವಿಷಾದಿಸುತ್ತೇವೆ' ಎಂದು ಸಂಸ್ಥೆ ತನ್ನ ಪ್ರತಿಕ್ರಿಯೆಯಲ್ಲಿ ಹೇಳಿದೆ.

ಆಪರೇಷನ್ ಸಿಂದೂರ ವಾರ್ಷಿಕೋತ್ಸವದ ಹಿನ್ನೆಲೆ

ದೇಸಿ ರಕ್ಷಣಾ ತಂತ್ರಜ್ಞಾನಕ್ಕೆ ಉತ್ತೇಜನ

ಹೊಸದಿಲ್ಲಿ: ಸಿಂದೂರ ಕಾರ್ಯಾಚರಣೆಯ ಮೊದಲ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲು, ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ (ಆತ್ಮನಿರ್ಭರತೆ) ಉತ್ತೇಜನ ನೀಡಲು ಹೆಚ್ಚಿನ ದೇಸಿ ರಕ್ಷಣಾ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಅಭಿವೃದ್ಧಿಪಡಿಸಲು ರಕ್ಷಣಾ ಸಂಸ್ಥೆಗಳು ಗಮನಹರಿಸಿವೆ.

ಸರ್ಕಾರ ರೂಪಿಸುತ್ತಿರುವ ಸ್ವಾವಲಂಬಿ ಪರಿಸರ ವ್ಯವಸ್ಥೆ ಹೆಚ್ಚು ಬಲಗೊಳ್ಳುತ್ತಿದ್ದು, ಖಾಸಗಿ ರಕ್ಷಣಾ ಕಂಪನಿಗಳು ಈ ದೃಷ್ಟಿಕೋನಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವ ಗುರಿ ಹೊಂದಿವೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ದತ್ತಾಂಶಗಳು ಭಾರತದ ನಿಯಂತ್ರಣದಲ್ಲೇ ಇರುವಂತೆ ನೋಡಿಕೊಳ್ಳಲು ಸಂವಹನ ಸೇರಿದಂತೆ ವಿವಿಧ ಸ್ಥಳೀಯ ತಂತ್ರಜ್ಞಾನಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ.

ಉದ್ಯಮದ ಪ್ರಗತಿ ಮತ್ತು ಭವಿಷ್ಯದ ಗುರಿ: ಸಿಎಸ್‌ಟಿ ಸ್ಟೆಬರ್, ಡಿಫೆನ್ಸ್ ಕಂಪನಿಯ ಸಿಇಒ ಲಕ್ಷ್ಯ ಕಲ್ಲಾರ್, ಭಾರತ ಕೇವಲ ಒಂದು ವರ್ಷದಲ್ಲಿ ಸಿಮುಕಂಡಕ್ಟರ್‌ಗಳು, ಸೈಬರ್ ಭದ್ರತೆ ಮತ್ತು ರಕ್ಷಣಾ ಸಾಧನೆಗಳಲ್ಲಿ ಗಣನೀಯ ಬೆಳವಣಿಗೆಗಳನ್ನು ಮೀರುವ ಪ್ರಗತಿ ಸಾಧಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಭವಿಷ್ಯದಲ್ಲಿ ಸಂಪೂರ್ಣ ಸ್ವದೇಶಿ ವಿಡಿಯೋ ಮ್ಯಾನೇಜ್‌ಮೆಂಟ್ ಪ್ಲಾಟ್‌ಫಾರ್ಮ್‌ಗಳು, ಕೃತಕ ಬುದ್ಧಿಮತ್ತೆ ಆಧಾರಿತ ರೊಬೊಟಿಕ್ಸ್ ಅಭಿವೃದ್ಧಿಪಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕಾರ್ಯತಂತ್ರದ ಪ್ರಾಮುಖ್ಯತೆ: ಫೈಬರ್‌ಯಿಲ್ಲದ ಐಜಿ ಡ್ರೋನ್ಸ್ ಕಂಪನಿ, ಕಠಿಣ ಭೂಪ್ರದೇಶಗಳಲ್ಲಿ ಕಣ್ಗಾವಲು ನಡೆಸಲು ಹೈ-ಆಲ್ಟಿಟ್ಯೂಡ್ ಡ್ರೋನ್‌ಗಳನ್ನು ಪೂರೈಸುವ ರಕ್ಷಣಾ ಸಚಿವಾಲಯದ ಆದೇಶ ಪಡೆದುಕೊಂಡಿದೆ. ಜನವರಿ ತಿಂಗಳಲ್ಲಿ ಸೇನೆ, ನೌಕಾಪಡೆಯಿಂದ ಸ್ವದೇಶಿ ನಿರ್ಮಿತ ಡ್ರೋನ್ ವಿರೋಧಿ ವ್ಯವಸ್ಥೆಯಾದ ಐಜಿ ಟಿ-ಕುಲ್ ಪರ್ಲ್ಗಾಗಿ ಆದೇಶಗಳನ್ನು ಈ ಸಂಸ್ಥೆ ಪಡೆದಿದೆ. ವಿದೇಶಿ ಕಂಪನಿಗಳ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸಲು ಖಾಸಗಿ ಕಂಪನಿಗಳು ಮತ್ತು ನವೋದ್ಯಮ ಕಂಪನಿಗಳು ನಿಗದಿತ ಸಮಯದೊಳಗೆ ಆತ್ಯಾಧುನಿಕ ತಂತ್ರಜ್ಞಾನಗಳನ್ನು ಸೃಷ್ಟಿಸಿ ತಲುಪಿಸಬೇಕು ಎಂದು ಸರ್ಕಾರ ಪ್ರತಿಪಾದಿಸಿದೆ.


ಆಪರೇಷನ್ ಸಿಂದೂರಕ್ಕೆ ವಾರ್ಷಿಕೋತ್ಸವ ಹಿನ್ನೆಲೆ

2025ರ ಏ.22ರಂದು ನಡೆದ ಪಹಲ್ಗಾಮ್ ಭೀಕರ ಭಯೋತ್ಪಾದನಾ ದಾಳಿಗೆ ಪ್ರತ್ಯುತ್ತರವಾಗಿ ಭಾರತೀಯ ಸೇನೆ ಮೇ 2025ರಲ್ಲಿ ಆಪರೇಷನ್ ಸಿಂದೂರ ಪ್ರತಿದಾಳಿ ನಡೆಸಿತ್ತು. ಈ ಕಾರ್ಯಾಚರಣೆಯಲ್ಲಿ ಕ್ಷಿಪಣಿಗಳು ಮತ್ತು ವಾಯು ರಕ್ಷಣಾ ವ್ಯವಸ್ಥೆ ಸೇರಿದಂತೆ ಹಲವಾರು ಸ್ವದೇಶಿ ನಿರ್ಮಿತ ತಂತ್ರಜ್ಞಾನಗಳನ್ನು ಬಳಸಲಾಗಿತ್ತು. ದೇಶದಲ್ಲೇ ಉತ್ಪಾದನೆಯ ಬ್ರಹ್ಮೋಸ್ ಅತಿ ವೇಗದ ಕ್ಷಿಪಣಿಗಳನ್ನು ಬಳಸಲಾಗಿತ್ತು.

ಯುದ್ಧೋಪಕರಣಗಳ ಜಂಟಿ ಉತ್ಪಾದನೆ, ದ್ವಿಪಕ್ಷೀಯ ರಕ್ಷಣಾ ಸಂಬಂಧ ವೃದ್ಧಿ

ಭಾರತ-ಇಟಲಿ ರಕ್ಷಣಾ ಸಹಯೋಗಕ್ಕೆ ಸಹಿ

ಹೊಸದಿಲ್ಲಿ: ರಕ್ಷಣಾ ಕ್ಷೇತ್ರದಲ್ಲಿ ಮಿಲಿಟರಿ ಉಪಕರಣಗಳ ಜಂಟಿ ಉತ್ಪಾದನೆ ನಿಟ್ಟಿನಲ್ಲಿ ರಕ್ಷಣಾ ಕೈಗಾರಿಕಾ ಜಾಲ ಅಭಿವೃದ್ಧಿಪಡಿಸಲು ಭಾರತ-ಇಟಲಿ ಗುರುವಾರ ಮಹತ್ವದ ಮಿಲಿಟರಿ ಸಹಯೋಗ ಯೋಜನೆ (ಎಂಸಿಪಿ) 2026-27ಕ್ಕೆ ಸಹಿ ಹಾಕಿವೆ.



ದಿಲ್ಲಿಯಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಇಟಲಿ ರಕ್ಷಣಾ ಸಚಿವ ಗಿಡೊ ಕ್ರೊಸೆಟ್ಟೊ ಮಾತುಕತೆ ಸಂದರ್ಭ ದ್ವಿಪಕ್ಷೀಯ ರಕ್ಷಣಾ ಮತ್ತು ವ್ಯೂಹಾತ್ಮಕ ಬಾಂಧವ್ಯಗಳಿಗೆ ಮತ್ತಷ್ಟು ಶಕ್ತಿ ತುಂಬಲು ನಿರ್ಧರಿಸಲಾಯಿತು. ಉಭಯ ರಾಷ್ಟ್ರಗಳ ಸಶಸ್ತ್ರ ಪಡೆಗಳ ನಡುವಿನ ಮಿಲಿಟರಿ ಕಾರ್ಯಕ್ರಮಗಳಿಗೆ ಅವಕಾಶ ನೀಡುವ ದ್ವಿಪಕ್ಷೀಯ ಮಿಲಿಟರಿ ಸಹಕಾರ ಯೋಜನೆ 2026-27ನ್ನು ಇತ್ತಂಡಗಳು ಅನಾವರಣಗೊಳಿಸಿವೆ.

ರಕ್ಷಣಾ ಕೈಗಾರಿಕಾ ಸಹಕಾರಕ್ಕೆ ಆದ್ಯತೆ: ಪಶ್ಚಿಮ ಏಷ್ಯಾದಲ್ಲಿನ ಪ್ರಸಕ್ತ ಸನ್ನಿವೇಶ ಸಹಿತ ಪ್ರಾದೇಶಿಕ ಮತ್ತು ಜಾಗತಿಕವಾದ ಹಲವು ವಿಚಾರಗಳ ಕುರಿತು ಚರ್ಚಿಸಿದ್ದಾಗಿ ಸಚಿವ ಸಿಂಗ್ ಮಾತುಕತೆ ಬಳಿಕ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ. ಇಟಲಿಯ ರಕ್ಷಣಾ ಸಹಕಾರ ಉಪಕ್ರಮ ಮತ್ತು ಭಾರತದ ಆತ್ಮನಿರ್ಭರ ಭಾರತ್ ಕಾರ್ಯಕ್ರಮಗಳ ಆದ್ಯತೆ ಪರಸ್ಪರ ಪ್ರಯೋಜನಕಾರಿ ರಕ್ಷಣಾ ಕೈಗಾರಿಕಾ ಸಹಕಾರವನ್ನು ಮತ್ತಷ್ಟು ವಿಸ್ತರಿಸಿಕೊಳ್ಳುವ ಸಾಧ್ಯತೆಗಳ ಕುರಿತೂ ನಾವು ಚರ್ಚಿಸಿದ್ದೇವೆ ಎಂದು ಸಚಿವ ಸಿಂಗ್ ಹೇಳಿದ್ದಾರೆ.

ಶಾಂತಿ-ಸ್ಥಿರತೆ ಆಧಾರ: ಭಾರತ-ಇಟಲಿ ನಡುವಿನ ವ್ಯೂಹಾತ್ಮಕ ಪಾಲುದಾರಿಕೆಗೆ ಪರಸ್ಪರ ಹಂಚಿಕೊಂಡಿರುವ ಶಾಂತಿ, ಸ್ಥಿರತೆ, ಸ್ವಾತಂತ್ರ್ಯ ಮತ್ತು ಪರಸ್ಪರ ಗೌರವವೇ ಮೂಲಾಧಾರವೆಂದು ಸಚಿವ ಸಿಂಗ್ ಮತ್ತು ಕ್ರೊಸೆಟ್ಟೊ ಪ್ರತಿಪಾದಿಸಿದರು.

ಹುತಾತ್ಮ ಸೈನಿಕರಿಗೆ ಕ್ರೊಸೆಟ್ಟೊ ನಮನ

ಮಾತುಕತೆಗೆ ಮುನ್ನ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ ಇಟಲಿ ರಕ್ಷಣಾ ಸಚಿವ ಕ್ರೊಸೆಟ್ಟೊ, ರಾಷ್ಟ್ರ ಸೇವೆಗಾಗಿ ಪರಮೋಚ್ಚ ಬಲಿದಾನಗೈದ ಹುತಾತ್ಮ ಯೋಧರಿಗೆ ನಮನ ಸಲ್ಲಿಸಿದರು. ಭಾರತೀಯ ಸೇನೆಯಿಂದ ತ್ರಿವಳಿಸೇನೆಗಳ ಗೌರವ ರಕ್ಷೆಯನ್ನು ಸ್ವೀಕರಿಸಿದರು.

IN THE COURT OF THE PRINCIPAL SENIOR CIVIL JUDGE & ACJM PUTTUR D.K.

Crl. M.C No.99/2024

Between:

Kiran Kumar ...Petitioner

And

CMC ...Respondent

PUBLIC NOTICE

Whereas above Petitioner has filed petition under section 13(3) of the registration of births and deaths act in respect of death of **Kitta Gowda died on 15-04-1983** at home at Bedrala. Chikkamudnuru village of Puttur taluk D.K. If anyone has got any claim, right/title etc, can file their objection before the Hon'ble Prl.Senior Civil Judge and ACJM at Puttur D.K. on **11.06.2026** at **11:00 A.M.**, either in person or through a counsel to answer the same, failing which, the petition will be disposed off.

(By Order of the Court)

Sd/- Chief Ministerial Officer
Court of Senior Civil Judge and Addl. CJM, Puttur

Sd/- Rakesh J. Mascarenhas
Advocate for Petitioner

IN THE COURT OF THE PRINCIPAL SENIOR CIVIL JUDGE & ACJM PUTTUR, D.K.

Crl. M.C No. 84/2024

Between:

Mahalinga M. ...Petitioner

And

Tahashildar ...Respondent

PUBLIC NOTICE

Whereas above Petitioner has filed petition under section 13(3) of the registration of births and deaths act in respect of death of **KORAPOLU died on 01-01-1997** at home at Kolthige village of Puttur Taluk D.K If anyone has got any claim, right/title etc, can file their objection before the Hon'ble Prl.Senior Civil Judge and ACJM at Puttur D.K. on **11.06.2026** at **11:00 A.M.,** either in person or through a counsel to answer the same, failing which, the petition will be disposed off.

(By Order of the Court)

Sd/- Chief Ministerial Officer
Court of Senior Civil Judge and Addl. CJM, Puttur

Sd/- Rakesh J. Mascarenhas
Advocate for Petitioner

IN THE COURT OF THE ADDL. CIVIL JUDGE AND JMFC AT MADIKERI

Cr.M.C. NO. 267/2025

Petitioner:
MT Nanaiah

VS

Respondent:
Tahasildar & others

PAPER PUBLICATION

WHEREAS the petitioner has filed the above petition under Section 13(3) of Births and Deaths Act to cause an entry of the Death of mother of the petitioner viz. **M T Akkavva** Who died on **12.10.1982** at, Bethu Village and Post, Madikeri Taluk, Kodagu District. Who ever having any objection to the above petition may appear before the Hon'ble Addl. Civil Judge and JMFC at Madikeri Vide Cr.M.C.267/2025 on **17-06-2026 at 11 A.M.** either personally or through advocate failing which the case will be heard proceed with accordance with law.

Dated 28th day of April, 2026 at Madikeri, Kodagu District, Karnataka State.

(By Order of the Court)

Sd/- Chief Ministerial Officer
Civil Judge and J.M. F.C. Madikeri

Sd/- Daya Honnappa
Advocate
Madikeri.

IN THE COURT OF THE ADDL. CIVIL JUDGE AND JMFC AT MADIKERI

Cr.M.C. NO. 2652025

Petitioner:
MT Nanaiah

VS

Respondent :
Tahasildar & others

PAPER PUBLICATION

WHEREAS the petitioner has filed the above petition under Section 13(3) of Births and Deaths Act to cause an entry of the Death of Father of the petitioner viz. **M A Thimmaiah** Who died on **20.10.1987** at, Bethu Village and Post, Madikeri Taluk, Kodagu District. Who ever having any objection to the above petition may appear before the Hon'ble Addl. Civil Judge and JMFC at Madikeri Vide Cr.M.C.265/2025 on **17-06-2026** at **11 A.M.** either personally or through advocate failing which the case will be heard proceed with accordance with law.

Dated 28th day of April, 2026 at Madikeri, Kodagu District, Karnataka State.

(By Order of the Court)

Sd/- Chief Ministerial Officer
Civil Judge and J.M. F.C. Madikeri

Sd/- Daya Honnappa
Advocate
Madikeri.

ಮಾನ್ಯ ಪ್ರಧಾನ ಸೀನಿಯರ್ ಸಿವಿಲ್ ಜಡ್ಜ್ ಮತ್ತು ವ್ಯವಹಾರಿಕಾ ನ್ಯಾಯಾಲಯ ಪುತ್ತೂರು ದ.ಕ.

ಕ್ರಿಮಿನಲ್ ಮಿಸ್ ಕೇಸ್. ನಂಬ್ರ: 118/2025

ಇವರೊಳಗೆ,
ಮೊಹಮ್ಮದ್ ಬಿ ಮತ್ತು ಇತರರು
1. ಮೊಹಮ್ಮದ್ ಬಿ.
ಬಿನ್. ದಿ.ಪಿ. ಪುತ್ತು ಮೋನು
62 ವರ್ಷ ಪ್ರಾಯ
2. ಅಲಿಮಮ್ಮ
ಬಿನ್ ದಿ. ಪಿ. ಪುತ್ತು ಮೋನು
56 ವರ್ಷ ಪ್ರಾಯ
3. ಆದಂ ಬಿ.
ಬಿನ್ ದಿ. ಪಿ. ಪುತ್ತು ಮೋನು
69 ವರ್ಷ ಪ್ರಾಯ
4. ಆಯಿಷಾ
ಬಿನ್ ದಿ. ಪಿ. ಪುತ್ತು ಮೋನು
56 ವರ್ಷ ಪ್ರಾಯ
5. ಅಬೂಬುಕ್ಕರ್ ಬಡ್ಡಮೆ
ಬಿನ್ ದಿ. ಪಿ. ಪುತ್ತು ಮೋನು
54 ವರ್ಷ ಪ್ರಾಯ
(ವಾಸ: ಬಡ್ಡಮೆ ಮನೆ
ಕೊಯಿಲ ಗ್ರಾಮ ಕಡಬ ತಾಲೂಕು ದ.ಕ.)
...ಅರ್ಜಿದಾರರು

ಮತ್ತು

ಜನನ ಮತ್ತು ಮರಣ ನೋಂದಾವಣಾಧಿಕಾರಿ ತಹಶೀಲ್ದಾರರು ಕಡಬ ದ.ಕ.
...ಪ್ರತಿವಾದಿ

ಸಾರ್ವಜನಿಕ ನೋಟಿಸು

ಈ ಮೇಲಿನ ಪ್ರಕರಣದಲ್ಲಿ ಅರ್ಜಿದಾರರು ಅರ್ಜಿ ಸಲ್ಲಿಸಿ ಅರ್ಜಿದಾರರ ತಾಯಿಯಾದ **ಬೀಪಾತುಮ್ಮ** ಇವರು **ದಿನಾಂಕ: 17.09.2014ರಂದು** ಕೊಯಿಲ ಗ್ರಾಮ ಕಡಬ ತಾಲೂಕು ದ.ಕ. ಎಂಬಲ್ಲಿ ಮೃತಪಟ್ಟಿರುವುದಾಗಿಯೂ ಈ ಬಗ್ಗೆ ಅರ್ಜಿದಾರರು ಪುತ್ತೂರು ತಾಲೂಕು ತಹಶೀಲ್ದಾರರವರ ಮರಣ ನೋಂದಣಿ ವಹಿಯಲ್ಲಿ ದಾಖಲು ಮಾಡುವರೇ ಅರ್ಜಿ ಸಲ್ಲಿಸಿದ್ದು ಸದ್ರಿ ಅರ್ಜಿಯ ಬಗ್ಗೆ ಕಡಬ ತಹಶೀಲ್ದಾರರ ಕಛೇರಿಯಲ್ಲಿ ಮರಣ ದಾಖಲೆಯಲ್ಲಿ ಇಲ್ಲದೇ ಇರುವುದರಿಂದ ಅರ್ಜಿದಾರನಾದ ನಾನು ಅಲಭ್ಯ ಪ್ರಮಾಣ ಪತ್ರ ಪಡಕೊಂಡು ಮಾನ್ಯ ನ್ಯಾಯಾಲಯಕ್ಕೆ ಈ ಮೇಲಿನಂತೆ ಜನನ ಮರಣ ನೋಂದಣಿ ಮಾಯ್ದೆ (13(3) ರಂತೆ ಅರ್ಜಿ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಯಾರಾದ್ದಾದರೂ ಆಕ್ಷೇಪಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ: 08.06.2026ರಂದು** ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/– ಮುಖ್ಯ ಲಿಫಿಕಾಧಿಕಾರಿ
ಪ್ರಧಾನ ಸೀನಿಯರ್ ಸಿವಿಲ್ ನ್ಯಾಯಾಲಯ, ಪುತ್ತೂರು

ಸಹಿ/– ಮೋನಪ್ಪ ಎಂ.
ಅರ್ಜಿದಾರರ ಪರ ವಕೀಲರು

BEFORE THE PRINCIPAL COMMERCIAL COURT/IV ADD. DISTRICT AND SESSIONS JUDGE AT MANGALURU, D.K. DISTRICT

Com.O.S.No.42/2026

Between:

The State Bank of India ...Plaintiff

AND

M/s Hogwarts, The School of Fashion Men's Wear and another ...Defendants

To,

1. M/s Hogwarts,
The School of Fashion Men's Wear,
By its Proprietor Sri. Pavan Raj,
S/o Sri. Madhava Kotian
Aged 38 years,
S/at Shop No.F-02,
Door No.3-3-54 First Floor,
Sun City Building, Grand City,
Thokkottu, Ullal Taluk -575 020

2. Sri. Pavan Raj,
By Prop. Hogwarts The School of Fashion Men's Wear,
S/o Sri. Madhava Kotian,
Aged 38 years,
R/at Saraswathi Nilaya,
Near Kondana Dwara, Madooru,
Kotekar Post, Ullal Taluk,
Mangaluru 575 020.

Whereas the above-named plaintiff has filed a Civil suit before this Hon'ble Court for recovery of money borrowed by you from the plaintiff Bank. You are hereby summoned to appear in this Court in person or by a pleader duly instructed on the **9th day of June 2026 at 11 a.m.** in the forenoon, to answer the claim and you are directed to file on that day a written statement and produce documents to base your defence, failing wherein, the said claim in the above suit will be heard and determined ex-parte.

Given under my hand & seal of the Court this the 28th day of April 2026.

/ By order of the Court /

Sd/- Chief Ministerial Officer
IV Add. District and Sessions Judge, D.K.

Sd/- Smt. Surekha Naveen Rao
Advocate for the plaintiff

ಕರ್ನಾಟಕ ಸರಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಟೆಂಡರ್ ಪ್ರಕಟಣೆ ಸಂ: ಕಾಇಂ:ಪಂರಾಇಂವಿಉ: ಟೆಂಡರ್‌ಪ್ರಕಟಣೆ ನಂ.03/2026-27:ಎಇ-173/ದಿನಾಂಕ : 27/03/2026

ಟೆಂಡರ್ ಪ್ರಕಟಣೆ

(ಇ-ಪೋರ್ಟಲ್ ಪದ್ಧತಿಯಲ್ಲಿ e-portalನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ 2025-26 ಸಾಲಿನ ಮಹಿಳಾ ಸ್ನೇಹಿ ಗ್ರಾಮ ಪಂಚಾಯತ್ ಅನುದಾನದ ಯೋಜನೆಯಡಿಯಲ್ಲಿನ ಈ ಕೆಳಗಿನ ಕಾಮಗಾರಿಗಳಿಗೆ ಇ-ಪೋರ್ಟಲ್ ಪದ್ಧತಿಯಲ್ಲಿ (Standard Tender Documents for Procurement of Goods)ನ ನಿಬಂಧನೆಗೊಳಪಟ್ಟಂತೆ ನೋಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದ್ದು, ಇ-ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal WEB site https://www.kppp.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

ಕ್ರ. ಸಂ	ಕಾಮಗಾರಿಗಳ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಗುತ್ತಿಗೆದಾರರ ಅರ್ಹತೆ
1	ಬ್ರಹ್ಮಾವರ ತಾಲೂಕು ಹನೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಂಟೂರು SLRM ಕಟ್ಟಡದ ಬಳಿ ಸಂಜೀವಿನಿ ಮಹಿಳೆಯರಿಗೆ ಅಂಗಡಿ ಕೋಣೆ ಕಟ್ಟಡದ ಮಹಡಿಗೆ ಮೆಟ್ಟಿಲು, ವಿದ್ಯುತ್ ಸಂಪರ್ಕ ಮತ್ತು ನೀರಿನ ಸಂಪರ್ಕ ಮತ್ತು (10*12) ಮೂರು ಕೋಣೆ ನಿರ್ಮಾಣ.	10.00	25000.00	ಕ್ಲಾಸ್-4 ಮತ್ತು ಮೇಲ್ಪಟ್ಟು

1. ಟೆಂಡರ್‌ನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ:27.04.2026ರಿಂದ 11.05.2026ರ 4.00 (PM) ಗಂಟೆಯವರೆಗೆ.

2. ಟೆಂಡರ್‌ನ್ನು ತೆರೆಯುವ ದಿನಾಂಕ : 12-05-2026ರ 4.30 (PM) ಗಂಟೆಯ ನಂತರ.

ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ **https://www.kppp.karnataka.gov.in**ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಕಚೇರಿ, ಹುಬ್ಬಳ್ಳಿ

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025–26 ದಿನಾಂಕ: 30–04–2026

ಅಲ್ಪಾವಧಿ/ಇ-ಟೆಂಡರ್ ಅಧಿಸೂಚನೆ

ಉಲ್ಲೇಖ: ಜಾಹಿರಾತು ನಂ:– 1370 ದಿನಾಂಕ:– 17–03–2026,

ಹುಬ್ಬಳ್ಳಿ–ಧಾರವಾಡ ಮಹಾನಗರ ಸನ್ 2025–26 & 2026–27ನೇ ಸಾಲಿನ ವಾರ್ಡ ವಾರು ಅನುದಾನ & ಸನ್ 2025–26ನೇ ಸಾಲಿನ ಸ್ಮಾರ್ಟಸಿಟಿ ಅನುದಾನ ಹಾಗೂ ಸನ್ 2025–26ನೇ ಸಾಲಿನ 15ನೇ ಹಣಕಾಸು ಅಭಿವೃದ್ಧಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ ಕಥಅ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

1) ಇಂಡೆಂಟ್ ನಂ–55293 ರೂ.10.00ಲಕ್ಷ, **2)** ಇಂಡೆಂಟ್ ನಂ–57004 ರೂ.8.06ಲಕ್ಷ, **3)** ಇಂಡೆಂಟ್ ನಂ–57772 ರೂ.17.00ಲಕ್ಷ, **4)** ಇಂಡೆಂಟ್ ನಂ–57850 ರೂ.24.95ಲಕ್ಷ.

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

5) ಇಂಡೆಂಟ್ ನಂ–57015 ರೂ.32.00ಲಕ್ಷ, **6)** ಇಂಡೆಂಟ್ ನಂ–57852 ರೂ.18.90ಲಕ್ಷ,

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

7) ಇಂಡೆಂಟ್ ನಂ–57844 ರೂ. 42.32ಲಕ್ಷ,

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

8) ಇಂಡೆಂಟ್ ನಂ–57003 ರೂ. 22.95ಲಕ್ಷ, **9)** ಇಂಡೆಂಟ್ ನಂ– 57433 ರೂ. 5.35ಲಕ್ಷ, **10)** ಇಂಡೆಂಟ್ ನಂ–57322 ರೂ.12.45ಲಕ್ಷ,

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

11) ಇಂಡೆಂಟ್ ನಂ–57010 ರೂ.25.00ಲಕ್ಷ, **12)** ಇಂಡೆಂಟ್ ನಂ–57006 ರೂ.9.22ಲಕ್ಷ, **13)** ಇಂಡೆಂಟ್ ನಂ–57005 ರೂ.19.04ಲಕ್ಷ **14)** ಇಂಡೆಂಟ್ ನಂ–57435 ರೂ. 28.14ಲಕ್ಷ, **15)** ಇಂಡೆಂಟ್ ನಂ–57543 ರೂ.10.00ಲಕ್ಷ, **16)** ಇಂಡೆಂಟ್ ನಂ–57771 ರೂ. 35.00ಲಕ್ಷ, **17)** ಇಂಡೆಂಟ್ ನಂ–57773 ರೂ.15.00ಲಕ್ಷ, **18)** ಇಂಡೆಂಟ್ ನಂ–57832 ರೂ. 28.00ಲಕ್ಷ, **19)** ಇಂಡೆಂಟ್ ನಂ–57835 ರೂ.25.00ಲಕ್ಷ, **20)** ಇಂಡೆಂಟ್ ನಂ–57836 ರೂ.10.00ಲಕ್ಷ, **21)** ಇಂಡೆಂಟ್ ನಂ–57848 ರೂ.44.60ಲಕ್ಷ, **22)** ಇಂಡೆಂಟ್ ನಂ–57847 ರೂ.24.00ಲಕ್ಷ, **23)** ಇಂಡೆಂಟ್ ನಂ–SE7666 ರೂ.47.10ಲಕ್ಷ,

ಮರು ಕರೆ ಕಾಮಗಾರಿ

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

24) ಇಂಡೆಂಟ್ ನಂ–42565 ರೂ.33.50ಲಕ್ಷ (2ನೇ ಕರೆ), **25)** ಇಂಡೆಂಟ್ ನಂ–42550 ರೂ.16.00ಲಕ್ಷ (2ನೇ ಕರೆ), **26)** ಇಂಡೆಂಟ್ ನಂ–57068 ರೂ. 8.00ಲಕ್ಷ (2ನೇ ಕರೆ), **27)** ಇಂಡೆಂಟ್ ನಂ–57149 ರೂ. 6.60ಲಕ್ಷ (2ನೇ ಕರೆ),

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

28) ಇಂಡೆಂಟ್ ನಂ– 56993 ರೂ. 3.36ಲಕ್ಷ (2ನೇ ಕರೆ)

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

29) ಇಂಡೆಂಟ್ ನಂ–55521 ರೂ.2.96ಲಕ್ಷ (2ನೇ ಕರೆ), **30)** ಇಂಡೆಂಟ್ ನಂ–57112 ರೂ.10.00ಲಕ್ಷ (2ನೇ ಕರೆ),

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ

31) ಇಂಡೆಂಟ್ ನಂ–42566 ರೂ.33.50ಲಕ್ಷ (2ನೇ ಕರೆ), **32)** ಇಂಡೆಂಟ್ ನಂ–42567 ರೂ.33.00ಲಕ್ಷ (2ನೇ ಕರೆ) **33)** ಇಂಡೆಂಟ್ ನಂ–55255 ರೂ.4.45ಲಕ್ಷ (2ನೇ ಕರೆ), **34)** ಇಂಡೆಂಟ್ ನಂ–53453 ರೂ.25.00ಲಕ್ಷ (3ನೇ ಕರೆ) **35)** ಇಂಡೆಂಟ್ ನಂ–55548 ರೂ.4.00ಲಕ್ಷ (3ನೇ ಕರೆ), **36)** ಇಂಡೆಂಟ್ ನಂ–55394 ರೂ. 20.00ಲಕ್ಷ (4ನೇ ಕರೆ). **37)** ಇಂಡೆಂಟ್ ನಂ–51420 ರೂ.10.00ಲಕ್ಷ (4ನೇ ಕರೆ), **38)** ಇಂಡೆಂಟ್ ನಂ–44547 ರೂ. 11.00ಲಕ್ಷ (5ನೇ ಕರೆ), **39)** ಇಂಡೆಂಟ್ ನಂ–56552 ರೂ.22.00ಲಕ್ಷ (2ನೇ ಕರೆ) **40)** ಇಂಡೆಂಟ್ ನಂ– 55562 ರೂ. 30.00ಲಕ್ಷ (3ನೇ ಕರೆ), **41)** ಇಂಡೆಂಟ್ ನಂ–55546 ರೂ.25.00ಲಕ್ಷ (3ನೇ ಕರೆ), **42)** ಇಂಡೆಂಟ್ ನಂ– 22070 ರೂ. 34.95ಲಕ್ಷ (4ನೇ ಕರೆ), **43)** ಇಂಡೆಂಟ್ ನಂ–49820 ರೂ.5.00ಲಕ್ಷ (2ನೇ ಕರೆ), **44)** ಇಂಡೆಂಟ್ ನಂ– 52389 ರೂ. 6.00ಲಕ್ಷ (2ನೇ ಕರೆ), **45)** DMA/2026-27/Auction6473/Call-2 , **46)** ಇಂಡೆಂಟ್ ನಂ– 52389 ರೂ. 6.00ಲಕ್ಷ (2ನೇ ಕರೆ).

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ **ಸಂಖ್ಯೆ: 0836–2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರಮೆಂಟ್‌ನಲ್ಲಿ **ದಿನಾಂಕ: 04–05–2026** ಪಡೆಯಬಹುದಾಗಿದೆ.

ಕ್ರ. ಸಂ 04, 07, 10, 23 ರಿಂದ 26, 29 ರಿಂದ 41, 46ರ ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 13–05–2026 ರಂದು ಸಾಯಂಕಾಲ 4.00 ಗಂಟೆಯವರೆಗೆ

ಕ್ರ. ಸಂ 04, 07, 10, 23 ರಿಂದ 26 29 ರಿಂದ 41, 46ರ ಟೆಂಡರ ತೆರೆಯುವ ದಿನಾಂಕ: 14–05–2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು

ಕ್ರ. ಸಂ 01 ರಿಂದ 03 05 06 08, 09 11 ರಿಂದ 22 27, 28 42 ರಿಂದ 44ರ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 19–05–2026 ರಂದು ಸಾಯಂಕಾಲ 4.00 ಗಂಟೆಯವರೆಗೆ

ಕ್ರ. ಸಂ 01 ರಿಂದ 03, 05, 06, 08, 09, 11 ರಿಂದ 22, 27, 28 42 ರಿಂದ 44ರ ಟೆಂಡರ ತೆರೆಯುವ ದಿನಾಂಕ: 20–05–2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು

ಕ್ರ. ಸಂ **45**ರ ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ನಲ್ಲಿ (e-Auction) ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ನಿಯಮಗಳನ್ನು ಒಳಗೊಂಡಿರುವ ಟೆಂಡರ್ ದಸ್ತಾವೇಜನ್ನು ಅಂತರ್‌ಜಾಲ ವಿಳಾಸ **kppp.karnataka.gov.in** ದಲ್ಲಿ ದಿನಾಂಕ: **04–05–2026** ರಿಂದ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿ ಕುರಿತು ಸರಬರಾಜು (Bidders) ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಕಚೇರಿ ರವರ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 13–05–2026** ರಂದು **17.30.00** ಗಂಟೆಯವರೆಗೆ.

ಇ–ಹರಾಜು ಪಾಲ್ಗೊಳ್ಳಲು ಕೊನೆಯ **ದಿನಾಂಕ: 14–05–2026** ರಂದು **17.30.000** ಗಂಟೆಯವರೆಗೆ.

ಇ–ಹರಾಜು ಜರುಗುವ **ದಿನಾಂಕ: 18–05–2026** ಮುಂಜಾನೆ **10.00** ಗಂಟೆಯಿಂದ ಸಾಯಂಕಾಲ **5.30** ಗಂಟೆಯವರೆಗೆ.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/106/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು

ಟೆಂಡರ್ ಅಧಿಸೂಚನೆ ಸಂಖ್ಯೆ:ದ.ಕ.ಜಿ.ಪ/ಮಂ/ಟೆಂಡರ್–6/ಎಇ–1/2026–27/ ದಿನಾಂಕ:30–04–2026

ಟೆಂಡರ್ ಪ್ರಕಟಣೆ (2ನೇ ಕರೆ)

2025–26ನೇ ಸಾಲಿನ ಗಂಜಿಮಠ ಗ್ರಾಮ ಪಂಚಾಯತ್ ಭೂ ಸ್ವಾದೀನ ಪರಿಹಾರ ಧನ ಮೊತ್ತದಲ್ಲಿ ಮಂಜೂರಾದ ಕಾಮಗಾರಿಗೆ ಏಕ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವರ್ಷನ್–2 ಮುಖಾಂತರ 2ನೇ ಕರೆ ಟೆಂಡರ್‌ನ್ನು ಕರೆಯಲಾಗಿದ್ದು ಟೆಂಡರ್ ಸಲ್ಲಿಸುವ ದಿನಾಂಕವನ್ನು ಈ ಕೆಳಕಂಡಂತಿದೆ.

ಕಾಮಗಾರಿ ಹೆಸರು: (1) ಮಂಗಳೂರು ತಾಲೂಕು ಗಂಜಿಮಠ ಗ್ರಾಮ ಪಂಚಾಯತ್‌ನ ನೂತನ ಕಟ್ಟಡ ರಚನೆ (Work Indent No:21841), ಟೆಂಡರಿಗಿಟ್ಟ ಮೊತ್ತ: ರೂ. 81.34 ಲಕ್ಷ, (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20–05–2026 ಅಪರಾಹ್ನ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21–05–2026 ಅಪರಾಹ್ನ 4.30 ಗಂಟೆಗೆ (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಂತರ್‌ಜಾಲ https://kppp.karnataka.gov.in ನಲ್ಲಿ, ಕಛೇರಿ ದೂರವಾಣಿ ಸಂಖ್ಯೆ: 0824–2451281 ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

DIPR/DK/KSMCA/152/ 26-27 Dt. 30.04.2026

ಕಾರ್ಯಪಾಲಕ ಅಭಿಯಂತರವರ ಕಛೇರಿ,

ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.

ಸಂ: ಕಾ.ಇಂ(ವಿ)/ಲೋ.ಇ/ವಿದ್ಯುತ್/2025–26/146 ದಿನಾಂಕ: 29.04.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗೆ KW-2 STD ಷರತ್ತುಗೊಳಪಟ್ಟಂತೆ, ಮೊದಲನೇ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ. ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	Providing Street Light at KM 18.00 of Chitradurga SH 307 Kyadigere(NH 48) to Seebara Village near Service Road (NH-48) in Chitradurga Taluk. PWD/2025-26/EL/WORK_INDENT33403	Rs. 30.30

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in**ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ: 29.04.2026** ರಿಂದ **13.05.2026, 16.00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 13.05.2026** ರಂದು **16.00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ).

ವಾಸಾಸಂಇ/ಉನಿ-ಸಿ.ಪಿ/438/ಕೆಎಸ್‌ಎಂಸಿಎ/2026-27

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2026–27 ದಿನಾಂಕ:29.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಬೇಲೂರು ಉಪ ವಿಭಾಗ ವ್ಯಾಪ್ತಿಯ 2023–24 ಮತ್ತು 2024–25 ನೇ ಸಾಲಿನ ಪಿ.ಎಂ.ಶ್ರೀ ಯೋಜನೆಯಡಿ INDENT NO: (1)RDPR/2026-27/BD/WORK_INDENT26387 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ KW-1ರ ರೀತ್ಯಾ ಅಂತರ್ಜಾಲದಲ್ಲಿ ದಿ: 29.04.2026 ರಿಂದ ದಿ:14.05.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:13.05.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:12.05.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:15.05.2026 ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/81/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ.

No.EE/MID/VJP/AE-1/4702/TND/2026-27/287 Date: 27.04.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಚಡಚಣ ತಾಲ್ಲೂಕಿನ ಕೊಂಕಣಗಾಂವ ಗ್ರಾಮದ ಬೋರಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿ**(3ನೇ ಕರೆ),** ಟೆಂಡರಿಗಿಟ್ಟ ಮೊತ್ತ: **ರೂ.799.79ಲಕ್ಷ,** ಇ.ಎಂ.ಡಿ. ಮೊತ್ತ: **ರೂ.12,00,000–00, ಮೇಲಿನ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ಮಣ್ಣೂರ ಮತ್ತು ನಾಗವಾಡ ಗ್ರಾಮದ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಸುಧಾರಣೆಗಾಗಿ ಸರಣಿ ಬಾಂದಾರ/ಬ್ಯಾರೇಜ್/ಬಿಸಿಬಿ ನಿರ್ಮಾಣ ಕಾಮಗಾರಿ**(2ನೇ ಕರೆ),** ಟೆಂಡರಿಗಿಟ್ಟ ಮೊತ್ತ **ರೂ. 800.00ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.** ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home** ನಲ್ಲಿ ಲಾಗಿನ್ ಆಗಿ **ದಿನಾಂಕ: 28.04.2026 ರಿಂದ** Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home**ನಲ್ಲಿ ಲಾಗಿನ್ ಆಗಿ **ದಿನಾಂಕ: 06.05.2026ರ 17:30 ಘಂಟೆವರೆಗೆ** ಸ್ವೀಕರಿಸಲಾಗುವದು. **ದಿನಾಂಕ: 04.05.2026ರಂದು** ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನುಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು **ದಿನಾಂಕ: 05.05.2026ರ 17:30 ಘಂಟೆವರೆಗೆ** ವಿಭಾಗ ಕಛೇರಿಯಲ್ಲಿ ಅಥವಾ " ಇ–ಪ್ರೋಕ್ಯರಮೆಂಟ್" ಹೆಲ್ಪಡೆಸ್ಕ್‌ನಿಂದ (ಫೋನ್: 080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರ್‌ಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ.

ವಾಸಸಂಇ/ವಿಜಯಪುರ/ಆರ್.ಓ.ಸಂಖ್ಯೆ 58/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ದ.ಕ. ಜಿಲ್ಲಾ ಪಂಚಾಯತ್

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ತಾಲೂಕು ಸಾರ್ವಜನಿಕ ಆಸ್ಪತ್ರೆ, ಬಂಟ್ವಾಳ, ಬಂಟ್ವಾಳ ತಾಲೂಕು ದ.ಕ 574211

Email: mochc2009@gmail.com Ph: 08255-233332

ಸಂಖ್ಯೆ: ಸಾ.ಆ./ಬಂ/02/2026–27 ದಿನಾಂಕ: 28–04–2026

ಇ–ಟೆಂಡರ್ ಅಧಿಸೂಚನೆ

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ದಕ್ಷಿಣ ಕನ್ನಡ ಇಲ್ಲಿನ ಕೀಲು ಮೂಳೆ ವಿಭಾಗಕ್ಕೆ ಬೇಕಾಗುವ ಇಂಪ್ಲಾಂಟ್ಸ್‌ಗಳ ಖರೀದಿಗಾಗಿ ಕೆ.ಟಿ.ಪಿ.ಪಿ 1999–2000 ನಿಯಮದಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು Kppp.Karnataka ಮೂಲಕ ಆಹ್ವಾನಿಸಲಾಗಿದೆ. ವಿವರಗಳನ್ನು Website: https://kppp.karnataka.gov.in ರಲ್ಲಿ ವೀಕ್ಷಿಸಬಹುದು.

(1) ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 29–04–2026 (2) ಟೆಂಡರ್ ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 14–04–2026 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15–04–2026 (4) ಟೆಂಡರ್ ಅಂದಾಜು ಮೊತ್ತ: 11,00,000/– (5) ಇ.ಎಂ.ಡಿ: 55,000/–

ಸಹಿ/– ಆಡಳಿತ ವೈದ್ಯಾಧಿಕಾರಿ
ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ

DIPR/DK/KSMCA/149/26-27 dt. 30.04.2026

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2026–27/514 ದಿನಾಂಕ:28/04/2026

ಇ–ಟೆಂಡರ್/ಮರುಟೆಂಡರ್/ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1, Call-2, Call-3 & Call-4)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059–ಎಸ್.ಸಿ.ಪಿ – ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 5 ಕಾಮಗಾರಿಗಳು ಮತ್ತು ಲೆಕ್ಕ ಶೀರ್ಷಿಕೆ 4059–ಟಿ.ಎಸ್.ಪಿ–ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 6 ಕಾಮಗಾರಿ, 3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 2 ಕಾಮಗಾರಿಗಳು, 2059–ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ ನಿರ್ವಹಣೆ ಅಡಿ 1 ಕಾಮಗಾರಿ, 2216–ವಸತಿ ಗೃಹ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ 1 ಕಾಮಗಾರಿ, 8443–ಠೇವಣಿ ವಂತಿಕೆ ಅಡಿ 1 ಕಾಮಗಾರಿ, 5054–ಜಿಮುರ ನವೀಕರಣ ಅಡಿ 1 ಕಾಮಗಾರಿ, 5054–ರಾಹೆ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, ಹೀಗೆ ಒಟ್ಟು 19 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 6.40 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 232.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:12–05–2026 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:14–05–2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:16–05–2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):18–05–2026 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-177/KSMCA/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-621) ಡ್ರಾ ಏಪ್ರಿಲ್ 30ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PD 180857 (THRISSUR)

Consolation Prize Rs.5,000/-
PA 180857 PB 180857 PC 180857 PE 180857
PF 180857 PG 180857 PH 180857 PJ 180857
PK 180857 PL 180857 PM 180857

2nd Prize Rs.30,00,000/- [30 Lakhs]
PH 343458 (PATTAMBI)

3rd Prize Rs.5,00,000/- [5 Lakhs]
PD 847745 (ATTINGAL)

FOR THE TICKETS ENDING WITH THE FOLLOWING NUMBERS

4th Prize Rs.5,000/-
0450 0463 0896 1354 1689 2824 3803 4673 5115 5607 6435 7060 7423 7617 8261 8510 8825 8991 9666

5th Prize Rs.2,000/-
4712 5604 5897 6809 7003 8151

6th Prize Rs.1,000/-
0015 0146 0198 0251 0454 0692 0732 1270 1522 3117 3363 3602 4071 4239 5310 5678 5682 5832 7141 8024 8161 9063 9405 9504 9830

7th Prize Rs.500/-
0069 0326 0365 0371 0552 0608 0618 0626 1038 1114 1158 1202 1282 1368 1401 1497 1544 1558 1595 1643 1681 1693 1724 1745 2091 2096 2249 2489 2555 2857 2868 3112 3170 3256 3475 3625 3664 3850 4111 4167 4224 4275 4512 4631 4699 4805 5363 5452 5573 5776 5871 5926 6095 6134 6384 6526 6669 6831 6934 7071 7157 7227 7259 7502 7514 7651 8279 8313 8460 8641 9457 9620 9707 9880 9920 9942

8th Prize Rs.200/-
0127 0298 0476 0501 0647 0713 0814 0960 1032 1296 1385 1419 1670 1786 1933 2216 2268 2536 2571 2586 2593 2679 2709 2791 2833 3074 3080 3111 3216 3736 3740 3770 3808 3864 3886 3963 4017 4095 4229 4306 4464 4733 4855 5071 5199 5317 5470 5917 6022 6062 6151 6279 6371 6466 6499 6663 6876 6943 7067 7089 7165 7293 7375 7506 7573 7702 7814 7965 8087 8148 8271 8340 8550 8559 8811 8831 8909 9079 9329 9340 9447 9475 9725 9963

9th Prize Rs.100/-
0020 0133 0153 0389 0403 0442 0447 0586 0601 0609 0667 0782 0817 0848 0959 0968 1068 1159 1265 1365 1402 1414 1466 1499 1511 1587 1590 1618 1699 1791 1816 1821 1885 1906 2027 2051 2103 2117 2200 2294 2317 2333 2355 2367 2493 2625 2652 2734 2841 2959 2990 2997 3006 3030 3144 3221 3244 3261 3286 3294 3333 3348 3442 3470 3471 3565 3610 3671 3820 4057 4091 4099 4164 4212 4223 4254 4255 4355 4409 4514 4570 4644 4716 4750 4759 4794 4859 4902 4928 4988 5101 5127 5396 5442 5500 5660 5719 5720 5809 6027 6098 6121 6182 6232 6256 6396 6408 6556 6657 6732 6734 6833 6896 6956 7042 7109 7211 7249 7316 7336 7403 7676 7812 7858 8090 8105 8210 8211 8232 8249 8297 8424 8433 8521 8553 8619 8629 8660 8843 8956 9154 9177 9235 9287 9375 9431 9468 9521 9539 9559 9611 9637 9662 9736 9857 9970

ಭಾರೀ ಮಳೆಗೆ ಕಳೆದ ವರ್ಷ ಅವಾಂತರ ಸೃಷ್ಟಿಯಾಗಿತ್ತು | ಸಂಬಂಧಪಟ್ಟವರು ಇನ್ನಾದರೂ ಎಚ್ಚರಗೊಳ್ಳಲಿ

ಕಿಂಡಿಅಣೆಕಟ್ಟು ಸ್ವಚ್ಛಗೊಳಿಸಲು ಇದು ಸಕಾಲ

ಬೆಳ್ತಂಗಡಿ: ನದಿ, ಹೊಳೆಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಕಿಂಡಿಅಣೆಕಟ್ಟುಗಳ ಸುತ್ತಮುತ್ತ ಇರುವ ತ್ಯಾಜ್ಯದ ವಿಲೇವಾರಿ ಮಾಡಲು ಸೂಕ್ತ ಸಮಯ ಇದಾಗಿದ್ದು ಸಂಬಂಧಪಟ್ಟವರು ಗಮನ ಹರಿಸಬಹುದಾಗಿದೆ.


ಬೆಳ್ತಂಗಡಿ ತಾಲೂಕಿನಲ್ಲಿ 75 ಕಿಂಡಿ ಅಣೆಕಟ್ಟುಗಳಿದ್ದು ಇದರಲ್ಲಿ 50ರಷ್ಟು ಕಿಂಡಿ ಅಣೆಕಟ್ಟುಗಳಲ್ಲಿ ಬೇಸಿಗೆಕಾಲದಲ್ಲಿ ನೀರು ಸಂಗ್ರಹಿಸಲಾಗುತ್ತಿದೆ. ಈ ಕಿಂಡಿ ಅಣೆಕಟ್ಟುಗಳ ಪರಿಸರದಲ್ಲಿ ಸ್ವಚ್ಛತೆ ಅಗತ್ಯವಾಗಿದ್ದು ಅದಕ್ಕಿದು ಸಕಾಲವಾಗಿದೆ.

ಬೇಸಿಗೆ ಮಳೆ ಆಗಾಗ ಸುರಿಯುತ್ತಿದ್ದರು ನದಿಗಳು, ಹೊಳೆಗಳಲ್ಲಿ ಈ ಬಾರಿ ನೀರಿನ ಹರಿವು ಹೆಚ್ಚಿಲ್ಲ. ಕೃಷಿಕರು ಪ್ರಸ್ತುತ ತೋಟಗಳಿಗೆ ನೀರು ನೀಡುತ್ತಿಲ್ಲ.

ಕೆಲವೊಂದು ಕಿಂಡಿ ಅಣೆಕಟ್ಟುಗಳ ಪರಿಸರದಲ್ಲಿ ಭಾರಿ ಪ್ರಮಾಣದ ಹೂಳು, ಮರಮಟ್ಟು, ತ್ಯಾಜ್ಯ ತುಂಬಿದೆ. ಈಗ ಹೆಚ್ಚಿನ ಕಿಂಡಿ ಅಣೆಕಟ್ಟುಗಳು ಖಾಲಿ ಇರುವುದರಿಂದ ಅವುಗಳ ಪರಿಸರದಲ್ಲಿ ತುಂಬಿರುವ ಹೂಳು, ಮರಮಟ್ಟು ತೆಗೆಯಲು ಅನುಕೂಲ ಸ್ಥಿತಿ ನಿರ್ಮಾಣವಾಗಿದೆ

ಕೃತಕ ನೆರೆ ಸಾಧ್ಯತೆ

ತ್ಯಾಜ್ಯ, ಮರಮಟ್ಟುಮರಳುತೆರವುಗೊಳ್ಳದಿದ್ದರೆ ಮಳೆಗಾಲದಲ್ಲಿ ನದಿಗಳು ತುಂಬಿ ಹರಿಯುವ ಸಮಯ ಇನ್ನಷ್ಟು ಮರಮಟ್ಟು,ಹೂಳು ತುಂಬುತ್ತದೆ. ಇದರಿಂದಕೃತಕನೆರೆಉಂಟಾಗುತ್ತದೆ. ಕೃತಕ ನೆರೆ ಸಮೀಪದ ತೋಟಗಳಿಗೆ ನುಗ್ಗಿ ಅನೇಕ ಸಮಸ್ಯೆಗಳು ಉಂಟಾಗುತ್ತವೆ.



ಪ್ರತಿ ವರ್ಷದ ಸಮಸ್ಯೆ

ಪ್ರತಿ ವರ್ಷ ಮಳೆಗಾಲದಲ್ಲಿ ಕಿಂಡಿ ಅಣೆಕಟ್ಟುಗಳಲ್ಲಿ ಮರಮಟ್ಟು ತುಂಬುವುದು ಬಗೆಹರಿಯದ ಸಮಸ್ಯೆ. ಇವುಗಳನ್ನು ತೆರವುಗೊಳಿಸುವುದು ಫಲಾನುಭವಿಗಳಿಗೆ ನುಂಗಲಾರದ ತುತ್ತಾಗಿದೆ. ರಾಶಿ, ರಾಶಿಯಾಗಿ ತುಂಬುವ ಮರಮಟ್ಟು ತೆರೆವುಗೊಳಿಸಲು ಯಂತ್ರೋಪಕರಣಗಳ ಅಗತ್ಯವಿದೆ. ಆದರೆ ಕೆಲವೊಂದು ಕಿಂಡಿ ಅಣೆಕಟ್ಟುಗಳ ಪ್ರದೇಶಕ್ಕೆ ವಾಹನಗಳು ಹೋಗಲು ದಾರಿ ಇಲ್ಲದ ಕಾರಣ ಇದನ್ನು ಕಾರ್ಮಿಕರಿಂದಲೇ ತೆರವುಗೊಳಿಸಬೇಕು. ಇದಕ್ಕಾಗಿ ಹೆಚ್ಚಿನ ಹಣ ವ್ಯಯವಾಗುತ್ತಿದೆ. ಇದರಿಂದ ಕಿಂಡಿ ಅಣೆಕಟ್ಟುಗಳ ಪರಿಸರ ಸ್ವಚ್ಛ ಮಾಡಲು ಸಾಧ್ಯವಾಗದೆ ಅಗತ್ಯ ಸ್ಥಳಗಳಲ್ಲಿ ಮಾತ್ರ ಸ್ವಚ್ಛತೆ ಮಾಡಲಾಗುತ್ತಿದೆ.

ಒಂದು ಕಿಂಡಿ ಅಣೆಕಟ್ಟಿನಲ್ಲಿ ತೆರವುಗೊಳಿಸಿದ ಮರಮಟ್ಟು ಅಲ್ಲೇ ಕೆಳಭಾಗಕ್ಕೆ ಹಾಕುವುದರಿಂದ ಅದು ನದಿಯ ತಗ್ಗು ಪ್ರದೇಶದ ಕಿಂಡಿ ಅಣೆಕಟ್ಟುಗಳನ್ನು ಬಂದು ತುಂಬುತ್ತದೆ. ಇದರಿಂದ ಪ್ರತಿವರ್ಷ ಸಮಸ್ಯೆ ಮುಂದುವರಿಯುತ್ತದೆ.

ಕಿಂಡಿ ಅಣೆಕಟ್ಟುಗಳಿಗೆ ಹಲಗೆ ಹಾಕುವ ಸಮಯ ನದಿಗಳಲ್ಲಿ ಹೆಚ್ಚಿನ ನೀರು ಇರುವ ಕಾರಣ ಮರಮಟ್ಟು ತ್ಯಾಜ್ಯವನ್ನು ಸರಿಯಾಗಿ ತೆರವುಗೊಳಿಸಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ನದಿಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿದ್ದು ಸ್ವಚ್ಛತೆಗೆ ಇದು ಸಕಾಲವಾಗಿದೆ.

> ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವ ಕಿಂಡಿ ಅಣೆಕಟ್ಟುಗಳ ನಿರ್ವಹಣೆ ಹಾಗೂ ಪರಿಸರದಲ್ಲಿ ತುಂಬಿರುವ ತ್ಯಾಜ್ಯ, ಮರಳನ್ನು ತೆರವುಗೊಳಿಸುವ ಹಕ್ಕನ್ನು ಸ್ಥಳೀಯ ಪಂಚಾಯಿತಿಗೆ ನೀಡಿದರೆ ಸಮಸ್ಯೆಗೆ ಸುಲಭ ಪರಿಹಾರ ಸಿಗುತ್ತದೆ
> ■ ವೆಂಕಟೇಶ್ವರ ಭಟ್, ಕಾಪು ಕಿಂಡಿ ಅಣೆಕಟ್ಟು ಫಲಾನುಭವಿ

> ಕಿಂಡಿ ಅಣೆಕಟ್ಟುಗಳ ಮಳೆಗಾಲದ ನಿರ್ವಹಣೆ ಕುರಿತು ಫಲಾನುಭವಿಗಳಿಗೆ ತಿಳಿಸಲಾಗುವುದು. ಹಲಗೆ ಹಾಕಲು ಹಾಗೂ ತೆಗೆಯಲು ತಗಲುವ ಖರ್ಚನ್ನು ಇಲಾಖೆಯ ವತಿಯಿಂದ ಅನುದಾನದ ಆಧಾರದಲ್ಲಿ ನೀಡಲಾಗುತ್ತದೆ.
> ■ ರಾಕೇಶ್, ಇಂಜಿನಿಯರ್ ಸಣ್ಣ ನೀರಾವರಿ ಇಲಾಖೆ

ಕಿಂಡಿ ಅಣೆಕಟ್ಟುಗಳ ಪರಿಸರದಲ್ಲಿ ಹೂಳು ಹಾಗೂ ಮರಳು ಅಗಾದ ಪ್ರಮಾಣದಲ್ಲಿದೆ. ಇದು ತೆರವಾಗಲು ಪ್ರತಿ ವರ್ಷ ಇಲಾಖೆಗಳು ಅಡ್ಡಿಯಾಗುವುದರಿಂದ ಫಲಾನುಭವಿಗಳು ತೆರವಿಗೆ ಮುಂದಾಗುತ್ತಿಲ್ಲ ಮರಳು ತುಂಬಿರುವ ಕಿಂಡಿ ಅಣೆಕಟ್ಟುಗಳಲ್ಲಿ ಹೆಚ್ಚಿನ ನೀರು ಸಂಗ್ರಹವಾಗುವುದಿಲ್ಲ. ಇದು ಅಂತರ್ಜಾಲ ಮಟ್ಟಕ್ಕೂ ಸಹಕಾರ ನೀಡುವುದಿಲ್ಲ. ಮರಳು ತುಂಬಿರುವ ಕಡೆ ನದಿಗಳು ಮಳೆಗಾಲದಲ್ಲಿ ಹರಿವಿನ ದಿಕ್ಕನ್ನು ಬದಲಿಸುತ್ತವೆ. ಅಲ್ಲಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿದ್ದರು ಕಂಡು ಕಾಣದಂತಿರುವ ಇಲಾಖೆಗಳು ಕಿಂಡಿ ಅಣೆಕಟ್ಟುಗಳ ಪರಿಸರದ ಮರಳು ತೆರವಿಗೆ ಅಡ್ಡಿಯಾಗುತ್ತಿರುವುದು ವಿಪರ್ಯಾಸ.

ಇದಲ್ಲದೆ ನದಿ ಪ್ರದೇಶಗಳಲ್ಲಿ ಸಾಕಷ್ಟು ಪ್ಲಾಸ್ಟಿಕ್ ತ್ಯಾಜ್ಯವೂ ಇದೆ. ಇದು ಮುಂದಿನ ದಿನಗಳಲ್ಲಿ ನೀರಿನೊಂದಿಗೆ ಹರಿದು ಬಂದು ನದಿ ನೀರನ್ನು ಮಲಿನ ಗೊಳಿಸುತ್ತದೆ.

ಕಳೆದ ವರ್ಷ ಭಾರಿ ಸಮಸ್ಯೆ

ಕಳೆದ ವರ್ಷ ಏಪ್ರಿಲ್ ವೇಳೆಗೆ ನದಿಗಳ ನೀರಿನ ಮಟ್ಟ ಹೆಚ್ಚಿತ್ತು. ಹಲವು ಕಡೆಗಳಲ್ಲಿ ಕಿಂಡಿ ಅಣೆಕಟ್ಟಿನ ಹಲಗೆಗಳನ್ನು ಮೇ ಅಂತ್ಯದವರೆಗೂ ತೆರವುಗೊಳಿಸಲು ಸಾಧ್ಯವಾಗಿರಲಿಲ್ಲ. ಈ ಸಮಯ ಕಿಂಡಿ ಅಣೆಕಟ್ಟುಗಳಲ್ಲಿ ಹೆಚ್ಚಿನ ನೀರು ತುಂಬಿ ಮೇಲ್ಭಾಗದ ಹಲವು ತೋಟಗಳು ಜಲಾವೃತವಾದ ಪ್ರಸಂಗವು ನಡೆದಿತ್ತು. ಬಳಿಕ ಹಲವೆಡೆ ಜೂನ್ ತಿಂಗಳಲ್ಲಿ ಹಲಗೆಗಳನ್ನು ತೆರವುಗೊಳಿಸಲಾಗಿತ್ತು. ಈ ಕಾರಣದಿಂದ ನದಿಗಳಲ್ಲಿ ನೀರ ಹರಿವು ಆರಂಭವಾದ ಕೂಡಲೇ ಕಿಂಡಿ ಅಣೆಕಟ್ಟುಗಳ ಹಲಗೆಗಳನ್ನು ತೆರವುಗೊಳಿಸುವುದು ಅಗತ್ಯವಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿನೇಶ್ ಜಯ ಶೆಟ್ಟಿ, ಬೆಳ್ಳೂರುಗುತ್ತು, ಅಡ್ಡೂರು, ಗುರುಪುರ.
2. ರತ್ನ ವಾಸುದೇವ, ಪುಲ್ಕೇರಿ, ಕಾರ್ಕಳ ಬೈಪಾಸ್ ? ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
3. ಕೊಡ್ಯಡ್ಕ ದಿ| ಜಯರಾಮ ಹೆಗ್ಡೆಯವರ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು, ಹೊಸನಾಡು, ಶ್ರೀ ದೇವಿ ಅನ್ನಪೂರ್ಣೇಶ್ವರೀ ಕ್ಷೇತ್ರ
4. ದಿ| ಕೃಷ್ಣ ಭಟ್ ಇವರ ಸ್ಮರಣಾರ್ಥ ಮನೆಯವರು, "ಶಾರದಾ ಸದನ", ಕೊಂಡೆಮೂಲ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಶ್ರೀ ದುರ್ಗಾ ಮಹಾಮ್ಮಾಯಿ ದೇವಸ್ಥಾನ, ಕೋಯ್ಯಾರು, ಸಿದ್ಧಕಟ್ಟೆ, ಕುಕ್ಕಿಪಾಡಿ, ಬಂಟ್ವಾಳ (ತಾ).
6. ದಿ| ಶಂಕರ ಶೆಟ್ಟ ಸ್ಮರಣಾರ್ಥ ಹರಿಣಿ ಶಂಕರ ಶೆಟ್ಟಿ ಮತ್ತು ಮಕ್ಕಳು, ರಾಯರ ಹೊಸಮನೆ, ಕುಬೆವೂರು, ಕೆಂಚನಕೆರೆ.
7. ಮಧುಕರ ಅಮೀನ್, ಮೋನಪ್ಪ ಕಂಪೌಂಡು, ದೇಲಂತಬೆಟ್ಟು, ಶಿಬರೂರು.

ಶ್ರೀ ಧರ್ಮಸ್ಥಳ ಮೇಳ
ಬಿಜೂರು ಮೊಗೇರಿಯಲ್ಲಿ
ದಿ. ಪರಮ ದೇವಾಡಿಗರ ಸ್ಮರಣಾರ್ಥ ಕುಟುಂಬಸ್ಥರು

ಶ್ರೀ ಸಾಲಿಗ್ರಾಮ ಮೇಳ
ಕಿರಿಮಂಜೇಶ್ವರ ಜಾತ್ರೆ ಪ್ರಯುಕ್ತ- **ಸ್ವಪ್ನ ಮಂಟಪ**

ಶ್ರೀ ಪೆರ್ಡೂರು ಮೇಳ
ಕೋಣೆಹರದಲ್ಲಿ -**ಚದುರಂಗ**

ಶ್ರೀ ಹನುಮಗಿರಿ ಮೇಳ
ಮಾಣಿಲದಲ್ಲಿ

ಶ್ರೀ ಪಾವಂಜೆ ಮೇಳ
ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಪ್ರಯುಕ್ತ -
ಓಂ ನಮೋ ಶಿವಾಯ (ಶ್ವೇತಕುಮಾರ ಚರಿತೆ)

ಸೀಮೆಎಣ್ಣೆ ಬೆಲೆಗೆ ಮೀನುಗಾರರು ಕಂಗಾಲು

ಕುಂದಾಪುರ : ಮತ್ಸ್ಯಕ್ಷಾಮದಿಂದ ತತ್ತರಿಸಿ ಹೋಗಿರುವ ನಾಡದೋಣಿ ಮೀನುಗಾರರಿಗೆ ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಏರುತ್ತಿರುವ ಸೀಮೆಎಣ್ಣೆ ಬೆಲೆ ಗಾಯದ ಮೇಲೆ ಬರೆ ಎಳೆದಂತಾಗಿದ್ದು, ಬೆಲೆ ಏರಿಕೆ ನಾಡದೋಣಿ ಮೀನುಗಾರರು ಕಂಗಾಲಾಗಿದ್ದಾರೆ. ನಾಡದೋಣಿ ಮೀನುಗಾರರು ಜೀವನ ನಡೆಸುವುದು ತುಂಬಾ ಕಷ್ಟವಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನಪ್ರತಿನಿಧಿಗಳು ಗಮನಹರಿಸಬೇಕೆಂದು ಮೀನುಗಾರರು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿರುವ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕಾ ವಲಯ ಸೀಮೆಎಣ್ಣೆಯನ್ನೇ ಅವಲಂಭಿಸಿದ್ದು, ವಾರ್ಷಿಕ 24,080 ಲೀ. ವರೆಗೆ ಸೀಮೆಎಣ್ಣೆ ಬೇಡಿಕೆ ಇರುತ್ತದೆ. ರಾಜ್ಯ ಸರಕಾರ ನಾಡದೋಣಿ ಮೀನುಗಾರರಿಗೆ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮಿತ ಕೆಎಸ್‌ಡಿಪಿ ಮೂಲಕ ಮೀನುಗಾರಿಕೆಗೆ ಸೀಮೆಎಣ್ಣೆ ವಿತರಿಸುತ್ತಿದೆ. ಕೆಎಸ್‌ಡಿಪಿ ವಿತರಿಸುವ ಸೀಮೆಎಣ್ಣೆಯ ಪ್ರತಿ ಲೀಟರಿಗೆ ರಾಜ್ಯ ಸರ್ಕಾರ 35 ರೂಪಾಯಿ ಸಬ್ಸಿಡಿ ನೀಡುತ್ತದೆ. ಪ್ರಸ್ತುತ ಕೈಗಾರಿಕೆ ಬಳಕೆಯ ಸೀಮೆಎಣ್ಣೆ ಪ್ರತಿ ಲೀಟರ್ ದರ 150 ರೂಪಾಯಿ ದಾಟಿದ್ದು, ಪ್ರಸ್ತುತ ಮೀನುಗಾರರಿಗೆ ಸಬ್ಸಿಡಿ ದರದಲ್ಲಿ ಕೊಡುತ್ತಿದ್ದ ಸೀಮೆಎಣ್ಣೆ ಕೂಡ ಪೆಟ್ರೋಲ್‌ಗಿಂತ ತುಟ್ಟಿಯಾಗಿದೆ.

ಮಾರುಕಟ್ಟೆಯಲ್ಲಿ ಸೀಮೆಎಣ್ಣೆ ದರ ಎಷ್ಟೇ ಏರಿಕೆಯಾದರೂ ಅದರಲ್ಲಿ 35 ರೂ. ಕಡಿತವಾಗಿ ಮೀನುಗಾರರಿಗೆ ವಿತರಿಸಲಾಗುತ್ತದೆ. ಕಳೆದ ಕೆಲವು ತಿಂಗಳಿನಿಂದ ಸೀಮೆಎಣ್ಣೆ ಬೆಲೆ ಗಗನಕ್ಕೇರುತ್ತಿದೆ. ಎರಡು ವರ್ಷಗಳ ಹಿಂದೆ ಇದೇ ಸಬ್ಸಿಡಿ ಸೀಮೆಎಣ್ಣೆ ದರ ಪ್ರತಿ ಲೀಟರಿಗೆ 51 ರೂಪಾಯಿ ಇತ್ತು, ಕೆಲ ತಿಂಗಳ ಹಿಂದೆ 65 ಆಗಿತ್ತು. ಈಗ 117 ಆಗಿದೆ. ರಾಜ್ಯದಲ್ಲಿ 830 ನಾಡದೋಣಿಗಳಿಗೆ ಸಬ್ಸಿಡಿ ಸೀಮೆಎಣ್ಣೆ ವಿತರಿಸಲಾಗುತ್ತಿದ್ದು, ಕುಂದಾಪುರ ಮತ್ತು ಬೈಂದೂರು ತಾಲೂಕಿನಲ್ಲಿ ಸುಮಾರು 3– 5 ಸಾವಿರ ಮಂದಿ ಮೀನುಗಾರರು ಮೀನುಗಾರಿಕೆಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ಸೀಮೆಎಣ್ಣೆ ಬೆಲೆ ಹೆಚ್ಚಳದಿಂದ ರಾಜ್ಯದ ಮೂರು ಜಿಲ್ಲೆಯ ನಾಡದೋಣಿ ಮೀನುಗಾರರು ಮೀನುಗಾರಿಕೆ ಮಾಡಲಾಗದ ಪರಿಸ್ಥಿತಿ ಉಂಟಾಗಿದೆ.



ಸಮೃದ್ಧ ಮೀನುಗಾರಿಕೆ ನಡೆಸುತ್ತಿದ್ದ ಗಂಗೊಳ್ಳಿ, ಮರವಂತೆ ಮೊದಲಾದ ಮೀನುಗಾರಿಕಾ ಬಂದರಿನಲ್ಲಿ ಕಳೆದ ಒಂದು ತಿಂಗಳಿನಿಂದ ಅನೇಕ ನಾಡದೋಣಿಗಳು ದಡ ಸೇರಿದ್ದು ಅವಧಿಗೂ ಮುನ್ನವೇ ಮೀನುಗಾರಿಕೆ ಸ್ಥಗಿತಗೊಳಿಸಿವೆ. ಈಗ ಮತ್ಸ್ಯಕ್ಷಾಮ ಸಂಕಷ್ಟದ ಜೊತೆಗೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಸೀಮೆಎಣ್ಣೆ ದರ ಮೀನುಗಾರರನ್ನು ಹೈರಾಣಾಗಿಸಿದೆ. ಗಂಗೊಳ್ಳಿ ಮತ್ತು ಮರವಂತೆ ಮೀನುಗಾರಿಕಾ ಬಂದರಿನಲ್ಲಿ ಒಂದು ತಿಂಗಳಿನಿಂದ ಮೀನುಗಾರಿಕೆಗೆ ತೆರಳಿದ ಬೋಟು, ದೋಣಿಗಳು ಬರಿಕೈಯಲ್ಲಿ ದಡಕ್ಕೆ ವಾಪಸಾಗುತ್ತಿದೆ. ಮೀನುಗಾರಿಕೆಗೆ ತೆರಳಿದರೂ ಸಿಗುವ ಮೀನಿನಲ್ಲಿ ಸೀಮೆಎಣ್ಣೆ ಖರ್ಚು ಕೂಡ ಭರಿಸಲು ಸಾಧ್ಯವಾಗುತ್ತಿಲ್ಲ ಎಂದು ಮೀನುಗಾರರು ಅಳಲು ತೋಡಿಕೊಂಡಿದ್ದಾರೆ.

> **ಸಮಸ್ಯೆಗೆ ಸ್ಪಂದಿಸಿ**
> ಮೀನುಗಾರಿಕೆಗೆ ಹೋದರೂ ಮೀನು ಸಿಗುತ್ತಿಲ್ಲ. ದಿನದಿಂದ ದಿನಕ್ಕೆ ಏರುತ್ತಿರುವ ಸೀಮೆಎಣ್ಣೆ ದರ ಮೀನುಗಾರಿಕೆ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದರಿಂದ ದಿನನಿತ್ಯದ ಖರ್ಚುವೆಚ್ಚವನ್ನು ಸರಿತೂಗಿಸಲು ಕಷ್ಟವಾಗುತ್ತಿದೆ. ಸೀಮೆಎಣ್ಣೆ ದರ ಹೆಚ್ಚಳದಿಂದ ಆಗುತ್ತಿರುವ ತೊಂದರೆಗಳನ್ನು ಸಂಸದರು, ಶಾಸಕರು ಹಾಗೂ ಸಚಿವರ ಗಮನಕ್ಕೆ ತರ ಲಾಗುವುದು. ಮೀನುಗಾರರ ಸಮಸ್ಯೆಗಳಿಗೆ ಸ್ಪಂದಿಸದಿದ್ದಲ್ಲಿ ಹೋರಾಟ ಅನಿವಾರ್ಯ
> ■ ಯಶವಂತ ಖಾರ್ವಿ, ಅಧ್ಯಕ್ಷರು, ಗಂಗೊಳ್ಳಿ ವಲಯ ನಾಡದೋಣಿ ಮೀನುಗಾರರ ಸಂಘ, ಗಂಗೊಳ್ಳಿ ಮೀನುಗಾರ ಮುಖಂಡ

ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಪೆರಿಂ ಗೋಮ್ ಸರಕಾರಿ ಕಾಲೇಜಿನಲ್ಲಿ ಇಂಗ್ಲಿಷ್, ವಾಣಿಜ್ಯ, ಮಲೆಯಾಳ, ಹಿಂದಿ, ಇತಿಹಾಸ, ಸಂಖ್ಯಾಶಾಸ್ತ್ರ, ಭೌತಶಾಸ್ತ್ರ, ಗಣಿತ ಮತ್ತು ಪತ್ರಿಕೋದ್ಯಮ ವಿಷಯಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಿಸಿದ ಫಲಕದಲ್ಲಿ ಸೇರಿಸಲಾದ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಬಯೋಡೇಟಾ ಮತ್ತು ಮೂಲ ಪ್ರಮಾಣಪತ್ರಗಳೊಂದಿಗೆ ಮೇ 7 ರಂದು ಸಂಜೆ 4 ಗಂಟೆಯೊಳಗೆ ಅಥವಾ ಅಂಚೆ ಮೂಲಕ ಕಾಲೇಜಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ 04985 295440 ಅಥವಾ 9188900211 ಸಂಪರ್ಕಿಸಬಹುದು.

ಮೇ 4ರಿಂದ 9ರವರೆಗೆ ಇಂಟರ್ ಕಾಲೇಜ್ ಸ್ಪೋರ್ಟ್ಸ್ ಆ್ಯಂಡ್ ಗೇಮ್ಸ್

ಮಂಗಳೂರು: ಮಂಗಳೂರಿನ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ನಗರದ ಪಾಂಡೇಶ್ವರದ ಶಂಕರಾಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಕಿಲ್ಸ್ ವತಿಯಿಂದ ಮೇ 4ರಿಂದ 9ರವರೆಗೆ ಮಂಗಳಾ ಕ್ರೀಡಾಂಗಣದಲ್ಲಿ ಮಂಗಳೂರು ಇಂಟರ್ ಕಾಲೇಜ್ ಸ್ಪೋರ್ಟ್ಸ್ ಆ್ಯಂಡ್ ಗೇಮ್ಸ್ 2026 ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಂಸ್ಥೆಯ ಸಿಇಒ ಮತ್ತು ನಿರ್ದೇಶಕ ಭವೇಶ್ ಸುವರ್ಣ, ಕಾರ್ಯಕ್ರಮದ ಯಶಸ್ಸಿಗೆ ಈಗಾಗಲೇ ಸಕಲ ಸಿದ್ಧತೆ ಮಾಡಲಾಗಿದೆ. ಶಾಸಕ ಡಿ.ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಈ ಕ್ರೀಡಾಕೂಟ ನಡೆಯಲಿದೆ ಎಂದರು.

ಮೇ 4ರಂದು ವಾಲಿಬಾಲ್, 5ರಂದು ಕಬಡ್ಡಿ, 7ರಂದು ಬ್ಯಾಡ್ಮಿಂಟನ್, ಮೇ 8ರಂದು ಟ್ರ್ಯಾಕ್ ಸ್ಪರ್ಧೆಗಳು ಮತ್ತು ಹಗ್ಗ ಜಗ್ಗಾಟ, 9ರಂದು ಚೆಸ್ ಮತ್ತು ಕೇರಂ ಸ್ಪರ್ಧೆ ನಡೆಯಲಿದೆ. ಈಗಾಗಲೇ ಸುಮಾರು 1 ಸಾವಿರ ಮಂದಿ ಸ್ಪರ್ಧಾಳುಗಳು ನೋಂದಾಯಿಸಿಕೊಂಡಿದ್ದಾರೆ. ಭಾಗವಹಿಸಲು ಇಚ್ಛಿಸುವವರು ssccmangalore.co.in ಮೂಲಕ ನೋಂದಾಯಿಸಿಕೊಳ್ಳಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪ್ರತಿನಿಧಿ ರಿತುವರ್ಣ ಕೆ.ಎಸ್., ಕ್ರೀಡಾ ಕೂಟದ ಸಂಚಾಲಕರಾದ ಶ್ರೇಯಸ್ ಆಚಾರ್ಯ, ದಿಶಾ ಕೊಟ್ಯಾನ್, ಶ್ವೇತಾ, ಭಾಗ್ಯಶ್ರೀ ಉಪಸ್ಥಿತರಿದ್ದರು.

ಕೊಲೆ ಯತ್ನ ಪ್ರಕರಣ: ಆರೋಪಿಗೆ 12 ವರ್ಷ ಸಜೆ

ಕಾಸರಗೋಡು: ಕೊಲೆಗೆ ಯತ್ನಿಸಿದ ಪ್ರಕರಣದ ಆರೋಪಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ದ್ವಿತೀಯ)ದ ನ್ಯಾಯಾಧೀಶ ರಾಮು ರಮೇಶ್ ಚಂದ್ರಭಾನು ಅವರು ವಿವಿಧ ಸೆಕ್ಷನ್‌ಗಳಲ್ಲಾಗಿ ಒಟ್ಟು 12 ವರ್ಷ ಕಠಿಣ ಸಜೆ ಮತ್ತು ಒಂದು ಲಕ್ಷ ರೂ. ಜುಲ್ಮಾನೆ ವಿಧಿಸಿ ತೀರ್ಪು ನೀಡಿದ್ದಾರೆ.

ಪಾಡಿ ಗ್ರಾಮದ ಎದುರ್ತೋಡು ನಿವಾಸಿ ಇ.ರಂಜಿತ್ ಆಲಿಯಾಸ್ ಬಂಗನ್ (29) ಎಂಬಾತನಿಗೆ ಈ ಶಿಕ್ಷೆ ವಿಸಲಾಗಿದೆ. ಜುಲ್ಮಾನೆ ಪಾವತಿಸದಿದ್ದಲ್ಲಿ ಆರೋಪಿ 9 ತಿಂಗಳ ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

2021 ಎಪ್ರಿಲ್ 3ರಂದು ರಾತ್ರಿ ಎದುರ್ತೋಡು ನಿವಾಸಿ ಸಿ.ಎಚ್.ರಾಘವ ಎಂಬವರನ್ನು ಚಾಕುವಿನಿಂದ ಎದೆ ಮತ್ತು ಕೈಗೆ ಇರಿದು ಕೊಲೆಗೈಯ್ಯಲೆತ್ನಿಸಿದ ಆರೋಪದಂತೆ ವಿದ್ಯಾನಗರ ಪೊಲೀಸರು ದಾಖಲಿಸಿಕೊಂಡಿರುವ ಪ್ರಕರಣದಲ್ಲಿ ಆರೋಪಿಗೆ ಈ ಶಿಕ್ಷೆ ವಿಧಿಸಲಾಗಿದೆ.

ಅಂದು ವಿದ್ಯಾನಗರ ಪೊಲೀಸ್ ಠಾಣೆಯ ಎಸ್‌ಐ ಆಗಿದ್ದ ನಿಬಿನ್ ಜೋಯ್ ಮೊದಲು ಈ ಪ್ರಕರಣದ ತನಿಖೆ ನಡೆಸಿದ್ದರು. ನಂತರ ಅಂದಿನ ಇನ್ಸ್‌ಪೆಕ್ಟರ್ ಶ್ರೀಜಿತ್ ಕೊಡಿಯೇರಿ ಈ ಪ್ರಕರಣದ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಪ್ರೋಸಿಕ್ಯೂಷನ್ ಪರವಾಗಿ ಹೆಚ್ಚುವರಿ ಸರಕಾರಿ ಪ್ಲೀಡರ್ ಚಂದ್ರಮೋಹನ್ ಜಿ. ಮತ್ತು ವಕೀಲೆ ಚಿತ್ರಕಲಾ ಎಂ. ನ್ಯಾಯಾಲಯದಲ್ಲಿ ವಾದಿಸಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

30-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475	ಹಳೆ ಕರಿಗೋಟು	245 - 275
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 100
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 315
ಹೊಸ ಪಟೋರ	355 - 405	**ಕಾಳುಮೆಣಸು ಧಾರಣೆ**	
ಹಳೆ ಪಟೋರ	375 - 405	ಕಾಳುಮೆಣಸು	450 - 680
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	110 - 290	ಆರ್‌ಎಸ್‌ಎಸ್ 1	245.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	210.00
ಹಳೆ ಕೋಕಾ	325 - 345	ಸ್ಕ್ರಾಪ್ 1	149.00
ಹೊಸ ಕರಿಗೋಟು	245 - 275	ಸ್ಕ್ರಾಪ್ 2	140.00

ನಿಧನ ಸುದ್ದಿ

ಲೀಲಾ ಬಾಬು ಸಪಲ್ಯ



ಬಂಟ್ವಾಳ: ಇಲ್ಲಿನ ರಾಯಿ ಸಮೀಪದ ಬೊಲ್ಲೊಟ್ಟು ನಿವಾಸಿ, ದೈವಪಾತ್ರಿ ದಿವಂಗತ ಬಾಬು ಸಪಲ್ಯ ಬೊಲ್ಲೊಟ್ಟು ಇವರ ಪತ್ನಿ ಲೀಲಾ ಬಾಬು ಸಪಲ್ಯ (80) ಇವರು ಅಸೌಖ್ಯದಿಂದ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಮೃತರು ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದರು.

ಸುಬ್ಬಣ್ಣ ಕುಲಾಲ್



ಬಂಟ್ವಾಳ: ಇಲ್ಲಿನ ಅಜೆಕಲ ನಿವಾಸಿ ಸುಬ್ಬಣ್ಣ ಕುಲಾಲ್ (80) ಮಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಮನೆಯಲ್ಲಿ ಚಟುವಟಿಕೆಯಿಂದಲೇ ಇದ್ದ ಅವರಿಗೆ ರಾತ್ರಿ ವೇಳೆ ಏಕಾಏಕಿ ಅನಾರೋಗ್ಯ ಕಾಣಿಸಿಕೊಂಡು ದೇಹದ ಸ್ಥಿತಿಯಲ್ಲಿ ಏರುಪೇರು ಕಂಡು ಬಂದು ತಕ್ಷಣ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ. ಅವರು ಹಿಂದೆ ಬಸ್ಸು ಮಾಲಕರಾಗಿದ್ದು ಬಳಿಕ ರಿಕ್ಷಾ ಚಲಾಯಿಸುತ್ತಿದ್ದರು. ಮೃತರು ಪತ್ನಿ, ಮೂರು ಮಂದಿ ಪುತ್ರಿಯರು, ಮೊಮ್ಮಕ್ಕಳನ್ನು ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ.

ವಸಂತ ರೈ ಬಜಕೂಡ್ಲು



ಪೆರ್ಲ: ಪೆರ್ಲ ಪೇಟೆಯಲ್ಲಿ ಆಟೋಮೊಬೈಲ್ ಅಂಗಡಿ ನಡೆಸುತ್ತಿದ್ದ ಬಜಕೂಡ್ಲು ನಿವಾಸಿ ವಸಂತ ರೈ (55) ಅಲ್ಪಕಾಲದ ಅಸೌಖ್ಯದಿಂದ ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ಬೆಳಗ್ಗೆ ನಿಧನರಾದರು.

ನ್ಯೂಮೋನೀಯ ಜ್ವರ ತಗುಲಿ ಅವರು ಅಲ್ಪಕಾಲದಿಂದ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮಳಿವು ಮುಂಡಪ್ಪ ಟೈಲರ್

ಮಂಜೇಶ್ವರ: ಹಲವು ವರ್ಷಗಳಿಂದ ಟೈಲರ್ ಆಗಿ ದುಡಿಯುತ್ತಿದ್ದ ಎಂ.ಎಂ. ಟೈಲರ್ ಎಂದೇ ಖ್ಯಾತರಾಗಿದ್ದ ಮಳಿವು ಮುಂಡಪ್ಪ ಟೈಲರ್ (68) ನಿಧನ ಹೊಂದಿದರು. ಅವರು ಅಸೌಖ್ಯದಿಂದಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ಪತ್ನಿ ವಿಜಯಾ, ಮಕ್ಕಳಾದ ಮಹೇಶ್, ಸುಶ್ಮಿತಾ ಅವರನ್ನು ಅಗಲಿದ್ದಾರೆ.

ಕುಷ್ಟ ಪೂಜಾರಿ



ಕೋಟ: ಇಲ್ಲಿನ ಪಾಂಡೇಶ್ವರ ಪಂಚಾಯತ್‌ನ ಮಾಜಿ ಸದಸ್ಯ ಕುಷ್ಟ ಪೂಜಾರಿ (72) ಬುಧವಾರ ಮುಂಜಾನೆ ಅನಾರೋಗ್ಯದಿಂದ ನಿಧನರಾದರು. ಪಾಂಡೇಶ್ವರ ಪಂಚಾಯತ್ ಮೂಡಹಡು ವಾರ್ಡ್‌ನಲ್ಲಿ ಎರಡು ಬಾರಿ ಸದಸ್ಯರಾಗಿ ಆಯ್ಕೆಯಾದ ಇವರು ಕರಾವಳಿಯ ಗ್ರಾಮೀಣ ಸೊಗಡಿನ ನೃತ್ಯ ಹೌಂದೇರಾಯನ ವಾಲ್ಗುವೇ ಜಾನಪದ ತಂಡದ ಮೂಲಕ ಪ್ರಸಿದ್ಧಿ ಹೊಂದಿದ ಇವರು ಕೃಷಿಕರಾಗಿ ಗ್ರಾಮದಲ್ಲಿ ಕುಷ್ಟಣ್ಣ ಎಂದೆ ಜನಜನಿತರಾಗಿದ್ದರು. ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಸಯ್ಯದ್ ಶರಫುದ್ದೀನ್ ತಂಜಳ್



ಪುತ್ತೂರು: ಸಾಲ್ಮರ ನಿವಾಸಿ ಸಯ್ಯದ್ ಶರಫುದ್ದೀನ್ ತಂಜಳ್ (50) ಮಂಗಳೂರಿನ ಆಸ್ಪತ್ರೆಯಲ್ಲಿ ಏ.27ರಂದು ರಾತ್ರಿ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ದಿ.ಹಸನ್ ಕೋಯ ತಂಜಳ್ ಅವರ ಪುತ್ರರಾಗಿರುವ ಶರಫುದ್ದೀನ್ ತಂಜಳ್ ಪತ್ನಿ, ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮುಸ್ಲಿಂ ಧರ್ಮಗುರು, ದಾರುಲ್ ಹಸನಿಯ್ಯ ಹಿಪ್ಳುಲ್ ಕುರ್ ಆನ್ ಕಾಲೇಜಿನ ಸ್ಥಾಪಕರಾದ ಸಯ್ಯದ್ ಅಲ್ ಹಾದಿ ಶರಫುದ್ದೀನ್ ತಂಜಳ್ ಸಾಲ್ಮರ ಅವರ ನಿಧನಕ್ಕೆ ಶಾಸಕ ಅಶೋಕ್ ರೈ ಸಂತಾಪ ಸೂಚಿಸಿದ್ದಾರೆ.

ಬೇಳ ರಾಧಾಕೃಷ್ಣ ಅಡಿಗ

ಕಾಸರಗೋಡು: ಕಾಸರಗೋಡು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ನಿವೃತ್ತ ಪ್ರಧಾನ ಅರ್ಚಕರಾಗಿದ್ದ, ಕಾಸರಗೋಡು ಬೀಚ್ ರಸ್ತೆ ಬಿ.ಬಿ.ಅಳ್ವ ಕಂಪೌಂಡ್ ಕಾಮಧೇನು ಹೌಸ್‌ನ ನಿವಾಸಿ ಬೇಳ ರಾಧಾಕೃಷ್ಣ ಅಡಿಗ (80) ಮಂಗಳವಾರ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಕಳೆದ 50 ವರ್ಷಗಳಿಗಿಂತಲೂ ಹೆಚ್ಚು ಕಾಲ ಶ್ರೀ ಕ್ಷೇತ್ರದಲ್ಲಿ ಅರ್ಚಕರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಶಾಂತಿ, ಮಕ್ಕಳಾದ ಶಂಕರನಾರಾಯಣ ಅಡಿಗ, ಪೂರ್ಣಿಮಾ ಅವರನ್ನು ಅಗಲಿದ್ದಾರೆ.

ಜಾನಕಿ

ಬದಿಯಡ್ಕ: ನೀರ್ಚಾಲು ಏಣಿಯರ್ಪು ನಿವಾಸಿ ಜಾನಕಿ (87) ನಿಧನರಾದರು. ಅವಿವಾಹಿತೆಯಾಗಿದ್ದ ಮೃತರು ಸಹೋದರ ನಾರಾಯಣ, ಸಹೋದರಿ ಯಶೋಧಾ ಅವರನ್ನು ಅಗಲಿದ್ದಾರೆ.

ರಾಜೇಶ್ ಕಾಮತ್

ಕಾಸರಗೋಡು: ಆಮೈ ರಸ್ತೆ ಬಳಿಯ ದಿ.ಎನ್.ಪಿ.ಕಾಮತ್‌ರ ಪುತ್ರ, ಬೆಂಗಳೂರಿನಲ್ಲಿ ಉದ್ಯೋಗಿಯಾಗಿದ್ದ ರಾಜೇಶ್ ಕಾಮತ್ (52) ನಿಧನರಾದರು. ಬೆಂಗಳೂರು ಕನಕಪುರ ರೋಡ್ ಆ್ಯಕ್ಸಿಸ್ ತತ್ವಂ ವೇದಾನಂದ ನಾಲ್ಕು ಎಂಬಲ್ಲಿ ಅವರು ವಾಸಿಸುತ್ತಿದ್ದರು. ಮೃತರು ತಾಯಿ ಪುಷ್ಪಲತಾ ಕಾಮತ್, ಪತ್ನಿ ಅನಿತಾ ಕಾಮತ್, ಪುತ್ರ ರಜನ್ ಕಾಮತ್ ಅವರನ್ನು ಅಗಲಿದ್ದಾರೆ.

ಪದ್ಮಾವತಿ

ಕುಂಬಳೆ: ಪೇರಾಲ್‌ನ ದಿ.ಮಂಜಪ್ಪ ಬಂಟ ಮಾಸ್ತರ್‌ರ ಪತ್ನಿ ಪದ್ಮಾವತಿ (90) ನಿಧನ ಹೊಂದಿದರು. ಮೃತರು ಮಕ್ಕಳಾದ ಜಯಂತಿ ರೈ, ಸೋಮಾವತಿ ರೈ, ಚಂದ್ರಹಾಸ ಶೆಟ್ಟಿ, ಸುಧಾ ಶೆಟ್ಟಿ ಅವರನ್ನು ಅಗಲಿದ್ದಾರೆ.

ಕಿರು ಸುದ್ದಿ

ವಿವೇಕಾನಂದ ಪದವಿ ಕಾಲೇಜಿನ ಪರೀಕ್ಷಾಂಗ ಕುಲಸಚಿವರಾಗಿ ಪ್ರಕಾಶ್ ಕುಮಾರ್ ಪಿ.

ಪುತ್ತೂರು: ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ(ಸ್ವಾಯತ್ತ) ಪರೀಕ್ಷಾಂಗ ಕುಲಸಚಿವರಾಗಿ ಕಾಲೇಜಿನ ಗಣಕ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರಕಾಶ್ ಕುಮಾರ್ ಪಿ. ನೇಮಕಗೊಂಡಿದ್ದಾರೆ.



ಎಂಎಸ್ಸಿ ಹಾಗೂ ಎಂಟೆಕ್ ಪದವೀಧರರಾಗಿರುವ ಪ್ರಕಾಶ್ ಕುಮಾರ್ 26 ವರ್ಷಗಳಿಂದ ಕಾಲೇಜಿನ ಗಣಕ ಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಹಾಗೂ ವಿಭಾಗ ಮುಖ್ಯಸ್ಥರಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಕಾಲೇಜಿನ ಐಕ್ಯೂಎಸಿ ಘಟಕದ ಸಹಸಂಯೋಜಕರಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ಗಣಕ ಶಾಸ್ತ್ರ ಅಸೋಸಿಯೇಶನ್‌ನ ಅಧ್ಯಕ್ಷರಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ಕಾಲೇಜಿನ ಗಣಕ ಶಾಸ್ತ್ರದ ವಿದ್ಯಾರ್ಥಿಗಳಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಾಜೆಕ್ಟ್ ತಯಾರಿಕೆಯಲ್ಲಿಯೂ ಮಾರ್ಗದರ್ಶನವನ್ನು ನೀಡಿರುತ್ತಾರೆ. ಪ್ರಸ್ತುತ ಕಾಲೇಜಿನ ವಿಜ್ಞಾನ ವಿಭಾಗದ ಡೀನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಕಾಲೇಜಿನ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಮರು ಮೌಲ್ಯಮಾಪನ: ಅಭಿಜ್ಞಾ ಭಟ್ ಎಸ್. ರಾಜ್ಯಕ್ಕೆ 4ನೇ ರ್‍ಯಾಂಕ್

ಸುಳ್ಯ: ಮರು ಮೌಲ್ಯಮಾಪನದ ಬಳಿಕ ಸುಳ್ಯದ ಎನ್ನೆಂಪಿಯುಸಿ ವಿಜ್ಞಾನ ವಿಭಾಗದ ಅಭಿಜ್ಞಾ ಭಟ್ ಎಸ್. ಅವರು ತಾಲೂಕಿಗೆ ಪ್ರಥಮ ಹಾಗೂ ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದಿದ್ದಾರೆ.



ಸುಳ್ಯ ನೆಹರು ಮೆಮೋರಿಯಲ್ ಪಿಯು ಕಾಲೇಜಿನ ವಿಜ್ಞಾನ ವಿಭಾಗ (ಪಿಸಿಎಂಬಿ) ವಿದ್ಯಾರ್ಥಿನಿ ಅಭಿಜ್ಞಾ ಭಟ್ ಎಸ್. ದ್ವಿತೀಯ ಪಿಯು ಫಲಿತಾಂಶ ಪ್ರಕಟಗೊಂಡಾಗ 595 ಅಂಕ ಗಳಿಸಿದ್ದು, ಹಿಂದಿಯಲ್ಲಿ 98 ಅಂಕ ಗಳಿಸಿದ್ದರು. ಹಿಂದಿ ವಿಷಯದ ಮರು ಮೌಲ್ಯಮಾಪನದಲ್ಲಿ ಒಂದು ಅಂಕ ಲಭಿಸಿ 99 ಅಂಕಗಳೊಂದಿಗೆ ಒಟ್ಟು 596 ಅಂಕ ಗಳಿಸಿದ್ದಾರೆ. ಪಿಸಿಎಂಬಿ ಯಲ್ಲಿ ಪೂರ್ಣ 100 ಅಂಕ ಗಳಿಸಿದ್ದು, ಜೆಇಇ ಮೈನ್ಸ್‌ನಲ್ಲಿ 94.29 ಪರ್ಸಂಟೈಲ್ ಗಳಿಸಿದ್ದಾರೆ. ಅವರು ಸುಳ್ಯ ಕೆವಿಜಿ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಪ್ರೊಫೆಸರ್ ಡಾ. ರವಿಶಂಕರ್ ಭಟ್ ಸಂಕಹಿತ್ಲು ಮತ್ತು ಅನುಪಮ ಐ. ದಂಪತಿ ಪುತ್ರಿ.

ಮೇ 2-3: ಅನಂತಾಡಿ ವರ್ಷಾವಧಿ ಉತ್ಸವ

ಮಂಗಳೂರು: ಬಂಟ್ವಾಳ ತಾಲೂಕಿನ ನೆಟ್ಲಮುಡ್ನೂರು ಅನಂತಾಡಿ ಗ್ರಾಮದ ಕರಿಂಕ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವರ್ಷಾವಧಿ ಉತ್ಸವ ಬ್ರಹ್ಮಶ್ರೀ ನೀಲೇಶ್ವರ ವೇದಮೂರ್ತಿ ಉಚ್ಚಿಲತ್ತಾಯ ಪದ್ಮನಾಭ ತಂತ್ರಿಯರ್ವರ ನೇತೃತ್ವದಲ್ಲಿ ಮೇ 2 ಮತ್ತು 3 ರಂದು ನಡೆಯಲಿದೆ. ಅಂದು ರಾತ್ರಿ 8 ಗಂಟೆಯಿಂದ ಮಹೋತ್ಸವ ಉತ್ಸವ ಬಲಿ, ಭೂತ ಬಲಿ ನಂತರ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿದೆ. ಬಳಿಕ ತಾಂಬೂಲ ಕಲಾವಿದೆರ್ ಪುಂಜಾಲ್ ಕಟ್ಟೆ ಇವರಿಂದ 'ಎಲ್ಲೆ ದಾದ ಎರೆಗ್ ಗೊತ್ತು'ಎಂಬ ಹಾಸ್ಯಮಯ ತುಳು ನಾಟಕ ಪ್ರದರ್ಶನಗೊಳ್ಳಲಿದೆ. ಮೇ 3ರಂದು ಹಗಲು ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ ವಿತರಣೆ ನಂತರ ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿದೆ. ಬಳಿಕ ಶ್ರೀ ಪಿಲಿಚಾಮುಂಡಿ ದೈವದ ನೇಮೋತ್ಸವ ಜರಗಲಿದೆ ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನರೇಂದ್ರ ರೈ ನೆಲ್ಲೊಟ್ಟು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರುಮೌಲ್ಯ ಮಾಪನ: ಚೈತ್ರಾಗೆ ಹೆಚ್ಚುವರಿ ಅಂಕ

ಕೋಟ: ಕೋಟ ವಿವೇಕ ಪದವಿಪೂರ್ವ ಕಾಲೇಜಿನ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಚೈತ್ರ ಎ. ಪೂಜಾರಿ 2026ರ ಮಾ.ನಲ್ಲಿ ನಡೆದ ವಾರ್ಷಿಕ ಪರೀಕ್ಷೆ ಫಲಿತಾಂಶ 600ರಲ್ಲಿ 578 ಅಂಕಗಳನ್ನು ಪಡೆದಿದ್ದು ವ್ಯವಹಾರ ಅಧ್ಯಯನ ವಿಷಯದಲ್ಲಿ 87 ಅಂಕಗಳು ಲಭಿಸಿತ್ತು ಇದೀಗ ಮರು ಮೌಲ್ಯಮಾಪನದ ಬಳಿಕ ವ್ಯವಹಾರ ಅಧ್ಯಯನ ವಿಷಯದಲ್ಲಿ 13 ಅಂಕಗಳು ಸೇರ್ಪಡೆಗೊಂಡು 591/600 ಅಂಕಗಳನ್ನು ಪಡೆದುಕೊಂಡಿದ್ದಾರೆ.



ಮನೆಯೊಳಗೆ ಪತ್ತೆಯಾದ ಹಾವಿನ ದೇಹದಲ್ಲಿ ಚಿನ್ನದ ಉಂಗುರ ಪತ್ತೆ

ಮುಳ್ಳೇರಿಯ: ಮನೆಯೊಳಗೆ ಪತ್ತೆಯಾದ ಹಾವಿನ ದೇಹದಲ್ಲಿ ಚಿನ್ನದ ಉಂಗುರ ಕಂಡುಬಂದಿದ್ದು, ಇದು ಜನರ ಆತಂಕಕ್ಕೆ ಕಾರಣವಾಯಿತು. ಆಡೂರು ಪದಿಕ್ಕಾಲ್ ನಿವಾಸಿ ರವಿ ಎಂಬವರ ಮನೆಯೊಳಗೆ ಬುಧವಾರ ಹಾವೊಂದು ಕಂಡುಬಂದಿತ್ತು. ಮರದಿಂದ ತಯಾರಿಸಿದ ಮೇಜಿನೊಳಗೆ ಹಾವು ಅವಿತುಕೊಂಡಿತ್ತೆನ್ನಲಾಗಿದೆ. ಮಕ್ಕಳು ಮೇಜು ತೆರೆಯಲೆತ್ನಿಸಿದಾಗ ಹಾವು ಕಂಡುಬಂದಿದ್ದು, ಈ ಬಗ್ಗೆ ಮಕ್ಕಳು ಹಿರಿಯರಿಗೆ ತಿಳಿಸಿದರು. ಅದು ನಾಗರಹಾವಾಗಿರಬಹುದೇ ಎಂದು ಭಯಗೊಂಡ ಮನೆಯವರು ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಅರಣ್ಯ ಅಧಿಕಾರಿ ಕೃಷ್ಣನ್ ಎಂಬವರು ಸ್ಥಳಕ್ಕೆ ತಲುಪಿ ಪರಿಶೀಲಿಸಿದಾಗ ಹಾವು ಕಂಡುಬಂದಿದ್ದು, ಅವರು ರೆಸ್ಕ್ಯೂವರ್‌ಗಳಾದ ಪಾಂಡಿಯ ಅನಿಲ್ ಹಾಗೂ ಏವಂದೂರಿನ ಮಹೇಶ್ ಎಂಬವರಿಗೆ ಮಾಹಿತಿ ನೀಡಿದರು. ಅವರಿಬ್ಬರು ಸ್ಥಳಕ್ಕೆ ತಲುಪಿ ನೋಡಿದಾಗ ಹಾವು ಕಾಣಿಸಿತು. ಕೂಲಂಕುಷವಾಗಿ ಪರಿಶೀಲಿಸಿದಾಗ ಅದು ಕೇರೆ ಹಾವಾಗಿದೆ ಎಂದು ಖಚಿತಪಡಿಸಲಾಯಿತು. ಅಲ್ಲದೆ ಹಾವಿನ ದೇಹದಲ್ಲಿ ಚಿನ್ನದ ದೊಡ್ಡ ಉಂಗುರವೊಂದು ಸಿಲುಕಿಕೊಂಡಿರುವುದು ಕಾಣಿಸಿದೆ. ದೇಹದಲ್ಲಿ ಉಂಗುರ ಸಿಲುಕಿಕೊಂಡಿರುವುದರಿಂದ ಹಾವು ತೀವ್ರ ಅಸ್ವಸ್ಥ ಸ್ಥಿತಿಯಲ್ಲಿತ್ತು. ನಂತರ ಹಾವನ್ನು ಮೇಜಿನೊಳಗಿನಿಂದ ಹೊರಕ್ಕೆ ತೆಗೆದು ಉಂಗುರವನ್ನು ತುಂಡರಿಸಿ ಬೇರ್ಪಡಿಸಲಾಯಿತು. ಬಳಿಕ ಹಾವನ್ನು ಕಾಡಿಗೆ ಬಿಡಲಾಯಿತು. ಹಾವಿನ ದೇಹದಲ್ಲಿ ಚಿನ್ನದ ಉಂಗುರ ಹೇಗೆ ಸಿಲುಕಿಕೊಂಡಿದೆ ಎಂದು ತಿಳಿದುಬಂದಿಲ್ಲ.





ಪುಂಜಾಲಕಟ್ಟೆ-ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯ ಕಾಮಗಾರಿ ಭರದಿಂದ ಸಾಗುತ್ತಿದ್ದು, ಉಜಿರೆ ಬಳಿಯ ಟಿ.ಬಿ. ಕ್ರಾಸ್ ಬಳಿ ರಸ್ತೆ ಬದಿಯ ಮರ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಈ ಕಾರ್ಯಾಚರಣೆಯಿಂದ ಕೆಲಕಾಲ ಟ್ರಾಫಿಕ್ ಸಮಸ್ಯೆ ಉಂಟಾಗಿತ್ತು. ಅಲ್ಲದೆ, ರಸ್ತೆ ಬದಿಯ ವಿದ್ಯುತ್ ಕಂಬಗಳನ್ನು ಕೂಡ ತೆರವುಗೊಳಿಸಲಾಗಿದ್ದು, ತಾಲೂಕಿನಾದ್ಯಂತ ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಅಪಾಯದಂಚಿನಲ್ಲಿ ದ.ಕ.ಜಿಲ್ಲಾ ಮಾಜಿ ಸೈನಿಕರ ಸಂಘದ ಕಟ್ಟಡ

ಮಂಗಳೂರು: ನಗರದ ಬಾವುಟಗುಡ್ಡೆ ಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಮಾಜಿ ಸೈನಿಕರ ಸಂಘದ ಕಟ್ಟಡ ಆವರಣದ ತಡೆಗೋಡೆ ಕುಸಿದು ವರ್ಷವಾದರೂ ಜಿಲ್ಲಾಡಳಿತವಾಗಲಿ ಪಾಲಿಕೆ ಯಿಂದಾಗಲಿ ಯಾವುದೇ ನೆರವು ದೊರಕಿಲ್ಲ ಎಂದು ಸಂಘದ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಸದಸ್ಯ ಗ್ರೂಪ್ ಕ್ಯಾ.ಸುಧೀರ್ ಜಿ. ಅಮೀನ್, ಜಿಲ್ಲಾಡಳಿತದ ಸ್ಪಂದನೆ ಇಲ್ಲದ ಕಾರಣ ಇದೀಗ ಸಾರ್ವಜನಿಕರ ನೆರವು ಕೋರುವ ಸ್ಥಿತಿಗೆ ಬಂದಿದ್ದೇವೆ. ಸಾರ್ವಜನಿಕರು ನೆರವು ನೀಡುವ ಮೂಲಕ ತಡೆಗೋಡೆ ಮರು ನಿರ್ಮಾಣಕ್ಕೆ ಸಹಕರಿಸಬೇಕು ಎಂದರು.

ಕಳೆದ ವರ್ಷ ಮೇ 28ರಂದು ರಾತ್ರಿ ಸುರಿದ ಭಾರೀ ಮಳೆಗೆ ತಡೆಗೋಡೆ ಕುಸಿದು ಬಿದ್ದಿತ್ತು. ತಡೆಗೋಡೆ ಮರು ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ, ಜನ ಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಜಿಲ್ಲಾಡಳಿತ ಒದಗಿಸಿದ್ದ ಕಡಿದಾದ 5 ಸೆಂಟ್ಸ್ ಜಾಗದಲ್ಲಿ ಸಂಘದ ಕಟ್ಟಡ ನಿರ್ಮಿಸಲಾಗಿದೆ. 2023ರಲ್ಲಿ ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ ತಡೆಗೋಡೆ ನಿರ್ಮಿಸಲಾಗಿತ್ತು. ತಡೆಗೋಡೆ ಜರಿದ ಪರಿಣಾಮ ಕಟ್ಟಡಕ್ಕೂ ಹಾನಿಯಾಗಿದ್ದು, ಈ ಬಗ್ಗೆ ಮನಪಾ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ ಅವರು ಕಟ್ಟಡ ಉಪಯೋಗಿಸದಂತೆ ನೋಟಿಸ್ ನೀಡಿದ್ದಾರೆ ಹೊರತು ಕಾಮಗಾರಿಗೆ ಬೇಕಾದ ನೆರವು ನೀಡಿಲ್ಲ ಎಂದವರು ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಶಾಸಕರ ಗಮನಕ್ಕೂ ತರಲಾಗಿದೆ. ಅವರು ಸಭೆ ನಡೆಸಿ, ಮನಪಾ ಅಧಿಕಾರಿಗಳಿಗೆ ಹಲವು ಬಾರಿ ನಿರ್ದೇಶಿಸಿದ್ದರು. ಆದರೆ ಅಧಿಕಾರಿಗಳು ಅನುದಾನದ ಇಲ್ಲವೆಂದು ಸುಮ್ಮನಿದ್ದಾರೆ. ಈ ಬಾರಿಯ ಮಳೆಗಾಲದಲ್ಲಿ ಕಟ್ಟಡಕ್ಕೂ ಅಪಾಯವಿದೆ. ಅದರ ಮೊದಲು ಸರಿಪಡಿಸುವ ಕಾರ್ಯ ಆಗಬೇಕು ಎಂದು ಸುಧೀರ್ ಜಿ ಅಮೀನ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಕ್ಯಾ.ದೀಪಕ್ ಅಡ್ಯಂತಾಯ, ಉಪಾಧ್ಯಕ್ಷ ಕ.ಜಯಚಂದ್ರನ್, ಕೋಶಾಧಿಕಾರಿ ನೌಕಾ ಸೇನಾ ನಿವೃತ್ತ ಅಧಿಕಾರಿ ಸುಧೀರ್ ಪೈ ಉಪಸ್ಥಿತರಿದ್ದರು.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಇತಿಹಾಸ ಸೃಷ್ಟಿ | ರಂಗಭೂಮಿಯಲ್ಲಿ ಮೊದಲ ಬಾರಿಗೆ ಪ್ರಯೋಗ

ಎಐ ರೋಬೋಟ್ 'ಶೃತಿ' ಅಭಿನಯ

ಧರ್ಮಸ್ಥಳ: ರಂಗಭೂಮಿಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆಯುವ ಘಟನೆ ಧರ್ಮಸ್ಥಳದಲ್ಲಿ ನಡೆದಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ರಂಗಶಿವ ಕಲಾಬಳಗದ ವತಿಯಿಂದ ಆಯೋಜಿಸಲಾದ 2026ನೇ ಸಾಲಿನ 'ನಲಿಯೋಣ ಬಾ' ರಂಗಶಿಬಿರದಲ್ಲಿ, ಮೊದಲ ಬಾರಿಗೆ ಎಐ ರೋಬೋಟ್ 'ಶೃತಿ' ರಂಗಮಂಚದಲ್ಲಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ.

ಹೇಮಾವತಿ ವಿ. ಹೆಗ್ಗಡೆ ಅವರ ಪರಿಕಲ್ಪನೆ ಮತ್ತು ಮಾರ್ಗದರ್ಶನದಲ್ಲಿ ನಡೆದ ಈ ರಂಗಶಿಬಿರದ ಸಮಾರೋಪ ಸಮಾರಂಭವು ವಸಂತ ಮಹಲ್‌ನಲ್ಲಿ ಹಬ್ಬದ ವಾತಾವರಣವನ್ನು ಸೃಷ್ಟಿಸಿತು.

9 ದಿನಗಳ ಕಾಲ ನಡೆದ ಈ ಶಿಬಿರವನ್ನು ರಂಗ ನಿರ್ದೇಶಕ ಸುನಿಲ್ ಶೆಟ್ಟಿ ಕಲ್ಲೊಪ್ಪ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಹೇಮಾವತಿ ವಿ. ಹೆಗ್ಗಡೆ ಅವರ ರಚನೆಯ 'ಹೂವಿಯ ಕನಸು' ನಾಟಕವನ್ನು ಪ್ರದರ್ಶಿಸಲಾಯಿತು. ಈ ಮಕ್ಕಳ ನಾಟಕದಲ್ಲಿ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ಮಾತ್ರವಲ್ಲದೆ, ಎಐ ರೋಬೋಟ್ 'ಶೃತಿ' ಕೂಡ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು ವಿಶೇಷವಾಗಿದೆ.

ನಾಟಕವು 'ಹೂವಿ' ಎಂಬ ಪುಟ್ಟ ಹುಡುಗಿಯ ಕನಸಿನ ಲೋಕದ ಸುತ್ತ ತಿರುಗುತ್ತದೆ. ಹೂವಿಯ ಕನಸಿನಲ್ಲಿ ಕಾಣಿಸಿಕೊಳ್ಳುವ ರೋಬೋಟ್ 'ಶೃತಿ', ಕಥೆಯನ್ನೇ ಮುಂದಕ್ಕೆ ಕೊಂಡೊಯ್ಯುವ ಮುಖ್ಯ ಪಾತ್ರವಹಿಸಿದೆ. ವೈದ್ಯರ ದುರಾಸೆಯಿಂದ ಹುಟ್ಟುವ ಸುಳ್ಳು ರೋಗ, ಜನರ ಮೋಸ, ಹಾಗೂ ಅದರ ವಿರುದ್ಧ ಹೂವಿಯ ಚಾಣಾಕ್ಷತನದಿಂದ ಸತ್ಯ ಹೊರಬರುವ ಕಥಾಹಂದರ ಪ್ರೇಕ್ಷಕರ ಮನಸೆಳೆಯಿತು.



ಪ್ರಶಂಸೆಗೆ ಪಾತ್ರ

ನಾಟಕದ ಕೊನೆಯಲ್ಲಿ ನಿಜವಾದ ರೋಬೋಟ್ 'ಶೃತಿ' ರಂಗಮಂಚದಲ್ಲಿ ಕಾಣಿಸಿಕೊಂಡು ಪ್ರೇಕ್ಷಕರಿಗೆ ಅಚ್ಚರಿ ಮತ್ತು ಸಂತೋಷವನ್ನುಂಟು ಮಾಡಿತು. ರಂಗಭೂಮಿಗೆ ತಂತ್ರಜ್ಞಾನವನ್ನು ಪರಿಚಯಿ ಸುವ ಈ ಪ್ರಯತ್ನಕ್ಕೆ ರಂಗಶಿವ ಕಲಾಬಳಗ ಪ್ರಶಂಸೆಗೆ ಪಾತ್ರವಾಗಿದೆ.

ಆಧುನಿಕತೆಯ ನಡುವೆ ಮಕ್ಕಳನ್ನು ಮತ್ತೆ ರಂಗಭೂಮಿಯತ್ತ ಸೆಳೆಯುವ ಉದ್ದೇಶದಿಂದ ಈ ಉಚಿತ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಭಾಗವಹಿಸಿದ ಮಕ್ಕಳ ಅಭಿನಯವೂ ಅತ್ಯಂತ ಮನೋಜ್ಞವಾಗಿತ್ತು.

ಈ ಸಂದರ್ಭದಲ್ಲಿ ಹೆಗ್ಗಡೆಯವರ ಕುಟುಂಬದ ಸದಸ್ಯರು ಉಪಸ್ಥಿತರಿದ್ದು ಮಕ್ಕಳನ್ನು ಅಭಿನಂದಿಸಿದರು. ತಾಂತ್ರಿಕ ವಿಭಾಗದಲ್ಲಿ ಯಶವಂತ್ ಬೆಳ್ತಂಗಡಿ ಮತ್ತು ಸಂದೇಶ್ ಸಹಕರಿಸಿದ್ದು, ಪ್ರಸಾಧನ ಮತ್ತು ಬೆಳಕಿನ ನಿರ್ವಹಣೆಯನ್ನು ಎಸ್.ಡಿ.ಎಂ ರಂಗ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳು ಯಶಸ್ವಿಯಾಗಿ ನಿರ್ವಹಿಸಿದರು.

ಇಡೀ ಶಿಬಿರದ ನಿರ್ವಹಣೆಯನ್ನು ರಂಗಶಿವ ಕಲಾಬಳಗದ ಅಧ್ಯಕ್ಷರಾದ ರಾಜೇಂದ್ರ ದಾಸ್, ಸದಸ್ಯರಾದ ಕೃಷ್ಣರಾವ್, ಅಭಿಷೇಕ್ ರಾವ್, ಜಗದೀಶ್, ಸುಬ್ರಹ್ಮಣ್ಯ, ಪದ್ಮರೇಖಾ, ಡಾ. ಅನನ್ಯ ಜೈನ್, ಶೋಧನ್ ಜೈನ್ ಇವರೆಲ್ಲರ ನೇತೃತ್ವದಲ್ಲಿ ರಂಗಶಿವದ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

ರಂಗಭೂಮಿಯೊಂದಿಗೆ ತಂತ್ರಜ್ಞಾನ ಸಂಯೋಜನೆಯ ಈ ಪ್ರಯೋಗ, ಭವಿಷ್ಯದ ರಂಗಕಲೆಗೆ ಹೊಸ ದಿಕ್ಕನ್ನು ತೋರಿಸಿದೆ.

ಕೆನರಾ ಕಾಲೇಜಿನಲ್ಲಿ ರಾಜ್ಯ ಮಟ್ಟದ ಸಮ್ಮೇಳನ



ಮಂಗಳೂರು: ನಗರದ ಕೆನರಾ ಕಾಲೇಜಿನ (ಸ್ವಾಯತ್ತ) ವಾಣಿಜ್ಯ ಸ್ನಾತಕೋತ್ತರ ವಿಭಾಗದ ವತಿಯಿಂದ 'ವರ್ಚುವಲ್ ವಿಸ್ತಾಸ್ ಆಫ್ ಭಾರತ್ ಅನ್ ಲಾಕಿಂಗ್ ಇಂಡಿಯಾಸ್ ಕ್ರಿಯೇಟಿವ್ ಕ್ಯಾಪಿಟಲ್ ತ್ರೂ ಡಿಜಿಟಲ್ ಟ್ವಿನ್ಸ್ ಆ್ಯಂಡ್ ಸ್ಮಾರ್ಟ್ ಬಿಜಿನೆಸ್' ವಿಷಯದ ಕುರಿತು ರಾಜ್ಯ ಮಟ್ಟದ ಒಂದು ದಿನದ ಸಮ್ಮೇಳನ ಇತ್ತೀಚೆಗೆ ನಡೆಯಿತು.

ಈ ಸಮ್ಮೇಳನದಲ್ಲಿ ವಿವಿಧ ಕಾಲೇಜುಗಳ ಯುಜಿ ಹಾಗೂ ಪಿಜಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕಾಲೇಜಿನ ಯುಜಿ ವಿದ್ಯಾರ್ಥಿಗಳಿಗಾಗಿ ಅಂತರ ತರಗತಿ ವಾಣಿಜ್ಯ ಮತ್ತು ನಿರ್ವಹಣಾ ಫೆಸ್ಟ್- ರಣನೀತಿ 2026ನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಸಿಎ ಪ್ರಸನ್ನ ಶೆಣೈ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ನವೀನತೆ ಮತ್ತು ಉದ್ಯಮಶೀಲತೆಯತ್ತ ಗಮನಹರಿಸಬೇಕು ಎಂದು ಕರೆ ನೀಡಿದರು. ಸ್ನಾತಕೋತ್ತರ ವಿಭಾಗದ ಸಂಯೋಜಕಿಸ್ವಾತಿ ನಾಯಕ್ ಅವರು ಕಾರ್ಯಕ್ರಮದ ಉದ್ದೇಶ ಮತ್ತು ರೂಪುರೇಷೆಗಳ ಕುರಿತು ವಿವರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರೇಮಲತಾ ವಿ. ಅಧ್ಯಕ್ಷತೆ ವಹಿಸಿದ್ದರು.

ಪ್ರಬಂಧಗಳು ಮಂಡನೆ

ಸಮ್ಮೇಳನದ ಅಂಗವಾಗಿ ನಡೆದ ಪ್ಯಾನೆಲ್ ಪೇಪರ್ ಪ್ರಸ್ತುತಿಗಳಲ್ಲಿ ವಿವಿಧ ಕಾಲೇಜುಗಳಿಂದ ಯುಜಿ ಮತ್ತು ಪಿಜಿ ವಿದ್ಯಾರ್ಥಿಗಳಿಂದ ಒಟ್ಟು 35 ಸಂಶೋಧನಾ ಪ್ರಬಂಧಗಳು ಮಂಡಿಸಲ್ಪಟ್ಟವು. ಇವು ಸಮಕಾಲೀನ ವ್ಯವಹಾರ ಮತ್ತು ಡಿಜಿಟಲ್ ಪರಿವರ್ತನೆಗೆ ಸಂಬಂಧಿಸಿದ ವಿಭಿನ್ನ ವಿಷಯಗಳನ್ನು ಒಳಗೊಂಡಿದ್ದವು. ಅಂದು ನಡೆದ ರಣನೀತಿ 2026 ಫೆಸ್ಟ್, ಪದವಿ ವಿದ್ಯಾರ್ಥಿಗಳಲ್ಲಿ ಕಾರ್ಯೋತ್ತಕ ಕಲಿಕೆ ಮತ್ತು ನಾಯಕತ್ವ ಕೌಶಲ್ಯಗಳನ್ನು ಅಳವಡಿಸಲು ಉತ್ತೇಜಿಸಿತು.

ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ನೇತೃತ್ವದಲ್ಲಿ ಬೀಳ್ಕೊಡುಗೆ

ಎಸ್‌ಸಿಡಿಸಿಸಿ ಬ್ಯಾಂಕ್: ನಿವೃತ್ತರಿಗೆ ವಿದಾಯ



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಸಹಾಯಕ ಮಹಾಪ್ರಬಂಧಕ ಕರುಣಾಕರ ಹಾಗೂ ಕಿರಿಯ ಶಾಖಾ ನಿರೀಕ್ಷಕರಾದ ರಾಜಾರಾಮ ರಾವ್ ಡಿ. ಅವರು ಸೇವಾ ನಿವೃತ್ತಿಯನ್ನು ಹೊಂದಿದ್ದು ಇವರನ್ನು ಬೀಳ್ಕೊಡುವ ಸಮಾರಂಭವು ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆಯಿತು.

ಕರುಣಾಕರ ಅವರು 32 ವರ್ಷ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿ ಸಹಾಯಕ ಮಹಾಪ್ರಬಂಧಕರಾಗಿ ನಿವೃತ್ತಿ ಹೊಂದುತ್ತಿದ್ದು ಮತ್ತು ರಾಜರಾಮ ರಾವ್ ಅವರು ಕೂಡಾ 32 ವರ್ಷ ಸೇವೆ ಸಲ್ಲಿಸಿ ಕಿರಿಯ ಶಾಖಾ ನಿರೀಕ್ಷಕರಾಗಿ ನಿವೃತ್ತಿ ಹೊಂದಿದ್ದಾರೆ.

ನಿವೃತ್ತಿ ಹೊಂದಿದ ಅಧಿಕಾರಿದ್ವಯರನ್ನು ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರು ಹಾರ, ಶಾಲು ಹೊದಿಸಿ, ಫಲಪುಷ್ಪ, ಸ್ಮರಣಿಕೆಯ ಜೊತೆಗೆಸನ್ಮಾನಿಸಿದರಲ್ಲದೆ, ನಿವೃತ್ತಿಯಾದ ಅಧಿಕಾರಿಗಳ ನಿವೃತ್ತ ಜೀವನವು ಆರೋಗ್ಯಪೂರ್ಣವಾಗಿ ಸುಖಮಯವಾಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ಎಸ್‌ಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಜೋವಿನ್ ಪ್ರಕಾಶ್ ಡಿ' ಸೋಜಾ ಹಾಗೂ ಬ್ಯಾಂಕಿನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀ ಕೊಡಮಣಿತ್ತಾಯ ಶ್ರೀ ಬ್ರಹ್ಮ ಬೈದರ್ಕಳ ಗರೋಡಿ ಕೊಡಿಪಾಡಿ

ಪುನರ್ ಪ್ರತಿಷ್ಠಾ ಬ್ರಹ್ಮ ಕಲಶೋತ್ಸವ

ಸುರತ್ಕಲ್: ಕೊಡಿಪಾಡಿಯ ಶ್ರೀ ಕೊಡಮಣಿತ್ತಾಯ ಶ್ರೀ ಬ್ರಹ್ಮ ಬೈದರ್ಕಳ ಗರೋಡಿಯಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮ ಕಲಶೋತ್ಸವ ಕಾರ್ಯಕ್ರಮ ಏ. 30ರಂದು ಕ್ಷೇತ್ರದ ತಂತ್ರಿಗಳಾದ ಮಿಜಾರು ಪುಮಾವರ ಗುತ್ತು ದಿನೇಶ್ ಪೇಜತ್ತಾಯ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಏ. 30 ರಂದು ಜರಗಿತು.

ಬೆಳಗ್ಗೆ ವಿಶೇಷ ಆರಾಧನೆ, ಪೂಜೆಯ ಬಳಿಕ ಸುಮೂರ್ತದಲ್ಲಿ ಕ್ಷೇತ್ರದ ನೂತನ ಆಲಯಗಳಲ್ಲಿ ಶ್ರೀ ಧರ್ಮರಸು ಉಳ್ಳಾಯ, ಶ್ರೀ ಕೊಡಮಣಿತ್ತಾಯ, ಶ್ರೀ ಬ್ರಹ್ಮ ಬೈದರ್ಕಳ ಮಾಯಂದಾಲೆ ದೈವಗಳ ಪುನರ್ ಪ್ರತಿಷ್ಠೆ ನಡೆಯಿತು. ಕಲಶ ಪೂಜೆಯ ಬಳಿಕ ಬ್ರಹ್ಮಕಲಶ ಅಭಿಷೇಕ, ಕೊಡಿಮರ, ಕಲಶ ಪ್ರತಿಷೆ ಮತ್ತಿತರ ಕಾರ್ಯ ನೆರವೇರಿತು. ಇದರೊಂದಿಗೆ ದೈವ ದರ್ಶನ ನಡೆದು ಅಭಯ ಪಡೆಯಲಾಯಿತು.

ಪಲ್ಲ ಪೂಜೆಯ ಬಳಿಕ ಮಧ್ಯಾಹ್ನ 1 ರಿಂದ ಮಹಾ ಅನ್ನ ಸಂತರ್ಪಣೆ ನಡೆಯಿತು.ಈ ಸಂದರ್ಭದಲ್ಲಿ ಗಡಿ ಪ್ರಧಾನರಾದ ಜಗನ್ನಾಥ ಅತ್ತಾರ್, ವಿವಿಧ ದೈವಾಲಯಗಳ ಗಡಿ ಪ್ರಧಾನರು, ಕ್ಷೇತ್ರ ಸೇವಾ ಸಮಿತಿಯ ರೂಪೇಶ್ ರೈ ಕೊಯಿಕುಡೆ ಬಾಳಿಕೆ, ಬ್ರಹ್ಮ ಕಲಶೋತ್ಸವ ಸಮಿತಿ ಅಧ್ಯಕ್ಷ ಪದ್ಮರಾಜ್ ಆರ್ ಪೂಜಾರಿ, ಉಪಾಧ್ಯಕ್ಷರಾದ ಸತೀಶ್ ಮುಂಚೂರು, ಗೌರವಾಧ್ಯಕ್ಷ ರಾದ ಭುಜಂಗ ಶೆಟ್ಟಿ, ಕಾರ್ತಿಕ್ ಶೆಟ್ಟಿ, ಸಂಚಾಲಕ ಸುರೇಂದ್ರ ಶೆಟ್ಟಿ, ಶಶಿಧರ್ ಶೆಟ್ಟಿ, ಸದಾನಂದ ಶೆಟ್ಟಿ, ವಿವಿಧ ಸಮಿತಿ ಪ್ರಮುಖರು, ಪದಾಧಿಕಾರಿಗಳು, ಭಕ್ತರು ಉಪಸ್ಥಿತರಿದ್ದರು.



ಇಂದಿನಿಂದ ನೇಮೋತ್ಸವ

ಮೇ 1 ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಧರ್ಮರಸು ಉಳ್ಳಾಯ ನೇಮ, ರಾತ್ರಿ 8 ಗಂಟೆಗೆ ಶ್ರೀ ಕೊಡಮಣಿತ್ತಾಯ ನೇಮ, ಮೇ 2 ರಂದು ರಾತ್ರಿ 8 ರಿಂದ ಶ್ರೀ ಬ್ರಹ್ಮ ಬೈದರ್ಕಳ ಮಾಯಂದಾಲೆ ನೇಮ, ಮೇ 3 ರಂದು ಬೆಳಗ್ಗೆ 6 ಗಂಟೆಗೆ ಧ್ವಜಾವರೋಹಣ ನೆರವೇರಲಿದೆ. ಸುಮಾರು 3.50 ಕೋಟಿ ರೂಪಾಯಿ ವೆಚ್ಚದಲ್ಲಿ ಧ್ವಜಸ್ತಂಭ, ರಾಜಗೋಪುರ, ಪ್ರಧಾನ ಮಹಾದ್ವಾರ, ತೀರ್ಥಕೆರೆ, ವಸಂತಕಟ್ಟೆ, ರಾಜನ್ ದೈವಗಳ ದೈವಸ್ಥಾನ, ಬ್ರಹ್ಮ ಬೈದರ್ಕಳ ಮಾಯಂದಾಲೆ ಶಕ್ತಿಗಳ ಗರೋಡಿಯು ಪುನರ್‌ನಿರ್ಮಾಣವಾಗಿದೆ.

ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆ

ಧರ್ಮ, ಸಂಸ್ಕೃತಿಯ ನೆಲೆಬೀಡಾಗಿದೆ: ಒಡಿಯೂರು ಶ್ರೀ

ಪಡುಬಿದ್ರಿ: ಪಡುಬಿದ್ರಿಯ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಲ್ಲಿ ಬರೆದಿಡುವಂತಹ ರೀತಿಯಲ್ಲಿ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ಡಾ. ಕೆ.ಪ್ರಕಾಶ್ ಶೆಟ್ಟಿ ಅವರ ಮುಂದಾಳತ್ವದಲ್ಲಿ ಜೀರ್ಣೋದ್ಧಾರಗೊಂಡು ಅದ್ಭುತವಾಗಿ ಬೆಳಗಿದ್ದು, ಧರ್ಮಪ್ರಜ್ಞೆಯನ್ನು ಪಸರಿಸುವಲ್ಲಿ ಸಂಪನ್ನಗೊಂಡಿದೆ ಎಂದು ಒಡಿಯೂರು ಶ್ರೀಗುರುದೇವದತ್ತ ಸಂಸ್ಥಾನಮ್‌ನ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಶ್ರೀಗಳವರು ಗುರುವಾರ ಸುಮಾರು 33 ಕೋಟಿ ರೂ. ವೆಚ್ಚದಲ್ಲಿ ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವ ಸಂದರ್ಭ ಸುಧರ್ಮ ಪ್ರಕಾಶ ವೇದಿಕೆಯಲ್ಲಿ ನಡೆದ ಧಾರ್ಮಿಕ ಸಭೆಯನ್ನು ದೀಪ ಪ್ರಜ್ವಲನೆಯ ಮೂಲಕ ಉದ್ಘಾಟಿಸಿ ದಾನಿಗಳನ್ನು ಸನ್ಮಾನಿಸಿ ಗೌರವಿಸಿ ಬಳಿಕ ಆಶೀರ್ವಚನದಲ್ಲಿ ಸಂದೇಶ ನೀಡುತ್ತಾ ಮಾತನಾಡಿದರು.

ದಾನ ಧರ್ಮದ, ಪ್ರೀತಿ ತುಂಬಿದ ಹೃದಯ, ಜ್ಞಾನದೊಂದಿಗೆ ಪರೋಪಕಾರದ ಮನೋಭಾವದ ಪಡುಬಿದ್ರಿಯ ಭಕ್ತರ ಸಂಪತ್ತಿನ ಸದ್ಬಳಕೆಯು ಸಂಪನ್ನವಾಗಿದ್ದು, ಧರ್ಮ, ಸಂಸ್ಕೃತಿಯ ನೆಲೆಬೀಡಾಗಿ ಪಡುಬಿದ್ರಿಯು ಮೇಳೈಸಿದೆ ಎಂದು ಸಂದೇಶ ನೀಡಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಯೋಗೀಶ್ ಶೆಟ್ಟಿ ಕಾಪು ಮಾತನಾಡಿ, ಡಾ.ಕೆ. ಪ್ರಕಾಶ್ ಶೆಟ್ಟಿ ಮುಂದಾಳತ್ವದಲ್ಲಿ 10 ತಿಂಗಳ ಅವಧಿಯಲ್ಲಿ ಅದ್ಭುತ ದೇವಾಲಯ ನಿರ್ಮಾಣಗೊಂಡಿದ್ದು ಇತಿಹಾಸವಾಗಿದೆ ಎಂದರು.

ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬ್ರಹ್ಮಕಲಶೋತ್ಸವ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಮಾತನಾಡಿ, ದೇವಳದ ಜೀರ್ಣೋದ್ಧಾರ ಪ್ರಕ್ರಿಯೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕೈ ಜೋಡಿಸಿದ ಸಮಸ್ತರಿಗೆ ಕೃತಜ್ಞತೆಯನ್ನು ಸಲ್ಲಿಸಿ ಸ್ವಾಗತಿಸಿದರು.

ಕಾರ್ಕಳ ಶ್ರೀ ಜ್ಞಾನಸುಧಾ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಸುಧಾಕರ ಶೆಟ್ಟಿ ಮಾತನಾಡಿ, ಬ್ರಹ್ಮಕಲಶೋತ್ಸವ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಅವರ ಹೃದಯ ಶ್ರೀಮಂತಿಕೆಯ ವ್ಯಕ್ತಿತ್ವದಿಂದ ಪಡುಬಿದ್ರಿಯಲ್ಲಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ ಸಮಾಜದ ಆಸ್ತಿಯಾಗಿದೆ ಎಂದರು.

ವೇದಿಕೆಯಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಉದ್ಯಮಿ ಎರ್ಮಾಳು ಉದಯ ಕುಮಾರ್ ಶೆಟ್ಟಿ, ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸಂದೀಪ್ ಕುಮಾರ್ ಮಂಜ, ವಿಶ್ವ ದೇವಾಡಿಗರ ಮಹಾಮಂಡಲದ ಅಧ್ಯಕ್ಷ ಧರ್ಮಪಾಲ ದೇವಾಡಿಗ, ಮುಂಬೈ ಉದ್ಯಮಿ ಸೂರ್ಯಕಾಂತ್ ಜೆ. ಸುವರ್ಣ, ಜೀರ್ಣೋದ್ಧಾರ ಮುಂಬೈ ಉಪಸಮಿತಿ ಅಧ್ಯಕ್ಷ ಮಹೇಶ್ ಶೆಟ್ಟಿ, ಬೆಂಗಳೂರು ಸಮಿತಿ ಅಧ್ಯಕ್ಷ ಉಪೇಂದ್ರ ಶೆಟ್ಟಿ, ಪ್ರಮುಖರಾದ ಸಾಂತೂರು ಭಾಸ್ಕರ ಶೆಟ್ಟಿ, ಶ್ರೀಕಾಂತ ಉಪಾಧ್ಯಾಯ, ಮೋಹನ್ ಬಾಬು ಬೆಂಗಳೂರು ಇದ್ದರು.

ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ವೈ. ಸುಕುಮಾರ್ ದಾನಿಗಳನ್ನು ಪರಿಚಯಿಸಿದರು. ಧಾರ್ಮಿಕ ಚಿಂತಕ ದಾಮೋದರ ಶರ್ಮ ನಿರೂಪಿಸಿ, ವಂದಿಸಿದರು.





ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	9	6	3	0	12	+0.617
ಗುಜರಾತ್	9	5	4	0	10	-0.192
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಕಿರುಸುದ್ದಿ

ಏಕದಿನ ತಂಡದಿಂದ ಪಂತ್ ಔಟ್?

• **ಮುಂಬೈ:** ಬ್ಯಾಟಿಂಗ್ ಲಯಕ್ಕಾಗಿ ಪರದಾಡುತ್ತಿರುವ ಲಖನೌ ಸೂಪರ್ ಜೇಂಟ್ಸ್ ತಂಡದ ನಾಯಕ ರಿಷಭ್ ಪಂತ್‌ಗೆ ಭಾರೀ ಹಿನ್ನಡೆಯಾಗಿದೆ. ಮುಂಬರಲಿರುವ ಏಕದಿನ ಪಂದ್ಯಗಳಲ್ಲಿ ಅವರನ್ನು ಕೈಬಿಡಲು ಚಿಂತನೆ ನಡೆದಿದೆ. ಅಜಿತ್ ಅಗರ್ಕರ್ ಈ ಬಗ್ಗೆ ಚಿಂತನೆ ನಡೆಸುತ್ತಿದ್ದು, ಅವರ ಬದಲಿಗೆ ಸಂಜು ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.



ಕಳೆದ ಎರಡು ಆವೃತ್ತಿಗಳಿಂದಲೂ ರಿಷಭ್ ಪಂತ್ ಅಷ್ಟೊಂದು ಪ್ರಭಾವಿ ಪ್ರದರ್ಶನ ನೀಡಿಲ್ಲ. ಈ ಆವೃತ್ತಿಯ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿರುವ ಅವರು, ಲಯದ ಹುಡುಕಾಟದಲ್ಲಿದ್ದಾರೆ. ಈ ನಿಟ್ಟಿನಲ್ಲಿ ಅವರ ಕೈಬಿಡಲಾಗುವುದು ಎಂದು ಹೇಳಲಾಗುತ್ತಿದೆ. ಅದೇ ಮತ್ತೊಂದು ಕಡೆ ಟಿ20 ವಿಶ್ವಕಪ್ ಹಾಗೂ ನಡೆಯುತ್ತಿರುವ ಐಪಿಎಲ್‌ನಲ್ಲಿ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಭರ್ಜರಿ ಪ್ರದರ್ಶನ ನೀಡುತ್ತಿದ್ದಾರೆ. ಪಂತ್ ಬದಲಿಗೆ ಸಂಜುಗೆ ಅವಕಾಶ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ ಏಕದಿನ ತಂಡದಲ್ಲಿ ರಿಷಭ್ ಪಂತ್ ರಾಹುಲ್ ಅವರ ಬ್ಯಾಕಪ್ ಆಗಿದ್ದರು.

ಜೂಡೋದಲ್ಲಿ ಅಧಿಕ ಪದಕದ ಗುರಿ: ಯತೀಶ್

• **ಮಂಗಳೂರು:** ಜೂಡೋ ಕ್ರೀಡೆಯ ಅಭಿವೃದ್ಧಿಗಾಗಿ ಕಾರ್ಯತಂತ್ರ ರೂಪಿಸಿ, ಅದನ್ನು ಸರಿಯಾದ ಹಾದಿಗೆ ಮರಳಿಸುವ ನಿಟ್ಟಿನಲ್ಲಿ ತಳಮಟ್ಟದಲ್ಲಿ ವಿವಿಧ ಉಪಕ್ರಮಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಅಲ್ಲದೆ ಜೂಡೋ ಸ್ಪೋರ್ಟ್ಸ್‌ನಲ್ಲಿ ಭಾರತಕ್ಕೆ ಗರಿಷ್ಠ ಪದಕ ಗೆಲ್ಲಿಸುವ ಗುರಿಯೊಂದಿಗೆ ಆಂದೋಲನ ಆರಂಭಿಸಲಾಗಿದೆ ಎಂದು ಅಂತಾರಾಷ್ಟ್ರೀಯ ರೆಫ್ರಿ ಮತ್ತು ಕರ್ನಾಟಕ ಸ್ಟೇಟ್ ಜೂಡೋ ಸ್ಪೋರ್ಟ್ಸ್ ಎಸೋಸಿಯೇಶನ್ ಅಧ್ಯಕ್ಷ ಯತೀಶ್ ನಾರಾಯಣ ಬಂಗೇರ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ 2030ರಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು 2036ರಲ್ಲಿ ನಡೆಯುವ ಒಲಂಪಿಕ್ಸ್ ನಲ್ಲಿ ಭಾರತ ತಂಡ ಜೂಡೋ ಸ್ಪೋರ್ಟ್ಸ್‌ನಲ್ಲಿ ಪದಕ ಗೆಲ್ಲುವುದಕ್ಕೆ ಪೂರಕವಾಗಿ ಕರ್ನಾಟಕವನ್ನು ದೇಶದ ಜೂಡೋದ ಶಕ್ತಿಕೇಂದ್ರವಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆಯೊಂದನ್ನು ಸಲ್ಲಿಸಲಾಗಿದೆ ಎಂದರು.

» ಕರ್ನಾಟಕ ಜೂಡೋ ಶಕ್ತಿಯಾಗಿಸಲು ಹೊಸ ಆಂದೋಲನ

» ಕ್ರೀಡಾಪಟುಗಳಿಗೆ ವಿಶೇಷ ತರಬೇತಿ ಯೋಜನೆ

ವಿವಿಧೆಡೆ ತರಬೇತಿ ಕೇಂದ್ರ: ಉಡುಪಿ-ಮಂಗಳೂರು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯಾಧುನಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಹಾಲಿ ಕ್ರೀಡಾ ಪಟುಗಳ ಆ ವೇಳೆ ನಿವೃತ್ತಿ ಅಂಚಿಗೆ ಬರುವುದರಿಂದ ಹೊಸದಾಗಿ ಕ್ರೀಡಾಪಟುಗಳಿಗೆ ತರಬೇತಿ ನೀಡಿ ಸಿದ್ಧಪಡಿಸಲಾಗುವುದು ಎಂದರು.ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಯುವ ಕ್ರೀಡಾಪಟುಗಳಿಗೆ ತರಬೇತಿ,, ಕಾರ್ಪೋರೇಟ್ ಪ್ರಾಯೋಜಕತ್ವ ಮತ್ತು ಕ್ರೀಡಾಪಟುಗಳ ಕಲ್ಯಾಣ, ಅಡಾಪ್ಟ್ ಎ ಚಾಂಪಿಯನ್, ಸಿಎಸ್‌ಆರ್ ಉಪಕ್ರಮಗಳ ಮೂಲಕ ಕ್ರೀಡಾಪಟುಗಳ ಪೋಷಣೆ, ಸಲಕರಣೆ ಮತ್ತು ಕ್ರೀಡಾಪಟುಗಳ ಉದ್ಯೋಗ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಲಾಗುವುದು ಎಂದವರು ತಿಳಿಸಿದರು.

ರಿಯಾನ್ ಪರಾಗ್‌ಗೆ ದಂಡ

• **ಮುಂಬೈ:** ಪಂದ್ಯದ ವೇಳೆ ವ್ಯಾಪಿಂಗ್ ಮಾಡಿರುವ ರಿಯಾನ್ ಪರಾಗ್‌ಗೆ ಭಾರತೀಯ ಕ್ರಿಕೆಟ್ ಸಂಸ್ಥೆ ದಂಡ ವಿಧಿಸಿದೆ. ಇ-ಸಿಗರೆಟ್ ಸೇದಿದ ಬೆನ್ನಲ್ಲೇ ರಾಜಸ್ಥಾನ ರಾಯಲ್ಸ್ ತಂಡದ ನಾಯಕನಿಗೆ ಪಂದ್ಯದ ಶೇ. 25ರಷ್ಟು ಮ್ಯಾಚ್ ಶುಲ್ಕವನ್ನು ದಂಡವನ್ನಾಗಿ ವಿಧಿಸಿದೆ.



ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದ ವೇಳೆ ಅವರು ಡ್ರೆಸ್ಸಿಂಗ್ ರೂಮ್‌ನಲ್ಲಿ ಇ-ಸಿಗರೆಟ್ ಸೇದುವ ದೃಶ್ಯ ಸೆರೆಯಾಗಿತ್ತು. ಇದು ಐಪಿಎಲ್ ಮಾನದಂಡಗಳ ಆರ್ಟಿಕಲ್ 2.21ರ ಪ್ರಕಾರ ಅಪರಾಧವಾಗಿದೆ.

ಪಂದ್ಯ ವೀಕ್ಷಿಸಿದ ದಿಲ್ಲಿ ಅಭಿಮಾನಿಗಳು ಅಪಘಾತದಲ್ಲಿ ನಿಧನ

• **ಹೊಸದಿಲ್ಲಿ:** ದಿಲ್ಲಿ ಹಾಗೂ ಬೆಂಗಳೂರು ನಡುವಿನ ಪಂದ್ಯ ವೀಕ್ಷಣೆ ಮಾಡಿಕೊಂಡು ಮನೆಗೆ ಹೊರಡುತ್ತಿದ್ದ ಕ್ಯಾಪಿಟಲ್ಸ್ ಅಭಿಮಾನಿಗಳಿಬ್ಬರು ಅಪಘಾತದಲ್ಲಿ ಮೃತಪಟ್ಟರು. ದಿಲ್ಲಿಯಲ್ಲಿ ನಡೆದಿದ್ದ ಬೆಂಗಳೂರು ವಿರುದ್ಧದ ಪಂದ್ಯವನ್ನು ದಿಲ್ಲಿ ಕ್ಯಾಪಿಟಲ್ಸ್ ತಂಡದ ಅಭಿಮಾನಿಗಳಾದ ಅಭವ್(14) ಹಾಗೂ ಯಾಗ್ಯಾ(20) ವೀಕ್ಷಣೆಗೆ ಬಂದಿದ್ದರು. ಮರಳಿ ಮನೆಗೆ ಹೋಗುವಾಗ ಬೈಕು ಮತ್ತು ಟ್ರಕ್ಕಿನ ನಡುವೆ ಅಪಘಾತವಾಗಿದೆ. ಇದೇ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದೆ. ಚಿಕಿತ್ಸೆ ಫಲಿಸದೆ ಇಬ್ಬರೂ ಸಾವಿಗೀಡಾಗಿದ್ದಾರೆ. ದಿಲ್ಲಿ ಕ್ಯಾಪಿಟಲ್ಸ್ ಸೇರಿದಂತೆ ಎಲ್ಲಾ ಫ್ರಾಂಚೈಸಿಗಳೂ ಇಬ್ಬರ ಸಾವಿಗೆ ಸಂತಾಪ ಸಲ್ಲಿಸಿವೆ.

ಬೆಂಗಳೂರಿಗೆ ಸೋಲಿನಾಘಾತ | ರಾಯಲ್ ಓಟಕ್ಕೆ ತಡೆ | ಗಿಲ್, ಬಟ್ಲರ್, ಹೋಲ್ಡರ್ ಮಿಂಚಿನಾಟ

ಗುಜರಾತ್ ಆಟಕ್ಕೆ ಬಸವಳಿದ ಆರ್‌ಸಿಬಿ

• **ಅಹಮದಾಬಾದ್:** ಬೆಂಗಳೂರು ತಂಡದ ರಾಯಲ್ ಓಟಕ್ಕೆ ಗುಜರಾತ್ ಟೈಟಾನ್ಸ್ ಬ್ರೇಕ್ ಹಾಕಿದೆ. ವೇಗಿ ಅರ್ಷದ್ ಖಾನ್, ಜೇಸನ್ ಹೋಲ್ಡರ್ ಅವರ ಮಾರಕ ಬೌಲಿಂಗ್ ದಾಳಿಗೆ ಕುಸಿದ ಆರ್‌ಸಿಬಿ, ಗಿಲ್ ಹಾಗೂ ಬಟ್ಲರ್ ಅಬ್ಬರದ ಮುಂದೆ ಮಂಕಾಯಿತು. ಅಹಮದಾಬಾದ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಶುಭಮನ್ ಪಡೆ 4 ವಿಕೆಟ್‌ಗಳಿಂದ ಗೆದ್ದಿದೆ.

ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿ 19.2 ಓವರ್‌ಗಳಲ್ಲಿ 155 ರನ್‌ಗೆ ಪತನಗೊಂಡಿತು. ಪಡಿಕ್ಕಲ್ 40, ಕೊಹ್ಲಿ 28 ರನ್‌ಗಳಿಸಿದರು. ಗುಜರಾತ್ ಪರ ಅರ್ಷದ್ 3, ಹೋಲ್ಡರ್ ಮತ್ತು ರಶೀದ್ 4 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಗುಜರಾತ್ 15.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು.

ಕೊಹ್ಲಿಯಿಂದ ಅಬ್ಬರದ ಆರಂಭ: ಟಾಸ್ ಗೆದ್ದ ಗುಜರಾತ್ ಬೆಂಗಳೂರಿಗೆ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಪಾಟಿದಾರ್ ಪಡೆ ಸಜ್ಜಾಯಿತು. ಮೊದಲಿಗೆ ವಿರಾಟ್ ಕೊಹ್ಲಿ ಅವರ ಬೌಂಡರಿಗಳ ಅಬ್ಬರ ಶುರುವಾಯಿತು. ಮೊದಲನೇ ಓವರ್‌ನಿಂದಲೇ ದಂಡಿಸುವ ಮನಸ್ಥಿತಿ ಕೊಹ್ಲಿ ಬ್ಯಾಟಿನಿಂದ ಗೋಚರಿಸಿದ್ದೇ ತಡ ಇತ್ತ ಜೇಕಬ್ ಬ್ಯಾಥಲ್ ಸಿರಾಜ್‌ಗೆ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ದೇವದತ್ತ ಪಡಿಕ್ಕಲ್ ಕೂಡ ಉತ್ತಮ ಬ್ಯಾಟಿಂಗ್ ಶುರು ಮಾಡಿದರು. ಕೊಹ್ಲಿ ಬೌಂಡರಿಗಳ ಅಬ್ಬರ. ಸಿರಾಜ್ ಎಸೆದ ಓವರ್‌ನಲ್ಲಿ ಬರೋಬ್ಬರಿ 5 ಬೌಂಡರಿ ಬಾರಿಸಿದರು. ಆದರೆ ಮುಂದಿನ ಓವರ್‌ನಲ್ಲೇ ವಿರಾಟ್(28; 13ಎ, 1ಸಿ) ರಬಾಡಗೆ ಕ್ಯಾಚಾದರು. ಪಾಟಿದಾರ್ ಮತ್ತು ಪಡಿಕ್ಕಲ್ ಕೊಂಚ ಹೊತ್ತು ಸೆಟ್ ಆಗುತ್ತಿದ್ದಂತೆ ಪವರ್ ಪ್ಲೇ ಮುಕ್ತಾಯಗೊಂಡಿತು. ಆರ್‌ಸಿಬಿ 59/2. ಅಂತಿಮ ಓವರ್‌ಗಳಲ್ಲಿ ಇಂಪ್ಯಾಕ್ಟ್ ಆಟಗಾರರಾಗಿ ವೆಂಕಟೇಶ್ ಅಯ್ಯರ್ ಬಂದರು. ಶೇಫರ್ಡ್ 17 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ವೆಂಕಟೇಶ್ ನಿಧಾನಗತಿ ಬ್ಯಾಟಿಂಗ್ ಶುರು ಮಾಡಿದರು. ಬ್ಯಾಟಿಂಗ್ ಗಿಳಿದ ವೇಗಿ ಭುವನೇಶ್ವರ್ ಕುಮಾರ್ ಎರಡು ಬೌಂಡರಿ ಬಾರಿಸುವಷ್ಟರಲ್ಲಿ 18 ಓವರ್‌ಗಳು ಮುಕ್ತಾಯಗೊಂಡವು. 15 ಬಾಲ್‌ಗಳಲ್ಲಿ 12 ರನ್ ಗಳಿಸಿದ ವೆಂಕಟೇಶ್ ಅಯ್ಯರ್ ಕ್ಯಾಚ್ ಆದರು. ಹ್ಯಾಜೆಲ್ವುಡ್ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದ ನಂತರ ಆರ್‌ಸಿಬಿ ಪತನಗೊಂಡಿತು. 19.2 ಓವರ್‌ಗಳಲ್ಲಿ 155 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್
ಆರ್‌ಸಿಬಿ 19.2 ಓವರ್‌ಗಳಲ್ಲಿ 155/10: ಪಡಿಕ್ಕಲ್ 40, ಕೊಹ್ಲಿ 28; ಅರ್ಷದ್ 22/3
ಗುಜರಾತ್ 15.5 ಓವರ್‌ಗಳಲ್ಲಿ 156/6: ಗಿಲ್ 43, ಬಟ್ಲರ್ 39; ಭುವನೇಶ್ವರ್ 28/3



ಕುಸಿದ ಆರ್‌ಸಿಬಿ
ಉತ್ತಮ ಆರಂಭ ಪಡೆದಿದ್ದ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಭಾರೀ ಕುಸಿತ ಕಂಡಿತು. ತಂಡ 79 ರನ್ ಆಗುವಷ್ಟರಲ್ಲಿ ಮೂರನೇ ವಿಕೆಟ್ ಕಳೆದುಕೊಂಡಿತು. ನಾಯಕ ರಜತ್ ಪಾಟಿದಾರ್ ಬೌಂಡರಿ-ಸಿಕ್ಸರ್ ಬಾರಿಸುತ್ತಲೇ ವಿವಾದಿತ ಕ್ಯಾಚ್‌ಗೆ ಬಲಿಯಾದರು. ಒತ್ತಡಕ್ಕೆ ಸಿಲುಕಿಕೊಂಡ ಆರ್‌ಸಿಬಿಗೆ ಪಡಿಕ್ಕಲ್ ಆಸರೆಯಾದರು. ಮಧ್ಯಮ ಓವರ್‌ಗಳಲ್ಲಿ ಸೆಟ್ ಆಗುವ ಟಿಪಚಾರಿಕತೆಗೆ ಬಿದ್ದ ಅವರು, ಒಂದೆರಡು ಆಕರ್ಷಕ ಬೌಂಡರಿಗಳನ್ನೂ ಬಾರಿಸಿದರು. ಜಿತೇಶ್ ಶರ್ಮ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಸ್ಫೋಟಕ ಬ್ಯಾಟಿಗ ಟೀಮ್ ಡೇವಿಡ್ ಆಟ 9ರನ್‌ಗೆ ಸೀಮಿತವಾಗಿತ್ತು. ಕೃಣಾಲ್ ಪಾಂಡ್ಯ 4 ರನ್‌ಗೆ ವಿಕೆಟ್ ಒಪ್ಪಿಸಿದರು. ಅಲ್ಲಿ ಪಡಿಕ್ಕಲ್‌ಗೆ ಯಾರೊಬ್ಬರೂ ಸಾಥ್ ಕೊಡಲಿಲ್ಲ. ಮಧ್ಯಮ ಓವರ್ ತನಕ ಬ್ಯಾಟಿಂಗ್ ಮಾಡಿದ ಪಡಿಕ್ಕಲ್ 40 ರನ್‌ಗೆ ಔಟಾದರು. ಮಧ್ಯಮ ಓವರ್‌ಗಳಲ್ಲಿ ಆರ್‌ಸಿಬಿಯ ಬ್ಯಾಟಿಂಗ್ ಪಡೆಯೇ ಮುರಿದು ಬಿತ್ತು. ಒಟ್ಟು 76 ರನ್ ಗಳಿಸಿದ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡಿತು.

ಗುಜರಾತ್ ಅಬ್ಬರ
ಗುರಿ ಬೆನ್ನತ್ತಿದ ಗುಜರಾತ್‌ಗೆ ಸ್ಫೋಟಕ ಆರಂಭ ಸಿಕ್ಕಿತು. ತಮ್ಮ ಸ್ವಾಭಾವಿಕ ಆಟಕ್ಕೂ ಮೀರಿ ಬಿರುಸಿನ ಬ್ಯಾಟಿಂಗ್ ಮಾಡಿದ ಗಿಲ್ ಸೆಟ್ ಆಗುವ ಟಿಪಚಾರಿಕತೆಗೆ ಬೀಳದೆ ದಂಡಿಸಿದರು. ಆದರೆ ಮತ್ತೊಂದು ಬದಿಯಲ್ಲಿ ಸ್ಫೋಟಕ ಬ್ಯಾಟರ್ ಸುದರ್ಶನ್ 6 ರನ್‌ಗೆ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ ಕೂಡ ಗಿಲ್‌ನೊಂದಿಗೆ ದಂಡಿಸುವ ಯೋಜನೆಯಲ್ಲಿ ಸೇರಿಕೊಂಡರು. ಪವರ್‌ಪ್ಲೇ ಉದ್ದಕ್ಕೂ ಇಬ್ಬರೂ ಆರ್‌ಸಿಬಿ ಬೌಲಿಂಗ್ ಪಡೆಯ ಬೆವರಿಳಿಸಿದರು. ಆರಂಭಿಕ ಓವರ್‌ಗಳಲ್ಲಿ ಗುಜರಾತ್ 69 ರನ್‌ಗಳಿಸಿತು. ಭುವನೇಶ್ವರ್ ಕುಮಾರ್ 2 ವಿಕೆಟ್ ಕಿತ್ತರು. ಮಧ್ಯಮ ಓವರ್‌ಗಳಲ್ಲಿ ಬಟ್ಲರ್ ಅಬ್ಬರ. ಸಿಕ್ಸರ್ ಮತ್ತು ಬೌಂಡರಿಗಳೊಂದಿಗೆ ಅಬ್ಬರಿಸಿದ ಅವರಿಗೆ ಗಿಫ್ಟ್ ಕೊಟ್ಟ ಜಿತೇಶ್ ಕ್ಯಾಚ್ ಬಿಟ್ಟರು.

ಆರ್‌ಸಿಬಿ ಕಂಬ್ಯಾಕ್
19 ಬಾಲ್‌ಗಳಲ್ಲಿ ಬಾನೆತ್ತರದ 4 ಸಿಕ್ಸರ್, 2 ಸ್ಫೋಟಕ ಬೌಂಡರಿ ಬಾರಿಸಿ ಬಟ್ಲರ್ ಪೆವಿಲಿಯನ್ ಹೊರಟರು. ಆದರೆ ಆರ್‌ಸಿಬಿಗೆ ಗೆಲುವು ದೂರವಿತ್ತು. ಗುಜರಾತ್‌ಗೆ ಉಳಿದ ಬಾಲ್‌ಗಿಂತಲೂ ಕಡಿಮೆ ರನ್ ಬೇಕಿದ್ದವು. 11ನೇ ಓವರ್‌ವರೆಗೂ ಗುಜರಾತ್ ಗೆಲುವಿನತ್ತ ಸಾಗಿತ್ತು. 11ನೇ ಓವರ್ ಮಾಡಲು ಬಂದ ರೋಮಾರಿಯೊ ಶೇಫರ್ಡ್ ಸರಸರನೇ 2 ವಿಕೆಟ್ ಕಿತ್ತರು. ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್ 12 ರನ್‌ಗೆ, ಶಾರುಖ್ ಖಾನ್ 8 ರನ್‌ಗೆ ವಿಕೆಟ್ ಒಪ್ಪಿಸಿದರು. ರಾಹುಲ್ ಟೀವಾಟಿಯ, ಜೇಸನ್ ಹೋಲ್ಡರ್ ಮೇಲೆ ಪಂದ್ಯ ಅವಲಂಬಿತವಾಯಿತು. 9 ಓವರ್‌ಗಳಲ್ಲಿ 34 ರನ್ ಮಾತ್ರ ಬೇಕಾಗಿದ್ದವು. ಮುಂದಿನ ಓವರ್‌ನಲ್ಲಿ ಮತ್ತೆರಡು ಬೌಂಡರಿ ಬಾರಿಸಿದ ಟೀವಾಟಿಯ(27*) ಪಂದ್ಯ ಕಸಿದರು. ಉಳಿದ ರನ್‌ಗಳನ್ನು ಬಾರಿಸಿ ಪಂದ್ಯ ಗೆಲ್ಲಿಸಿದರು.

ಮುಂಬೈಗೆ ಹೆಡ್ ಏಕ್



ಸಂಕ್ಷಿಪ್ತ ಸ್ಕೋರ್
ಮುಂಬೈ 20 ಓವರ್‌ಗಳಲ್ಲಿ 243/5: ರಯಾನ್ 123★, ಪಾಂಡ್ಯ 31; ಪ್ರಫುಲ್ 54/2
ಹೈದರಾಬಾದ್ 18.4 ಓವರ್‌ಗಳಲ್ಲಿ 249/4: ಹೆಡ್ 76, ಕ್ಲಾಸೆನ್ 65★, ಸಲೀಲ್ 30★; ಫಜಲ್‌ಫರ್ 51/2

• **ಮುಂಬೈ:** ವಿಶ್ವದ ನಂಬರ್ 1 ಬೌಲರ್ ಜಸ್‌ಪ್ರೀತ್ ಬೂಮ್ರಾ, ಭರವಸೆಯ ವೇಗಿಗಳಾದ ಟ್ರೆಂಟ್ ಬೋಲ್ಟ್, ಹಾರ್ದಿಕ್ ಪಾಂಡ್ಯ ಅಂಥ ಮಹಾ ಬೌಲರ್‌ಗಳನ್ನು ಹೊಂದಿದ್ದ ಮುಂಬೈ ಇಂಡಿಯನ್ಸ್ ತಂಡವು 244 ರನ್‌ಗಳನ್ನು ಉಳಿಸಿಕೊಳ್ಳಲು ವಿಫಲವಾಗಿದ್ದು, ಸನ್‌ರೈಸರ್ಸ್ ಹೈದರಾಬಾದ್ ತಂಡ 6 ವಿಕೆಟ್‌ಗಳ ಜಯಭೇರಿ ಬಾರಿಸಿತು.

ಈ ಬಾರಿಯ ಐಪಿಎಲ್‌ನಲ್ಲಿ ತೀರಾ ಹಿನ್ನಡೆಯೊಂದಿಗೆ ಕಂಗೆಟ್ಟಿರುವ ಮುಂಬೈ ಇಂಡಿಯನ್ಸ್ ತಂಡವು ಆರನೇ ಸೋಲು ಕಂಡಿತು. ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 243 ರನ್ ಗಳಿಸಿತು. ರಯಾನ್ ರಿಕೆಲ್ಟನ್(123★) ಅಬ್ಬರದ ಶತಕ ಬಾರಿಸಿದರು. ಹಾರ್ದಿಕ್(31) ಮಿಂಚಿದ್ದರು. ಗುರಿ ಬೆನ್ನತ್ತಿದ ಹೈದರಾಬಾದ್ 18.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 249 ರನ್ ಗಳಿಸಿ ಗುರಿ ಮುಟ್ಟಿತು. ಟ್ರಾವಿಸ್ ಹೆಡ್ 76 ರನ್ ಗಳಿಸಿದರು. ಹೆನ್ರಿಕ್ ಕ್ಲಾಸೆನ್ 65★ ರನ್ ಬಾರಿಸಿದರು. ಸಲೀಲ್ ಆರೋರಾ(30★) ಪಂದ್ಯ ಮುಗಿಸಿದರು. ಟ್ರಾವಿಸ್ ಹೆಡ್ ಪಂದ್ಯದ ಹೀರೋ. ಕ್ಲಾಸೆನ್ ಗೆಲುವಿನಲ್ಲಿ ಮಿಂಚಿದರು. ಸಲೀಲ್ ಆರೋರಾ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ರೂವಾರಿಗಳಲ್ಲಿ ಒಬ್ಬರಾದರು. ಮುಂಬೈ ತಂಡದ ಪ್ರತಿಯೊಬ್ಬ ಬೌಲರ್ ಕೂಡ 10ಕ್ಕೂ ಹೆಚ್ಚು ಎಕನಾಮಿ ಹೊಂದಿದ್ದರು. ಫಜಲ್‌ಫರ್ ಮಾತ್ರ 2 ವಿಕೆಟ್ ಪಡೆದರು. ಬ್ಯಾಟಿಂಗ್ ಮಾಡುವ ವೇಳೆ ಮುಂಬೈ ಪರ ರಯಾನ್ ಅಬ್ಬರಿಸಿದರು.

ರನ್ ಮಟ್ಟ
ಪವರ್‌ಪ್ಲೇನಲ್ಲಿ ಆಕಡೆ ರಯಾನ್ ಅಬ್ಬರಿಸಿದರು. ಅವರಿಗೆ ಜ್ಯಾಕ್ಸ್ ಸಾಥ್ ಸಿಕ್ಕ ನಂತರ ಮುಂಬೈ 78 ರನ್ ಗಳಿಸಿತು. ಇತ್ತ ಹೈದರಾಬಾದ್ ಪರ ಇಬ್ಬರೂ ಬ್ಯಾಟರ್‌ಗಳು ಬಿರುಸಿನ ಬ್ಯಾಟಿಂಗ್ ಮಾಡಿದರು. ಇಷ್ಟು ದಿನ ಮರೆ ಮಾಚಿದ್ದ ಹೆಡ್ ಅಸಲು ಆಟ ಬಯಲಾಯಿತು. ಹೈದರಾಬಾದ್ 92 ರನ್ ಗಳಿಸಿತು. ಇದರಲ್ಲಿ ಹೆಡ್ ಅರ್ಧಶತಕ ಪೂರೈಸಿಕೊಂಡರು. ಮಧ್ಯಮ ಓವರ್‌ಗಳಲ್ಲಿ ರಿಕೆಲ್ಟನ್ ಅವರದ್ದೇ ಅಬ್ಬರ. ಸಿಕ್ಸರ್ ಹಾಗೂ ಬೌಂಡರಿಗಳೊಂದಿಗೆ ಅಬ್ಬರಿಸಿ ಶತಕ ಪೂರೈಸಿದರು. ಮುಂಬೈ ಮಧ್ಯಮ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡಿತಾದರೂ 124 ರನ್ ಗಳಿಸಿತು. ಹೈದರಾಬಾದ್‌ಗೆ ನಾಗಾಲೋಟ, ಹೆಡ್ 76, ಅಭಿ 46 ರನ್ ಗಳಿಸಿ ಅರ್ಧ ಕೆಲಸ ಮುಗಿಸಿದ್ದರು. ಇಬ್ಬರೂ ವಿಕೆಟ್ ಒಪ್ಪಿಸಿದ ನಂತರ ಕಿಶನ್ ಹೆಚ್ಚಿನ ಕೊಡುಗೆ ನೀಡಲೇ ಇಲ್ಲ. ಆದರೆ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಹೈದರಾಬಾದ್ 18 ಸಿಕ್ಸರ್‌ಗಳನ್ನು ಸುರಿಯಿತು. ಮಧ್ಯಮ ಓವರ್‌ಗಳಲ್ಲಿ 123 ರನ್ ಆದವು. ಡೆತ್ ಓವರ್‌ಗಳಲ್ಲಿ ಮುಂಬೈ ಪರ ಹಾರ್ದಿಕ್ ಪಾಂಡ್ಯ ಅಬ್ಬರಿಸಿದರು. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸುವ ಕೆಲಸ ಮಾಡಿದರು. ರಯಾನ್ ಕೂಡ ಒಂದಿಷ್ಟು ಬೌಂಡರಿಗಳನ್ನು ಬಾರಿಸಿದ ನಂತರ ಮುಂಬೈ ಅಲ್ಲಿ 41 ರನ್ ಗಳಿಸಿತು. ಅತ್ತ ಹೈದರಾಬಾದ್ ಡೆತ್‌ನಲ್ಲಿ 37 ರನ್ ಗಳಿಸಬೇಕಿತ್ತು. ಕ್ಲಾಸೆನ್ ಅರ್ಧ ಶತಕ ಬಾರಿಸಿದ್ದರು. ಸಲೀಲ್ ಆರೋರಾ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. 30 ರನ್ ಬಾರಿಸಿದ ಅವರು, ಹೈದರಾಬಾದ್ ಮಡಿಲಿಗೆ ಪಂದ್ಯ ಹಾಕಿದರು. ಡೆತ್ ಮುಗಿಯುವ ಹೊತ್ತಿಗೆ ಹೈದರಾಬಾದ್ ಪಂದ್ಯ ಗೆದ್ದಿತು.

ಥಾಮಸ್: ಭಾರತಕ್ಕೆ ತೈವಾನ್ ಎದುರು

• **ಹೊಸದಿಲ್ಲಿ:** ಥಾಮಸ್ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ತೈವಾನ್ ವಿರುದ್ಧ ಮುಖಾಮುಖಿಯಾಗಲಿದೆ. ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಡ್ರಾ ಬಳಿಕ ಈ ಪೈಪೋಟಿ ನಿಗದಿಯಾಗಿದೆ. 2022ರ ಚಾಂಪಿಯನ್ ಭಾರತ ತಂಡವು ತನ್ನ ಅಭಿಯಾನವನ್ನು ಕೆನಡಾ ವಿರುದ್ಧ 4-1 ಗೆಲುವಿನಿಂದ ಆರಂಭಿಸಿ, ಆಸ್ಟ್ರೇಲಿಯಾ ವಿರುದ್ಧ 5-0 ಅಂತರದ ಭರ್ಜರಿ ಜಯ ಸಾಧಿಸಿತು. ಆದರೆ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಚೀನಾ ವಿರುದ್ಧ 2-3 ಅಂತರದಲ್ಲಿ ಸೋಲು ಕಂಡಿತು.

ಭಾರತ, ಗುಂಪು ಎ'ಯಲ್ಲಿ ಹಾಲಿ ಚಾಂಪಿಯನ್ ಚೀನಾ ಹಿಂದೆ ಎರಡನೇ ಸ್ಥಾನ ಪಡೆದರೆ, ಚೈನೀಸ್ ತೈಪೆ ಗುಂಪು ಸಿ'ಯಲ್ಲಿ ಅಗ್ರಸ್ಥಾನ ಪಡೆದಿದೆ. ಇತರೆ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಚೀನಾ ಮಲೇಷ್ಯಾ, ಥೈಲ್ಯಾಂಡ್ ಆತಿಥೇಯ ಡೆನ್ಮಾರ್ಕ್ ಮತ್ತು ಜಪಾನ್ ಫ್ರಾನ್ಸ್ ಮುಖಾಮುಖಿಯಾಗಲಿವೆ. ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್‌ಅಪ್ ಆಗಿ ಬಂದಿರುವ ಆಯುಷ್ ಶೆಟ್ಟಿ ಉತ್ತಮ ಲಯದಲ್ಲಿದ್ದು, ಮೂರು ಸಿಂಗಲ್ಸ್ ಪಂದ್ಯಗಳನ್ನೂ ಗೆದ್ದಿದ್ದಾರೆ. ಆದರೆ ಭಾರತದ ಪ್ರಮುಖ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್, ಕೆನಡಾದ ವಿಕ್ಟರ್ ಲೈ ಹಾಗೂ ಚೀನಾದ ಲಿ ಶಿ ಫೆಂಗ್ ವಿರುದ್ಧ ಸೋಲು ಅನುಭವಿಸಿದ್ದಾರೆ.

ಯಾರು v/s ಯಾರು?: ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್-ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಚೀನಾದ ಲಿಯಾಂಗ್ ವೇಯ್ ಕೆಂಗ್ ವಾಂಗ್ ಚಾಂಗ್ ವಿರುದ್ಧ 13-21, 21-13, 24-26 ಅಂತರದಲ್ಲಿ ಹೋರಾಟದ ಸೋಲು ಕಂಡು ನಾಕೌಟ್ ಹಂತಕ್ಕೆ ಪ್ರವೇಶಿಸುತ್ತಿದೆ. ಅನುಭವಿಗಳಾದ ಕಿಡಂಬಿ ಶ್ರೀಕಾಂತ್ ಮತ್ತು ಎಚ್. ಎಸ್. ಪ್ರಣಯ್ ತಂಡದಲ್ಲಿದ್ದರೂ, ಕ್ವಾರ್ಟರ್ ಫೈನಲ್‌ನಲ್ಲಿ ಭಾರತವನ್ನು ಗೆಲುವಿನತ್ತ ಮುನ್ನಡೆಸುವ ಹೊಣೆ ಲಕ್ಷ್ಯ, ಆಯುಷ್ ಹಾಗೂ ಸಾತ್ವಿಕ್-ಚಿರಾಗ್ ಜೋಡಿಯ ಮೇಲಿದೆ. ಚೈನೀಸ್ ತೈಪೆ ತಂಡದಲ್ಲಿ ವಿಶ್ವ ಕ್ರಮಾಂಕ 6ರ ಚೌ ತಿಯೆನ್ ಚೆನ್, 8ರ ಲಿನ್ ಚುನ್-ಯಿ ಮತ್ತು 21ರ ಚಿ ಯು ಜೆನ್ ಪ್ರಮುಖ ಸಿಂಗಲ್ಸ್ ಆಟಗಾರರು. ಇತ್ತೀಚಿನ ಆಲ್ ಇಂಗ್ಲೆಂಡ್ ಓಪನ್‌ನಲ್ಲಿ ಚುನ್-ಯಿ, ಲಕ್ಷ್ಯ ಸೇನ್ ಅವರನ್ನು ಸೋಲಿಸಿದ್ದರು. ಇದಲ್ಲದೆ 2025ರ ಆಲ್ ಇಂಗ್ಲೆಂಡ್ ರನ್ನರ್‌ಅಪ್ ಚಿಯಾ ಹಾವೋ ಲೀ ಕೂಡ ಸಿಂಗಲ್ಸ್ ಆಯ್ಕೆಯಾಗಿ ಇದ್ದಾರೆ. ಡಬಲ್ಸ್‌ನಲ್ಲಿ ಚಿಯು ಹ್ಸಿಯಾಂಗ್ ಚಿಹ್ ವಾಂಗ್ ಚಿ-ಲಿನ್ ಮೊದಲ ಜೋಡಿ ಆಗಿದ್ದು, ಲಿಯು ಕ್ವಾಂಗ್ ಹೆಂಗ್ ಯಾಂಗ್ ಪೋ ಹಾನ್ ಎರಡನೇ ಜೋಡಿಯಾಗಿದ್ದಾರೆ.



ಚೀನಾ ವಿರುದ್ಧದ ಲೀಗ್ ಹಂತ ಪಂದ್ಯದಲ್ಲಿ ಸೋಲು

ಗುಂಪು ಹಂತದಲ್ಲಿ ಚೈನೀಸ್ ತೈಪೆ ಸ್ವೀಡನ್ ವಿರುದ್ಧ 5-0 ಅಂತರದ ಜಯ ಸಾಧಿಸಿತು. ಕೊರಿಯಾ ವಿರುದ್ಧ 2-0 ಮುನ್ನಡೆಯಿದ್ದರೂ ಸೋಲು ಕಂಡಿತು. ಆದರೆ ಕೊನೆಯ ಪಂದ್ಯದಲ್ಲಿ ಡೆನ್ಮಾರ್ಕ್ ವಿರುದ್ಧ 3-2 ಗೆದ್ದು ಗುಂಪಿನ ಅಗ್ರಸ್ಥಾನವನ್ನು ಕಾಪಾಡಿಕೊಂಡಿತು. ಆ ಪಂದ್ಯದಲ್ಲಿ ಚಿ ಯು ಜೆನ್ ಐದು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಡಿಟ್ಲೆವ್ ಜೇಗರ್ ಹೋಮ್ ವಿರುದ್ಧ 21-11, 9-11, 27-25 ಅಂತರದಲ್ಲಿ ಗೆದ್ದು ತಂಡಕ್ಕೆ ನಿರ್ಣಾಯಕ ಜಯ ತಂದುಕೊಟ್ಟರು.

ಗೆಲುವಿನ ಲಯಕ್ಕೆ ಮರಳೀತೇ ದಿಲ್ಲಿ?

• **ಜೈಪುರ:** ಯಾರೂ ಸೋಲಿಸಲಾಗದ ಪಂಜಾಬ್ ಕಿಂಗ್ಸ್ ತಂಡವನ್ನು ಸೋಲಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಕೊಂಡಿರುವ ರಾಜಸ್ಥಾನ ರಾಯಲ್ಸ್ ತಂಡವು ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲು ಸಿದ್ಧವಾಗಿದೆ. ಅರ್ಧಾವಧಿಯ ಐಪಿಎಲ್ ಮುಕ್ತಾಯಗೊಂಡಿರುವ ನಡುವೆ ತಂಡಗಳ ಪೈಪೋಟಿ ಈಗ ಹೆಚ್ಚಿದ್ದು, ಟೇಬಲ್ ಹೊಡೆದಾಟ ಶುರುವಾಗಿದೆ. ರಾಜಸ್ಥಾನಕ್ಕೆ ಹೆಡೆಮುರಿ ಕಟ್ಟವರಿಲ್ಲ. ಗೆಲುವುಗಳೊಂದಿಗೆ ನಾಗಾಲೋಟ ಮುಂದುವರಿಸಿದೆ. ಕಳೆದ ಪಂದ್ಯದಲ್ಲಿ ಬಲಿಷ್ಠ ಪಂಜಾಬ್ ತಂಡವನ್ನು ಸೋಲಿಸಿ ಮೆರೆದಾಡಿದೆ. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೆಂಗಳೂರು ತಂಡದೊಂದಿಗೆ ಹೀನಾಯ ಸೋಲನುಭವಿಸಿದೆ. ಮುಖ್ಯವಾಗಿ ದಿಲ್ಲಿಗೆ ಪ್ಲೇಆಫ್‌ಗೇರಲು ಎಲ್ಲಾ ಪಂದ್ಯಗಳನ್ನು ಗೆಲ್ಲುವುದು ಅನಿವಾರ್ಯವಾಗಿದೆ. ಗೆಲುವಿನ ಹಳಿಗೆ ಮರಳುವ ತವಕ ದಿಲ್ಲಿಗಿದ್ದರೆ, ರಾಜಸ್ಥಾನಕ್ಕೆ ಗೆಲುವಿನೋಟದ ಸವಾಲಿದೆ.

ರಾಜಸ್ಥಾನಕ್ಕೆ ಭರವಸೆ: ತಂಡದಲ್ಲಿ ಬಲವಾದ ಬದಲಾವಣೆ ಮಾಡಿಕೊಂಡಿರುವ ರಾಜಸ್ಥಾನ ಈ ಬಾರಿ ಭರ್ಜರಿ ಪ್ರದರ್ಶನ ನೀಡುತ್ತಿದೆ. ಪ್ರತಿ ಬೌಲರ್ ಅನ್ನು ದಂಡಿಸುತ್ತಿರುವ ವೈಭವ್ ಸೂರ್ಯವಂಶಿಗೆ ಯಶಸ್ವಿ ಜೈಸ್ವಾಲ್ ಸಾಥ್ ಸಿಗುತ್ತಿದೆ. ಕಳೆದ ಪಂದ್ಯದಲ್ಲಿ ಫೆರೀರಾ ಕೂಡ ಮಿಂಚಿರುವುದು ವಿಶ್ವಾಸ ಹೆಚ್ಚಿಸಿದೆ. ಜಡೇಜಾ, ರಿಯಾನ್ ಇರುವುದು ತಂಡಕ್ಕೆ ಹೆಚ್ಚಿನ ಬಲ. ಬೌಲಿಂಗ್‌ನಲ್ಲಿ ಆರ್ಚರ್ ತಮ್ಮ ಫೈಮ್ ಮೋಡ್‌ಗೆ ಬಂದಿದ್ದಾರೆ. ನಾಂದ್ರೆ ಬರ್ಜರ್, ಬ್ರಿಜೇಶ್ ಶರ್ಮ ಕೂಡ ವಿಕೆಟ್ ಕಿತ್ತಿದ್ದಾರೆ. ಸ್ಪಿನ್ ವಿಭಾಗವನ್ನು ಜಡೇಜಾ, ರವಿ ಬಿಷ್ಣೋಯ್ ಗಟ್ಟಿಗೊಳಿಸಿದ್ದಾರೆ.



ಪಂದ್ಯದ ವಿವರ
ಯಾವಾಗ: ಶುಕ್ರವಾರ
ಎಲ್ಲಿ: ಜೈಪುರ
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್: ಜೈಪುರದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೆ ಲಾಭ. ಹಿಂದಿನ ಐಪಿಎಲ್ ಪಂದ್ಯಗಳಲ್ಲಿ ದೊಡ್ಡ ಸ್ಕೋರ್‌ಗಳು ಮೂಡಿಬಂದಿವೆ. ಸ್ಪಿನ್ನರ್‌ಗಳಿಗೆ ಕೊಂಚ ಸಹಾಯ ಸಿಗಲಿದೆ.

ದಿಲ್ಲಿಗೆ ಗೆಲ್ಲಬೇಕಾದ ಒತ್ತಡ
ದಿಲ್ಲಿ ಕ್ಯಾಪಿಟಲ್ಸ್ ತಂಡ ಭಾರೀ ಸೋಲನುಭವಿಸಿದೆ. ಆರ್‌ಸಿಬಿಯೊಂದಿಗಿನ ಸೋಲು ಬರೀ ಸೋಲಾಗಿರದೆ, ದೊಡ್ಡ ಹಿನ್ನಡೆಯಾಗಿದೆ. 75 ರನ್‌ಗಳಿಗೆ ಆಲೌಟ್ ಆಗಿರುವುದು ಬ್ಯಾಟರ್‌ಗಳ ವಿಶ್ವಾಸ ಕುಗ್ಗಿಸಿದ್ದಲ್ಲದೆ, ಅಂಕಪಟ್ಟಿಯಲ್ಲಿ ದೊಡ್ಡ ಹೊಡೆತ ಕೊಟ್ಟಿದೆ. ಹೀಗಿರುವಾಗ ದಿಲ್ಲಿಗೆ ಗೆಲ್ಲುವ ರಾಹುಲ್ ಹೊರತುಪಡಿಸಿ ಹೆಚ್ಚಿನ ಬ್ಯಾಟಿಗರು ಲಯದಲ್ಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಎನ್‌ಗಿಡಿ ಹೊರಗಿರುವುದು ಸವಾಲು. ಸ್ಪಿನ್ನರ್‌ಗಳಲ್ಲಿ ಅಕ್ಷರ್ ಅಲ್ಪ ಉತ್ತಮ ಬೌಲಿಂಗ್ ಮಾಡಿದ್ದಾರೆ. ಇನ್ನುಳಿದಂತೆ ಸಮೀರ್ ರಿಜ್ವಿ, ಪೋರೆಲ್ ಮೊದಲಾದವರು ಲಯದ ಹುಡುಕಾಟದಲ್ಲಿದ್ದಾರೆ. ಮಿಲ್ಲರ್ ತಂಡಕ್ಕೆ ಬಲ ತಂದಿದ್ದಾರೆ.

ಇಪಿಎಲ್: ಫ್ರಾಂಚೈಸಿ ಖರೀದಿಸಿದ ಫಾಫ್, ಜಾಂಟಿ, ಹೆನ್ರಿಕ್ ಕ್ಲಾಸೆನ್


• **ರೊಟರ್ ಡ್ಯಾಮ್:** ವಿಶ್ವ ಕ್ರಿಕೆಟ್ ಮೈದಾನದಲ್ಲಿ ಮಿಂಚಿದ್ದ ದಕ್ಷಿಣ ಆಫ್ರಿಕಾದ ದಿಗ್ಗಜ ಆಟಗಾರರು ಈಗ ಯುರೋಪಿಯನ್ ಕ್ರಿಕೆಟ್ ನಲ್ಲೂ ಹೊಸ ಇತಿಹಾಸ ಬರೆಯಲು ಸಜ್ಜಾಗಿದ್ದಾರೆ. ನೆದರ್ಲೆಂಡ್ಸ್ ನ ರೊಟರ್ ಡ್ಯಾಮ್ ಮೂಲದ, ಐಸಿಸಿ ಅನುಮೋದಿತ ಯುರೋಪಿಯನ್ ಟಿ20 ಪ್ರೀಮಿಯರ್ ಲೀಗ್ (ಇಟಿಪಿಎಲ್)ನ ಐದನೇ ಫ್ರಾಂಚೈಸಿಯನ್ನು ಜಾಂಟಿ ರೋಡ್ಸ್, ಫಾಫ್ ಡು ಪ್ಲೆಸಿಸ್ ಮತ್ತು ಹೆನ್ರಿಕ್ ಕ್ಲಾಸೆನ್ ಅವರು ಜಂಟಿಯಾಗಿ ಖರೀದಿಸಿದರು.



ದಕ್ಷಿಣ ಆಫ್ರಿಕಾದ ಈ ಮೂವರು ತಾರೆಯರು ಒಂದು ಒಕ್ಕೂಟವನ್ನು ರಚಿಸಿಕೊಂಡು ತಂಡದ ಮಾಲೀಕತ್ವ ವಹಿಸಿಕೊಂಡಿದ್ದು, ಮಧುಕರ್ ಅವರು ಮ್ಯಾನೇಜಿಂಗ್ ಪಾರ್ಟ್‌ನರ್ ಆಗಿ ಈ ತಂಡವನ್ನು ಸೇರಿಕೊಂಡಿದ್ದಾರೆ. ಐಸಿಸಿ ಮಾನ್ಯತೆ ಪಡೆದ ಯುರೋಪಿನ ಮೊದಲ ಅಧಿಕೃತ ಟಿ20 ಲೀಗ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಟಿಪಿಎಲ್, ಈ ಹಿರಿಯ ಆಟಗಾರರ ಪ್ರವೇಶದೊಂದಿಗೆ ಭಾರಿ ಕುತೂಹಲ ಮೂಡಿಸಿದೆ. ಯುರೋಪಿಯನ್ ಟಿ20 ಲೀಗ್ ನ ಚೊಚ್ಚಲ ಸೀಸನ್ ಆಗಸ್ಟ್ 26 ರಿಂದ ಸೆಪ್ಟೆಂಬರ್ 20, 2026 ರವರೆಗೆ ನಡೆಯಲಿದೆ. ಈ ಪ್ರತಿಷ್ಠಿತ ಟೂರ್ನಿಯಲ್ಲಿ ರೊಟರ್ ಡ್ಯಾಮ್ ತಂಡವೂ ಸೇರಿದಂತೆ ಗ್ಲಾಸ್ಗೋ, ಆಮ್ ಸ್ಟರ್ ಡ್ಯಾಮ್, ಎಡಿನ್ ಬರ್ಗ್, ಡಬ್ಲಿನ್ ಮತ್ತು ಬೆಲ್ ಫಾಸ್ಟ್ ಎಂಬ ಆರು ನಗರಗಳ ತಂಡಗಳು ಕಣಕ್ಕಿಳಿಯಲಿವೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5970

ಎಡದಿಂದ ಬಲಕ್ಕೆ
2.ಅಂದು ಬಡವಿಗೆ ತೋರಿಸಿದ ಕಾಡು (3)
5.ತಾನು ಪಡೆವ ಪ್ರಯೋಜನದ ಬಗ್ಗೆ ಮಾತ್ರ ಚಿಂತಿಸುವವ (4)
6.ವನದ ನಡುವೆ ಆದ ಅಭಿವೃದ್ಧಿ (4)
7.ಧಾರ್ಮಿಕ ಕಾರ್ಯದಲ್ಲಿ ನೀಡುವ ಕಾಣಿಕೆ (3)
8.ಆಭರಣ ಮೊದಲಿರುವ ರೋಖ ಹಣ (3)
10.ಐದು ಜನರಲ್ಲೀತ ತುಂಬ ಕಿಲಾಡಿ (3)
12.ಅಜಗಳ ನಡುವೆ ಕುಳಿತಿರುವ ತಪ್ಪು (3)
14.ಲಕ್ಷವೂ ಹೌದು-ನಡಿಗೆಯೂ ಹೌದು (3)
15.ಇಂಪಾದುದು ತಿರುಗಿ ಕೇಳುತ್ತಿದೆ (3)
16.ಈತ ಒಬ್ಬ ಯಾಚಕ (3)
17.ಆಮೇಲೆ ನನಗೆ ಕಾಣಿಸಿದ ಮುಖ (3)
18.ನೀರು ಮೊದಲಿರುವ ಸಂತೋಷಕೂಟ (3)

ಮೇಲಿನಿಂದ ಕೆಳಕ್ಕೆ
1.ಎಣ್ಣೆಯನ್ನು ಹಚ್ಚಿಕೊಂಡು ಮಾಡುವ ಸ್ನಾನ (5)
2.ನಿರ್ಮಲತೆ-ಪಾವಿತ್ರ್ಯದ ಸಂಕೇತವಾದ ಕಮಲ (4)
3.ವಿವರವಾಗಿ ನೀಡಿದ ಸ್ಪಷ್ಟನೆ (4)
4. ಇದು ನಿವಾಸ ಪ್ರದೇಶ (5)
9. ಆನೆಯಂತಹ ಗಂಭೀರ ನಡಿಗೆಯನ್ನು ಹೀಗೆನ್ನುತ್ತೇವೆ (5)
11.ಸರ್ಪದೇವತೆಯ ಪ್ರೀತಿಗಾಗಿ ಮಾಡುವ ಹಬ್ಬ (5)
12.ಸ್ವಲ್ಪ-ಕೊಂಚ ಎಂಬರ್ಥದ ಶಬ್ದ (3)
13.ಉತ್ತರಕರ್ನಾಟಕದವರ ಸ್ನಾನ (3)

5969 ಉತ್ತರ

ಎಡದಿಂದ ಬಲಕ್ಕೆ:
1.ನಡುಹಗಲು
3.ಕಳಸ 6.ನಗೆಗೇಡಿ
8.ಉತ್ತರಪ್ರದೇಶ
10.ಮಾನವದಾನವ
13.ಕುರಿಗಾಹಿ 16.ಗುರುತು
17.ಪುರಸ್ಕರಿಸು

ಮೇಲಿನಿಂದ ಕೆಳಕ್ಕೆ :
1.ನಯನ 2.ಕಾಲು
3.ಪ್ರಯಾಣಿಕ
4.ಸಮಾವೇಶ 6.ಗೆಳೆತನ
7.ಉಡಿ 9.ದೇಶಾವರಿ
10.ಮಾಯವಾಗು
11.ವಸಾಹತು 12.ವಹಿ
14.ಕುಣಿಸು 15.ತೋಮ

ಕಿರುಸುದ್ದಿ

ತಪಾಸಣೆ ವೇಳೆ ಕೈದಿಯ ಗುದದ್ವಾರದಲ್ಲಿತ್ತು ಮೊಬೈಲ್!

ಮಂಗಳೂರು: ಪ್ರಕರಣವೊಂದಕ್ಕೆ ಸಂಬಂಧಿಸಿ ಬಂಧಿತನಾಗಿದ್ದ ಆರೋಪಿಯೊಬ್ಬ ಮಂಗಳೂರು ಜೈಲಿನಲ್ಲಿದ್ದು, ಅನಾರೋಗ್ಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ತೆರಳಿ ಮರಳಿ ಬರುವಾಗ ಗುದದ್ವಾರದಲ್ಲಿ ಮೊಬೈಲ್ ಇಟ್ಟುಕೊಂಡು ಬಂದಿದ್ದಾನೆ. ಆದರೆ ತಪಾಸಣೆ ವೇಳೆ ಆತನ ಐನಾತಿ ಬುದ್ಧಿ ಬಯಲಾಗಿದೆ. ಮೊಹಮ್ಮದ್ ತೋಹಿದ್ ಮೊಬೈಲ್ ಇಟ್ಟುಕೊಂಡು ಬಂದ ಆರೋಪಿ. ಈತನ ವಿರುದ್ಧ ಬರ್ಕೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏ.24ರಂದು ತೋಹಿದ್‌ನನ್ನು ಚಿಕಿತ್ಸೆಗಾಗಿ ಸರಕಾರ ವೆನ್ಲಾಕ್ ಆಸ್ಪತ್ರೆಗೆ ಒಳ ರೋಗಿಯಾಗಿ ದಾಖಲಿಸಲಾಗಿತ್ತು. ಚಿಕಿತ್ಸೆಯ ಬಳಿಕ ಏ.29ರಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದು, ಸಂಜೆ 5.15ರ ವೇಳೆ ಕೊಡಿಯಾಲಬೈಲಿನ ಜಿಲ್ಲಾ ಕಾರಾಗೃಹಕ್ಕೆ ಕರೆ ತರಲಾಗಿದೆ. ಕಾರಾಗೃಹದ ಒಳಗೆ ಹೋಗುವ ಮೊದಲು ಅಲ್ಲಿ ಕರ್ತವ್ಯದಲ್ಲಿದ್ದ ಕೆಎಸ್ ಐಎಸ್ ಎಫ್ ಸಿಬಂದಿ ತಪಾಸಣಾ ಯಂತ್ರದ ಮೂಲಕ ತಪಾಸಣೆ ಮಾಡಿದ್ದಾರೆ. ಆಗ ಆತನ ಗುದದ್ವಾರದ ಬಳಿ ಶಬ್ದ ಕೇಳಿ ಬಂದಿದೆ. ವಿಚಾರಿಸಿದಾಗ ಗುದದ್ವಾರದಲ್ಲಿ ಮೊಬೈಲ್ ಇಟ್ಟುಕೊಂಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಆತನನ್ನು ಮತ್ತೆ ಆಸ್ಪತ್ರೆಗೆ ಕಳುಹಿಸಿ ಪರೀಕ್ಷೆಗೆ ಒಳಪಡಿಸಲಾಗಿದ್ದು, ಮೊಬೈಲ್ ಇರುವುದು ದೃಢಪಟ್ಟಿದೆ. ಬಳಿಕ ವೈದ್ಯರು ಮೊಬೈಲನ್ನು ಆತನ ಗುದದ್ವಾರದಿಂದ ಹೊರಗೆ ತೆಗೆದಿದ್ದಾರೆ.

ಬಾವಿಯೊಳಗೆ ಸಿಲುಕಿದ ವ್ಯಕ್ತಿಯ ರಕ್ಷಣೆ

ಉಡುಪಿ: ನಗರದ ಕೊರಂಗ್ರಪಾಡಿ ಗೋಪಾಲ್ ರಸ್ತೆಯ ನಿವಾಸಿ ಶ್ರೀಶ ಬಲ್ಲಾಳ್ ಅವರು ಆಳವಾದ ಬಾವಿಗೆ ಇಳಿದು ಸಿಲುಕಿದ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿತು. ಸುಮಾರು 90 ಅಡಿ ಅಗಲ ಹಾಗೂ 35 ಅಡಿ ಆಳದ ನೀರು ಇರುವ ಬಾವಿಗೆ ಸ್ವಚ್ಛತೆಗಾಗಿ ಇಳಿದಿದ್ದ ಶ್ರೀಶ ಬಲ್ಲಾಳ್ ಅವರು, ಮೇಲಕ್ಕೆ ಬರಲು ಯತ್ನಿಸಿದಾಗ ಸಾಧ್ಯವಾಗದೆ ಬಾವಿಯಲ್ಲೇ ಸಿಲುಕಿಕೊಂಡಿದ್ದರು. ಈ ಬಗ್ಗೆ ತಕ್ಷಣ ಅಗ್ನಿಶಾಮಕ ಇಲಾಖೆಗೆ ಮಾಹಿತಿ ನೀಡಲಾಗಿದೆ. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ತುರ್ತು ಕಾರ್ಯಾಚರಣೆ ನಡೆಸಿ, ಸುರಕ್ಷಿತವಾಗಿ ವ್ಯಕ್ತಿಯನ್ನು ಮೇಲಕ್ಕೆ ಎತ್ತಿ ಪ್ರಾಣಾಪಾಯ ದಿಂದ ಪಾರು ಮಾಡಿದ್ದಾರೆ. ಅಗ್ನಿಶಾಮಕ ದಳದ ತ್ವರಿತ ಕಾರ್ಯಾಚರಣೆಗೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಬಾವಿಗೆ ಮಣ್ಣು ಕುಸಿತ: ಓರ್ವ ಸಾವು

ಹಿರಿಯಡ್ಕ: ಮಣ್ಣು ಕುಸಿದು ಬಾವಿಗೆ ಬಿದ್ದ ಪರಿಣಾಮ ಓರ್ವ ಮೃತಪಟ್ಟ ಘಟನೆ ಏ.28ರಂದು ಮಧ್ಯಾಹ್ನ ವೇಳೆ ದೊಂಡರಂಗಡಿ ಎಂಬಲ್ಲಿ ನಡೆದಿದೆ. ಮೃತರನ್ನು ಕೇಶವ ಎಂದು ಗುರುತಿಸಲಾಗಿದೆ. ಬಾವಿಗೆ ಕಲ್ಲು ಕಟ್ಟುವ ಕೆಲಸ ಮಾಡಿಕೊಂಡಿದ್ದ ಬೈರಂಪಳ್ಳಿ ಗ್ರಾಮದ ಹರೀಶ್ ಎಂಬವರು ಕೆಲಸದವ ರೊಂದಿಗೆ ದೊಂಡರಂಗಡಿಯಲ್ಲಿರುವ ಚಂದ್ರಕಾಂತ್ ಕಿಣಿ ಎಂಬವರ ಬಾವಿಯ ಕೆಲಸವನ್ನು ನೋಡಲು ಹೋಗಿದ್ದರು. ಅಲ್ಲಿ ಬಾವಿಯ ಹತ್ತಿರ ಹೋಗಿ ಇಣುಕಿ ನೋಡಿದಾಗ ಬಾವಿಯ ಬಳಿ ನಿಂತ ಜಾಗದ ಮಣ್ಣು ಒಮ್ಮೆಲೇ ಕುಸಿಯಿತ್ತೆನ್ನಲಾಗಿದೆ. ಇದರಿಂದ ಹರೀಶ್, ಕೇಶವ ಹಾಗೂ ಸುಧಾಕರ ಎಂಬವರು ಬಾವಿಗೆ ಬಿದ್ದರು. ಅವರಲ್ಲಿ ಹರೀಶ್ ಅಲ್ಲಿಯೇ ಪಂಪಿಗೆ ಅಳವಡಿಸಿದ ಹಗ್ಗದ ಸಹಾಯದಿಂದ ಮೇಲೆ ಬಂದರು. ಅದೇ ರೀತಿ ಸುಧಾಕರ ನೀರಿನಿಂದ ಮೇಲಕ್ಕೆ ಎದ್ದು ಬಾವಿಯಲ್ಲಿದ್ದ ಏಣಿಯಿಂದ ಮೇಲಕ್ಕೆ ಬಂದರು. ಆದರೆ ಕೇಶವ ನೀರಿನಲ್ಲಿ ಮುಳುಗಿ ನಾಪತ್ತೆಯಾಗಿದ್ದರು. ನಂತರ ಅಗ್ನಿಶಾಮಕ ದಳದ ಸಿಬ್ಬಂದಿ ಹುಡುಕಾಟ ನಡೆಸಿ ಕೇಶವ ಅವರ ಮೃತದೇಹವನ್ನು ಮೇಲಕ್ಕೆ ಎತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಉಡುಪಿ ಜಿಲ್ಲೆಯಿಂದ ಗಡಿಪಾರು

ಉಡುಪಿ: ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದ ಹಿನ್ನೆಲೆಯಲ್ಲಿ, ಕಾರ್ಕಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಶೀಟರ್ ಸೋಮನಾಥ –ಸೋಮು ಎಂಬಾತನನ್ನು ಉಡುಪಿ ಜಿಲ್ಲೆಯಿಂದ ಗಡಿಪಾರು ಮಾಡಿ ವಿಶೇಷ ಕಾರ್ಯಾಂಗ ದಂಡಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು ಗುರುವಾರ ಆದೇಶ ಹೊರಡಿಸಿದ್ದಾರೆ. ಕಾರ್ಕಳ ತಾಲೂಕು ಕಸಬ ಗ್ರಾಮದ ತೆಳ್ಳಾರು ರಸ್ತೆ ನಿವಾಸಿ, 40 ವರ್ಷದ ಸೋಮನಾಥ ಎಂಬಾತನ ವಿರುದ್ಧ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಈಗಾಗಲೇ ರೌಡಿ ಪಟ್ಟಿ ತೆರೆಯಲಾಗಿತ್ತು. ಈತನ ಮೇಲೆ ಈವರೆಗೆ ಒಟ್ಟು 11 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಪದೇ ಪದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ಎನ್ನಲಾಗಿದೆ. ಈತನ ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಲು ವಿಶೇಷ ಕಾರ್ಯಾಂಗ ದಂಡಾಧಿಕಾರಿಗಳು ಹಾಗೂ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಏಪ್ರಿಲ್ 30 ರಂದು ಈ ಕಠಿಣ ಆದೇಶ ಹೊರಡಿಸಿದ್ದಾರೆ. ಅದರಂತೆ ಈತನನ್ನು ಶಿವಮೊಗ್ಗ ಜಿಲ್ಲೆಯ ತುಂಗಾ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ಸರ್ಕಾರದ ಅಂಗಳದಲ್ಲೇ ಕೊಳೆಯುತ್ತಿದೆ ನೂರು ಕೋಟಿಯ ಪ್ರಸ್ತಾವನೆ!

ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ಯಾವಾಗ?

ಸುದೀಪ್ ರಾಜ್ ಸುಳ್ಯ



ಉಡುಪಿ: ಕರಾವಳಿಯಲ್ಲಿ ಮುಂಗಾರು ಮಳೆಯ ಮಾರುತಗಳು ಅಪ್ಪಳಿಸಲು ಕ್ಷಣಗಣನೆ ಆರಂಭವಾಗಿದೆ. ಮಳೆಗಾಲದ ಹೆಸರೆತ್ತಿದರೆ ಸಾಕು, ಜಿಲ್ಲೆಯ ಕಡಲತಡಿಯ ನಿವಾಸಿಗಳಿಗೆ ನಿದ್ದೆ ಇಲ್ಲದ ರಾತ್ರಿಗಳು ಎದುರಾಗುತ್ತವೆ. ಪ್ರತಿ ವರ್ಷದಂತೆ ಈ ಬಾರಿಯೂ ಸಮುದ್ರದ ಆರ್ಭಟಕ್ಕೆ ಮನೆ, ಆಸ್ತಿಪಾಸ್ತಿ ಬಲಿಯಾಗುವ ಭೀತಿ ಎದುರಾಗಿದ್ದರೂ, ಸರ್ಕಾರ ಮಾತ್ರ ಕುಂಭಕರ್ಣ ನಿದ್ದೆಯಿಂದ ಎದ್ದಂತೆ ಕಾಣುತ್ತಿಲ್ಲ. ಕಡಲ್ಕೊರೆತ ತಡೆಗೆ ಸುಮಾರು ನೂರು ಕೋಟಿ ರೂಪಾಯಿ ವೆಚ್ಚದ ಬೃಹತ್ ಯೋಜನೆಯ ಅಂದಾಜು ಪಟ್ಟಿಯನ್ನು (ಎಸ್ಟಿಮೇಷನ್) ಸಿದ್ಧಪಡಿಸಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ವಿಶೇಷವೆಂದರೆ, 2025ರ ನವೆಂಬರ್ ತಿಂಗಳಿನಲ್ಲೇ ಈ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಡಲಾಗಿದ್ದರೂ, ಈವರೆಗೂ ಯಾವುದೇ ಗ್ರೀನ್ ಸಿಗ್ನಲ್ ಸಿಕ್ಕಿಲ್ಲ. ಈ ವಿಳಂಬ ಧೋರಣೆಯು ಕರಾವಳಿ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಮರೀಚಿಕೆಯಾದ ಶಾಶ್ವತ ಪರಿಹಾರ

ಉಡುಪಿ ಜಿಲ್ಲೆಯ ಸುಮಾರು 98 ಕಿ.ಮೀ ಉದ್ದದ ಕರಾವಳಿ ತೀರದಲ್ಲಿ 18ಕ್ಕೂ ಅಧಿಕ ಸೂಕ್ಷ್ಮ ಪ್ರದೇಶಗಳಿವೆ. ಇಲ್ಲಿ ಪ್ರತಿ ವರ್ಷ ಕೋಟ್ಯಂತರ ರೂಪಾಯಿ ಮೊತ್ತದ ಕಲ್ಲುಗಳನ್ನು ಸಮುದ್ರಕ್ಕೆ ಸುರಿಯಲಾಗುತ್ತದೆಯೇ ಹೊರತು, ಅದು ಶಾಶ್ವತ ಪರಿಹಾರವಾಗಿ ರೂಪಿತವಾಗುತ್ತಿಲ್ಲ. ಈವರೆಗೆ ಸುಮಾರು 300 ಕೋಟಿಗೂ ಅಧಿಕ ಹಣ ಸಮುದ್ರದ ಪಾಲಾಗಿದೆ ಎಂಬುದು ಮೀನುಗಾರರ ನೇರ ಆರೋಪ. ವೈಜ್ಞಾನಿಕವಾಗಿ ಕಲ್ಲುಗಳನ್ನು ಹಾಕದ ಕಾರಣ ಅಥವಾ ಕೇವಲ ತುರ್ತು ಕಾಮಗಾರಿಗಳಿಗೆ ಸೀಮಿತವಾಗುತ್ತಿರುವ ಕಾರಣದಿಂದಾಗಿ ಬೃಹತ್ ಅಲೆಗಳ ಹೊಡೆತಕ್ಕೆ ಕಲ್ಲುಗಳು ಸಮುದ್ರದ ಒಡಲು ಸೇರುತ್ತಿವೆ. ಬಂದರು ಮತ್ತು ಮೀನುಗಾರಿಕಾ ಇಲಾಖೆ ಶಾಶ್ವತ ಯೋಜನೆಗಳ ಕುರಿತು ಕಾಲಕಾಲಕ್ಕೆ ವರದಿ ನೀಡುತ್ತಿದ್ದರೂ, ಅನಷ್ಠಾನದ ಹಂತದಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ.

ವೈಜ್ಞಾನಿಕ ಕಾಮಗಾರಿಯ ಅಗತ್ಯತೆ

ಸಮುದ್ರಕ್ಕೆ ಕೇವಲ ಕಲ್ಲುಗಳನ್ನು ಸುರಿಯುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂಬುದು ತಜ್ಞರ ಅಭಿಪ್ರಾಯ. ಕಲ್ಲುಗಳನ್ನು ನಿರ್ದಿಷ್ಟ ಪದರಗಳಲ್ಲಿ ಜೋಡಿಸಿ, ಅವುಗಳಿಗೆ ಕಬ್ಬಿಣದ ಬಲೆಗಳನ್ನು ಅಳವಡಿಸುವ ಮೂಲಕ ತಡೆಗೋಡೆ ಭದ್ರಪಡಿಸಬೇಕಿದೆ. ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಕಡಲ್ಕೊರೆತ ತಡೆಗೆ ಅನುಸರಿಸುತ್ತಿರುವ ಸುಧಾರಿತ ತಂತ್ರಜ್ಞಾನಗಳನ್ನು ನಮ್ಮಲ್ಲೂ ಜಾರಿಗೆ ತರಬೇಕೆಂಬ ಬೇಡಿಕೆ ಕೇಳಿಬರುತ್ತಿದೆ. ಆದರೆ, ಪ್ರಸ್ತುತ ಮರವಂತೆ ಬ್ರೇಕ್ ವಾಟರ್ ಮತ್ತು ನಾಗಬನದ ಬಳಿ ಕೋಟ್ಯಂತರ ರೂಪಾಯಿ ವೆಚ್ಚದ ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಗಳು ಇನ್ನೂ ಕಡತಗಳಲ್ಲೇ ಉಳಿದಿವೆ.

ಸರ್ವಸ್ವವನ್ನೂ ಕಳೆದುಕೊಳ್ಳುವ ಭೀತಿ

ಬೈಂದೂರು ತಾಲ್ಲೂಕಿನ ಶಿರೂರು ಕಳಿಹಿತ್ಲು, ಉಪ್ಪುಂದ, ಮರವಂತೆ ಹಾಗೂ ಉಡುಪಿ ತಾಲ್ಲೂಕಿನ ಮಲ್ಪೆ, ಪಡುಕರೆ ಸೇರಿದಂತೆ ವಿವಿಧ ಭಾಗಗಳಲ್ಲಿ ಕಡಲ ಅಬ್ಬರಕ್ಕೆ ದೋಣಿ, ಬಲೆ ಹಾಗೂ ತೆಂಗಿನ ಮರಗಳು ಸಮುದ್ರ ಪಾಲಾಗುತ್ತಿವೆ. ತೀರದುದ್ದಕ್ಕೂ ನಿರ್ಮಿಸಲಾದ ಕಲ್ಲಿನ ತಡೆಗೋಡೆಗಳು ಜರಿದು ಬೀಳುತ್ತಿದ್ದು, ಕಡಲು ಜನರ ಮನೆಯ ಬಾಗಿಲಿಗೆ ಬಂದು ನಿಂತಿದೆ. ಜಿಲ್ಲಾ ಉಸ್ತುವಾರಿ ಸಚಿವರು ತಾತ್ಕಾಲಿಕ ಪರಿಹಾರಕ್ಕಾಗಿ ಹಣ ಬಿಡುಗಡೆಯ ಭರವಸೆ ನೀಡಿದ್ದರೂ, ಅದು ಮಳೆಗಾಲದ ಆರ್ಭಟಕ್ಕೆ ಬರುವ "ತೇಪೆ ಹಚ್ಚುವ" ಕೆಲಸವಾಗಬಾರದು ಎಂಬುದು ಸ್ಥಳೀಯರ ಆಗ್ರಹವಾಗಿದೆ.

ಸಮಯ ಮೀರಿದರೆ ಅಕ್ಟೋಬರ್ ವರೆಗೆ ಕಾಯಲೇಬೇಕು!

ಕಡಲ್ಕೊರೆತ ತಡೆಗಟ್ಟುವ ಕಾಮಗಾರಿಗಳು ಸುಗಮವಾಗಿ ನಡೆಯಬೇಕಾದರೆ ಅವುಗಳನ್ನು ಮೇ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಅಥವಾ ಕನಿಷ್ಠ ಪಕ್ಷ ಆರಂಭವಾದರೂ ಮಾಡಬೇಕು. ಆದರೆ ಪ್ರಸ್ತುತ ಪರಿಸ್ಥಿತಿಯನ್ನು ನೋಡಿದರೆ ಈ ಬಾರಿ ಮಳೆಗಾಲದ ಮೊದಲು ಕಾಮಗಾರಿ ಆರಂಭವಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಒಂದು ವೇಳೆ ಮುಂಗಾರು ಆರಂಭವಾಗುವ ಮೊದಲು ಕಾಮಗಾರಿ ಶುರುವಾಗದಿದ್ದರೆ, ಮತ್ತೆ ಮಳೆ ಕಡಿಮೆಯಾಗುವವರೆಗೂ ಅಂದರೆ 2026ರ ಅಕ್ಟೋಬರ್ ವರೆಗೂ ಕಾಯುವುದು ಅನಿವಾರ್ಯವಾಗುತ್ತದೆ. ಅಲ್ಲಿಯವರೆಗೆ ಕಡಲತೀರದ ನಿವಾಸಿಗಳು ಆತಂಕದ ನೆರಳಿನಲ್ಲೇ ಬದುಕಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ 13 ರೂಪಾಯಿಗೆ ಬಾಟಲಿ ನೀರು





ಕಾಸರಗೋಡು: ನೌಕರರ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದರೂ ಬಸ್‌ಗಳಲ್ಲಿ ಕುಡಿಯುವ ನೀರು ವಿತರಣೆ ನಡೆಸಲಿರುವ ತೀರ್ಮಾನವನ್ನು ಕೆಎಸ್‌ಆರ್‌ಟಿಸಿ ಕೈಗೊಂಡಿದೆ. ಮೊದಲ ಹಂತದಲ್ಲಿ ಸ್ವಿಫ್ಟ್ ಬಸ್‌ಗಳಲ್ಲಿ ಈ ವ್ಯವಸ್ಥೆಯನ್ನು ಜ್ಯಾರಿಗೊಳಿಸಲಾಗುವುದು. ನೀರಾವರಿ ಇಲಾಖೆಯ ಕುಡಿಯುವ ನೀರಾದ 'ಹಿಲ್ಲಿಅಕ್ವ' ನೀರನ್ನು 'ಕೆಎಲ್ 15' ಎಂಬ ಹೆಸರಿನಲ್ಲಿ ಲೀಟರ್‌ಗೆ 13 ರೂಪಾಯಿ ದರದಲ್ಲಿ ಪ್ರಯಾಣಿಕರಿಗೆ ನೀಡಲಾಗುವುದು. ಗುತ್ತಿಗೆ ನೌಕರರು ಕುಡಿಯುವ ನೀರು ತಲುಪಿಸಲಿದ್ದಾರೆ.

ಒಂದು ಬಾಟಲಿ ನೀರು ಮಾರಾಟವಾದಾಗ ಅದರಲ್ಲಿ 2 ರೂ. ಕಂಡಕ್ಟರ್‌ಗೆ ಹಾಗೂ 1ರೂ.ಚಾಲಕನಿಗೆ ಕಮಿಷನ್ ಆಗಿ ನೀಡಲಾಗುವುದು. ಆನ್‌ಲೈನ್ ಮೂಲಕ ಸೀಟು ಕಾದಿರಿಸುವ ಪ್ರಯಾಣಿಕರಿಗೆ ಒಂದು ಬಾಟ್ಲಿ ನೀರು ವಿತರಿಸಲಾಗುವುದು. ಇದರ ಮೊತ್ತವನ್ನು ಟಿಕೆಟ್ ದರದೊಂದಿಗೆ ಪಡೆಯಲಾಗುವುದು. ದಿನವೊಂದಕ್ಕೆ ಎರಡು ಲಕ್ಷ ಆನ್‌ಲೈನ್ ಟಿಕೆಟ್ ಮಾರಾಟ ನಡೆಯುತ್ತಿರುವ ಹಿನ್ನೆಲೆಯಲ್ಲಿ 8 ಲಕ್ಷ ರೂಪಾಯಿ ಈ ಮೂಲಕ ಆದಾಯವಾಗಿ ಪಡೆಯಬಹುದೆಂದು ಕೆಎಸ್‌ಆರ್‌ಟಿಸಿ ಲೆಕ್ಕಹಾಕಿದೆ.

ಅಲ್ಲದೆ ಕೆಎಸ್ ಆರ್‌ಟಿಸಿ ಕೌಂಟರ್‌ಗಳಲ್ಲೂ ನೀರು ಲಭ್ಯಗೊಳಿಸಲಾಗುವುದು. ಇದೇ ವೇಳೆ ಮಹಿಳಾ ನಿರ್ವಾಹಕಿಯರು ಬಾಟಲಿ ನೀರು ವಿತರಿಸುವುದು ಸಮಸ್ಯೆಯಾಗಿ ಪರಿಣಮಿಸಲಿದೆಯೆಂದು ನೌಕರರು ಅಭಿಪ್ರಾಯಪಡುತ್ತಿದ್ದಾರೆ.

ಪ್ರಯಾಣಿಕರು ಕಿಕ್ಕಿರಿದಿರುವ ಬಸ್‌ಗಳಲ್ಲಿ ಬಾಟಲಿ ನೀರು ವಿತರಣೆಗೆ ಕಷ್ಟವಾಗಬಹುದೆಂದು ಸೂಚಿಸಿ ವಿಪಕ್ಷ ಸಂಘಟನೆಗಳು ಕೆಎಸ್‌ಆರ್‌ಟಿಸಿ ನಿರ್ದೇಶಕರಿಗೆ ಈ ಮೊದಲೇ ದೂರು ನೀಡಿವೆ.

ಪಿಡಿಒಗಳ ಖದರ್ ಶುರು | 30 ದಿನಗಳಲ್ಲಿ 53 ಪ್ರಕರಣ

ಸ್ವಚ್ಛತೆ ನಿರ್ಲಕ್ಷಿಸಿದವರ ವಿರುದ್ಧ ಖಡಕ್ ಕ್ರಮ!



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲೆಯಲ್ಲಿ ಸ್ವಚ್ಛತಾ ಆಂದೋಲನದ ಜೊತೆಗೆ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ಸೂಕ್ತ ಎಚ್ಚರಿಕೆಯ ಜೊತೆಗೆ ದಂಡ ವಿಧಿಸುವ ಕಾರ್ಯ ನಡೆಯುತ್ತಿದೆ.

ಜಿಲ್ಲೆಯಲ್ಲಿ ಏ.1ರಿಂದ ಏ.30ರವರೆಗೆ ರಸ್ತೆ ಬದಿ ಸೇರಿದಂತೆ ಎಲ್ಲೆಂದರಲ್ಲಿ ಕಸ ಎಸೆದ ಒಟ್ಟು 53 ಪ್ರಕರಣ ದಾಖಲಿಸಲಾಗಿದ್ದು, 1.10 ಸಾವಿರ ರೂಪಾಯಿ ದಂಡ ವಿಧಿಸಲಾಗಿದೆ. ಈ ಪೈಕಿ 77 ಸಾವಿರ ರೂಪಾಯಿ ದಂಡವನ್ನು ವಸೂಲಿ ಮಾಡಲಾಗಿದೆ.

ಎಲ್ಲೆಲ್ಲಿ ಎಷ್ಟು ಪ್ರಕರಣ?

ಏ.1ರಿಂದ ಇಂದಿನವರೆಗೆ ಬಂಟ್ವಾಳ 4, ಬೆಳ್ತಂಗಡಿ 12, ಕಡಬ 6, ಮಂಗಳೂರು 18, ಪುತ್ತೂರು 5, ಸುಳ್ಯ 2, ಉಳ್ಳಾಲ 4 ಮತ್ತು ಮೂಡುಬಿದಿರೆ ಮತ್ತು ಮುಲ್ಕಿಯಲ್ಲಿ ತಲಾ ಒಂದು ಪ್ರಕರಣ ದಾಖಲಿಸಲಾಗಿದೆ.

ಬೆಳ್ತಂಗಡಿ ತಾಲೂಕಿನ ಮುಂಡಾಜೆ, ಮಡಂತ್ಯಾರು, ಲಾಯಿಲ, ಚಾರ್ಮಾಡಿ, ನಿಡ್ಲೆ, ಬಳಂಜ, ಕೊಕ್ಕಡ, ಪುತ್ತೂರು ತಾಲೂಕಿನ ಉಪ್ಪಿನಂಗಡಿ, ಐವರ್ನಾಡು, ಬಿಳಿನೆಲೆ, ಸವಣೂರು, ಕಡಬ ತಾಲೂಕಿನ ಸುಬ್ರಹ್ಮಣ್ಯ, ಕೊಯಿಲ, ಉಳ್ಳಾಲ ತಾಲೂಕಿನ ಹರೇಕಳ, ಮಂಜನಾಡಿ, ಮಂಗಳೂರಿನ ಅಡ್ಯಾರು, ಜೋಕಟ್ಟೆ, ಸೂರಿಂಜೆ, ಚೇಳ್ಯಾರು, ಕೆದಿಲ, ಬಂಟ್ವಾಳದ ಕೆದಿಲ, ಸಜಿಪಮುನ್ನೂರು, ಕೊಳ್ನಾಡು ಮುಂತಾದ ಪಂಚಾಯತ್‌ಗಳು ಜಿಲ್ಲಾ ಪಂಚಾಯತ್ ಸೂಚನೆಯನ್ನು ಯಥಾವತ್ ಪಾಲಿಸುವ ಮೂಲಕ ಸ್ವಚ್ಛತೆಯ ನಿರ್ಲಕ್ಷ್ಯ ವಹಿಸುವವರಿಗೆ ದಂಡ ವಿಧಿಸುವ ಮೂಲಕ ಎಚ್ಚರಿಕೆ ನೀಡಿವೆ.

ಐವರ್ನಾಡಿನಲ್ಲಿ ಎಫ್‌ಐಆರ್

ಸುಳ್ಯ ತಾಲೂಕಿನ ಐವರ್ನಾಡು ಪಂಚಾಯತ್ ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದ್ದುಫ, ಒಂದು ಪ್ರಕರಣದಲ್ಲಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಕೂಡ ದಾಖಲಿಸಿದೆ. ಈ ಮೂಲಕ ನಿರ್ಲಕ್ಷ್ಯ ತೋರುವವರಿಗೆ ಬಿಸಿ ಮುಟ್ಟಿಸಿದೆ.

ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಆಯಾ ಗ್ರಾಮಪಂಚಾಯತ್‌ಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ ಸೂಚನೆ ನೀಡಿದ್ದಾರೆ.

ಅಜ್ಜನ ಕತ್ತಿಯೇಟಿಗೆ ಮೊಮ್ಮಗ ಬಲಿ

ಮೊಮ್ಮಗನ ನಡವಳಿಕೆ ಮೇಲೆ ಸಂಶಯಗೊಂಡ ಅಜ್ಜ ಜಗಳ ಕಾಯ್ದು ತನ್ನ ಮೊಮ್ಮಗನನ್ನೇ ಯಮನಾಲಯಕ್ಕೆ ಕಳುಹಿಸಿ ಈಗ ಪೊಲೀಸರ ಆತಿಥಿಯಾಗಿದ್ದಾನೆ

ಮಡಿಕೇರಿ: ಅಕ್ರಮ ಸಂಬಂಧದ ವಿಚಾರವಾಗಿ ಒಂದೇ ಲೈನ್ ಮನೆಯಲ್ಲಿ ವಾಸವಿದ್ದ ತೋಟದ ಕಾರ್ಮಿಕರ ನಡುವೆ ನಡೆದ ಕಲಹ ಕೊಲೆಯಲ್ಲಿ ಅಂತ್ಯವಾದ ಘಟನೆ ವೀರಾಜಪೇಟೆ ಸಮೀಪದ ಬೇಟೋಳಿ ಗ್ರಾಮದಲ್ಲಿ ನಡೆದಿದೆ.

ಬೇಟೋಳಿ ಗ್ರಾಮದ ನಿವಾಸಿ ಅಮ್ಮಣಕುಟ್ಟಂಡ ಗಣೇಶ್ ಅವರ ಲೈನ್ ಮನೆಯಲ್ಲಿ ವಾಸವಿದ್ದ ಕಾರ್ಮಿಕ ಪಣಿ ಎರವರ ಸಂಜು ಅಲಿಯಾಸ್ ಅಯ್ಯಪ್ಪ (19) ಹತ್ಯೆಯಾದವರಾಗಿದ್ದು, ಪಣಿ ಎರವರ ಅಪ್ಪು (65) ಕೃತ್ಯ ಎಸಗಿ ಪೊಲೀಸರ ಆತಿಥಿಯಾಗಿದ್ದಾನೆ.

ವೀರಾಜಪೇಟೆ ಸಮೀಪದ ಆರ್ಜಿ ಬೇಟೋಳಿ ಗ್ರಾಮದ ಎ. ಗಣೇಶ್ ಅವರ ತೋಟದ ಲೈನ್ ಮನೆಯಲ್ಲಿ ಸಂಜು ಮತ್ತು ಆತನ ತಾತ ಅಪ್ಪು ವಾಸವಿದ್ದರು. ಮೂರು ತಿಂಗಳ ಹಿಂದೆ ಕೆಲಸ ಒತ್ತಡದ ಹಿನ್ನೆಲೆಯಲ್ಲಿ ಗಣೇಶ್ ಅವರು ಮಂಜು ಮತ್ತು ಸಿಂಧು ಎಂಬ ಕಾರ್ಮಿಕ ದಂಪತಿಯನ್ನು ಸಂಪರ್ಕಿಸಿ ಕೆಲಸಕ್ಕೆ ಬರುವಂತೆ ಮನವಿ ಮಾಡಿದ್ದರು. ಅದರಂತೆ ತಮ್ಮ ಹಿರಿಯ ಮಗಳು ಕಾವೇರಿಯನ್ನು ಪೊನ್ನಂಪೇಟೆಯ ಕಿರುಗೂರಿನಲ್ಲಿ ಬಳಿ ಬಿಟ್ಟು, ಎರಡನೇ ಮಗಳು ದಿವ್ಯಾಳೊಂದಿಗೆ ಗಣೇಶ್ ಅವರ ಲೈನ್ ಮನೆಗೆ ಆ ದಂಪತಿ ಆಗಮಿಸಿದ್ದರು.

ಕೆಲಸದ ಬಗ್ಗೆ ಮಾತನಾಡಲು ಸಂಜು ಮತ್ತು ಮಂಜು ಮನೆಗೆ ಬಂದು ಹೋಗುವುದು ಮಾಡುತ್ತಿದ್ದ. ಇದನ್ನು ಗಮನಿಸಿದ ಅಪ್ಪು, ತನ್ನ ಮೊಮ್ಮಗ ಸಿಂಧುಳೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾನೆ ಎಂದು ಶಂಕಿಸಿ ಹಲವು ಬಾರಿ ಜಗಳ ತೆಗೆದಿದ್ದಾನೆ. ಇದನ್ನು ಬಿಡಿಸಲು ಮಂಜು ದಂಪತಿ ಹಲವು ಬಾರಿ ಪ್ರಯತ್ನಿಸಿದ್ದರು. ಅದೇ ರೀತಿ ಏ.28ರ ಸಂಜೆ ಮಂಜು ಮತ್ತು ಸಂಜು ಲೈನ್ ಮನೆಗೆ ಆಗಮಿಸಿದ್ದು, ಎಂದಿನಂತೆ ಸಂಜು ಮತ್ತು ಅಪ್ಪು ನಡುವೆ ಜಗಳವಾಗಿದೆ. ಇದು ಸಾಮಾನ್ಯ ಎಂದು ಸಿಂಧು ಮತ್ತು ಮಂಜು ದಂಪತಿ ಸುಮ್ಮನಿದ್ದರು. ಆದರೆ ಜಗಳ ತಾರಕಕ್ಕೇರಿದ್ದು, ಸಿಟ್ಟಿನಿಂದ ಅಪ್ಪು ಮನೆಯಲ್ಲಿದ್ದ ಕಪಾತ್ ಕತ್ತಿಯಿಂದ ಸಂಜುವಿನ ಮೇಲೆ ಪ್ರಹಾರ ಮಾಡಿದ್ದಾನೆ. ಪರಿಣಾಮ ಸಂಜುವಿನ ಕುತ್ತಿಗೆ ಮತ್ತು ಕಾಲಿಗೆ ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳಾಗಿದೆ. ಹಲ್ಲೆ ನಡೆಸಿದ ಅಪ್ಪು ಕತ್ತಿಯೊಂದಿಗೆ ಅಲ್ಲಿಂದ ಪರಾರಿಯಾಗಿದ್ದಾನೆ. ರಕ್ತದ ಮಡುವಿನಲ್ಲಿದ್ದ ಸಂಜುವನ್ನು ಗಮನಿಸಿದ ಕಾರ್ಮಿಕ ದಂಪತಿ ಮಾಲಕ ಗಣೇಶ್ ಅವರಿಗೆ ಮಾಹಿತಿ ತಿಳಿಸಿದ್ದಾರೆ. ಗಣೇಶ್ ಅವರು ಕೂಡಲೇ ಗಾಯಾಳುವನ್ನು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಾಗ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಮಡಿಕೇರಿಗೆ ತೆರಳಲು ತಿಳಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ರಾತ್ರಿ 10.45ರ ವೇಳೆಗೆ ಸಂಜು ಸಾವಿಗೀಡಾಗಿದ್ದಾನೆ.

ವೀರಾಜಪೇಟೆ ನಗರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಜರುಗಿಸಿದ್ದಾರೆ.

ಅಕ್ರಮ ಗಾಂಜಾ ಮಾರಾಟ: 15 ಕೆ.ಜಿ ಮಾಲು ಸಹಿತ ಮೂವರ ಬಂಧನ





ಮಡಿಕೇರಿ: ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು ಮಾಲು ಸಹಿತ ಬಂಧಿಸುವಲ್ಲಿ ಮಡಿಕೇರಿ ಗ್ರಾಮಾಂತರ ಪೊಲೀಸರು ಯಶಸ್ವಿಯಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಜಾಬೀರ್ (21), ಒರಿಸ್ಸಾ ರಾಜ್ಯದ ಕಂದನಮಾಲ್ ಜಿಲ್ಲೆಯ ಕಳಿಂಗ ಗ್ರಾಮದ ಸುಲ್ತಾನ್ ಪ್ರದಾನ್ (55) ಹಾಗೂ ಇದೇ ರಾಜ್ಯದ ಮದಿನಂಜು ಗ್ರಾಮದ ಸ್ವರ್ಣಲತಾ ನಾಯಕ್ (35) ಬಂಧಿತ ಆರೋಪಿಗಳಾಗಿದ್ದು, ಆರೋಪಿ ಗಳಿಂದ 15.903 ಕೆ.ಜಿ.ಗಾಂಜಾ ಹಾಗೂ ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಇಬ್ನಿವಳವಾಡಿ ಗ್ರಾಮದ ಸಿಂಕೋನಾದಿಂದ ಮಕ್ಕಂದೂರು ಕಡೆಗೆ ಹೋಗುವ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ದೊರೆತ ಖಚಿತ ಸುಳಿವಿನ ಮೇರೆಗೆ ದಾಳಿ ನಡೆಸಿದ ಪೊಲೀಸರು ಮಾಲು ಸಹಿತ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲಾ ಡಿಎಸ್‌ಬಿ ಇನ್ಸ್‌ಪೆಕ್ಟರ್ ಮೇದಪ್ಪ ಐ.ಪಿ, ಗ್ರಾಮಾಂತರ ಠಾಣಾ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಹೆಚ್.ವಿ, ಎಎಸ್‌ಐ ಚರ್ಮಣ ಸಿ.ಯು, ಸಿಬ್ಬಂದಿಗಳಾದ ಮಹೇಶ್ ಎಂ.ಕೆ, ಉದಯ್ ಕುಮಾರ್ ಜಿ.ಆರ್, ನಿರಂಜನ ಎಂ.ಎನ್, ಪ್ರವೀಣ್ ಬಿ.ಕೆ, ರಾಜೇಶ್ ಸಿ.ಕೆ, ಶರತ್ ರೈ ಬಿ.ಜೆ, ರುದ್ರಪ್ಪ ಜಿ ಹಾಗೂ ಗಾಯತ್ರಿ ಎಂ. ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವನ್ಯಜೀವಿ ಉಪಟಳ: ಅರಣ್ಯ ಇಲಾಖೆ ವಿರುದ್ಧ ಬಿಜೆಪಿ ಪ್ರತಿಭಟನೆ



ಮಡಿಕೇರಿ: ಕೊಡಗಿನಲ್ಲಿ ಹೆಚ್ಚುತ್ತಿರುವ ವನ್ಯಜೀವಿ–ಮಾನವ ಸಂಘರ್ಷವನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವ ಅರಣ್ಯ ಇಲಾಖೆಯ ವಿರುದ್ಧ ವೀರಾಜಪೇಟೆ ಮಂಡಲ ಬಿಜೆಪಿ ವತಿಯಿಂದ ಉಗ್ರ ಪ್ರತಿಭಟನೆ ನಡೆಯಿತು.

ವೀರಾಜಪೇಟೆಯ ಗಾಂಧಿ ನಗರದಲ್ಲಿರುವ ಅರಣ್ಯ ಇಲಾಖೆ ಕಚೇರಿ ಎದುರು ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು ಹಾಗೂ ಪ್ರಮುಖರು, ಅರಣ್ಯಾಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರಲ್ಲದೆ, ಇಲಾಖಾ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಪ್ರತಿಭಟನಾಕಾರರು ಸ್ಥಳಕ್ಕೆ ಆಗಮಿಸುತ್ತಿದ್ದಂತೆ ಅರಣ್ಯ ಇಲಾಖೆಯ ಗೇಟ್ ಬಳಿಯೇ ಪೊಲೀಸರು ಅವರನ್ನು ತಡೆದರು.

ಸುಡುವ ಬಿಸಿಲಲ್ಲೇ ನಿಂತು ಪ್ರತಿಭಟಿಸಿ, ದಿಕ್ಕಾರ ಕೂಗಿದ ಪ್ರತಿಭಟನಾಕಾರರು, ನಮ್ಮನ್ನು ಒಳಗೆ ಬಿಡಿ. ನಾವು ಶಾಂತಿಯುತವಾಗಿ ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಡು ಪ್ರಾಣಿಗಳಿಂದ ರೈತರನ್ನು ಉಳಿಸಿ ಎಂದು ಘೋಷಣೆ ಕೂಗುತ್ತಾ ಪ್ರತಿಭಟಿಸಿದ ಬಿಜೆಪಿಗರು, ಡಿಎಫ್‌ಒ ಅವರು ಸ್ಥಳಕ್ಕೆ ಬರುವಂತೆ ಒತ್ತಾಯಿಸಿದರು.

ಗೇಟಿನ ಬಳಿಗೆ ಬಂದ ಡಿಎಫ್‌ಒ ಅವರ ಬಳಿಯೂ, ನಾವು ಶಾಂತಿಯುತವಾಗಿ ರೈತರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ವನ್ಯಜೀವಿಗಳ ಉಪಟಳದ ಬಗ್ಗೆ ಮಾತನಾಡಿ ಮನವಿ ಸಲ್ಲಿಸುತ್ತೇವೆ. ನಮಗೆ ಅವಕಾಶ ಮಾಡಿಕೊಡಿ ಎಂದು ಪರಿಪರಿಯಾಗಿ ಕೇಳಿಕೊಂಡರೂ, ಅಧಿಕಾರಿಗಳು ಅದಕ್ಕೆ ಒಪ್ಪಲಿಲ್ಲ.

ಈ ಸಂದರ್ಭ ವೀರಾಜಪೇಟೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಅವರು, ನಾಲ್ಕು ಜನರಿಗೆ ಮಾತ್ರ ಕಚೇರಿಗೆ ಹೋಗಲು ಅವಕಾಶ ನೀಡುವುದಾಗಿ ಹೇಳಿದಾಗ ಆಕ್ರೋಶಗೊಂಡ ಬಿಜೆಪಿ ಕಾರ್ಯಕರ್ತರು, ಗೇಟಿಗೆ ಅಳವಡಿಸಿದ್ದ ಬ್ಯಾರಿಕೇಡ್‌ನ್ನು ತಳ್ಳಿ ಅರಣ್ಯ ಇಲಾಖೆಯ ಆವರಣ ಪ್ರವೇಶಿಸಿದರು. ಬಿಜೆಪಿಯ ಪ್ರಮುಖರು, ಮಾತನಾಡಿ ಇತ್ತೀಚೆಗೆ ರಾಜ್ಯದ ಅರಣ್ಯ ಸಚಿವರು ಈ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಪೊನ್ನಂಪೇಟೆ ತಾಲೂಕಿನ ಬಿ. ಶೆಟ್ಟಿಗೇರಿ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಬಗ್ಗೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ನೀಡಿರುವ ಭರವಸೆ ಹುಸಿಯಾಗಿದೆ. ಚುನಾವಣಾ ಸಮಯದಲ್ಲಿ ಶಾಸಕ ಪೊನ್ನಣ್ಣ ಅವರು ತಮ್ಮ ಪ್ರಣಾಳಿಕೆಯಲ್ಲಿ ಆನೆ ಮಾನವ ಸಂಘರ್ಷ ತಡೆಗೆ ಆರು ತಿಂಗಳಲ್ಲಿ ಶಾಶ್ವತ ಪರಿಹಾರ ದೊರಕಿಸಿ ಕೊಡುವ ಭರವಸೆ ನೀಡಿದ್ದು, ಈ ಭರವಸೆಯೂ ಹುಸಿಯಾಗಿದೆ. ಕಾಡು ಪ್ರಾಣಿಗಳ ರಕ್ಷಣೆ ಜೊತೆಗೆ ಆನೆಯಿಂದ ಬೆಳೆ ನಾಶ, ಹುಲಿ ದಾಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಈ ಬಾರಿ ಮನವಿ ಅಲ್ಲ, ಎಚ್ಚರಿಕೆ ಕೊಟ್ಟಿದ್ದೇವೆ. ಒಂದು ತಿಂಗಳ ಡೆಡ್‌ಲೈನ್ ನೀಡಿದ್ದೇವೆ. ರೈತರು ಬದುಕು ಉಳಿಸಿಕೊಳ್ಳಲು ರಸ್ತೆಗೆ ಬರಬೇಕಾ? ಸರ್ಕಾರಕ್ಕೆ ಕಿಂಚಿತ್ತಾದರೂ ಮಾನವೀಯತೆ ಇದ್ದರೆ ರೈತರ ಸಮಸ್ಯೆಗೆ ಸ್ಪಂದಿಸಲಿ. ಕಾಡಾನೆ ಹಾವಳಿ ಇಡೀ ರಾಜ್ಯದ ಸಮಸ್ಯೆ. ಈ ಬಗ್ಗೆ ರಾಜ್ಯ ಸರ್ಕಾರ ಏನಾದರೂ ಯೋಚಿಸಿದೆಯೇ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ವೀರಾಜಪೇಟೆ ಮಂಡಲ ಬಿಜೆಪಿ ಅಧ್ಯಕ್ಷ ಸುವಿನ್ ಗಣಪತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ.ಜಿ ಬೋಪಯ್ಯ, ವಿಧಾನ ಪರಿಷತ್ ಸದಸ್ಯ ಎಂ.ಪಿ ಸುಜಾ ಕುಶಾಲಪ್ಪ, ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಚಿಮಾಡ ಎಂ. ರವೀಂದ್ರ, ಕೇಳಪಂಡ ಸುಜು ನಾಣಯ್ಯ, ರೀನಾ ಪ್ರಕಾಶ್, ಇನ್ನಿತರರು ಮಾತನಾಡಿದರು.

ಮನವಿ ಸಲ್ಲಿಕೆ

ಈ ಸಂದರ್ಭದಲ್ಲಿ ಡಿಸಿಎಫ್ ಜಗನ್ನಾಥ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ನಮ್ಮ ಬೇಡಿಕೆಗಳನ್ನು ಒಂದು ತಿಂಗಳೊಳಗೆ ಈಡೇರಿಸಬೇಕು. ತಪ್ಪಿದ್ದಲ್ಲಿ ತೀವ್ರತರದ ಪ್ರತಿಭಟನೆ ನಡೆಸಲಾಗುವುದೆಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ವೀರಾಜಪೇಟೆ ಮಂಡಲ ಪ್ರ. ಕಾರ್ಯದರ್ಶಿ ಕುಟ್ಟಂಡ ಅಜಿತ್ ಕರುಂಬಯ್ಯ, ಕಾರ್ಯದರ್ಶಿ ಮುದ್ದಿಯಂಡ ಮಂಜು, ವೀರಾಜಪೇಟೆ ನಗರ ಅಧ್ಯಕ್ಷ ಅನಿಲ್ ಮಂದಣ್ಣ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ವಾಟೇರಿರ ಬೋಪಣ್ಣ, ಕಾನೂನು ಸಲಹೆಗಾರ ಪುಲಿಯಂಡ ಪೊನ್ನಣ್ಣ, ಮಾಚಿಮಂಡ ವಸಂತ, ಮಲ್ಲಂಡ ಮಧು, ಶಶಿ ಸುಬ್ರಮಣಿ, ಕೊತಂಡ ಸಚಿನ್, ವಾಟೇರಿರ ವಿರಜ್, ಕಾಂತಿ ಸತೀಶ್, ರೀನಾ ಪ್ರಕಾಶ್, ಬೊಪ್ಪಂಡ ಸುನಿತಾ (ಜೂನ) ಪಿ.ಜಿ. ಸುಮೇಶ್, ಚೆಕ್ಕೆರ ಸೂರ್ಯ, ಅಚ್ಚಪಂಡ ಮಹೇಶ್, ಅಭಿಜಿತ್, ಪಕ್ಷದ ಇನ್ನಿತರ ಮುಖಂಡರುಗಳು ಹಾಗೂ ಕಾರ್ಯಕರ್ತರು ಭಾಗಿಯಾಗಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 34° 26° | ಉಡುಪಿ 34° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 01, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5
ಕಾಸರಗೋಡು
ಜಿಲ್ಲಾಮಟ್ಟದ ಅಧಿಕಾರಿಗಳು, ಕ್ಲೀನ್ ಪ್ರತಿನಿಧಿಗಳ ಸಭೆ



ಪುಟ 6
ಶಿಲಾಮಯ
ಗರ್ಭಗುಡಿಯಲ್ಲಿ ಗಣಪತಿ ದೇವರ ಬಿಂಬ ಪ್ರತಿಷ್ಠೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಂಗಳೂರಿನಲ್ಲಿ ಮೇ 4ರಿಂದ ಇನ್ನು 2 ದಿನಗಳಿಗೊಮ್ಮೆ ನೀರು!

ನಗರಕ್ಕೆ ಜಲಕ್ಷಾಮದ ಬಿಸಿ

ಅನಗತ್ಯ ನೀರು ಪೋಲು ಮಾಡದಂತೆ ಸಾರ್ವಜನಿಕರಿಗೆ ಪಾಲಿಕೆ ಸೂಚನೆ

ಮಂಗಳೂರು: ಕರಾವಳಿ ಜಿಲ್ಲೆಗಳು ಬಿಸಿಲ ಝಳದಿಂದ ತತ್ತರಿಸಿದ್ದು, ಎಲ್ಲೆಡೆ ನೀರಿನ ಹಾಹಾಕಾರವೆದ್ದಿದೆ. ಇದೀಗ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ನೀರಿನ ಕೊರತೆ ಕಾಡಲಾರಂಭಿಸಿದೆ.

ಮಂಗಳೂರು ನಗರವಾಸಿಗಳಂತೂ ತುಂಬೆ ವೆಂಟೆಡ್ ಡ್ಯಾಂ ನೀರನ್ನೇ ನೆಚ್ಚಿಕೊಂಡಿದ್ದು, ಡ್ಯಾಂನಲ್ಲೂ ದಿನೇ ದಿನೇ ನೀರು ಇಳಿಮುಖದ ಹಾದಿ ಹಿಡಿದಿದೆ. ಈ ಹಿನ್ನೆಲೆಯಲ್ಲಿ ನಗರವಾಸಿಗಳಿಗೆ ರೇಶನಿಂಗ್ ಮೂಲಕ ಕುಡಿಯುವ ನೀರಿನ ಪೂರೈಕೆಯಾಗಲಿದೆ.

ರೇಶನಿಂಗ್ ದಿನಗಣನೆ

ಇತ್ತೀಚೆಗೆ ಜಿಲ್ಲಾಧಿಕಾರಿಯವರು ಮೇ 1ರಿಂದ ಮಂಗಳೂರು ಮಹಾನಗರ ಪಾಲಿಕೆಯ ಬಹುತೇಕ ವಾರ್ಡ್‌ಗಳಿಗೆ ರೇಶನಿಂಗ್ ಆಧಾರದಲ್ಲಿ ಕುಡಿಯುವ ನೀರು ಪೂರೈಸುವುದಾಗಿ ತಿಳಿಸಿದ್ದರು. ಆದರೆ, ದಿನಾಂಕ ಬದಲಾವಣೆಯಾಗಿದ್ದು, ಮೇ 4ರಿಂದ ರೇಶನಿಂಗ್ ಆರಂಭವಾಗಲಿದೆ. ಮಂಗಳೂರು ನಗರ ದಕ್ಷಿಣ ಮತ್ತು ಮಂಗಳೂರು ನಗರ ಉತ್ತರ ಭಾಗಕ್ಕೆ 2 ದಿನಗಳಿಗೊಮ್ಮೆ ನೀರು ಪೂರೈಕೆ ಮಾಡಲು ನಿರ್ಧರಿಸಲಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಎಲ್ಲೆಲ್ಲಿಂದ ನೀರು ಪೂರೈಕೆ?

ಮೇ 4ರಂದು ಬೆಂದೂರು ರೇಚಕ ಸ್ಥಾವರದಿಂದ ಕೋರ್ಟ್ ವಾರ್ಡ್, ಕಾರ್ ಸ್ಟ್ರೀಟ್, ಬಾವುಟಗುಡ್ಡ ಟ್ಯಾಂಕ್, ಆಕಾಶವಾಣಿ, ಪದವು, ಗೋರಿಗುಡ್ಡ, ಸೂಟರ್ ಪೇಟೆ, ಶಿವಭಾಗ್, ಬೆಂದೂರು, ಕದ್ರಿ, ವಾಸ್‌ಲೇನ್, ಬೆಂದೂರು, ಲೋಲೆವೆಲ್ ಪ್ರದೇಶಗಳು, ಬೋಳೂರು ಪ್ರದೇಶ. ಪಡೀಲ್ ರೇಚಕ ಸ್ಥಾವರದಿಂದ ಮಂಗಳಾದೇವಿ, ಅತ್ತಾವರ, ಬಾಬುಗುಡ್ಡೆ, ವೆಲೆನ್ಸಿಯ, ಜಪ್ಪಿನಮೊಗರು, ಬಿಕರ್ನಕಟ್ಟೆ, ಉಲ್ಲಾಸನಗರ, ಬಜಾಲ್, ತಿರುವೈಲು, ವಾಮಂಜೂರು. ಶಕ್ತಿನಗರ ಟ್ಯಾಂಕ್‌ನಿಂದ ಕುಂಜತ್ತಬೈಲ್, ಮುಗ್ರೋಡಿ, ಶಕ್ತಿನಗರ, ಸಂಜಯ ನಗರ, ಪ್ರೀತಿ ನಗರ, ಮಂಡ್ಕ, ರಾಜೀವ ನಗರ, ಬೊಂದೇಲ್, ಗಾಂಧಿನಗರ, ಶಾಂತಿನಗರ ಕಾವೂರು. ತುಂಬೆ– ಪಣಂಬೂರು ನೇರ ಲೈನ್‌ನಿಂದ ಕಂಕನಾಡಿ, ನಾಗುರಿ, ಪಂಪ್‌ವೆಲ್, ಬಲ್ಲೂರು ಗುಡ್ಡೆ, ಪಡೀಲ್‌ಗೆ ನೀರು ಪೂರೈಕೆ ಮಾಡಲಾಗುತ್ತದೆ.

ಮೇ 5ಕ್ಕೆ ಪಣಂಬೂರು ರೇಚಕ ಸ್ಥಾವರದಿಂದ ಸುರತ್ಕಲ್, ಎನ್‌ಐಟಿಕೆ, ಮುಕ್ಕ, ಹೊಸಬೆಟ್ಟು, ಕುಳಾಯಿ, ಜನತಾ ಕಾಲನಿ, ಬೈಕಂಪಾಡಿ, ಪಣಂಬೂರು, ಮೀನಕಳಿಯ. ಪಡೀಲ್ ರೇಚಕ ಸ್ಥಾವರದಿಂದ ಬಜಾಲ್, ಜಲ್ಲಿಗುಡ್ಡೆ, ಮುಗೇರ್, ಎಕ್ಕೂರು, ಸದಾಶಿವನಗರ, ಆಳಪೆ, ಮೇಘನಗರ, ಮಂಜಳಿಕೆ, ಕಂಕನಾಡಿ ರೈಲ್ವೇ ಸ್ಟೇಷನ್ ಪ್ರದೇಶ, ಕುಡುಪು, ಪಾಂಡೇಶ್ವರ, ಸ್ಟೇಟ್‌ಬ್ಯಾಂಕ್, ಗೂಡ್‌ಶೆಡ್, ಧಕ್ಕೆ, ಕಣ್ಣೂರು, ನಿಡ್ಡೆಲ್, ಶಿವನಗರ, ಕೊಡಕ್ಕಲ್, ನೂಜಿ, ಸರಿಪಳ್ಳ, ಉಲ್ಲಾಸ್ ನಗರ, ವೀರ ನಗರ. ಶಕ್ತಿನಗರ ಟ್ಯಾಂಕ್‌ನಿಂದ ಕಂಡೆಟ್ಟು, ಕುಲಶೇಖರ, ಮರೋಳಿ, ಕಕ್ಕೆಬೆಟ್ಟು, ಸಿಲ್ವರ್ ಗೇಟ್, ಕೊಂಗೂರು ಮಠ, ಪ್ರಶಾಂತ ನಗರ. ತುಂಬೆ ಪಣಂಬೂರು ನೇರ ಲೈನ್‌ನಿಂದ ಮೂಡ ಪಂಪ್ ಹೌಸ್, ಕೊಟ್ಟಾರ ಚೌಕಿ ಪಂಪ್‌ಹೌಸ್, ಕೂಳೂರು ಪಂಪ್‌ಹೌಸ್, ಕಾಪಿಕಾಡ್, ದಡ್ಡಲ್‌ಕಾಡ್ ಪ್ರದೇಶ, ಬಂಗ್ರ ಕೂಳೂರು ಈ ಪ್ರದೇಶಗಳಿಗೆ ನೀರು ಪೂರೈಕೆ ಮಾಡಲಾಗುತ್ತದೆ. ಇದೇ ರೀತಿಯಾಗಿ ಪರ್ಯಾಯ ದಿನಗಳಲ್ಲಿ ನೀರು ಪೂರೈಕೆ ಮುಂದುವರಿಯಲಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.



ಹಲವೆಡೆ ನೀರು ಸ್ಥಗಿತ

ನೀರಿನ ಕೊರತೆ ಇರುವುದರಿಂದ ಕಟ್ಟಡ ರಚನೆ, ಇತರ ನಿರ್ಮಾಣ ಕಾಮಗಾರಿ ಹಾಗೂ ವಾಹನ ತೊಳೆಯುವ ಸರ್ವಿಸ್ ಸೆಂಟರ್‌ಗಳ ನೀರಿನ ಜೋಡಣೆಯನ್ನು ಮುಂದಿನ ಸೂಚನೆಯವರೆಗೆ ಕಡಿತಗೊಳಿಸಲು ಪಾಲಿಕೆ ನಿರ್ಧರಿಸಿದೆ. ಸಾರ್ವಜನಿಕರು ಅನಗತ್ಯವಾಗಿ ನೀರು ಪೋಲು ಮಾಡುವುದು ಕಂಡು ಬಂದರೆ ಸೂಚನೆ ನೀಡದೆ ಜೋಡಣೆ ಕಡಿತಗೊಳಿಸಲಾಗುವುದು ಆಯುಕ್ತರು ಎಚ್ಚರಿಸಿದ್ದಾರೆ.

ಸಮಸ್ಯೆಯಾದರೆ ಕರೆ ಮಾಡಿ!

ಮಂಗಳೂರಿನ ಜನತೆ ನೀರಿನ ಸಮಸ್ಯೆ ಬಂದರೆ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು. **ಪಡೀಲ್ ರೇಚಕ ಸ್ಥಾವರ: 0824-2230840. ಬೆಂದೂರ್ ರೇಚಕ ಸ್ಥಾವರ: 0824-2220303, 2220362. ಪಣಂಬೂರು ರೇಚಕ ಸ್ಥಾವರ: 0824- 2220364. ಪಾಲಿಕೆ ವಾಟ್ಸಾಪ್ ಸಂಖ್ಯೆ: 9449007722. ಪಾಲಿಕೆ ಕಂಟ್ರೋಲ್ ರೂಂ: 0824- 2220319.**

ಕೈಕೊಟ್ಟ ಬೇಸಿಗೆ ಮಳೆ

ದ.ಕ. ಜಿಲ್ಲೆಯ ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಕೆಲವೆಡೆ ಮಾತ್ರ ಮಳೆಯಾಗುತ್ತಿದ್ದು, ಆದರೆ ಮಂಗಳೂರು ನಗರ, ಬಂಟ್ವಾಳ, ಪುತ್ತೂರು ಸಹಿತ ಹಲವೆಡೆ ಮಳೆ ಕೊರತೆ ಉಂಟಾಗಿದೆ.

ಸುತ್ತಮುತ್ತ

ಮಳೆಗೆ ಅಡ್ಡಿಯಾಗುತ್ತಿದೆ ಅರಬ್ಬೀ ಸಮುದ್ರದ ಪೂರ್ವದ ಗಾಳಿ?

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಯಲ್ಲಿ ಗುರುವಾರ ಮೋಡ ಹಾಗೂ ಬಿಸಿಲಿನ ವಾತಾವರಣ ಕಂಡುಬಂದಿತ್ತು. ಈ ನಡುವೆ ಸೆಕೆಯ ವಾತಾವರಣ ಮುಂದುವರಿದಿತ್ತು. ಕರಾವಳಿ ಜಿಲ್ಲೆಗಳಲ್ಲಿ ಏ.29, 30ರಂದು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿತ್ತು. ಆದರೆ ಅರಬ್ಬೀ ಸಮುದ್ರದ ಕಡೆಯಿಂದ ಬೀಸುತ್ತಿರುವ ಪೂರ್ವದ ಗಾಳಿಯ ಒತ್ತಡದ ಕಾರಣದಿಂದ ಕರಾವಳಿ ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ಅಲ್ಲದೇ ಮೇ ಮೊದಲ ವಾರದಲ್ಲಿಯೂ ಇದೇ ರೀತಿಯ ಹವಾಮಾನ ವೈಪರೀತ್ಯ ಉಂಟಾಗುವ ಸಾಧ್ಯತೆ ಇದೆ ಎಂದು ನಾಡಿನ ಹವಾಮಾನ ವಿಶ್ಲೇಷಕರು ಅಂದಾಜಿಸಿದ್ದಾರೆ.

ಸುತ್ತ ಮುತ್ತ

ಇಂದು ಅನುಪಯುಕ್ತ ಚಿನ್ನಗಳ ಪರಿಶೀಲನೆ

ಪುತ್ತೂರು: ಶ್ರೀ ಮಹಾಲಿಂಗೇಶ್ವರ ದೇವರಿಗೆ ಚಿನ್ನದ ಮುಖವಾಡ ಮಾಡಿಸುವ ಸಂಬಂಧ ದೇವಳದಲ್ಲಿ ಇರುವ ಅನುಪಯುಕ್ತ ಚಿನ್ನಗಳ ಪರಿಶೀಲನಾ ಕಾರ್ಯ ಮೇ 1ರಂದು ಸಂಜೆ 4 ಗಂಟೆಗೆ ಶಾಸಕ ಅಶೋಕ್ ಕುಮಾರ್ ರೈ ಉಪಸ್ಥಿತಿಯಲ್ಲಿ ನಡೆಸಲಾಗುವುದು ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ತಿಳಿಸಿದ್ದಾರೆ.

ಇಂದು ಚೆನ್ನಾವರ ನೇಮ

ಸವಣೂರು: ಕಡಬ ತಾಲೂಕಿನ ಪಾಲ್ತಾಡಿ ಗ್ರಾಮದ ಚೆನ್ನಾವರಗಡಿಗುತ್ತು ಶ್ರೀ ಉಳ್ಳಾಕುಲು ಮಾಡ,ಗ್ರಾಮ ದೈವ ಅಬ್ಬೆಜಲಾಯ ಹಾಗೂ ಸಪರಿವಾರ ದೈವಗಳ ದೈವಸ್ಥಾನದಲ್ಲಿ ಮೇ 1ರಂದು ವರ್ಷಾವಧಿ ನೇಮ ನಡೆಯಲಿದೆ. ದೈವಸ್ಥಾನದಲ್ಲಿ ಮೇ 1ರಂದು ಬೆಳಗ್ಗೆ 7.30ರಿಂದ ಗಣಹೋಮ, ನವಕ ಕಲಶ, ಬೆಳಗ್ಗೆ 11ರಿಂದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 6.30ಕ್ಕೆ ಶ್ರೀ ದೈವಗಳ ಭಂಡಾರ ತೆಗೆಯುವುದು, ಅನ್ನ ಸಂತರ್ಪಣೆ, ರಾತ್ರಿ 11ರಿಂದ ನೇಮ ನಡೆಯಲಿದೆ. ಮೇ 2ರಂದು ಬೆಳಗ್ಗೆ 5ರಿಂದ ಗ್ರಾಮ ದೈವ ಶ್ರೀ ಅಬ್ಬೆಜಲಾಯ ದೈವದ ನೇಮ ನಡೆಯಲಿದೆ. ಮೇ 1ರಂದು ರಾತ್ರಿ 9ರಿಂದ ಅಭ್ಯುದಯ ಯುವಕ ಮಂಡಲ ಚೆನ್ನಾವರ, ಯುವಶಕ್ತಿ ಫ್ರೆಂಡ್ಸ್ ಚೆನ್ನಾವರ-ಮಾಡಾವು ಫ್ರೆಂಡ್ಸ್ ಇದರ ಆಶ್ರಯದಲ್ಲಿ ಉಳ್ಳಾಕುಲು ಸೇವಾ ಸಮಿತಿ ಚೆನ್ನಾವರ ಇದರ ಸಹಯೋಗದೊಂದಿಗೆ ಅಭಿನವ ಯಕ್ಷ ಕಲಾಕೇಂದ್ರ ಮಾಡಾವು ಇದರ ವಿದ್ಯಾರ್ಥಿಗಳಿಂದ ವೀರ ಅಭಿಮನ್ಯು ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಉಳ್ಳಾಕುಲು ಸೇವಾ ಸಮಿತಿಯ ಅಧ್ಯಕ್ಷ ಪದ್ಮನಾಭ ಶೆಟ್ಟಿ ಚೆನ್ನಾವರ, ದೈವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುಬ್ರಾಯ ಗೌಡ ಪಾಲ್ತಾಡಿ ತಿಳಿಸಿದ್ದಾರೆ.

ಬೆಟ್ಟಂಪಾಡಿ ವಲಯ ಮೇಲ್ವಿಚಾರಕರಾಗಿ ಆದರ್ಶ್

ನಿಡ್ಪಳ್ಳಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಪುತ್ತೂರು, ಬೆಟ್ಟಂಪಾಡಿ ವಲಯದ ಮೇಲ್ವಿಚಾರಕರಾಗಿ ಆದರ್ಶ್ ಅವರು



ಏ.30ರಂದು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸೋಹನ್ ಜಿ. ಅವರು ಹೂ ನೀಡಿ ದಾಖಲಾತಿಯೊಂದಿಗೆ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಬಂಟ್ವಾಳ ತಾಲೂಕಿನ ಕಾರಿಂಜ ನಿವಾಸಿಯಾದ ಅವರು ಈ ಹಿಂದೆ ಮೈಸೂರಿನಲ್ಲಿ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಬೆಟ್ಟಂಪಾಡಿ ವಲಯದಲ್ಲಿ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸೋಹನ್ ಜಿ. ಪುತ್ತೂರು ಬನ್ನೂರು ವಲಯದ ಮೇಲ್ವಿಚಾರಕರಾಗಿ ವರ್ಗಾವಣೆಗೊಂಡಿದ್ದಾರೆ. ಬೆಟ್ಟಂಪಾಡಿ ವಲಯದಲ್ಲಿ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡ ಸೋಹನ್ ಜಿ. ಅವರನ್ನು ಬೆಟ್ಟಂಪಾಡಿ ವಲಯದ ಸೇವಾ ಪ್ರತಿನಿಧಿಗಳ ಪರವಾಗಿ ಗೌರವಿಸಿ ಬೀಳ್ಕೊಡಲಾಯಿತು. ಬೆಟ್ಟಂಪಾಡಿ ವಲಯಾಧ್ಯಕ್ಷ ಬಾಲಕೃಷ್ಣ ಹಾಗೂ ವಲಯದ ಸೇವಾ ಪ್ರತಿನಿಧಿಗಳು ಇದ್ದರು.

ಕುತ್ತಾರು ದೇವಸ್ಥಾನದ ಅಧ್ಯಕ್ಷರಾಗಿ ಪವಿತ್ರ ಕುಮಾರ್ ಗಟ್ಟಿ ಆಯ್ಕೆ

ಉಳ್ಳಾಲ: ಕುತ್ತಾರು ಶ್ರೀ ರಾಜರಾಜೇಶ್ವರಿ ಸಿದ್ಧಿ ವಿನಾಯಕ ದೇವಸ್ಥಾನ ಹಾಗೂಶ್ರೀ ರಾಜರಾಜೇಶ್ವರಿ ಸಿದ್ಧಿ ವಿನಾಯಕ ಸೇವಾ ಟ್ರಸ್ಟ್ ಇದರ ಮಹಾಸಭೆಯು ದೇವಸ್ಥಾನದ ಗೌರವ ಅಧ್ಯಕ್ಷರಾದ ಚಂದ್ರಹಾಸ್ ಕೊಟ್ಟಾರಿಯವರ ಅಧ್ಯಕ್ಷತೆಯಲ್ಲಿ



ಜರಗಿತು. ಸಭೆಯಲ್ಲಿ ಮುಂದಿನ ಎರಡು ವರ್ಷದ ಅವಧಿಗೆ ಹೊಸ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ಗೌರವ ಅಧ್ಯಕ್ಷರಾಗಿ ಚಂದ್ರಹಾಸ ಕೊಟ್ಟಾರಿ,ಅಧ್ಯಕ್ಷರಾಗಿ ಪವಿತ್ರ ಕುಮಾರ್ ಗಟ್ಟಿ ಕುತ್ತಾರ್, ಉಪಾಧ್ಯಕ್ಷರಾಗಿ ವಾಸು ಪೂಜಾರಿ ಕುತ್ತಾರ್, ಪ್ರಧಾನ ಕಾರ್ಯದರ್ಶಿಯಾಗಿ ಪುಷ್ಪರಾಜ್ ಸನಿಲ್,ಜೊತೆ ಕಾರ್ಯದರ್ಶಿಯಾಗಿ ಧನುಷ್ ಗಟ್ಟಿ ಕುತ್ತಾರ್, ಕೋಶಾಧಿಕಾರಿಯಾಗಿ ಜಗನ್ನಾಥ್ ಸಾಲಿಯನ್ ಕುತ್ತಾರ್,ಸಂಘಟನಾ ಕಾರ್ಯದರ್ಶಿಯಾಗಿ ಜೆ.ಕೆ ರೈ ಕುತ್ತಾರ್ ಆಯ್ಕೆಗೊಂಡರು. ಸಭೆಯಲ್ಲಿ ರಾಜೇಶ್ ಅತ್ತಾವರ,ಗೋಪಾಲ ಕುತ್ತಾರ್,ವಿವೇಕಾನಂದ ಸನಿಲ್,ದಿನೇಶ್ ಗಟ್ಟಿ ಕುತ್ತಾರ್, ನಿತಿನ್ ಕೊಟ್ಟಾರಿ, ಪ್ರೇಮ್ ದಾಸ್ ಪೂಜಾರಿ,ಸುರೇಶ್ ಮುಂಡೋಳಿ ಮೊದಲಾದವರು ಉಪಸ್ಥಿತರಿದ್ದರು.

ಬತ್ತಿ ಹೋಗುತ್ತಿದೆ ಕೆರೆ, ಹಳ್ಳ, ಕೊಳವೆ ಬಾವಿಗಳು | ಆಶ್ರಯವಾಗಬೇಕಿದ್ದ ಜೆಜೆಎಂ ಯೋಜನೆಯೂ ಅಪೂರ್ಣ

ಜಲಮೂಲಗಳಿಗೆ ಹೊಡೆತ ನೀಡುತ್ತಿದೆ ಸೂರ್ಯನ ತಾಪ!

■ ರಾಜೇಶ್ ಪಟ್ಟೆ

ಪುತ್ತೂರು: ಬೇಸಿಗೆಯ ಬಿರುಸು ಹೆಚ್ಚುತ್ತಿರುವಂತೆ ಕುಡಿಯುವ ನೀರಿನ ಆತಂಕವೂ ನಿಧಾನವಾಗಿ ಹೆಚ್ಚುತ್ತಿದೆ. ಬೇಸಿಗೆ ಮಳೆ ಅಲ್ಲಲ್ಲಿ ಕೆಲವೊಮ್ಮೆ ಸುರಿದ್ದರೂ, ಬಿಸಿಲಿನ ಪ್ರಖರತೆಯೇ ಅಧಿಕವಾಗಿರುವ ಕಾರಣ ಕುಡಿಯುವ ನೀರಿನ ಎಚ್ಚರಿಕೆ ಕರೆಗಂಟೆ ಬಾರಿಸುತ್ತಿದೆ. ಈ ಮಧ್ಯೆ ಶಾಶ್ವತ ಕುಡಿಯುವ ನೀರು ಕಲ್ಪಿಸುವ ಯೋಜನೆಗಳೂ ಅಪೂರ್ಣ ಹಂತದಲ್ಲಿರುವುದು ಸವಾಲು ಹೆಚ್ಚಿಸಿದೆ.

ಕೆರೆ, ಬಾವಿಯ ನೀರಿನ ಮೂಲ ಪ್ರಸ್ತುತ ಕಡಿಮೆಯಾಗುತ್ತ ಬರುತ್ತಿದ್ದು, ಬಹುಪಾಲು ರೈತರು ಮತ್ತು ಸಾಮಾನ್ಯ ಜನರು ಕೊಳವೆ ಬಾವಿಗಳನ್ನು ನಂಬಿದ್ದಾರೆ. ಜಮೀನಿನಲ್ಲಿದ್ದ ಕೆರೆಗಳು ಸಂರಕ್ಷಣೆಯಾಗುವ ಬದಲು ಅಧಿಕ ಕೊಳವೆ ಬಾವಿ ಕೊರೆಯುತ್ತಿರುವ ಕಾರಣ ಕೆರೆಗಳು ಬತ್ತಿ ಹೋಗುತ್ತಿದೆ. ಬಾವಿಗಳು ಅಲ್ಪಸ್ವಲ್ಪ ಬದುಕಿದ್ದರೂ ಬೇಸಿಗೆಯ ಕೊನೆಯ ಹಂತದಲ್ಲಿ ಬತ್ತುತ್ತಿವೆ. ಹಳ್ಳಿ ಹಳ್ಳಿಗೂ ಪ್ರಸ್ತುತ ಗ್ರಾ.ಪಂ.ಗಳ



ಸಂಗಮ ವಿಶೇಷ

ಮೂಲಕ ಕುಡಿಯುವ ನೀರು ಪೈಪ್ ಮೂಲಕ ಬರುತ್ತಿರುವ ಕಾರಣ ಇಡೀ ಕುಡಿಯುವ ನೀರಿನ ಜಾಲವೇ ಬೋರ್‌ವೆಲ್‌ಗಳನ್ನು ನಂಬಿ ಕೂತಿದೆ.

ಮನೆ ಮನೆಗೆ ಗಂಗೆ ಪೂರ್ಣಗೊಂಡಿಲ್ಲ

ಜಲಜೀವನ್ ಮಿಶನ್ ಮೂಲಕ ಮನೆ ಮನೆಗೆ ಗಂಗೆ ಹರಿಸುವ ಯೋಜನೆ ಜಾರಿಯಲ್ಲಿದೆ. ಎಲ್ಲಾ ತಾಲೂಕುಗಳಲ್ಲಿ ಜೆಜೆಎಂ ಯೋಜನೆ ಶೇ.100 ಅನುಷ್ಠಾನಗೊಂಡಿಲ್ಲ.ಪುತ್ತೂರು, ಕಡಬ ತಾಲೂಕಿನಲ್ಲಿ 3 ಹಂತದಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಕೊನೆಯ ಹಂತ ಸಂಪೂರ್ಣಗೊಂಡಿಲ್ಲ.

ಬಹುಗ್ರಾಮದ ಕಥೆಯೂ ಅದೇ

ಪುತ್ತೂರು, ಕಡಬ, ಸುಳ್ಯ ಮತ್ತು ಬಂಟ್ವಾಳ ತಾಲೂಕುಗಳಿಗೆ ನಿರಂತರ ಶುದ್ಧ ಕುಡಿಯವ ನೀರು ಪೂರೈಸುವ ಸುಮಾರು ರೂ.1,012 ಕೋಟಿ ವೆಚ್ಚದ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಕಾಮಗಾರಿ ಇನ್ನೂ ಮುಗಿದಿಲ್ಲ. ಹೀಗಾಗಿ ಈಗಲೂ ಜೆಜೆಎಂ ಮೂಲಕ ಕೊಳವೆ ಬಾವಿಯ ನೀರನ್ನು ಪೂರೈಸಲಾಗುತ್ತಿದೆ. ಬಂಟ್ವಾಳದ ಎಎಂಆರ್ ಅಣೆಕಟ್ಟು, ಕಡಬದ ಶಾಂತಿಮುಗೇರು ಕಿಂಡಿ ಅಣೆಕಟ್ಟಿನಿಂದ ನೀರೆತ್ತುವ ಬಹುಗ್ರಾಮದ ಕುಡಿಯುವ ನೀರು ಯೋಜನೆಯ 2 ಕಾಮಗಾರಿಗಳು ಪ್ರಗತಿಯಲ್ಲಿದ್ದರೂ, ನೀರೆತ್ತುವ ಕೆಲಸ ಆರಂಭವಾಗಲು ಇನ್ನೂ ಸಾಕಷ್ಟು ಸಮಯವಿದೆ. ಟ್ಯಾಂಕ್‌ಗಳ ನಿರ್ಮಾಣ, ಕೊಳವೆ ಅಳವಡಿಕೆ ಕೆಲಸ ನಡೆಯುತ್ತಿದೆ.

ನೆಕ್ಕಿಲಾಡಿ ಅಣೆಕಟ್ಟಿನಲ್ಲಿ 3 ಮೀ.ನಷ್ಟು ನೀರು

ಪುತ್ತೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಉಪ್ಪಿನಂಗಡಿ ಸಮೀಪದ ನೆಕ್ಕಿಲಾಡಿ ಕಿಂಡಿ ಅಣೆಕಟ್ಟಿನಲ್ಲಿ ಪ್ರಸ್ತುತ 3 ಮೀಟರ್‌ನಷ್ಟು ನೀರಿದೆ. ಒಂದಷ್ಟು ಪ್ರಮಾಣದ ಮಳೆ ಸುರಿದರೆ ಈ ಬಾರಿಯ ಬೇಸಿಗೆಯಲ್ಲಿ ಪುತ್ತೂರಿಗೆ ಯಾವುದೇ ನೀರಿನ ಸಮಸ್ಯೆ ಬರಲಾರದು ಎಂದು ಪೌರಾಯುಕ್ತೆ ವಿದ್ಯಾ ಎಂ. ಕಾಳೆ ಹೇಳಿದ್ದಾರೆ. ಕುಮಾರಧಾರ ನದಿಯಲ್ಲಿ ಒಳ ಹರಿವು ಪೂರ್ತಿ ನಿಂತಿಲ್ಲ. ಮೇಲ್ಭಾಗದಲ್ಲಿ ಹಲವು ಬಾರಿ ಮಳೆಯಾದ ಕಾರಣ ಸದ್ಯದ ಸ್ಥಿತಿ ಪರವಾಗಿಲ್ಲ. ಜಲಸಿರಿ ಯೋಜನೆಯಡಿಯಲ್ಲಿ ಪುತ್ತೂರು ನಗರಕ್ಕೆ ನೀರು ಪೂರೈಸಲಾಗುತ್ತಿದೆ. ಎತ್ತರದ ಪ್ರದೇಶಗಳಿಗೆ ನೀರು ಸಮಸ್ಯೆ ಉಂಟಾದರೆ ಟ್ಯಾಂಕರ್ ಮೂಲಕ ಪೂರೈಕೆಗೆ ನಗರಸಭೆ ಸಿದ್ಧವಿದೆ ಎಂದು ತಿಳಿಸಿದ್ದಾರೆ.

ಪುತ್ತೂರಿನಲ್ಲಿ ಜಲಸಿರಿ ಪ್ರಗತಿಯಲ್ಲಿ

ಪುತ್ತೂರಿನ ಜಲಸಿರಿ ಕಾಮಗಾರಿಯಲ್ಲಿ ಹಳೆಯ ಪಿವಿಸಿ ಪೈಪ್ ಜಾಲ ಬದಲಾಯಿಸುವ ಕೆಲಸ ಹಂತ ಹಂತವಾಗಿ ನಡೆಯುತ್ತಿದೆ. ಯೋಜನೆಯ ಡಿಪಿಆರ್‌ನಲ್ಲಿ ಹಳೆಯ ಪಿವಿಸಿ ಪೈಪ್ ಜಾಲ ಬದಲಾವಣೆಯ ವಿಚಾರ ಸೇರಿಸದ ಕಾರಣ ಈಗ ಸಮಸ್ಯೆಯಾಗಿದೆ. ಇದೀಗ ನಗರಸಭೆಯಿಂದ ಅನುದಾನ ನೀಡಿ ಹಳೆಯ ಪೈಪ್ ಬದಲಾಯಿಸಿ ಹೊಸ ಲೈನ್ ಅಳವಡಿಸಲಾಗುತ್ತಿದೆ. ಉಳಿದಂತೆ ಜಲಸಿರಿ ನೀರು ಪೂರೈಕೆ ವ್ಯವಸ್ಥೆ ಕಳೆದ ವರ್ಷಗಳಿಗಿಂತ ಸಾಕಷ್ಟು ಸುಧಾರಿಸಿದ್ದು, ಶೀಘ್ರದಲ್ಲಿ ಯೋಜನೆ ಪೂರ್ಣಗೊಳ್ಳಲಿದೆ.

● **ಜೀವಂಧರ ಜೈನ್,** ನಗರಸಭೆ ಮಾಜಿ ಅಧ್ಯಕ್ಷ

ಮಂಗಲ ಪ್ರವಚನದಲ್ಲಿ ವೀರಸಾಗರ ಮುನಿ ಮಹಾರಾಜರ ಸಂದೇಶ

ಧರ್ಮ ಪಾಲನೆಯಿಂದ ಮಾತ್ರ ತೃಪ್ತ ಜೀವನ ಸಾಧ್ಯ

ಉಪ್ಪಿನಂಗಡಿ: ಜೈನ ಧರ್ಮಾನುಯಾಯಿಗಳು ನಾಚಿಕೆ, ಅಂಜಿಕೆಯನ್ನು ತ್ಯಜಿಸಬೇಕು. ನಮ್ಮೊಳಗೆ ಶಾಂತಿ, ಸಂವೇದ, ನಿರ್ವೇದ, ಅನುಕಂಪ, ಆಸ್ತಿಕ್ಯ ಎಂಬ ಐದು ಗುಣಗಳಿದ್ದರೆ ಆತ್ಮದರ್ಶನ ಸಾಧ್ಯ. ಜೈನ ಧರ್ಮದ ಅಸ್ತಿತ್ವದಲ್ಲಿ ದಿಗಂಬರ ಮುನಿಗಳ ಪಾತ್ರ ಮಹತ್ತರದ್ದಾಗಿದೆ. ಈ ನಿಟ್ಟಿನಲ್ಲಿ ಇತಿಹಾಸದಿಂದ ನಾವೆಲ್ಲಾ ಪಾಠವನ್ನು ಕಲಿಯಬೇಕಾಗಿದೆ ಎಂದು ಪರಮಪೂಜ್ಯ 108 ಶ್ರೀ ವೀರಸಾಗರ ಮುನಿ ಮಹಾರಾಜರು ತಿಳಿಸಿದರು.

ಕದಿಕಾರು ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಏಕಶಿಲಾ ಚತುರ್ಮುಖ ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳ ಪಂಚಕಲ್ಯಾಣ ಹಾಗೂ ಧಾಮ ಸಂಪ್ರೋಕ್ಷಣಾಪೂರ್ವಕ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವದ 2ನೇ ದಿನ ಮಂಗಲ ಪ್ರವಚನ ನೀಡಿದರು.

ನಮ್ಮ ಈ ಬದುಕಿನಲ್ಲಿ ಕಳೆದು ಹೋದ ವರ್ಷಗಳ ಬಗ್ಗೆ ಚಿಂತಿಸುವುದಿಲ್ಲ, ಆದರೆ ನಾಳೆಯ ವೈಭವದ ಜೀವನದ ಬಗ್ಗೆ ಮೋಹದ ಬಗ್ಗೆ ಕನಸು ಕಾಣುತ್ತೇವೆ, ಇದನ್ನು ಬದಿಗಿಟ್ಟು ಧರ್ಮ ಪಾಲನೆ ಪ್ರಕಾರ ಜೀವನ ಅನುಭವಿಸಿದರೆ ಅದರಲ್ಲಿ ಸಿಗುವ ಸುಖವೇ ನಿಜವಾದ ಧರ್ಮ ಎಂದು ಹೇಳಿದರು.



ವಿವಿಧ ಕಾರ್ಯಕ್ರಮ

ಗುರುವಾರ ಬಸದಿಯಲ್ಲಿ ನಿತ್ಯವಿಧಿ ಸಹಿತ ಶ್ರೀ ಪೀಠಯಂತ್ರಾರಾಧನಾ ವಿಧಾನ, ವಾಸ್ತು ಪೂಜಾ ವಿಧಾನ, ನವಗ್ರಹ ಮಹಾಶಾಂತಿ, ದಿಕ್ಪಾಲಕ ಬಲಿ ವಿಧಾನ, ಶ್ರೀ ನಾಗದೇವರ ಪ್ರತಿಷ್ಠೆ, ಆರಾಧನಾ ಪೂರ್ವಕ ಶ್ರೀ ಪದ್ಮಾವತಿ ದೇವಿ ಪ್ರತಿಷ್ಠೆ, ಕುಂಕುಮಾರ್ಚನೆ, ಪಂಚಕಲ್ಯಾಣ ಮಂಟಪದಲ್ಲಿ ಗರ್ಭಾವತರಣ ಕಲ್ಯಾಣ ಉತ್ತರ ನಿಧಿ, ಮಹೋತ್ಸವ, ಶ್ರೀ ಸ್ವಾಮಿಗೆ ನವ ಕಲಶಾಭಿಷೇಕ, ಮಹಾ ಮಂಗಳಾರತಿ, ಶ್ರೀ ಜಿನಗಂಧೋದಕ ವಿಧಿವಿಧಾನಗಳು ನಡೆದವು.

ಉಜಿರೆ ಎಸ್.ಡಿ.ಎಂ. ಕಾಲೇಜಿನ ಉಪನ್ಯಾಸಕ ಮಹಾವೀರ ಜೈನ್ ಇಚ್ಲಂಪಾಡಿ ಉಪನ್ಯಾಸ ನೀಡಿದರು.

ಜೈನ ಧರ್ಮ ಮುಖಂಡ ಧನಂಜಯ ಆಳ್ವ ಅಳಿಯೂರು, ಜಯವರ್ಮ ಬಳ್ಳಾಲ್, ರಾಜವರ್ಮ ಬಳ್ಳಾಲ್, ಜಿನರಾಜ ಆರಿಗ ಕಾರಿಂಜ, ಮುನಿರಾಜ ರೆಂಜಾಳ, ಪ್ರಸನ್ನ ಕುಮಾರ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಜ್ರಕುಮಾರ್ ಜೈನ್, ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷ ಧನ್ಯಕುಮಾರ್ ರೈ, ಪಂಚಕಲ್ಯಾಣ ಸಮಿತಿ ಅಧ್ಯಕ್ಷ ವಿದ್ಯಾಧರ ಜೈನ್, ಕಾರ್ಯದರ್ಶಿ ಶಾಂತಿಪ್ರಕಾಶ್, ಸಮಿತಿಯ ಸದಸ್ಯರಾದ ಪ್ರಶಾಂತ್ ಜೈನ್ ಬಾರ್ಯ, ಅನುದೀಪ್ ರೈ, ಸುಭಾಶ್ ಜೈನ್, ನಿರಂಜನ್ ಕೊಂಡೆ, ಪಾರ್ಶ್ವನಾಥ್ ನೆಲ್ಯಾಡಿ, ಸಮಂತ್ ನೆಲ್ಯಾಡಿ, ಪುನಿತ್ ನೆಲ್ಯಾಡಿ, ಉದಯ ಕುಮಾರ್ ಜೈನ್, ಅಭಯ್ ಜೈನ್, ವಿಜೇತ್ ಜೈನ್, ಸಂಪತ್ ಕುಮಾರ್ ಅಲಂಕಾರು, ಸನ್ಮತಿ ಹೆಗ್ಡೆ, ಸತೀಶ್ ಪಡಿವಾಳ್, ಮಹೇಶ್ ಪಡಿವಾಳ, ಪಾರ್ಶ್ವನಾಥ ಜೈನ್ ಮತ್ತಿತರರಿದ್ದರು.

ಮೇ 4ರಿಂದ 9ವರೆಗೆ ವಿವಿಧ ಕಾರ್ಯಕ್ರಮಗಳ ಆಯೋಜನೆ

ಬಿ.ಸಿ.ರೋಡಿನಲ್ಲಿ ಕರಾವಳಿ ಕಲೋತ್ಸವ, ಸ್ಪರ್ಧೆ

ಬಂಟ್ವಾಳ: ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಚಿಣ್ಣರ ಲೋಕ ಮೋಕೆದ ಕಲಾವಿದೆರ್ ಸೇವಾ ಟ್ರಸ್ಟ್ ಬಂಟ್ವಾಳ, ಚಿಣ್ಣರಲೋಕ ಸೇವಾ ಬಂಧು ಇವುಗಳ ಸಂಯುಕ್ತಾಶ್ರಯದಲ್ಲಿ 'ಕರಾವಳಿ ಕಲೋತ್ಸವ 2026' ತುಳು, ಕೊಂಕಣಿ, ಬ್ಯಾರಿ, ಅರೆಭಾಷೆ ಅಕಾಡೆಮಿ ಸಹಯೋಗದೊಂದಿಗೆ 'ಬಹು ಸಂಸ್ಕೃತಿ ಉತ್ಸವ ಮತ್ತು ಆಹಾರ ಮೇಳ' ಮೇ 4ರಿಂದ 9 ವರೆಗೆ ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಕರಾವಳಿ ಕಲೋತ್ಸವ ಅಧ್ಯಕ್ಷ ಸುದರ್ಶನ ಜೈನ್ ಪಂಜಿಕಲ್ಲು ಅವರು ತಿಳಿಸಿದ್ದಾರೆ.

ಗುರುವಾರ ಬಿ.ಸಿ.ರೋಡಿನ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 4 ರಂದು ಸಂಜೆ 5ಕ್ಕೆ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ವಠಾರದಿಂದ ಜಾನಪದ ದಿಬ್ಬಣದ ಮೆರವಣಿಗೆ ನಡೆಯಲಿದೆ ' ಎಂದರು.

ಚಿಣ್ಣರ ಲೋಕದ ಮೋಕೆದ ಕಲಾವಿದೆರ್ ಸಂಸ್ಥೆಯ ಸ್ಥಾಪಕಾಧ್ಯಕ್ಷ ಮೋಹನದಾಸ ಕೊಟ್ಟಾರಿ ಮುನ್ನೂರು ಮಾತನಾಡಿ, ಕಲಾ ಮಂದಿರದ ವೇದಿಕೆಗೆ ಕೀರ್ತಿಶೇಷ ಬಿ.ಎ ಅಹ್ಮದ್ ಹಾಜಿ ತುಂಬೆ ಅವರ ಹೆಸರನ್ನಿಡಲಾಗುತ್ತದೆ. ತಾಲೂಕಿನಲ್ಲಿಯೇ ಮೊದಲ ಬಾರಿಗೆ ಮಹಿಳೆಯರಿಗೆ ಸೀರೆ ನಡಿಗೆ ಸ್ಪರ್ಧೆ ಆಯೋಜಿಸಲಾಗಿದೆ. ಮಹಿಳೆಯರು ಜಾನಪದ ದಿಬ್ಬಣದ ಮೆರವಣಿಗೆಯಲ್ಲಿ ಸೀರೆಯನ್ನು ಧರಿಸಿಕೊಂಡು ಹೆಜ್ಜೆ ಹಾಕಬೇಕು, ವಿಜೇತರಿಗೆ ಬಹುಮಾನ ನೀಡಲಾಗುವುದು, ಗೇರು ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಸ್ಪರ್ಧೆ ಉದ್ಘಾಟಿಸುವವರು ಎಂದು ತಿಳಿಸಿದರು

ಆಹಾರ ಮೇಳವನ್ನು ಅಂದು ಸಂಜೆ 7ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಲಿದ್ದಾರೆ. ಸ್ಪೀಕರ್ ಯು.ಟಿ. ಖಾದರ್, ಶಾಸಕ ರಾಜೇಶ್ ನಾಯ್ಕ್, ಮಾಜಿ ಸಚಿವ ರಮಾನಾಥ ರೈ, ಚಲನ ಚಿತ್ರನಟ ಡಾ. ದೇವದಾಸ ಕಾಪಿಕಾಡ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು ಎಂದರು.

ಆಡಳಿತ ಟ್ರಸ್ಟಿ ತೇವು ತಾರಾನಾಥ ಕೊಟ್ಟಾರಿ ಮಾತನಾಡಿ, ಕರಾವಳಿ ಸೌರಭ ರಾಜ್ಯಪ್ರಶಸ್ತಿಯನ್ನು ಸಾಮಾಜಿಕ ಕಾರ್ಯಕರ್ತ ಎಲಿಯಾಸ್ ಸ್ಯಾಂಕ್ಟಿಸ್ ಅವರಿಗೆ, ಉದಯ ಚೌಟ ಸಾಧನಾ ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಕಬಡ್ಡಿ ಪಟು ರೋಹಿತ್ ಮಾರ್ಲ ಅವರಿಗೆ, ಚಿಣ್ಣರ ಸೌರಭ ರಾಜ್ಯ ಪ್ರಶಸ್ತಿಯನ್ನು ಸಾನ್ವಿ ಕೆ. ಅವರಿಗೆ ನೀಡಿ ಗೌರವಿಸಲಾಗುವುದು. ದತ್ತು ಸ್ವೀಕರಿಸಿದ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ, ಸಂಸ್ಥೆಯಲ್ಲಿ ತರಬೇತು ಪಡೆಯುವ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆಯು ನಡೆಯಲಿದೆ. ಉದ್ಘಾಟನಾ ದಿನ ಚಿಣ್ಣರಲೋಕದ ಯಕ್ಷಗಾನ ಗುರು ಓಂ ಪ್ರಕಾಶ್ ರೈ ಕಲ್ಲಡ್ಕ ಅವರ ಶಿಷ್ಯವೃಂದದಿಂದ ಶ್ರೀ ರಾಮದರ್ಶನ ಯಕ್ಷಗಾನ ನಡೆಯಲಿದೆ ಎಂದರು.

ಮೇ 5ರಂದು ತುಳು ಸಾಹಿತ್ಯ ಸಂಭ್ರಮ ಅಧ್ಯಕ್ಷ ಬೇಬಿ ಕುಂದರ್ ಅಧ್ಯಕ್ಷತೆಯೊಂದಿಗೆ ನಡೆಯಲಿದೆ. ಈ ವೇಳೆ ತುಳುನಾಡ ಸೌಹಾರ್ದತೆ ತುಳು ಕವಿಗೋಷ್ಠಿ ಇರಲಿದೆ. 6ರಂದು ಅರೆಭಾಷೆ ಸಾಂಸ್ಕೃತಿಕ ಸಂಭ್ರಮ ಉಮೇಶ್ ಕುಮಾರ್ ವೈ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, 7ರಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಬ್ಯಾರಿ ಸಾಹಿತ್ಯ ಸಂಭ್ರಮ ನಡೆಯಲಿದೆ. 8ರಂದು ಕೊಂಕಣಿ ಸಾಹಿತ್ಯ ಸಂಭ್ರಮ ಪಿಯೂಸ್ ಎಲ್ ರೋಡ್ರಿಗಸ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. 9ರಂದು ತೀರ್ಥಪ್ರಸಾದ್ ಅನಂತಾಡಿ ಸ್ಮರಣಾರ್ಥ ಕರಾವಳಿ ಸರಿಗಮಪ ರಾಜ್ಯಮಟ್ಟದ ಸಂಗೀತ ಸ್ಪರ್ಧೆ ನಡೆಯಲಿದೆ ಎಂದರು.

ಗೌರವಾಧ್ಯಕ್ಷ, ಹಿರಿಯ ನ್ಯಾಯವಾದಿ ಪಿ.ಜಯರಾಮ ರೈ, ತುಳು ಸಾಹಿತ್ಯ ಸಂಭ್ರಮ ಅಧ್ಯಕ್ಷ ಬೇಬಿ ಕುಂದರ್, ಬ್ಯಾರಿ ಸಾಹಿತ್ಯ ಸಂಭ್ರಮ ಅಧ್ಯಕ್ಷ ಅಬ್ದುಲ್ ರಝಾಕ್ ಕುಕ್ಕಾಜೆ, ಕಾರ್ಯದರ್ಶಿ ಲತೀಫ್ ನೇರಳಕಟ್ಟೆ, ಗೌರವ ಸಲಹೆಗಾರ ರಾಮಕೃಷ್ಣ ರಾವ್ ಉಪಸ್ಥಿತರಿದ್ದರು.

ಸುಬ್ರಹ್ಮಣ ಶ್ರೀಮಠದಲ್ಲಿ ನೃಸಿಂಹ ಜಯಂತಿ: ಶ್ರೀದೇವರಿಗೆ ಮಹಾಭಿಷೇಕ



ಸುಬ್ರಹ್ಮಣ್ಯ: ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನಮ್‌ನ ಸಂಪುಟ ನರಸಿಂಹ ಸ್ವಾಮಿ ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ನೃಸಿಂಹ ಜಯಂತಿ ಮಹೋತ್ಸವವು ಪ್ರವಚನ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸಮ್ಮಿಲನದೊಂದಿಗೆ ಭಕ್ತಿ ಸಡಗರದಿಂದ ನಡೆಯುತ್ತಿದೆ. ನರಸಿಂಹ ಜಯಂತಿಯ ಪುಣ್ಯ ದಿನವಾದ ಗುರುವಾರ ಪ್ರಾತಃಕಾಲ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳು ನೃಸಿಂಹ ದೇವರಿಗೆ ಮಹಾಭಿಷೇಕ ಸಮರ್ಪಿಸಿದರು.

ಪೇಜಾವರ ಶ್ರೀಗಳಿಗೆ ಪಾದಪೂಜೆ


ನೃಸಿಂಹ ಜಯಂತಿಯ ಅಂಗವಾಗಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳು ಶ್ರೀ ಸುಬ್ರಹ್ಮಣ್ಯ ಮಠಕ್ಕೆ ಗುರುವಾರ ಭೇಟಿ ನೀಡಿದರು. ಪೇಜಾವರ ಶ್ರೀಗಳಿಗೆ ಶ್ರೀ ಮಠದ ದಿವಾನ ಸುದರ್ಶನ ಜೋಯಿಸ ಮತ್ತು ಕೃಪಾ ಜೋಯಿಸ ದಂಪತಿ ಪಾದಪೂಜೆ ನೆರವೇರಿಸಿ ಆರತಿ ಬೆಳಗಿದರು. ಪೇಜಾವರ ಶ್ರೀಗಳು ಸರ್ವರಿಗೂ ಫಲ ಮಂತ್ರಾಕ್ಷತೆ ನೀಡಿ ಹರಸಿದರು. ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳು ಶ್ರೀ ಮಠದಲ್ಲಿ ಪಲ್ಲಪೂಜೆ ನೆರವೇರಿಸಿದರು. ಈ ಸಂದರ್ಭ ಕಲಾವಿದ ಯಜ್ಞೇಶ್ ಆಚಾರ್, ಶ್ರೀ ಮಠದ ರವೀಂದ್ರ ಭಟ್, ಸುಹಾಸ್ ಉಪಾಧ್ಯಾಯ ದೇವರಗದ್ದೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ಮಹಾರಥೋತ್ಸವ

ಇಂದು ಶುಕ್ರವಾರ ಪ್ರಾತಃಕಾಲ ವ್ಯಾಸ ಪೂರ್ಣಿಮಾ ಮತ್ತು ವ್ಯಾಸಪೂಜೆ ನಡೆಯಲಿದೆ. ಬಳಿಕ ಶ್ರೀ ನೃಸಿಂಹ ದೇವರ ಮಹಾರಥೋತ್ಸವ, ಬಳಿಕ ವಸಂತ ಪೂಜೆ, ರಾತ್ರಿ ಡೋಲೋತ್ಸವ ನಡೆಯಲಿದೆ.

ಮೇ 3-12: ಶ್ರೀ ಸೋಮನಾಥ ಉಳಿಯ ಕ್ಷೇತ್ರದ ಬ್ರಹ್ಮಕಲಶ, ಜಾತ್ರೆ

ಬಂಟ್ವಾಳ: ಮುನ್ನೂರು ಗ್ರಾಮದ ಶ್ರೀ ಸೋಮನಾಥ ಉಳಿಯ ಶ್ರೀ ಸೋಮೇಶ್ವರಿ ದೇವಸ್ಥಾನ ಮತ್ತು ಶ್ರೀ ನಾಗದೇವರು, ಶ್ರೀ ಅರಸು, ಧೂಮಾವತಿ ಬಂಟ ಮತ್ತು ಪರಿವಾರ ದೈವಗಳ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠೆ, ಬ್ರಹ್ಮಕಲಶ, ವಾರ್ಷಿಕ ಜಾತ್ರೆ ಹಾಗೂ ನೇಮವು ಕುಂಟಾರು ರವೀಶ್ ತಂತ್ರಿ ನೇತೃತ್ವದಲ್ಲಿ ಮೇ 3 ರಿಂದ 12ರ ವರೆಗೆ ನಡೆಯಲಿದೆ.



ಮೇ 3ರಂದು ಬೆಳಿಗ್ಗೆ ಉಗ್ರಾಣ ಮೂಹೂರ್ತ ನಡೆಯಲಿದ್ದು, ಸಂಜೆ 4ಕ್ಕೆ ಕುತ್ತಾರು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ವಠಾರದಿಂದ ಸೋಮನಾಥ ಉಳಿಯದವರೆಗೆ ಅದ್ದೂರಿಯ ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದೆ. ಮೇ 4 ರಂದು ಬೆಳಿಗ್ಗೆ 6 ರಿಂದ ಸಂಜೆ 6ರ ವರೆಗೆ ವಿವಿಧ ಭಜನಾ ತಂಡದಿಂದ ಭಜನಾ ಸಂಕೀರ್ತನೆ ನಡೆಯಲಿದೆ. ಮೇ 5 ರಂದು ಸಂಜೆ ನಡೆಯುವ ಧಾರ್ಮಿಕ ಸಭೆಯಲ್ಲಿ ಉಡುಪಿ ಅದಮಾರು ಮಠದ ಶ್ರೀ ವಿಶ್ವಪ್ರಿಯತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ತಂತ್ರಿ ಕುಂಟಾರು ರವೀಶ್ ತಂತ್ರಿ ಧಾರ್ಮಿಕ ಉಪನ್ಯಾಸ ನೀಡಲಿರುವರು. ಉಳ್ಳಾಲ ಉಳಿಯ ಶ್ರೀ ಧರ್ಮರಸು ಕ್ಷೇತ್ರದ ಶ್ರೀದೇವು ಮೂಲ್ಯಣ್ಣ, ಸೋಮನಾಥ ಉಳಿಯ ಕ್ಷೇತ್ರದ ಗಡಿಪ್ರದಾನರಾದ ಬಸಪ್ಪಯಾನೆ ಜೆ. ರವೀಂದ್ರ ನಾಯಕ್,ಸಂಸದ ಕ್ಯಾ.ಬ್ರಿಜೇಶ್ ಚೌಟ ಸಹಿತ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ. ಮೇ 6ರ ಸಂಜೆ ನಡೆಯುವ ಧಾರ್ಮಿಕ ಸಭೆಯಲ್ಲಿ ಉಡುಪಿ ಅದಮಾರು ಮಠದ ಕಿರಿಯ ಸ್ವಾಮೀಜಿ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ಸ್ಪೀಕರ್ ಯು.ಟಿ. ಖಾದರ್, ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ,ಯುವ ಉದ್ಯಮಿ ಪ್ರಕಾಶ್ ಕುಂಪಲ ಮತ್ತಿತರರು ಭಾಗವಹಿಸಲಿದ್ದಾರೆ. ಮೇ 8ರಂದು ಬೆಳಿಗ್ಗೆ ದೈವ, ದೇವರುಗಳ ಪುನರ್ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ ನಡೆಯಲಿದೆ. ರಾತ್ರಿ ದೇವರ ವಾರ್ಷಿಕ ಉತ್ಸವ ಆರಂಭವಾಗಲಿದೆ. ಮೇ 9ಕ್ಕೆ ಬೆಳಿಗ್ಗೆ ದೇವರ ದರ್ಶನ ಬಲಿ ರಾಜಾಂಗಣ ಪ್ರಸಾದ ವಿತರಣೆ ನಡೆಯಲಿದೆ. ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳೀಯ ಪ್ರತಿಭೆಗಳಿಂದ ಭರತನಾಟ್ಯ, ಪೌರಾಣಿಕ ನಾಟಕ ಪ್ರದರ್ಶನ ಹಾಗೂ ಪ್ರತಿನಿತ್ಯ ಮಧ್ಯಾಹ್ನ ಮತ್ತು ರಾತ್ರಿ ಅನ್ನ ಸಂತರ್ಪಣೆಯು ಇರಲಿದೆ. ಮೇ 10ಕ್ಕೆ ಬೆಳಗ್ಗೆ ಭಂಡಾರ ಆಗಮಿಸಿದ ಬಳಿಕ ರಾತ್ರಿ ಅರಸು ದೈವಗಳಿಗೆ ನೇಮ ಜರಗಲಿದೆ. ಮೇ 11ಕ್ಕೆ ರಾತ್ರಿ ಮೈಸಂದಾಯ, ಧೂಮಾವತಿ ಬಂಟ ದೈವಗಳಿಗೆ ನೇಮ ಜರಗುವುದು. ಮೇ.12 ರಂದು ಕೊರಗಜ್ಜ ಸಹಿತ ಪರಿವಾರ ದೈವಗಳಿಗೆ ಕೋಲ ನಡೆಯಲಿದೆ.

ನಿಡ್ವಾಳ ದೇವಳಲ್ಲಿ ಶ್ರೀದೇವರ ಪುನರ್ ಪ್ರತಿಷ್ಠೆ, ವಿವಿಧ ಕಾರ್ಯಕ್ರಮ



ಸುಬ್ರಹ್ಮಣ್ಯ: ನಿಡ್ವಾಳ ಶ್ರೀ ಮಹಾವಿಷ್ಣು ದೇವಳಲ್ಲಿ ಶ್ರೀ ದೇವರ ಪ್ರತಿಷ್ಠೆಯು ಮಿಥುನ ಲಗ್ನ ಸುಮುಹೂರ್ತದಲ್ಲಿ ನಡೆಯಿತು. ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ವೈದಿಕ ವಿಧಿ ವಿಧಾನಗಳು ನೆರವೇರಿತು.

ಬೆಳಗ್ಗೆ ಮಹಾಗಣಪತಿ ಹೋಮ, ಅಂಕುರಪೂಜೆ ನಡೆಯಿತು. ಬೆಳಗ್ಗೆ 10.05ರಿಂದ 11.10ರವರೆಗೆ ಮಿಥುನ ಲಗ್ನ ಶುಭ ಮುಹೂರ್ತದಲ್ಲಿ ಶ್ರೀ ಮಹಾವಿಷ್ಣು ದೇವರ ಪುನಃ ಪ್ರತಿಷ್ಠೆ ಅಷ್ಟಬಂಧ ಕ್ರಿಯೆ, ಶ್ರೀ ಮಹಾಗಣಪತಿ ದೇವರ ಪುನಃ ಪ್ರತಿಷ್ಠೆ ಪ್ರತಿಷ್ಠಾ ಪೂಜೆ, ಶಿಖರ ಪ್ರತಿಷ್ಠೆ ನಡೆಯಿತು. ಬಳಿಕ ಪ್ರತಿಷ್ಠಾ ಬಲಿ, ಬ್ರಾಹ್ಮಣ ಆರಾಧನೆ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು. ಕೋಡಿ ಮಠ ಮಹಾ ಸಂಸ್ಥಾನದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾ ಸ್ವಾಮೀಜಿ, ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕೋಶಾಧಿಕಾರಿ ಗುರುಪ್ರಸಾದ್ ತೋಟ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಳದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಪ್ರಸಾದ್ ಕಾನತ್ತೂರ್, ಪುನರ್ ನಿರ್ಮಾಣ ಸಮಿತಿ ಮತ್ತು ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನ, ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ಪ್ರಧಾನ ಅರ್ಚಕ ಅಕ್ಷಯ್ ಭಟ್ ಉಪಸ್ಥಿತರಿದ್ದರು.

ಆಕಾಶದೆತ್ತರದಲ್ಲಿ ಕಾಣಿಸಿಕೊಂಡ ಗರುಡನ ಕಂಡು ಪುಳಕಿತರಾದ ಭಕ್ತರು

ಮಾರೂರು ಕ್ಷೇತ್ರದಲ್ಲಿ ಶ್ರೀದೇವರ ಪುನರ್ ಪ್ರತಿಷ್ಠೆ

ಮೂಡುಬಿದಿರೆ: ಮಾರೂರು ಶ್ರೀ ಗೋಪಾಲಕೃಷ್ಣ ಕೊಡಮಣಿತ್ತಾಯ ದೇವಸ್ಥಾನನಲ್ಲಿ ಬುಧವಾರ ಸಪರಿವಾರ ಗೋಪಾಲಕೃಷ್ಣ ದೇವರ ಪುನಃ ಪ್ರತಿಷ್ಠೆ ಭಕ್ತಿಯಿಂದ ನಡೆಯಿತು. ಋತ್ವಿಜ ಸಮೂಹದ ಹರಿಭಟ್ ಭಟ್ ಮತ್ತು ಮುಂಡ್ಕೂರಿನ ರಾಧಾಕೃಷ್ಣ ನಾವಡರು ಶಿಖರ ಪ್ರತಿಷ್ಠೆ ನೆರವೇರಿಸಿದರು.

ನಂತರ ಎಡಪದವು ಮುರಳೀಧರ ತಂತ್ರಿ ಅವರ ನೇತೃತ್ವದಲ್ಲಿ ವೆಂಕಟೇಶ್ ತಂತ್ರಿ ಅವರ ಸಹಕಾರದೊಂದಿಗೆ ಶಿಲಾಮಯ ಗರ್ಭಗುಡಿಯಲ್ಲಿ ವಾತುಲ ಆಗಮ ಪಾರಾಯಣದೊಂದಿಗೆ ಶ್ರೀ ಗೋಪಾಲಕೃಷ್ಣ ದೇವರ ಪುನಃ ಪ್ರತಿಷ್ಠೆ ನೆರವೇರಿತು. ಬಳಿಕ ಶ್ರೀ ಗಣಪತಿ ಮತ್ತು ಮುಖ್ಯಪ್ರಾಣ ದೇವರ ಪ್ರತಿಷ್ಠೆ ನಡೆಯಿತು. ಮಿತ್ತಬೆಟ್ಟು ಕುಟುಂಬಸ್ಥರು ವಾಯುವ್ಯ ದಿಕ್ಕಿನಲ್ಲಿ ನಿರ್ಮಿಸಲಾಗಿರುವ ಶ್ರೀ ಗಣಪತಿ ಪ್ರತಿಷ್ಠಾ ವಿಧಿವಿಧಾನವನ್ನು ಬ್ರಹ್ಮಶ್ರೀ



ಮುರಳೀಧರ ತಂತ್ರಿ ಮತ್ತು ವೆಂಕಟೇಶ್ ತಂತ್ರಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಆಕಾಶದೆತ್ತರದಲ್ಲಿ ಗರುಡನ ಆಗಮನವಾಗಿ ಭಕ್ತರ ಭಕ್ತಿಗೆ ಪಾತ್ರವಾಯಿತು.

ದೇವಸ್ಥಾನದ ಆಡಳಿತ ಮೊಕ್ತೇಸರ ಹೊಸಂಗಡಿ ಅರಮನೆಯ ಸಂಪತ್ ಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ, ಬ್ರಹ್ಮ ಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಮಾರೂರುಗುತ್ತು ಶಂಭು ಎನ್. ಶೆಟ್ಟಿ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎ. ಜೀವಾಂಧರ ಕುಮಾರ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಕೆ. ಶ್ರೀಪತಿ ಭಟ್, ವೇದಮೂರ್ತಿ ಮಾರೂರು ಖಂಡಿಗ ರಾಮದಾಸ ಅಸ್ರಣ್ಣ, ಪ್ರಧಾನ ಅರ್ಚಕ ವೇದಮೂರ್ತಿ ವೆಂಕಟರಾಜ ಅಸ್ರಣ್ಣ, ಮುಂಬಯಿ ಸಮಿತಿಯ ಅಧ್ಯಕ್ಷ ಮಾರೂರು ಗುತ್ತು ಬೋಜ ಎನ್. ಶೆಟ್ಟಿ ಬ್ರಹ್ಮಕಲಶೋತ್ಸವ ಮತ್ತು ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷರುಗಳು, ಪದಾಧಿಕಾರಿಗಳು, ಸದಸ್ಯರು, ಒಂಭತ್ತು ಮಾಗಣೆಗಳಿಂದ ಆಗಮಿಸಿದ ಭಕ್ತರು ಈ ಸಂದರ್ಭದಲ್ಲಿದ್ದರು.

ಸುಳ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಗೆ ಗೈರು | ಸಭೆಯಲ್ಲಿ ನಿರ್ಣಯ

ಅಧಿಕಾರಿಗಳ ವಿರುದ್ಧ ಇಲಾಖೆಗೆ ಪತ್ರ

ಸುಳ್ಯ: ಮೆಸ್ಕಾಂ ಅಧಿಕಾರಿಗಳು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಗೆ ಗೈರು ಹಾಜರಾದುದಲ್ಲದೆ ಸಭೆ ಆರಂಭಗೊಂಡ ಬಳಿಕ ತಮ್ಮ ಗೈರು ಹಾಜರಿಯ ಬಗ್ಗೆ ವಾಟ್ಸಾಪ್ ಸಂದೇಶ ನೀಡಿದ ವಿಚಾರವಾಗಿ ಗರಂ ಆದ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ಮೆಸ್ಕಾಂ ಅಧ್ಯಕ್ಷರಿಗೆ ದೂರು ನೀಡಲು ನಿರ್ಧರಿಸಿದ ಘಟನೆ ನಡೆದಿದೆ.

ಸುಳ್ಯ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯು ಗುರುವಾರ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯತ್ ಸಂಭಾಗಣದಲ್ಲಿ ನಡೆಯಿತು. ಸಭೆಗೆ ಮೆಸ್ಕಾಂ ಅಕಾರಿಗಳು ಗೈರು ಹಾಜರಾಗಿದ್ದು ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಸಮಿತಿ ಸಭೆ ಆರಂಭವಾದ ಕೆಲವು ನಿಮಿಷಗಳ ನಂತರ



ಪುತ್ತೂರಿನಲ್ಲಿ ಇಲಾಖಾ ಸಭೆ ಇದೆ ಎಂದು ವ್ಯಾಟ್ಸಾಪ್ ಸಂದೇಶ ಕಳುಹಿಸಿದ್ದಾರೆ. ಆದರೆ, ಇಲಾಖೆಯ ಯಾವುದೇ ಸಭೆಗಳು ಇರುವುದಿಲ್ಲ ಹಾಗೂ ಪುತ್ತೂರಿನ ಅಧಿಕಾರಿಯೋರ್ವರು ನಿವೃತ್ತಿಗೊಳ್ಳುತ್ತಿದ್ದು, ಅವರ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕಾಗಿ ಸಮಿತಿ ಸಭೆಗೆ ಬಾರದೆ ನಿರ್ಲಕ್ಷ್ಯ ತೋರಿದ್ದಾರೆ. ಈ ರೀತಿ ಬೇಜಾವ್ದಾರಿ ಪ್ರದರ್ಶಿಸಿದ ಅಧಿಕಾರಿಗಳ ವಿರುದ್ಧ ಗ್ಯಾರಂಟಿ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಂಡು ಇಲಾಖೆಗೆ ಪತ್ರ ಬರೆಯಲಾಗುವುದು ಎಂದು ಸದಸ್ಯ ಕಾರ್ಯದರ್ಶಿ ತಾ.ಪಂ. ಕಾರ್ಯನಿರ್ವಹಣಾಕಾರಿ ರಾಜಣ್ಣ ಹಾಗೂ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ಗೃಹ ಲಕ್ಷ್ಮಿ ಯೋಜನೆ, ಯುವ ನಿ, ಅನ್ನ ಭಾಗ್ಯ, ಶಕ್ತಿ ಯೋಜನೆಯ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಆಹಾರ ಇಲಾಖಾಧಿಕಾರಿ ವಸಂತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೂಪರ್ ವೈಸರ್ ಉಷಾ ಪ್ರಸಾದ್ ರೈ, ಯುವ ನಿಧಿ ಇಲಾಖೆಯ ಮಂಜುಷಾ, ಕೆಎಸ್ಆರ್ಟಿಸಿಯ ಅಬೂಸಾಲಿ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರುರು ಇದ್ದರು.

ಸುತ್ತಮುತ್ತ

ಹಿರಿಯಡ್ಕ ರಥೋತ್ಸವ: ವಾಹನ ಸಂಚಾರಕ್ಕೆ ತಾತ್ಕಾಲಿಕ ಬದಲಿ ವ್ಯವಸ್ಥೆ

ಉಡುಪಿ: ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನದಲ್ಲಿ ನಡೆಯಲಿರುವ ರಥೋತ್ಸವದ ಪ್ರಯುಕ್ತ ಮೇ 4ರಂದು ಸಂಜೆ 4 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಹಿರಿಯಡ್ಕ-ಕಾರ್ಕಳ ರಾಜ್ಯ ಹೆದ್ದಾರಿಯ ಹಿರಿಯಡ್ಕ ಜಂಕ್ಷನ್‌ನಿಂದ ಕೋಟ್ನಕಟ್ಟೆ ಜಂಕ್ಷನ್ ವರೆಗೆ ಮೋಟಾರು ವಾಹನ ಕಾಯ್ದೆ 1988 ರ ಕಲಂ 115 ಹಾಗೂ ಕರ್ನಾಟಕ ಮೋಟಾರು ವಾಹನ ನಿಯಮ 1989 ರ ನಿಯಮ 221 5(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಮಾರ್ಗದಲ್ಲಿ ವಾಹನ ಸಂಚಾರ ತಾತ್ಕಾಲಿವಾಗಿ ನಿಷೇಧಿಸಿ, ಈ ಕೆಳಗಿನಂತೆ ಬದಲಿ ಮಾರ್ಗದ ವ್ಯವಸ್ಥೆ ಕಲ್ಪಿಸಿ, ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಆದೇಶಿಸಿದ್ದಾರೆ.

ಪರ್ಯಾಯ ಮಾರ್ಗದ ವಿವರ: ಕಾರ್ಕಳ ಕಡೆಯಿಂದ ಉಡುಪಿ ಕಡೆಗೆ ಹೋಗುವ ಹಾಗೂ ಹರಿಖಂಡಿಗೆ ಕಡೆಯಿಂದ ಉಡುಪಿ ಕಡೆಗೆ ಹೋಗುವ ವಾಹನಗಳು ಮುತ್ತೂರು ಕ್ರಾಸ್-ಮುತ್ತೂರು-ಪಡ್ಡಂ-ಕಾಜರಗುತ್ತು-ಓಂತಿಬೆಟ್ಟು ಮಾರ್ಗವಾಗಿ ಉಡುಪಿ ಕಡೆಗೆ ಸಂಚರಿಸಬೇಕು. ಉಡುಪಿ ಕಡೆಯಿಂದ ಬೈಲೂರು ಕಾರ್ಕಳ ಕಡೆಗೆ ಹೋಗುವ ವಾಹನಗಳು ಪ್ರಭು ರೋಸ್ ಕಿಚನ್ ಡೈವರ್ಷನ್ ಬಳಿ ಮಾರ್ಗ ಬದಲಿಸಿ ಪಡ್ಡಂ-ಮುತ್ತೂರು-ಮುತ್ತೂರು ಕ್ರಾಸ್ ಮಾರ್ಗವಾಗಿ ಕಾರ್ಕಳ ಬೈಲೂರು-ಹರಿಖಂಡಿಗೆ ಕಡೆಗೆ ಸಂಚರಿಸುವಂತೆ ಜಿಲ್ಲಾಧಿಕಾರಿಗಳ ಆದೇಶದಲ್ಲಿ ತಿಳಿಸಲಾಗಿದೆ.

ರಸಗೊಬ್ಬರ ಖರೀದಿಗೆ ಎಫ್‌ಐಡಿ ಕಡ್ಡಾಯ

ಉಡುಪಿ: ಜಿಲ್ಲೆಯ ರೈತರು ಯೂರಿಯಾ ರಸಗೊಬ್ಬರ ಖರೀದಿಸಲು ಇನ್ನು ಮುಂದೆ ಫಾರ್ಮರ್ ಐಡಿ (ಎಫ್‌ಐಡಿ) ಸಂಖ್ಯೆ ಹೊಂದಿರುವುದು ಕಡ್ಡಾಯವಾಗಿದ್ದು, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಿಂದ ಈ ಹೊಸ ನಿಯಮ ಜಾರಿಗೆ ಬರಲಿದ್ದು ರಸಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ತರಲು ಮತ್ತು ಕಾಳಸಂತೆಯಲ್ಲಿ ಗೊಬ್ಬರ ಮಾರಾಟ ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ. ರೈತರು ತಮ್ಮ ಜಮೀನಿನ ವಿಸ್ತೀರ್ಣ ಮತ್ತು ಬೆಳೆದ ಬೆಳೆಗೆ ಅನುಗುಣವಾಗಿ ಅಗತ್ಯ ಇರುವಷ್ಟು ಪ್ರಮಾಣದ ಗೊಬ್ಬರವನ್ನು ಮಾತ್ರ 'ಕೆ-ಕಿಸಾನ್' ತಂತ್ರಾಂಶದ ಮೂಲಕ ವಿತರಿಸಲಾಗುವುದು. ಈವರೆಗೆ ಫಾರ್ಮರ್ ಐಡಿ ಹೊಂದಿರದ ರೈತರು ತಕ್ಷಣ ತಮ್ಮ ಪಹಣಿ, ಬ್ಯಾಂಕ್ ಪಾಸ್‌ಬುಕ್ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬೇಕು. ಈಗಾಗಲೆ ಎಫ್‌ಐಡಿ ಹೊಂದಿರುವ ರೈತರು ತಮ್ಮ ಎಲ್ಲ ಸರ್ವೆ ನಂಬರ್‌ಗಳನ್ನು ಜೋಡಣೆ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕಡ್ಡಾಯವಾಗಿ ಕೆ-ಕಿಸಾನ್ ತಂತ್ರಾಂಶದಲ್ಲಿ ರೈತರ ಎಫ್.ಐ.ಡಿ ನಮೂದಿಸಿ ಗೊಬ್ಬರ ಮಾರಾಟ ಮಾಡಬೇಕು ನೋಂದಣಿ ಇಲ್ಲದೆ ಮಾರಾಟ ಮಾಡಿದರೆ, ನಿಯಮ ಮೀರಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಅಥವಾ ಕೃಷಿಯೇತರ ಉದ್ದೇಶಕ್ಕೆ ಗೊಬ್ಬರ ನೀಡಿದರೆ ಅಂತಹ ಮಾರಾಟಗಾರರ ಪರವಾನಗಿ ರದ್ದುಗೊಳಿಸಲಾಗುವುದು ಎಂದು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಭಂಡಾರ್ಕರ್ಸ್ ಕಾಲೇಜು ವಿದ್ಯಾರ್ಥಿಗಳು ಟಿಸಿಎಸ್‌ಗೆ ನೇಮಕ

ಕುಂದಾಪುರ: ಇತ್ತೀಚೆಗೆ ಪ್ರತಿಷ್ಠಿತ ಟಿ.ಸಿ.ಎಸ್ ಕಂಪನಿ ನಡೆಸಿದ ಸಂದರ್ಶನದಲ್ಲಿ ಭಂಡಾರ್ಕರ್ಸ್ ಕಾಲೇಜಿನ ಬಿ.ಕಾಮ್ ಮತ್ತು ಬಿಬಿಎ ವಿಭಾಗದ 65ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಅಂತಿಮ ಬಿಕಾಂ ವಿಭಾಗದ ವಿದ್ಯಾರ್ಥಿಗಳಾದ ಕೀರ್ತನಾ ನಾಯ್ಕ, ಸ್ವಾತಿ, ಸುಭೀಕ್ಷಾ, ಕೃತಿ, ಪ್ರಗತಿ, ನಾಗೇಂದ್ರ, ಸಿಂಚನಾ, ಸೌಜನ್ಯ, ಸನ್ನಿಧಿ, ಚಿನ್ಮಯಿ, ಸಿಂಧು.ಜಿ.ಹೆಗ್ಡೆ, ನವ್ಯಾ ಜೆ.ಕೆ, ಸುಹಾಸ್ ಶೇಟ್, ದೀಕ್ಷಿತಾ, ಭೂಮಿಕಾ, ಶ್ರಾವ್ಯ, ಸಂಜನಾ, ಸೃಷ್ಟಿ ಆರ್ ಗೋಪಾಡಿ, ಜಿತೇಂದ್ರ ಶೆಟ್ಟಿ ರಕ್ಷಾ, ದೀಕ್ಷಾ, ನಿಶ್ಮಿತಾ, ತ್ರಿಷಾ, ಪ್ರಣಮ್ಯಾ ಚಾತ್ರ, ಅಬ್ದುಲ್ ಸಹಾದ್, ವೈಷ್ಣವಿ, ಅಭಿಲಾಷ್ ಶೆಟ್ಟಿ ಪ್ರಣತಿ, ಶ್ರೀನಿಧಿ, ಅರ್ಪಿತಾ, ವಿದ್ಯಾ ದೇವಾಡಿಗ, ಪ್ರಿಯಾಂಕ, ಸೌಮ್ಯ, ದರ್ಶನ್, ಸೌಜನ್ಯ, ಅನನ್ಯಾ ನಾಯಕ್, ಪವನ್ ಪಿ. ಪೂಜಾರಿ, ನಾಗರತಿ, ಸಿಂಚನಾ, ದಶಮಿ, ಅಂಜನಾ, ನಮ್ರತಾ, ಸಿಂಚನಾ, ಶಬರಿ, ಅಮೂಲ್ಯ, ಸನ್ನಿಧಿ, ಆಕಾಶ್ ಸಿ. ಮತ್ತು ಬಿ.ಬಿ.ಎ ವಿಭಾಗದ ಪ್ರೀತಿ, ವರ್ಷಾ, ಸನ್ನಿಧಿ ಶೆಟ್ಟಿ ಫಾತಿಮಾ ಶಿಫಾ, ಅಪೇಕ್ಷಾ, ವಿಘ್ನೇಶ್ ಆಚಾರಿ, ಅಸ್ಮಿತಾ, ಶ್ರೀರಕ್ಷಾ, ರಿಂಕು, ದೀಪಿಕಾ, ಸಂಜನಾ, ದೀಪಿಕಾ ಶೆಟ್ಟಿ ಆಶಿಕ್ , ಶಿಷ್ಯಾ, ಸ್ಫೂರ್ತಿ, ರೋಹಿತ್, ಶಮಾ ಹಾಗೂ ರಶ್ಮಿತಾ ಎಸ್. ಆಯ್ಕೆಯಾಗಿದ್ದಾರೆ ಎಂದು ಪ್ರಾಂಶುಪಾಲ ಡಾ. ಶುಭಕರಾಚಾರಿ ಹಾಗೂ ಉದ್ಯೋಗ ಹಾಗೂ ವೃತ್ತಿ ತರಬೇತಿ ಘಟಕದ ಸಂಯೋಜಕ ಪ್ರೊ. ರಾಜೇಂದ್ರ ಹೋಬಳಿದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಡಗಿಗೆ ಕಾವೇರಿ ನದಿ ರಕ್ಷಣಾ ಸಮಿತಿ ನೇತೃತ್ವದ ತಜ್ಞರ ಸಮಿತಿ ಭೇಟಿ | ಅಧ್ಯಕ್ಷ ಎಚ್.ಕೆ.ರಾಮು ಮಾಹಿತಿ

ಕಾವೇರಿ ನೀರು ಹಂಚಿಕೆ ವಿರುದ್ಧ ಕೋರ್ಟ್‌ಗೆ ರಿಟ್ ಅರ್ಜಿ

ಕುಶಾಲನಗರ: ಕಾವೇರಿ ನದಿ ನೀರು ಹಂಚಿಕೆ ಅವೈಜ್ಞಾನಿಕವಾಗಿದ್ದು ನದಿ ನೀರಿನ ವಾಸ್ತವ ಅಂಕಅಂಶ ಸಂಗ್ರಹಿಸಿ ಸುಪ್ರೀಂ ಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಲು ತಯಾರಿ ನಡೆಸಲಾಗಿದೆ ಎಂದು ಕಾವೇರಿ ನದಿ ರಕ್ಷಣಾ ಸಮಿತಿ ಅಧ್ಯಕ್ಷ ಎಚ್.ಕೆ. ರಾಮು ತಿಳಿಸಿದ್ದಾರೆ.

ಕುಶಾಲನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು ಜಿಲ್ಲೆಗೆ ಸಮಿತಿಯ ನೇತೃತ್ವದಲ್ಲಿ ಎರಡು ದಿನಗಳ ತಜ್ಞರ ಸಮಿತಿ ಭೇಟಿ ನೀಡಿ ಸಮಗ್ರ ಮಾಹಿತಿ ಕಲೆಹಾಕಿದೆ. ಅಲ್ಲದೆ ಮೈಸೂರು, ಮಂಡ್ಯ ಭಾಗಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ಅಂಕಿ-ಅಂಶಗಳೊಂದಿಗೆ ತಜ್ಞರೊಂದಿಗೆ ಅರ್ಜಿಯನ್ನು ಕೋರ್ಟಿಗೆ ಸಲ್ಲಿಸಲಾಗುತ್ತಿದೆ ಎಂದು ನುಡಿದರು.

ಸುಪ್ರೀಂಗೆ ಸಮಗ್ರ ಮಾಹಿತಿ ಸಲ್ಲಿಕೆ

ಜಿಲ್ಲೆಗೆ ಭೇಟಿ ನೀಡಿದ ನಿಯೋಗದಲ್ಲಿ ಪಾಲ್ಗೊಂಡಿದ್ದ ಆದಿಚುಂಚನಗಿರಿ ಮೈಸೂರು ಶಾಖಾ ಮಠಾಧೀಶ ಶ್ರೀ ಸೋಮನಾಥೇಶ್ವರ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಕಾವೇರಿ ನದಿ ಹರಿಯುವ ಸ್ಥಳಗಳಿಗೆ ಭೇಟಿ ನೀಡಿ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಅವಲೋಕಿಸಿ ಕಾವೇರಿ ನದಿ ರಕ್ಷಣಾ ಸಮಿತಿ ಸುಪ್ರೀಂಕೋರ್ಟಿಗೆ ಸಮಗ್ರ ಮಾಹಿತಿ ನೀಡಲಿದೆ ಎಂದು ಹೇಳಿದರು.



ತಜ್ಞರ ಸಮಿತಿಯ ಮೂಲಕ ಕಾವೇರಿ ಜಲಾನಯನ ಪ್ರದೇಶಗಳ ರೈತರ ಸ್ಥಿತಿಗತಿ ಮತ್ತು ಅವರ ಸಮಸ್ಯೆಗಳ ಬಗ್ಗೆ ಅವಲೋಕಿಸಿ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪ್ರಯತ್ನ ನಡೆಯಲಿದೆ ಎಂದರು.

ಕೊಡಗು ಜಿಲ್ಲೆಗೆ ಭೇಟಿ ನೀಡಿದ ತಂಡ ತಲಕಾವೇರಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿ, ನಂತರ ಜಲಾನಯನ ಪ್ರದೇಶಗಳಲ್ಲಿ ಮತ್ತು ಹಾರಂಗಿ ಅಣೆಕಟ್ಟು ಪ್ರದೇಶಗಳಲ್ಲಿ ವೀಕ್ಷಣೆ ನಡೆಸಿದೆ ಎಂದು ಹೇಳಿದರು.

ತಂಡದಲ್ಲಿ ಉಪಸ್ಥಿತರಿದ್ದ ವಿಶ್ವ ಒಕ್ಕಲಿಗ ಮಹಾ ಸಂಸ್ಥಾನದ ಪೀಠಾಧ್ಯಕ್ಷ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಸಮಿತಿ ಹಿರಿಯ ನಿವೃತ್ತ ಅಧಿಕಾರಿಗಳನ್ನು ತಜ್ಞರು ಹಾಗೂ ಸಂಘ ಸಂಸ್ಥೆಗಳ ಪ್ರಮುಖರು ಕಾವೇರಿ ನದಿ ಜಲಾನಯನ ಪ್ರದೇಶಗಳಲ್ಲಿ ಪ್ರವಾಸ ಮಾಡಿ ವರದಿಯನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸುತ್ತದೆ. ನಂತರ ಸುಪ್ರೀಂಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸುತ್ತದೆ ಎಂದು ಮಾಹಿತಿ ನೀಡಿದರು.

> **ಮೇಕೆದಾಟು ಯೋಜನೆ ಜಾರಿಗೆ ಬರಲಿ**
>
> ಮೇಕೆದಾಟು ಯೋಜನೆ ಕೂಡಲೇ ಜಾರಿಗೆ ಬರಬೇಕು. ತಮಿಳುನಾಡು ಸರ್ಕಾರ ಸಹಿತ ಕೇಂದ್ರ ಸರ್ಕಾರ ಯೋಜನೆಗೆ ಒಪ್ಪಿಗೆ ನೀಡಬೇಕು. ಕಾವೇರಿ ವ್ಯಾಜ್ಯದಲ್ಲಿ ಹಳೆಯ ತೀರ್ಮಾನಗಳನ್ನು ಒಪ್ಪಲು ಸಾಧ್ಯವಿಲ್ಲ. ಇದರಿಂದ ರಾಜ್ಯಕ್ಕೆ ರಾಜ್ಯದ ರೈತರಿಗೆ ನೀರಿನ ಕಂಟಕ ಉಂಟಾಗಿದೆ.
>
> ● ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಪೀಠಾಧ್ಯಕ್ಷ

ಪ್ರತಿಭಟನೆಯಿಂದ, ಭಾಷಣದಿಂದ ಅಥವಾ ಟೀಕೆಗಳಿಂದ ಕಾವೇರಿ ವ್ಯಾಜ್ಯಕ್ಕೆ ಪರಿಹಾರ ಸಾಧ್ಯವಿಲ್ಲ ಎಂದ ಸ್ವಾಮೀಜಿ, ಸಮಸ್ಯೆಯ ಬಗ್ಗೆ ರಿಟ್ ಸಲ್ಲಿಸುವ ಮೂಲಕ ಸಮಸ್ಯೆಗೆ ಪರಿಹಾರ ಸಾಧ್ಯ ಎಂದರು.

ಬೆಟ್ಟದಪುರ ಕನ್ನಡ ಮಠಾಧೀಶ ಶ್ರೀ ಚನ್ನಬಸವ ಸ್ವಾಮೀಜಿ ಸಮಿತಿಯ ಹೋರಾಟಕ್ಕೆ ಯಶಸ್ಸು ಕೋರಿದರು. ಹಿರಿಯ ಸಾಹಿತಿ ಪ್ರಧಾನ ಮ. ಗುರುದತ್ ಮಾತನಾಡಿದರು.

ಚಂದ್ರಮೋಹನ್‌ಗೆ ಗೌರವಾರ್ಪಣೆ

ಸಮಿತಿಯ ಪ್ರಮುಖರು ಕುಶಾಲನಗರದಲ್ಲಿ ಕಾವೇರಿ ನದಿ ಸ್ವಚ್ಛತಾ ಆಂದೋಲನ ರಾಜ್ಯ ಸಂಚಾಲಕ ಎಂ.ಎನ್. ಚಂದ್ರಮೋಹನ್ ಅವರನ್ನು ಸನ್ಮಾನಿಸಿ ಗೌರವಿಸಿದರು. ಸೋಮವಾರ ಜಿಲ್ಲೆಗೆ ಭೇಟಿ ನೀಡಿದ ಸುಮಾರು ಐವತ್ತಕ್ಕೂ ಅಧಿಕ ಸಂಘ ಸಂಸ್ಥೆಗಳ ಪ್ರಮುಖರು ಮಂಗಳವಾರ ಬೆಳಗ್ಗೆ ತಲಕಾವೇರಿ ಕ್ಷೇತ್ರಕ್ಕೆ ತೆರಳಿ ಪೂಜೆ ನೆರವೇರಿಸಿ ರಾಜ್ಯದ ಸುಭಿಕ್ಷೆಗೆ ಪ್ರಾರ್ಥನೆ ಸಲ್ಲಿಸಿದರು. ವಿವಿಧ ಶಾಖಾ ಮಠಾಧೀಶರುಗಳು, ಸಮಿತಿಯ ಕಾರ್ಯಾಧ್ಯಕ್ಷ ಕೆ.ಟಿ.ಚಂದ್ರು, ಖಜಾಂಚಿ ಸಿ.ಜಗದೀಶ್, ಉಪಾಧ್ಯಕ್ಷರಾದ ಪ್ರಶಾಂತ್, ಅಂದಾನಪ್ಪ ಮಾಲತೇಶ್, ಎಚ್..ಎನ್ ರಾಜು, ಅರುಣ, ಮಾಜಿ ಮೇಯರ್ ಪ್ರಕಾಶ್ ಇದ್ದರು.

ವಿವೇಕಾನಂದದಲ್ಲಿ ಇಂಪ್ಯಾಕ್ಟ್ ಸ್ಪಾರ್ಕ್ ಸ್ಪರ್ಧೆ | ಕೃಷ್ಣನಾರಾಯಣ ಮುಳಿಯ ಸಲಹೆ

ಉತ್ತಮ ಯೋಜನೆಯಿಂದ ಉದ್ಯಮದಲ್ಲಿ ಯಶಸ್ಸು

ಪುತ್ತೂರು: ಉತ್ತಮ ಯೋಚನೆ, ಯೋಜನೆ, ಪರಿಕಲ್ಪನೆಯೊಂದಿಗೆ ಸೂಕ್ತ ತರಬೇತಿಯನ್ನು ಪಡೆದುಕೊಂಡಾಗ ಯಶಸ್ವೀ ಉದ್ಯಮಿಯಾಗುವುದಕ್ಕೆ ಸಾಧ್ಯವಿದೆ ಎಂದು ಪುತ್ತೂರಿನ ಮುಳಿಯ ಜುವೆಲ್ಲರ್ಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೃಷ್ಣನಾರಾಯಣ ಮುಳಿಯ ಹೇಳಿದರು.

ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಎಂಬಿಎ ವಿಭಾಗ ಮತ್ತು ಇನ್‌ಸ್ಟಿಟ್ಯೂಶನ್ ಇನ್ನೋವೇಶನ್ ಸೆಲ್ ಇದರ ಸಂಯುಕ್ತ ಆಶ್ರಯದಲ್ಲಿ ನಡೆದ ಸಾಮಾಜಿಕ ವ್ಯವಹಾರದಲ್ಲಿರುವ ನವೀನ ಸವಾಲುಗಳು ಮತ್ತು ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವ ವ್ಯವಹಾರ ಯೋಜನೆಗಳ ಪ್ರಸ್ತುತಿಯ 'ಇಂಪ್ಯಾಕ್ಟ್ ಸ್ಪಾರ್ಕ್-2026' ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತಾಡಿದರು.

ಪುತ್ತೂರಿನಲ್ಲಿರುವ ಅನೇಕ ಸ್ವದೇಶಿ ಬ್ರ್ಯಾಂಡ್‌ಗಳನ್ನು ಉದಾಹರಿಸಿದ ಅವರು ಆಧುನಿಕ ಆರ್ಥಿಕತೆಯಲ್ಲಿ ಹೊಸಹೊಸ ಸವಾಲುಗಳಿದ್ದು ಅದನ್ನು ಮೆಟ್ಟಿ ನಿಂತಾಗ ಮಾತ್ರ ಯಶಸ್ಸನ್ನು ಸಾಧಿಸಬಹುದು ಎಂದರು. ಯಾವುದೇ ಕೆಲಸವನ್ನು ಮಾಡುವಾಗಲೂ ಅದು ಸಾಮಾಜಿಕ ಕಳಕಳಿಯದ್ದೇ ಆಗಿರಲಿ ಎಂದು ಅವರು ತಿಳಿಸಿದರು.



ಸಮಾರೋಪ

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ. ವಿಜೇತರಿಗೆ ಬಹುಮಾನ ವಿತರಿಸಿದರು. ಕೋಣಾಜೆಯ ಯುನಿವರ್ಸಿಟಿ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ, ಕಲ್ಲಡ್ಕದ ಶ್ರೀರಾಮ ಕಾಲೇಜ್ ತಂಡ ದ್ವಿತೀಯ ಮತ್ತು ಪುತ್ತೂರು ವಿವೇಕಾನಂದ ಕಾಲೇಜ್ (ಸ್ವಾಯತ್ತ) ತಂಡ ತೃತೀಯ ಸ್ಥಾನವನ್ನು ಪಡೆದುಕೊಂಡರು. ವಿಜೇತರಿಗೆ ನಗದು ಬಹುಮಾನ ಮತ್ತು ಫಲಕಗಳನ್ನು ನೀಡಿ ಗೌರವಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್ ಪ್ರಸನ್ನ ಕೆ. ಮಾತನಾಡಿ, ಸರಕಾರವು ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸುವುದಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ನೀಡುತ್ತಿದೆ. ಸೃಜನಶೀಲ ಚಿಂತನೆಯ ಮೂಲಕ ಸಣ್ಣ ಸಣ್ಣ ಪಟ್ಟಣಗಳಲ್ಲಿ ಉದ್ಯಮವನ್ನು ಪ್ರಾರಂಭಿಸಿದಾಗ ಅದು ಆ ಪ್ರದೇಶದ ಆರ್ಥಿಕಾಭಿವೃದ್ಧಿಗೆ ವೇಗವರ್ಧಕವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕ ಸತ್ಯನಾರಾಯಣ ಭಟ್ ಮಾತನಾಡಿ, ಹೊಸತನದ, ಸಾಮಾಜಿಕ ಜವಾಬ್ದಾರಿಯ, ಪರಿಸರದ ಕಾಳಜಿಯುಳ್ಳ ಯೋಜನೆ ಅನುಷ್ಠಾನಗೊಳಿಸುವ ಜವಾಬ್ದಾರಿ ಎಂಬಿಎ ವಿಭಾಗದ ವಿದ್ಯಾರ್ಥಿಗಳ ಮೇಲಿದೆ. ಇದಕ್ಕೆ ಪೂರಕ ವ್ಯವಸ್ಥೆಗಳನ್ನು ಒದಗಿಸುವುದಕ್ಕೆ ಕಾಲೇಜ್ ಬದ್ಧವಾಗಿದೆ ಎಂದರು.

ಕಾಲೇಜಿನ ಎಂಬಿಎ ವಿಭಾಗದ ನಿರ್ದೇಶಕ ಡಾ. ರಾಬಿನ್ ಮನೋಹರ್ ಶಿಂಧೆ ಸ್ವಾಗತಿಸಿ, ಕಾರ್ಯಕ್ರಮ ಸಂಯೋಜಕ ಡಾ. ಅಕ್ಲೆ ಡ'ಸೋಜ ವಂದಿಸಿದರು. ವಿದ್ಯಾರ್ಥಿನಿಯರಾದ ವೈಷ್ಣವಿ.ಜಿ.ಕೆ ಮತ್ತು ಶ್ರುತಾ ರೈ ಕಾರ್ಯಕ್ರಮ ನಿರ್ವಹಿಸಿದರು. ಸಹ ಸಂಯೋಜಕಿ ಪ್ರೊ. ಜೀವಿತಾ ಬಿ.ವಿ. ಸಹಕರಿಸಿದರು.

ಮೇ 8: ಜಿಲ್ಲಾ ಉಸ್ತುವಾರಿ ಸಚಿವ ಗುಂಡೂರಾವ್ ಸುಳ್ಯಕ್ಕೆ ಭೇಟಿ

ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳ ಪಟ್ಟಿ ಬಿಡುಗಡೆ

ಸುಳ್ಯ: ಸುಳ್ಯ ತಾಲೂಕಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದಿದ್ದು ಅದರ ಉದ್ಘಾಟನೆ ಹಾಗೂ ಅಧಿಕಾರಿಗಳ ಸಭೆಗೆ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡುರಾವ್ ಮೇ 8ರಂದು ಸುಳ್ಯಕ್ಕೆ ಆಗಮಿಸಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ತಿಳಿಸಿದ್ದಾರೆ.

ಅವರು ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಪಧಾಕಾರಿಗಳ ಪಟ್ಟಿ ಬಿಡುಗಡೆಗೊಳಿಸಿ ಮಾತನಾಡಿ, ಸುಳ್ಯದಲ್ಲಿ ಈ ಹಿಂದೆ ಹೇಳಿದಂತೆ ಹತ್ತು ಹಲವು ಸಮಸ್ಯೆಗಳು ಇದ್ದು ಇವುಗಳನ್ನು ನಮ್ಮ ಮಟ್ಟದಲ್ಲಿ ಪರಿಹರಿಸಲು ಸಾಧ್ಯವಾಗಿರುವುದನ್ನು ಮಾಡುತ್ತಿದ್ದು ಜೊತೆಗೆ ಅ ಕಾರಿಗಳಿಗೆ ಬಿಸಿ ಮುಟ್ಟಿಸುವ ನಿಟ್ಟಿನಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆಗೆ ಉಸ್ತುವಾರಿ ಸಚಿವರು ಆಗಮಿಸಲಿದ್ದಾರೆ. ಈ ಸಂದರ್ಭ ಸಾರ್ವಜನಿಕ ಸಂಪರ್ಕ ಸಭೆಯ ಬಗ್ಗೆಯು ಚಿಂತಿಸಲಾಗುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಪಟ್ಟಿ ಬಿಡುಗಡೆ

ನೂತನ ಸಮಿತಿ ಅಧ್ಯಕ್ಷರಾಗಿ ರಾಧಾಕೃಷ್ಣ ಬೊಳ್ಳೂರು, ಆಡಳಿತ ಪ್ರಧಾನ ಕಾರ್ಯದರ್ಶಿ ಭವಾನಿಶಂಕರ್ ಕಲ್ಮಡ್ಕ, ಉಪಾಧ್ಯಕ್ಷರಾಗಿ ಆಲೆಟ್ಟಿ ಜಿಲ್ಲಾ ಪಂಚಾಯತ್ ಕ್ಷೇತ್ರ ಸುರೇಶ್ ಎಂ.ಎಚ್., ಗುತ್ತಿಗಾರು ಜಿಲ್ಲಾ ಪಂಚಾಯತ್ ಕ್ಷೇತ್ರ ಮಿತ್ರದೇವ ಮಡಪ್ಪಾಡಿ, ಬೆಳ್ಳಾರೆ ಜಿಲ್ಲಾ ಪಂಚಾಯತ್ ಅನಿಲ್ ರೈ ಚಾವಡಿಬಾಗಿಲು, ಸುಳ್ಯ ನಗರ ಕೆ. ಗೋಕುಲ್ ದಾಸ್, ಸುಳ್ಯ ಪ್ರಧಾನ ಕಾರ್ಯದರ್ಶಿಗಳಾಗಿ ಸತ್ಯಕುಮಾರ್ ಆಡಿಂಜ, ಎಸ್.ಕೆ. ಹನೀಫ್ ಸಂಪಾಜೆ, ಪ್ರಸಾದ್ ರೈ ಮೇನಾಲ, ಪ್ರವೀಣ್ ಮುಂಡೋಡಿ, ಲೋಕೇಶ್ ಅಕ್ರಿಕಟ್ಟೆ ರವಿಕುಮಾರ್ ಕಿರಿಭಾಗ, ಸಚಿನ್ ರಾಜ್ ಶೆಟ್ಟಿ ಹಮೀದ್ ಎಚ್.ಎಂ., ಪವನ್ ಮುಂಡ್ರಾಜೆ, ತೀರ್ಥರಾಮ ಬಿ., ಕಾರ್ಯದರ್ಶಿಗಳಾಗಿ ಧರ್ಮಪಾಲ ಕೊಯಿಂಗಾಜೆ, ಅಶ್ರಫ್ ಗುಂಡಿ, ರಾಹುಲ್ ಅಡ್ಪಂಗಾಯ, ಹರ್ಷಿತ್ ಕೊರಂಬಟ, ವಿಜೇಶ್ ಹಿರಿಯಡ್ಕ, ದಿನೇಶ್ ಮಡ್ತಿಲ ಕೊಲ್ಲಮೊಗ್ರು, ಹರೀಶ್ ಹುದೇರಿ, ಪ್ರಶಾಂತ್ ರೈ ಮರುವಂಜ, ಕರುಣಾಕರ ಮಡ್ತಿಲ, ಇಕ್ಬಾಲ್ ಸುಣ್ಣಮೂಲೆ, ಶಿವಕುಮಾರ್ ಕಂದಡ್ಕ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಇಬ್ರಾಹಿಂ ಕತ್ತರ್, ಶೇಖರ ಮಣಿಯಾಣಿ, ವಿಶ್ವನಾಥ ಮುಳ್ಯ, ಅಬ್ದುಲ್ ಕುಂಞ ಅಜ್ಜಾವರ, ಜುಬೇರ್ ಅರಂತೋಡು, ಬಾಲಕೃಷ್ಣ ರೈ, ಪುಷ್ಪರಾಜ್ ರೈ, ಸಂಧ್ಯಾ ಮರ್ಕಂಜ, ತಿಮ್ಮಯ್ಯ ತೊಡಿಕಾನ, ರವೀಂದ್ರ ಪೂಜಾರಿ, ವಸಂತ ಪೆಲ್ತಡ್ಕ ಮೂಸಾನ್ ಖಲೀಂ ಎಸ್.ಎಂ., ಚಿತ್ರಾವತಿ ಪಾಲಡ್ಕ ಶಿವರಾಮ ಗೌಡ ಎಂ.ಪಿ. ಸೇರಿದಂತೆ ಸುಮಾರು 40 ಜನರ ಕಾರ್ಯಕಾರಿ ಸಮಿತಿ ಸದಸ್ಯರನ್ನು ಒಳಗೊಂಡು ಒಟ್ಟು 87 ಜನರ ತಂಡವನ್ನು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಶಿಫಾರಸ್ಸು ಮೇರೆಗೆ ಜಿಲ್ಲಾಧ್ಯಕ್ಷ ಹರೀಶ್ ಕುಮಾರ್ ಹಾಗೂ ಕೆಪಿಸಿಸಿ ಮಾನದಂಡಗಳಂತೆ ಕೆಪಿಸಿಸಿ ಅಂಗೀಕರಿಸಿ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಭವಾನಿಶಂಕರ್ ಕಲ್ಮಡ್ಕ ಕರ್ನಾಟಕ ಕಾರ್ಮಿಕರ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಾಹೀದ್ ತೆಕ್ಕಿಲ್, ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ, ವಿಧಾನಸಭಾ ಕ್ಷೇತ್ರ ಪ್ರಚಾರ ಸಮಿತಿ ಅಧ್ಯಕ್ಷ ದಿನೇಶ್ ಅಂಬೆಕಲ್ಲು, ಮಂಜುನಾಥ್ ಮಡ್ತಿಲ ಉಪಸ್ಥಿತರಿದ್ದರು.

ಕೊಂಚಾಡಿಯಲ್ಲಿ ಆಟೋ ರಿಕ್ಷಾ ನಿಲ್ದಾಣಕ್ಕೆ ಮೇಲ್ಛಾವಣಿ, ನೀರಿನ ಯೋಜನೆ ಉದ್ಘಾಟನೆ



ಸುರತ್ಕಲ್: ನಗರದ ದೇರೆಬೈಲ್, ಕೊಂಚಾಡಿ ಮಾಲೆಮಾರ್ ಆಟೋ ಪಾರ್ಕ್‌ನಲ್ಲಿ ಶಾಸಕರ ಅನುದಾನದಲ್ಲಿ ನಿರ್ಮಿಸಲಾದ ರಿಕ್ಷಾ ನಿಲ್ದಾಣದ ಮೇಲ್ಛಾವಣಿ ಹಾಗೂ ದಾನಿಗಳ ಸಹಕಾರದಲ್ಲಿ ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ಮಂಗಳವಾರ ಉದ್ಘಾಟಿಸಲಾಯಿತು.

ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಭರತ್ ಶೆಟ್ಟಿ ಅವರು ಮೇಲ್ಛಾವಣಿ ಉದ್ಘಾಟಿಸಿ ಮಾತನಾಡಿ, ಆಟೋ ರಿಕ್ಷಾ ಚಾಲಕರು ಪ್ರಯಾಣಿಕರೊಂದಿಗೆ ಉತ್ತಮವಾಗಿ ನಡೆದುಕೊಂಡರೆ ಆ ಊರಿನ ಸಂಸ್ಕೃತಿ ಮತ್ತು ವ್ಯವಸ್ಥೆಯ ಬಗ್ಗೆ ಜನರಿಗೆ ಒಳ್ಳೆಯ ಅಭಿಪ್ರಾಯ ಮೂಡುತ್ತದೆ ಎಂದರು.

ಮಾಜಿ ಮೇಯರ್ ಶಶಿಧರ ಹೆಗ್ಡೆ ಮಾತನಾಡಿದರು. ಸೇವ್ ಲೈಫ್ ಚ್ಯಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಅರ್ಜುನ್ ಭಂಡಾರ್ಕರ್ ಅವರು ಶುದ್ಧ ಕುಡಿಯುವ ನೀರಿನ ಘಟಕವನ್ನು ಒದಗಿಸಿದ್ದು ಇದನ್ನು ಉದ್ಘಾಟಿಸಲಾಯಿತು.

ಆಟೋ ರಿಕ್ಷಾ ಸಂಘದ ವತಿಯಿಂದ ಸಹಕಾರ ನೀಡಿದವರನ್ನು ಸಂಮಾನಿಸಲಾಯಿತು. ಈ ಸಂದರ್ಭದಲ್ಲಿ ಮಂಡಲ ಉಪಾಧ್ಯಕ್ಷ ರಾಜೇಶ್ ಕೊಂಚಾಡಿ, ಬಿಜೆಪಿ ಮುಖಂಡ ಚರಿತ್ ಪೂಜಾರಿ, ಯುವ ಮೋರ್ಚಾ ಅಧ್ಯಕ್ಷ ರಕ್ಷಿತ್ ಪೂಜಾರಿ, ಮಾಜಿ ಮಹಾನಗರಪಾಲಿಕೆ ಸದಸ್ಯರಾದ ರಂಜನಿ ಎಲ್ ಕೋಟ್ಯಾನ್, ಗಾಯತ್ರಿ ರಾವ್, ವಾರ್ಡ್ 23 ಅಧ್ಯಕ್ಷ ರಾಘು ಭಟ್, ಕಾವೂರು ಪೊಲೀಸ್ ಠಾಣೆಯ ಸಿ ಐ ರಾಘವೇಂದ್ರ ಬೈಂದೂರು, ಉದ್ಯಮಿ ಝುವಿರ್ ಸುನಿಲ್ ಸೇರಿದಂತೆ ಉಪಸ್ಥಿತರಿದ್ದರು. ಆಟೋ ರಿಕ್ಷಾ ಚಾಲಕರ ಸಂಘದ ಅಧ್ಯಕ್ಷ ಅಶೋಕ್, ಉಪಾಧ್ಯಕ್ಷ ಎಂ.ಪಿ. ಪರಮೇಶ, ಪ್ರಧಾನ ಕಾರ್ಯದರ್ಶಿ ತಿಲಕ್ ದೇವಾಡಿಗ, ಗೌರವಾಧ್ಯಕ್ಷ ಚಂದ್ರಶೇಖರ್ ಭಾಗವಹಿಸಿದರು. ವಿದ್ಯುತ್ ವ್ಯವಸ್ಥೆಯನ್ನು ಸುನಿಲ್ ಅವರ ಸಹಕಾರದಲ್ಲಿ ಒದಗಿಸಲಾಗಿದ್ದು, ಸ್ಥಳೀಯ ಉದ್ಯಮಿಗಳು ರಿಕ್ಷಾ ಪಾರ್ಕ್ ವ್ಯವಸ್ಥಿತವಾಗಿರಲು ಸಹಕಾರ ನೀಡಿದರು. ಗೌರೀಶ್ ನಿರೂಪಿಸಿದರು.

ಮೇ 7-8: ಕಲ್ಲತಡಮೆ ರಕ್ತೇಶ್ವರೀ, ಜುಮಾದಿ ಬಂಟ, ಮೈಸಂದಾಯ ದೈವದ ಪುನರ್ ಪ್ರತಿಷ್ಠೆ



ಬಂಟ್ವಾಳ: ತಾಲೂಕಿನ ಫರಂಗಿಪೇಟೆ ಸಮೀಪದ ಕೆರೆಬಿತ್ತಿಲು,ಕಲ್ಲತಡಮೆಯಲ್ಲಿ ನೂತನವಾಗಿ ಶಿಲಾಮಯವಾಗಿ ನಿರ್ಮಾಣಗೊಂಡ ರಕ್ತೇಶ್ವರೀ, ಜುಮಾದಿ ಬಂಟ, ಮೈಸಂದಾಯ ದೈವಸ್ಥಾನದಲ್ಲಿ ದೈವಗಳ ಪುನರ್ ಪ್ರತಿಷ್ಠೆ ಸಾನಿಧ್ಯ ಕಲಶಾಭಿಷೇಕ, ನೇ ಮೇ 7 ಮತ್ತು 8 ರಂದು ನಡೆಯಲಿದೆ ಎಂದು ಸಜೀರ್ ನಾಯಕ್ ಮನೆತನದ ಮೂಲ ಮನೆಯ ಮುಖ್ಯಸ್ಥ ಸಂದೀಪ್ ನಾಯಕ್ ಸಜೀರ್ ತಿಳಿಸಿದ್ದಾರೆ.

ಗುರುವಾರ ಮೂಲಮನೆಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು ಪೊಳಲಿ ಶ್ರೀ ಸುಬ್ರಹ್ಮಣ್ಯ ತಂತ್ರಿಗಳ ಪೌರೋಹಿತ್ಯದಲ್ಲಿ ಮೇ 7ರಂದು ವೈದಿಕ, ವಿಧಿ ವಿಧಾನಗಳು ನೆರವೇರಲಿದೆ. ಮೇ 8ರಂದು ಕಲ್ಲತಡಮೆ ಶ್ರೀನಾಗಬನದ ಬಳಿಯ ಕಟ್ಟೆಯಲ್ಲಿ ಶ್ರೀರಕ್ತೇಶ್ವರೀ ಹಾಗೂ ಕೆರೆಬಿತ್ತಿಲಿನ ನೂತನ ದೈವಸ್ಥಾನದಲ್ಲಿ ಜುಮಾದಿ ಬಂಟ ಮತ್ತು ಮೈಸಂದಾಯ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಸಾನಿಧ್ಯ ಕಲಶಾಭಿಷೇಕ, ಮಧ್ಯಾಹ್ನ 12.30ಕ್ಕೆ ಧಾರ್ಮಿಕ ಸಭೆ, ಅನ್ನ ಸಂತರ್ಪಣೆ, 2ರಿಂದ 4ರವರೆಗೆ ಮಂಗಳೂರು ದಾಸನಮನೆ ಬಳಗದಿಂದ 'ಭಜನ್ ಗಂಗಾ' ಬಳಿಕ ಸಾಂಸ್ಕೃತಿಕ ಕಾರ್ಯಕ್ರಮವು ಜರಗಲಿದೆ ಎಂದರು.

ಅಂದು ರಾತ್ರಿ ಸುಜೀರುಗುತ್ತು ಶ್ರೀ ಅರಸು, ಜುಮಾದಿ ಬಂಟ ದೈವಸ್ಥಾನದ ಭಂಡಾರ ಮನೆಯಿಂದ ಭಂಡಾರ ಆಗಮಿಸಿ ಧರ್ಮದೈವಗಳಿಗೆ ನೇಮ ಜರಗಲಿದೆ. ಮರುದಿನ ಪ್ರಾತಃ ಕಾಲದಲ್ಲಿ ಭಂಡಾರ ನಿರ್ಗಮಿಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿವಿಧ ಸಮಿತಿ ಪದಾಧಿಕಾರಿಗಳಾದ ಸುರೇಶ್ ನಾಯಕ್ ಸುಜೀರ್ , ಸುಂದರ ಶೆಟ್ಟಿ ಕಲ್ಲತಡಮೆ, ಕೆ.ಜಿ. ವಿಠಲ ಆಳ್ವ ಗರೋಡಿಮನೆ, ಆನಂದ ಆಳ್ವ ಗರೋಡಿಮನೆ, ವೇದವ್ಯಾಸ ನಾಯಕ್, ವರದರಾಜ್ ನಾಯಕ್, ಮೋಹನ್ ನಾಯಕ್, ಸಂಜೀವ ಹೆಗ್ಡೆ ಗರೋಡಿಮನೆ, ಚಂದ್ರಶೇಖರ ಪೂಜಾರಿ ತೆಕ್ಕಿಹಿತ್ಲು, ಕಿರಣ್ ರಾಜ್ ಕುಂಪನಮಜಲು ಮೊದಲಾದವರಿದ್ದರು.

'ವಾರ್ಷಿಕ ಸ್ನೇಹ ಮಿಲನ' ಬಂಟ್ವಾಳ ವಕೀಲರ ಸಂಘದ ವಾರ್ಷಿಕೋತ್ಸವ



ಬಂಟ್ವಾಳ: ವಕೀಲರ ಸಂಘ ಬಂಟ್ವಾಳ ವಾರ್ಷಿಕೋತ್ಸವ 'ವಾರ್ಷಿಕ ಸ್ನೇಹ ಮಿಲನ' ಬಿ.ಸಿ. ರೋಡ್‌ನ ಅಂಬೇಡ್ಕರ್ ಭವನದಲ್ಲಿ ನಡೆಯಿತು.

ಬಂಟ್ವಾಳದ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಅನಿಲ್ ಪ್ರಕಾಶ್ ಎಂ.ಪಿ. ಕಾರ್ಯಕ್ರಮ ಉದ್ಘಾಟಿಸಿದರು.

ಸನ್ಮಾನ, ಗೌರವಾರ್ಪಣೆ

ಈ ಸಂದರ್ಭದಲ್ಲಿ ಬಂಟ್ವಾಳದ ಹಿರಿಯ ವಕೀಲ ಪುಂಡಿಕಾಯಿ ನಾರಾಯಣ ಭಟ್ ಅವರನ್ನು ತನ್ನ ವೃತ್ತಿ ಜೀವನದ 50 ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ ಅವರ ಶಿಷ್ಯ ವೃಂದ ಮತ್ತು ವಕೀಲರ ಸಂಘ ಜಂಟಿಯಾಗಿ ಸನ್ಮಾನಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಕೀಲರು ಮತ್ತು ವಕೀಲರ ಮಕ್ಕಳನ್ನು ಗೌರವಿಸಲಾಯಿತು.

ಬಂಟ್ವಾಳದ ವೆಂಕಟರಮಣ ದೇವಸ್ಥಾನದ ಟ್ರಸ್ಟಿ ಸುರೇಶ್ ವಿ. ಬಾಳಿಗ ವೇದಿಕೆಯಲ್ಲಿದ್ದರು. ಬಂಟ್ವಾಳ ವಕೀಲರ ಸಂಘದ ಅಧ್ಯಕ್ಷ ರಿಚರ್ಡ್ ಕೋಸ್ತ ಎಂ. ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಕಿರಿಯ ವಕೀಲರು ಭಾಗವಹಿಸಿದ್ದರು.

ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ನರೇಂದ್ರನಾಥ ಭಂಡಾರಿ ಅವರು ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಅಕ್ಷತಾ ಶೆಟ್ಟಿ ವಂದಿಸಿದರು. ಗಿರೀಶ್ ಮುಳಿಯಾಲ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ನಂತರ ವಕೀಲರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು.

ಅರ್ಧಂಬರ್ಧ ಕಾಮಗಾರಿಯಿಂದ ಸಂಕಷ್ಟಕ್ಕೆ ಒಳಗಾದ ಪ್ರಯಾಣಿಕರು | ಸೂಕ್ತ ಚರಂಡಿ ವ್ಯವಸ್ಥೆ ಇಲ, ಭಾರೀ ಮಳೆ ಬಂದರೆ ಬಪ್ಪನಾಡು ದೇಗುಲ ರಸ್ತೆಗೆ ಹಾನಿ ಸಾಧ್ಯತೆ

ನಿಧಾನಗತಿಯಲ್ಲಿ ಸಾಗುತ್ತಿದೆ ಮುಲ್ಕಿ ರಾಷ್ಟ್ರೀಯ ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿ, ಸಂಚಾರ ದುಸ್ತರ

■ ಪುನೀತ ಕೃಷ್ಣ ಮುಲ್ಕಿ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ ಚತುಷ್ಪಥಗೊಂಡ ಬಳಿಕ ಮುಲ್ಕಿಯಲ್ಲಿ ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿಗೆ ಕಳೆದ ತಿಂಗಳ ಹಿಂದೆ ಚಾಲನೆ ನೀಡಲಾಗಿದ್ದು ನಿಧಾನಗತಿಯಲ್ಲಿ ನಡೆಯುತ್ತಿದೆ.

ಕಳೆದ ತಿಂಗಳ ಹಿಂದೆ ಬಪ್ಪನಾಡು ಜಾತ್ರೆ ಸಂದರ್ಭ ರಾಷ್ಟ್ರೀಯ ಹೆದ್ದಾರಿ 66ರ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗದ ಬಪ್ಪನಾಡು ಸೇತುವೆ ಬಳಿಯಿಂದ ಮುಲ್ಕಿ ಬಸ್ ಬಸ್ ನಿಲ್ದಾಣದವರೆಗೆ ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿ ತರಾತುರಿಯಲ್ಲಿ ಆರಂಭಗೊಂಡರೂ ಅರ್ಧಂಬರ್ಧ, ನಿಧಾನ ಗತಿಯಿಂದ ಕಾಮಗಾರಿಯಿಂದ ಪ್ರಯಾಣಿಕರು ಸಂಕಷ್ಟಕ್ಕೀಡಾಗಿದ್ದಾರೆ.



ನಿಧಾನ ಕಾಮಗಾರಿ ಕೃತಕ ನೆರೆ ಭೀತಿ

ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿ ನಿಧಾನ ಗತಿಯಲ್ಲಿ ನಡೆಯುತ್ತಿರುವುದರಿಂದ ಮಳೆಗಾಲ ಸಮೀಪಿಸುತ್ತಿದ್ದಂತೆ ಪರಿಸರದ ವಾಸಿಗಳಿಗೆ ಕೃತಕ ನೆರೆ ಭೀತಿ ಎದುರಾಗಿದೆ. ಬಪ್ಪನಾಡು ದೇವಸ್ಥಾನದ ಎದುರು ಭಾಗದಲ್ಲಿ ಹೆದ್ದಾರಿ ಸರ್ವಿಸ್ ರಸ್ತೆ ಅಗೆದು ಹಾಕಿದ್ದು ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ಭಾರೀ ಮಳೆ ಬಂದರೆ ಬಪ್ಪನಾಡು ದೇವಸ್ಥಾನದ ಸಂಪರ್ಕ ರಸ್ತೆ ನೀರುಪಾಲಾಗುವ ಸಾಧ್ಯತೆ ಇದೆ. ಈ ಬಗ್ಗೆ ಸ್ಥಳೀಯರು ಮುಂಜಾಗರೂಕತೆ ವಹಿಸುವಂತೆ ಹೆದ್ದಾರಿ ಇಲಾಖೆಗೆ ಮನವಿ ಮಾಡುತ್ತಿದ್ದರೂ, ಅಧಿ ಕಾರಿಗಳು ಕ್ಯಾರೇ ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

> **ಪರಿಹಾರ ಕಲ್ಪಿಸಿ**
>
> ಸೂಕ್ತ ಸರ್ವಿಸ್ ರಸ್ತೆ ಕೊರತೆಯಿಂದ ಮುಲ್ಕಿ ಹೆದ್ದಾರಿಯಲ್ಲಿ ಅಪಘಾತ ದಿನದಿಂದ ದಿನಕ್ಕೆ ಅಧಿಕವಾಗುತ್ತಿದೆ. ಕೂಡಲೇ ಈ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು. ಇಲ್ಲಿಗೆ ಟ್ರಾಫಿಕ್ ಪೊಲೀಸ್ ವ್ಯವಸ್ಥೆ ಬೇಕು.
>
> ● ಶರತ್ ಕಾರ್ನಾಡ್, ಸಾಮಾಜಿಕ ಕಾರ್ಯಕರ್ತ

ಪೊಲೀಸರಿಗೆ ಸಂಕಷ್ಟ

ಹೆದ್ದಾರಿ ಸರ್ವಿಸ್ ರಸ್ತೆ ಅರ್ಧಂಬರ್ಧ ಕಾಮಗಾರಿಯಿಂದ ದಕ್ಷಿಣಕನ್ನಡ ಜಿಲ್ಲೆಯ ಗಡಿಭಾಗದ ಬಪ್ಪನಾಡು ಚೆಕ್ ಪಾಯಿಂಟ್ ಬಳಿ ತೀರಾ ಇಕ್ಕಟ್ಟಿನ ಹೆದ್ದಾರಿ ರಸ್ತೆ ನಡುವೆ ಪೊಲೀಸರು ಜೀವವನ್ನು ಪಣಕ್ಕಿಟ್ಟು ವಾಹನ ತಪಾಸಣೆಯ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಭಾಗದಲ್ಲಿ ಹೆದ್ದಾರಿ ಬದಿಯಲ್ಲಿ ಹಾಕಿರುವ ಗ್ಯಾಸ್ ಪೈಪ್‌ಲೈನ್ ರಾಶಿ ಅಪಘಾತಕ್ಕೆ ಆಹ್ವಾನ ನೀಡುತ್ತಿದೆ.

ತೆರೆದ ಚರಂಡಿಯಲ್ಲಿ ತ್ಯಾಜ್ಯ ನೀರು

ರಾಷ್ಟ್ರೀಯ ಹೆದ್ದಾರಿಯ ಆರಾರ್ ಟವರ್ಸ್ ಬಳಿ ಮುಲ್ಕಿ ಕೇಂದ್ರ ಭಾಗದ ಕಟ್ಟಡಗಳ ತ್ಯಾಜ್ಯ ನೀರು ತೆರೆದ ಚರಂಡಿಯಲ್ಲಿ ಹರಿಯುತ್ತಿದ್ದು, ಇದಕ್ಕೆ ಪರಿಹಾರ ಈಗ ಕಂಡುಕೊಳ್ಳದಿದ್ದರೆ ಭಾರೀ ಮಳೆಗೆ ತ್ಯಾಜ್ಯ ನೀರು ಮಳೆ ನೀರಿನ ಜೊತೆ ಹರಿದು ಬಪ್ಪನಾಡು ದೇವಸ್ಥಾನದ ಎದುರು ಭಾಗದ ಗದ್ದೆಗೆ ಹರಿಯುವ ಸಾಧ್ಯತೆ ಇದೆ.

ಅತಂತ್ರ ಸ್ಥಿತಿಯಲ್ಲಿ ಆಟೋ ಚಾಲಕರು

ಹೆದ್ದಾರಿ ಅಗಲೀಕರಣದ ಬಳಿಕ ಮುಲ್ಕಿ ಬಸ್ ನಿಲ್ದಾಣದ ಬಳಿಯ ಆಟೋ ಚಾಲಕರಿಗೆ ಸೂಕ್ತ ನಿಲ್ದಾಣದ ಕೊರತೆಯಿಂದ ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ಆಟೋ ನೀಲಗಡೆ ಮಾಡುತ್ತಿದ್ದು ಅಪಾಯಕಾರಿಯಾಗಿ ಪರಿಣಮಿಸಿದೆ. ಈ ಬಗ್ಗೆ ಆಟೋ ಚಾಲಕರು ಅನೇಕ ಬಾರಿ ಸಂಸದರಿಗೆ ಹಾಗೂ ಶಾಸಕರಿಗೆ ಮನವಿ ಸಲ್ಲಿಸಿದರೂ ಇದುವರೆಗೂ ಆಟೋ ಚಾಲಕರಿಗೆ ಸೂಕ್ತ ನಿಲ್ದಾಣ ವ್ಯವಸ್ಥೆ ಕಲ್ಪಿಸಿಲ್ಲ, ಕಳೆದ ದಿನಗಳ ಹಿಂದೆ ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ಆಟೋ ಚಾಲಕರ ಹಾಗೂ ಮತ್ತಿತರ ವಾಹನಗಳ ಪಾರ್ಕಿಂಗ್ ಬಗ್ಗೆ ಗೊಂದಲ ಉಂಟಾಗಿದ್ದು ಇನ್ನೂ ಅತಂತ್ರ ಸ್ಥಿತಿಯಲ್ಲಿದೆ.

ಸರ್ಕಾರಿ ಬಸ್ ಪ್ರತ್ಯೇಕ ನಿಲ್ದಾಣದಲ್ಲಿ ನಿಲ್ಲುತ್ತಿಲ್ಲ

ಮುಲ್ಕಿ ಬಸ್ ನಿಲ್ದಾಣದ ಕೆಳಬದಿಯಲ್ಲಿ ಲಯನ್ಸ್ ಕಟ್ಟಡದ ಎದುರು ಭಾಗದಲ್ಲಿ ಸರಕಾರಿ ಬಸ್ ನಿಲ್ದಾಣಕ್ಕೆ ನಾಮಫಲಕ ಅಳವಡಿಸಿ ನಿಲುಗಡೆಗೆ ಅನುಮತಿ ನೀಡಲಾಗಿದ್ದರೂ ಸರಕಾರಿ ಬಸ್ ಚಾಲಕರು ಬಸ್ ನಿಲ್ದಾಣದ ಕೆಳಗಡೆ ಜಂಕ್ಷನ್ ಬಳಿ ನಿಲ್ಲಿಸುತ್ತಿದ್ದು ಅಪಾಯಕಾರಿಯಾಗಿ ಪರಿಣಮಿಸಿದೆ. ಈ ಭಾಗದಲ್ಲಿ ಅನೇಕ ಅಪಘಾತಗಳು ಸಂಭವಿಸಿದ್ದು ಅನೇಕರು ಪ್ರಾಣ ಕಳೆದುಕೊಂಡಿದ್ದಾರೆ ಆದರೂ ಹೆದ್ದಾರಿ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂಬ ಆರೋಪ ಕೇಳಿ ಬರುತ್ತಿದೆ


ಸುತ್ತ ಮುತ್ತ

ನಾಳೆಯಿಂದ ಒತ್ತೆಕೋಲ

ಕಾಸರಗೋಡು: ಅಮ್ಮೆ ಶ್ರೀ ವಿಷ್ಣುಮೂರ್ತಿ ಸೇವಾ ಸಮಿತಿಯ ಆಶ್ರಯದಲ್ಲಿ ಒತ್ತೆಕೋಲ ಮಹೋತ್ಸವ ಮೇ 2 ಮತ್ತು 3ರಂದು ಜರಗಲಿದೆ. ಮೇ 2 ರಂದು ಬೆಳಿಗ್ಗೆ 7ಕ್ಕೆ ಮೇಲೇರಿ ಸೇರಿಸುವುದು, 11ಕ್ಕೆ ಗುಳಿಗನ ಕೋಲ, ಮಧ್ಯಾಹ್ನ ಅನ್ನ ಸಂತರ್ಪಣೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ಭಂಡಾರ ಇಳಿಸುವುದು, ರಾತ್ರಿ 7ಕ್ಕೆ ಅಗ್ನಿಸ್ಪರ್ಶ, 8ಕ್ಕೆ ಕುಳಿಚ್ಚಾಟಂ, 8.30ಕ್ಕೆ ಮಕ್ಕಳಿಂದ ನೃತ್ಯ, ಅನ್ನ ಸಂತರ್ಪಣೆ, 11 ಕ್ಕೆ ಮ್ಯೂಸಿಕಲ್ ನೈಟ್ಸ್ ನಡೆಯಲಿದೆ. ಮೇ 3ರಂದು ಮುಂಜಾನೆ ಅಗ್ನಿಸ್ನಾನ ಸಹಿತ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ.

ಕೊಂಡೆವೂರು ಶ್ರೀಗಳಿಂದ ಮನವಿ

ಉಪ್ಪಳ: ಏಪ್ರಿಲ್ 27ರಂದು ಗೋಮಾತಾ ಗೌರವ ಅಭಿಯಾನದ ಪ್ರಯುಕ್ತ ದೇಶಾದ್ಯಂತ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ತಹಶೀಲ್ದಾರ್ ಮೂಲಕ ಭಾರತದ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಗೆ ನಾಡಿನ ಗಣ್ಯರು ಗೋವುಗಳಿಗೆ ರಾಷ್ಟ್ರೀಯ ಗೌರವದ ಅಧಿಕೃತ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಅದರಂತೆ ಉಪ್ಪಳದಲ್ಲಿರುವ ಮಂಜೇಶ್ವರ ತಾಲೂಕು ಕಚೇರಿಗೆ ಕೊಂಡೆವೂರು ಮಠಾಧೀಶ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶ್ರಮದಲ್ಲಿ ಗೋಪೂಜೆ ನಡೆಸಿ, ಗೋವಿಗೆ ಸೂಕ್ತ ಸ್ಥಾನಮಾನಕ್ಕಾಗಿ ಮನವಿ ಸಲ್ಲಿಸಿದ್ದಾರೆ.



ಪ್ರತ್ಯೇಕ ಲೋಕಸಭಾ, ವಿಧಾನಸಭಾ ಕ್ಷೇತ್ರಕ್ಕಾಗಿ ಸಿಎನ್‌ಸಿ ಅಭಿಯಾನ

ಮಡಿಕೇರಿ: ಕ್ಷೇತ್ರ ಪುನರ್ ವಿಂಗಡಣೆಯ ಸಂದರ್ಭ ಕೊಡವರಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ಮತ್ತು ವಿಧಾನಸಭಾ ಕ್ಷೇತ್ರವನ್ನು ಘೋಷಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮೇ 1 ರಿಂದ ಅಭಿಯಾನವನ್ನು ಆರಂಭಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಮೇ 1 ರಂದು ಬೆಳಿಗ್ಗೆ 9 ಗಂಟೆಗೆ ಕೊಡವರ ಪುಣ್ಯಕ್ಷೇತ್ರ ತಲಕಾವೇರಿಯಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅಭಿಯಾನವನ್ನು ಆರಂಭಿಸಲಾಗುವುದು ಎಂದು ಹೇಳಿದ್ದಾರೆ. ಕೊಡವರಿಗಾಗಿ ಕೊಡವ ಪ್ರದೇಶದ ಗಡಿಗಳನ್ನು ಬದಲಾಯಿಸದೆ ಕೊಡವ ಸಾಂಪ್ರದಾಯಿಕ ನೆಲೆಯಲ್ಲೇ ಪ್ರತ್ಯೇಕ ಕೊಡವ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳನ್ನು ರಚಿಸಬೇಕು ಎಂದು ಒತ್ತಾಯಿಸಿದ್ದಾರೆ. ಪ್ರತ್ಯೇಕ ಕೊಡವ ಸಂಸತ್ತು ಮತ್ತು ವಿಧಾನಸಭಾ ಕ್ಷೇತ್ರವನ್ನು ರಚಿಸಬೇಕು. ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಖಚಿತಪಡಿಸಿಕೊಳ್ಳುವಾಗ, ಕೊಡವ ಮಹಿಳೆಯರಿಗೆ ಪ್ರತ್ಯೇಕ ಆಂತರಿಕ ಕೋಟಾ ನೀಡಬೇಕು. 2027ರ ಜನಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಅನ್ನು ಮೀಸಲಿಡಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನ: ಕವನಗಳ ಆಹ್ವಾನ

ನಾಪೋಕ್ಲು: ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ 12 ನೇ ಕನ್ನಡ ಸಾಹಿತ್ಯ ಸಮ್ಮೇಳನವು ಮಡಿಕೇರಿ ತಾಲೂಕು ಕಡಂಗ ಅರಪಟ್ಟು ಗ್ರಾಮದಲ್ಲಿರುವ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮೇ 5ರಂದು ಜರುಗಲಿದೆ. ಈ ಸಂದರ್ಭ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಚಾರಗೋಷ್ಠಿಗಳು ಗೀತ ಗಾಯನ ಕವಿಗೋಷ್ಠಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಕವಿ ಗೋಷ್ಠಿಯಲ್ಲಿ ಕವನ ವಾಚಿಸಲು ಆಸಕ್ತ ಕವಿ/ ಕವಯಿತ್ರಿಯರಿಂದ ಸ್ವರಚಿತ ಕವನಗಳನ್ನು ಆಹ್ವಾನಿಸಲಾಗಿದೆ. ಕವನಗಳನ್ನು ಕಳುಹಿಸುವವರು ತಮ್ಮ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ, ಭಾವಚಿತ್ರವನ್ನು ತಪ್ಪದೆ ಕಳುಹಿಸಿಕೊಡಬೇಕು. ಮಾಹಿತಿಗಳಿಲ್ಲದ ಕವನಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ, ಕವನಗಳನ್ನು ಮತ್ತು ಮಾಹಿತಿಯನ್ನು ಈ ಕೆಳಗೆ ಸೂಚಿಸಿದ ವ್ಯಾಟ್ಸಾಪ್ ಸಂಖ್ಯೆಗೆ ಕಳುಹಿಸಬಹುದು. ಕವನಗಳನ್ನು ಟೈಪ್ ಮಾಡಿ ಕಳುಹಿಸಬೇಕು. ವಾಟ್ಸಾಪ್ ನಲ್ಲಿ ಕವನದ ಛಾಯ ಪ್ರತಿಯನ್ನು ಕಳುಹಿಸಿದರೆ ಅದನ್ನು ಪರಿಗಣಿಸಲಾಗುವುದಿಲ್ಲ. ಬಂದ ಕವನಗಳನ್ನು ಪರಾಮರ್ಶಿಸಿ ಆಯ್ಕೆಯಾದ ಕವಿಗಳಿಗೆ ಕವನ ವಾಚನ ಮಾಡಲು ಅವಕಾಶ ನೀಡಲಾಗುವುದು. ವಾಟ್ಸಾಪ್ ಸೌಲಭ್ಯ ಇಲ್ಲದಿರುವವರು ಅಂಚೆ ಮೂಲಕ ಈ ವಿಳಾಸಕ್ಕೆ ಅಗತ್ಯ ಮಾಹಿತಿಯೊಂದಿಗೆ ಕಳುಹಿಸಿಕೊಡಬಹುದು. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ : 9483110940 ಅನ್ನು ಸಂಪರ್ಕಿಸುವಂತೆ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿ ಬಾಳೆಯಡ ದಿವ್ಯಾ ಮಂದಪ್ಪ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಡಬ ಪಟ್ಟಣ ಪಂಚಾಯತ್ ಘನತ್ಯಾಜ್ಯ ಘಟಕದ ಅವ್ಯವಸ್ಥೆ | ಲೋಕಾಯುಕ್ತಕ್ಕೆ ದೂರು ನೀಡಲು ನಿರ್ಧಾರ

ತ್ಯಾಜ್ಯ ಸಾಗಾಟ ವಾಹನ ತಡೆದು ಗ್ರಾಮಸ್ಥರಿಂದ ಪ್ರತಿಭಟನೆ



ಕಡಬ: ಕೋಡಿಂಬಾಳ ಗ್ರಾಮದ ಕಕ್ಕೆತ್ತಿಮಾರ್ ನಲ್ಲಿರುವ ಕಡಬ ಪಟ್ಟಣ ಪಂಚಾಯತ್‌ನ ಘನ ತ್ಯಾಜ್ಯ ವಿಲೇವಾರಿ ಘಟಕದ ಅವ್ಯವಸ್ಥೆಯ ವಿರುದ್ಧ ಆಕ್ರೋಶಗೊಂಡಿರುವ ಸ್ಥಳೀಯ ಜನರು ಕೂಡಲೇ ಘಟಕದಲ್ಲಿ ರಾಶಿ ಬಿದ್ದು ಕೊಳೆತು ನಾರುತ್ತಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು ಎಂದು ಆಗ್ರಹಿಸಿ ತ್ಯಾಜ್ಯ ಸಾಗಾಟ ವಾಹನವನ್ನು ತಡೆದು ಪ್ರತಿಭಟಿಸಿದ ಘಟನೆ ಗುರುವಾರ ಸಂಜೆ ನಡೆದಿದೆ.

ಕೊಳೆತು ನಾರುತ್ತಿರುವ ತ್ಯಾಜ್ಯ ಘಟಕ

ಪ್ರತಿಭಟನೆಯ ವೇಳೆ ಮಾತನಾಡಿದ ಕಡಬ ಗ್ರಾ.ಪಂ. ಮಾಜಿ ಅಧ್ಯಕ್ಷ ನಾರಾಯಣ ಪೂಜಾರಿ ವಾಲಪ್ಪೆ ಅವರು ಪಟ್ಟಣ ಪಂಚಾಯತ್‌ನ ಅಸಮರ್ಪಕ ಕಾರ್ಯನಿರ್ವಹಣೆಯ ಕಾರಣದಿಂದಾಗಿ ಘನ ತ್ಯಾಜ್ಯ ಘಟಕದಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಗ್ರಹಗೊಂಡಿರುವ ತ್ಯಾಜ್ಯದ ರಾಶಿ ಗಬ್ಬೆದ್ದು ನಾರುತ್ತಿದೆ. ಇತರೆಡೆ ತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿದ್ದರೂ ತಾಲೂಕು ಕೇಂದ್ರವಾದ ಕಡಬದಲ್ಲಿ ಮಾತ್ರ ಅದು ಸಾಧ್ಯವಾಗುತ್ತಿಲ್ಲ, ತ್ಯಾಜ್ಯ ವಿಲೇವಾರಿಗಾಗಿ ಖರೀದಿಸಿರುವ ಲಕ್ಷಾಂತರ ರೂ. ಮೌಲ್ಯದ ಯಂತ್ರೋಪಕರಣಗಳು ಬಳಕೆಯಾಗದೆ ತುಕ್ಕುಹಿಡಿಯುತ್ತಿವೆ. ನಡೆದಿರುವ ಕಾಮಗಾರಿಗಳು ಕೂಡ ಕಳಪೆಯಾಗಿವೆ ಎಂದು ದೂರಿದ ಅವರು ಘಟಕದಲ್ಲಿ ತ್ಯಾಜ್ಯ ಕೊಳೆತು ನಾರುತ್ತಿರುವುದರಿಂದ ಪರಿಸರದಲ್ಲಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ. ಈ ಹಿಂದೆ ಪರಿಸರದಲ್ಲಿ ಡೆಂಗ್ಯೂ ಜ್ವರ ಹರಡಿ ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಹಲವರ ಸ್ಥಿತಿ ಚಿಂತಾಜನಕವಾಗಿತ್ತು. ಘಟಕದ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ತಪ್ಪಿದರೆ ಉಗ್ರ ರೀತಿಯಲ್ಲಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು.

ಅದೇ ರೀತಿ ಇದೇ ಜಾಗದಲ್ಲಿ ಮಲ ತ್ಯಾಜ್ಯ ನಿರ್ವಹಣ ಘಟಕ ಆರಂಭಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಮಾಹಿತಿ ಇದೆ.ಬೇರೆ ಬೇರೆ ಕಾರಣ ಮುಂದಿಟ್ಟುಕೊಂಡು ಸುಮಾರು 12.5 ಎಕರೆ ಅರಣ್ಯವನ್ನು ನಾಶ ಮಾಡುವ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ನಮ್ಮ ವಿರೋಧವಿದೆ ಎಂದು ಅವರು ನುಡಿದರು. ಪಟ್ಟಣ ಪಂಚಾಯತ್ ಸದಸ್ಯ ದಯಾನಂದ ಗೌಡ ಪಿಜಕಳ, ಬಿಜೆಪಿ ಶಕ್ತಿಕೇಂದ್ರದ ಅಧ್ಯಕ್ಷ ಪ್ರಕಾಶ್ ಎನ್.ಕೆ., ಕಾರ್ಯದರ್ಶಿ ಅಶೋಕ್ ಕುಮಾರ್ ಪಿ., ದಲಿತ ಮುಖಂಡ ರಾಘವ ಕಳಾರ, ಸ್ಥಳೀಯ ಪ್ರಮುಖರಾದ ಚಾಕೋ ಫಿಲಿಪ್, ಬಾಲಕೃಷ್ಣ ನೆಲ್ಲಿಪಡ್ಪು, ಅಮರನಾಥ ಶೆಟ್ಟಿ ಕುಂಜತ್ತೋಡಿ, ಶಶಿಕಿರಣ್ ರೈ ಬನ್ನೂರು ಕುಂಜತ್ತೋಡಿ, ಮಹಾವೀರ ಜೈನ್, ರಘುರಾಮ ನ್ಯಾಕ್ ಕುಕ್ಕೆರೆಬೆಟ್ಟು, ದೇವಣ್ಣ ಗೌಡ ಮುಳಿಯ, ಚರಣ್ ವಾಲಪ್ಪೆ, ರಮೇಶ್ ಹೇರಂಡ, ಲೋಹಿತ್ ಮುಳಿಯ, ದಾಮೋದರ ಹೆಗ್ಡೆ, ವಸಂತ ರೈ ಇರ್ತಿಮಾರ್, ಪೂರ್ಣಚಂದ್ರ ರೈ, ಚಂದ್ರಶೇಖರ್ ರೈ, ಅರುಣ್ ಕುಮಾರ್ ಪೆರ್ಗಡೆಮಾರ್, ರಮೇಶ್ ಮುಳಿಯ, ಪ್ರವೀಣ್ ತೋರಸ್ ಮುಂತಾದವರು ಪ್ರತಿಭಟನೆಯ ವೇಳೆ ಉಪಸ್ಥಿತರಿದ್ದರು.

ಮಲ ತ್ಯಾಜ್ಯ ಘಟಕಕ್ಕೆ ವಿರೋಧ

ಈಗಾಗಲೇ ರಾಶಿ ಬಿದ್ದಿರುವ ತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಬೇಕು ಎಂದು ಪಟ್ಟಣ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಹಲವು ಬಾರಿ ವಿಷಯ ಪ್ರಸ್ತಾಪಿಸಿದ್ದೆ. ಆದರೆ ಪ್ರಯೋಜನವಾಗಿಲ್ಲ, ತ್ಯಾಜ್ಯ ವಿಲೇವಾರಿ ಘಟಕ ಕೊಳೆತು ನಾರುತ್ತಿರುವುದರ ಮಧ್ಯೆ ಇಲ್ಲಿಯೇ ಮಲ ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲು ತಯಾರಿ ನಡೆಯುತ್ತಿದೆ. ಈ ವಿಚಾರವನ್ನು ವಾರ್ಡ್ ಸದಸ್ಯೆಯಾಗಿರುವ ನನ್ನ ಜೊತೆ ಚರ್ಚಿಸಿಲ್ಲ ಎಂದು ಪಟ್ಟಣ ಪಂಚಾಯತ್ ವಾರ್ಡ್ ಸದಸ್ಯೆ ಅಕ್ಷತಾ ಬಾಲಕೃಷ್ಣ ಹೇಳಿದರು. ಇಲ್ಲಿ ಮಲತ್ಯಾಜ್ಯ ಘಟಕ ನಿರ್ಮಾಣಕ್ಕೆ ನನ್ನ ವಿರೋಧವಿದೆ ಎಂದು ಘೋಷಿಸಿದರು. ಘನತ್ಯಾಜ್ಯ ಘಟಕದ ಅವ್ಯವಸ್ಥೆ ಹಾಗೂ ಕಳಪೆ ಕಾಮಗಾರಿಯ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡುವುದು ಹಾಗೂ ಶೀಘ್ರದಲ್ಲೇ ಪಟ್ಟಣ ಪಂಚಾಯತ್ ವಿರುದ್ಧ ಪ್ರತಿಭಟನೆ ನಡೆಸುವುದು ಎಂದು ಪ್ರತಿಭಟನಕಾರರು ಸಭೆ ನಡೆಸಿ ಪ್ರಕಟಿಸಿದರು.

ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನಲ್ಲಿ ವಾರ್ಷಿಕೋತ್ಸವ

ಮಕ್ಕಳಲ್ಲಿ ಕ್ಷಿಪ್ರ ಯೋಚನಾ ಶಕ್ತಿ ಅಗತ್ಯ: ಪ್ರೊ. ಕವಿತಾ



ಪುತ್ತೂರು: ಅವಕಾಶಗಳನ್ನು ಬಳಸಿಕೊಳ್ಳಲು ಕ್ಷಿಪ್ರ ಯೋಚನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಜಗತ್ತು ವೇಗವಾಗಿ ಬದಲಾಗುತ್ತಿದೆ. ಕಾಲೇಜ್‌ಗಳು ವಿದ್ಯಾರ್ಥಿಗಳಿಗೆ ಬೆಳೆಯಲು ಮತ್ತು ಉತ್ತಮ ವ್ಯಕ್ತಿಯಾಗಲು ಅವಕಾಶಗಳನ್ನು ನೀಡುತ್ತವೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಗುಣ ಇರಲೇಬೇಕು. ಬದಲಾಗುತ್ತಿರುವ ಜಗತ್ತಿಗೆ ನೀವು ಹೊಂದಾಣಿಕೆ ಮಾಡಿಕೊಳ್ಳದಿದ್ದರೆ ಯುವ ಜನಾಂಗ ದಾರಿ ತಪ್ಪುವುದಲ್ಲದೆ ಕನಸುಗಳನ್ನು ನನಸಾಗಿಸಲು ಸಾಧ್ಯವಾಗುವುದಿಲ್ಲ ಎಂದು ಮಂಗಳೂರು ಕಾಲೇಜ್ ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ. ಕವಿತಾ ಕೆ.ಆರ್. ಹೇಳಿದರು.

ನಗರದ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ಎಸ್‌ಜೆಎಂ ಸಭಾಂಗಣದಲ್ಲಿ ನಡೆದ ಕಾಲೇಜಿನ 2025-26ನೇ ಸಾಲಿನ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಮಾತನಾಡಿ ಶುಭ ಕೋರಿದರು.

ಮುಖ್ಯ ಅತಿಥಿಯಾಗಿದ್ದ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಅನೇಕ ಕಡೆಗಳಲ್ಲಿ ಕೆಲಸ ಮಾಡಲು ಜನರಿದ್ದರೂ ಅವರಲ್ಲಿ ಕೌಶಲ್ಯದ ಕೊರತೆಯಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ಬಹಳ ಮುಖ್ಯ. ವಿದ್ಯಾರ್ಥಿಗಳಲ್ಲಿ ಕೌಶಲ್ಯ ವೃದ್ಧಿಸಿದರೆ ಯಾವುದೇ ಸವಾಲನ್ನು ನಿಭಾಯಿಸಬಹುದು ಎಂದು ಹೇಳಿದರು.

ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ಸಂಚಾಲಕ ರೆ.ಫಾ. ಲಾರೆನ್ಸ್ ಮಸ್ಕರೇನ್ಹಸ್ ಅವರು ಅಧ್ಯಕ್ಷತೆ ವಹಿಸಿದ್ದರು. ಗೌರವ ಅತಿಥಿಗಳಾಗಿ ಫಿಲೋಮಿನಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರೆ.ಫಾ. ಅಶೋಕ್ ರಾಯನ್ ಕ್ರಾಸ್ತ, ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷ ಡಾ. ಅಬೂಬಕ್ಕರ್ ಅರ್ಲಪದವು ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ರೆ.ಫಾ.ಡಾ. ಆಂಟನಿ ಪ್ರಕಾಶ್ ಮೊಂತೇರೊ ವರದಿ ಮಂಡಿಸಿದರು.

ಕಾಲೇಜಿನ ಉಪ ಪ್ರಾಂಶುಪಾಲ ಡಾ. ವಿಜಯ ಕುಮಾರ್ ಎಂ. ಸ್ವಾಗತಿಸಿ, ಕಾಲೇಜಿನ ಶೈಕ್ಷಣಿಕ ರಿಜಿಸ್ಟ್ರಾರ್ ಡಾ. ನಾರ್ಬರ್ಟ್ ಮಸ್ಕರೇನ್ಹಸ್ ವಂದಿಸಿದರು. ಭೌತಶಾಸ್ತ್ರ ವಿಭಾಗದ ಪೂಜಾಶ್ರೀ ವಿ. ರೈ ಕಾರ್ಯಕ್ರಮ ನಿರ್ವಹಿಸಿದರು.

ಸನ್ಮಾನ

ಪಿಎಚ್.ಡಿ. ಪದವಿ ಪಡೆದ ಕಾಲೇಜಿನ ಪ್ರಾಂಶುಪಾಲ ಡಾ. ವಿನಯಚಂದ್ರ, ಡಾ. ಗೀತಾ ಪೂರ್ಣಿಮ ಕೆ. ಮತ್ತು ಡಾ. ಭಾರತಿ ಎಸ್. ರೈ, ಎನ್‌ಸಿಸಿ ನೌಕಾದಳದ ಅಧಿಕಾರಿಯಾಗಿ ಸಬ್ ಲೆಫ್ಟಿನೆಂಟ್ ಶ್ರೇಣಿಗೆ ಆಯ್ಕೆಯಾದ ತೇಜಸ್ವಿ ಭಟ್ ಕೆ., ಮಂಗಳೂರು ವಿ.ವಿ. ಪ್ರತಿನಿಧಿಸಿ ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಏಕತಾ ಶಿಬಿರದಲ್ಲಿ ಭಾಗವಹಿಸಿದ ಡಾ.ಕೆ. ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು. ಕೆ ಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಉಪನ್ಯಾಸಕ ಮತ್ತು ವಿದ್ಯಾರ್ಥಿಯರನ್ನು ಗೌರವಿಸಲಾಯಿತು.

ನಿಡ್ವಾಳ ಬ್ರಹ್ಮಕಲಶೋತ್ಸವ ಧಾರ್ಮಿಕ ಸಭೆ | ವಿದ್ಯಾಪ್ರಸನ್ನತೀರ್ಥ ಶ್ರೀ ಸಂದೇಶ

ದೇವಳದ ಅಭ್ಯುದಯದಿಂದ ಗ್ರಾಮಕ್ಕೆ ಸುಭೀಕ್ಷೆ



ಸುಬ್ರಹ್ಮಣ್ಯ: ದೇವಾಲಯಗಳಿಗೆ ಮಕ್ಕಳನ್ನು ಕರೆತಂದು ಅವರಿಗೆ ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ತಿಳಿಸುವ ಕೆಲಸ ಮಾಡಬೇಕು. ಶ್ರದ್ಧಾ ಭಕ್ತಿಯ ದೇವರ ಆರಾಧನೆಯಿಂದ ಸನ್ನಿಧಾನ ತುಂಬುವುದು. ಊರಿನ ಜನರ ಸುಭಿಕ್ಷೆಗಾಗಿ ಪೂರ್ವಜರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ದೇವಳಗಳ ಔನತ್ಯದಿಂದ ಗ್ರಾಮಗಳು ಅಭಿವೃದ್ಧಿಯಾಗುತ್ತದೆ ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ನಿಡ್ವಾಳ ಶ್ರೀ ಮಹಾವಿಷ್ಣು ದೇವಳದ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಅಂಗವಾಗಿ ಮಂಗಳವಾರ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕ ಡಾ. ಶ್ರೀಶಕುಮಾರ ಎಂ.ಕೆ. ಉಪನ್ಯಾಸ ನೀಡಿದರು. ಧಾರ್ಮಿಕ ಮುಖಂಡ ಕಿರಣ್‌ಚಂದ್ರ ಡಿ. ಅಧ್ಯಕ್ಷತೆ ವಹಿಸಿದ್ದರು. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ, ಧರ್ಮಸ್ಥಳ ಕ್ಷೇತ್ರದ ಭುಜಬಲಿ ಧರ್ಮಸ್ಥಳ, ಹಿರಿಯ ಸಹಕಾರಿ ಮಾಧವ ಗೌಡ ಜಾಕೆ, ಉದ್ಯಮಿ ಲಕ್ಷ್ಮೀನಾರಾಯಣ ಐವರ್ನಾಡು, ಸಮಾಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ಡಾ. ರವಿ ಕಕ್ಕೆಪದವು, ವಿಶ್ವ ಹಿಂದೂ ಪರಿಷತ್ ಸಾಮರಸ್ಯ ಪ್ರಮುಖ ಭಾಸ್ಕರ್ ಧರ್ಮಸ್ಥಳ, ವಕೀಲ ವಾಚಣ್ಣ ಗೌಡ ಕೇರ್ಪಡ, ಪ್ರಗತಿಪರ ಕೃಷಿಕ ನಾರಾಯಣ ಗೌಡ ಬೈತಡ್ಕ ಮುಖ್ಯ ಅತಿಥಿಗಳಾಗಿದ್ದರು. ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕಾರ್ಯದರ್ಶಿ ಗುರುಪ್ರಸಾದ್ ತೋಟ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪುನರ್, ಪ್ರಧಾನಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಸಾಯಿಕೃಪಾ, ಸಮಿತಿ ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ದೇವಳದ ಪ್ರಧಾನ ಅರ್ಚಕ ಅಕ್ಷಯ್ ಭಟ್ ಬರ್ಲಾಯಬೆಟ್ಟು ಇದ್ದರು. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಮತ್ತು ಪುನರ್ ನಿರ್ಮಾಣ ಸಮಿತಿ ಕೋಶಾಧಿಕಾರಿ ಚಂದ್ರಪ್ರಕಾಶ್ ಕಂಬಳ, ಪುನರ್ ನಿರ್ಮಾಣ ಸಮಿತಿ ಮತ್ತು ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ ಅವರನ್ನು ಸನ್ಮಾನಿಸಿ ಗೌರವಿಸಿದರು. ಜ್ಞಾನ ಗುರುರಾಜ್ ಪ್ರಾರ್ಥಿಸಿದರು. ಕಿಶೋರ್ ಬರಮೇಲು ಸ್ವಾಗತಿಸಿ, ಕುಸುಮಾಧರ ಕರಿಮಜಲು ವಂದಿಸಿದರು.

ದಾನಿಗಳಿಗೆ ಗೌರವ

ದೇವಳದ ಮಹಾದ್ವಾರ ನಿರ್ಮಾಣದ ದಾನಿ ಉದ್ಯಮಿ ಲಕ್ಷ್ಮೀನಾರಾಯಣ ಐವರ್ನಾಡು ದೇವಳದ ಹೊರಾಂ ಗಣಕ್ಕೆ ಹಾಸುಕಲ್ಲು ಸೇವಾರ್ಥಿ ಉದ್ಯಮಿ ಕಿರಣ್‌ಚಂದ್ರ ಡಿ. ಪುಷ್ಪಗಿರಿ, ದೇವಳದ ಶಿಲಾ ಶಿಲ್ಪಿ ಈಶ್ವರ್ ಚಂದ್ರ ಮುಂಡೂರು ಅವರನ್ನು ಮತ್ತು ವಸ್ತುರೂಪದ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಾಣಿಲ ಮಾತೃಭೂಮಿ ಯುವ ವೇದಿಕೆ: ಉಚಿತ ಪುಸ್ತಕ ವಿತರಣೆ, ಸನ್ಮಾನ



ವಿಟ್ಲ: ಮಾಣಿಲ ಮಾತೃಭೂಮಿ ಯುವ ವೇದಿಕೆ ವತಿಯಿಂದ 5ನೇ ವರ್ಷದ ಉಚಿತ ಪುಸ್ತಕ ವಿತರಣೆ ಮತ್ತು ಸನ್ಮಾನ ಸಮಾರಂಭ ಕಾರ್ಯಕ್ರಮ ನಡೆಯಿತು.

ಮಾಣಿಲ ಗ್ರಾಮದ ಸುಮಾರು 150 ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ, ಸಾಧಕರಿಗೆ ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ ಮಾಣಿಲ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯರಿಗೆ ಸನ್ಮಾನ ಕಾರ್ಯಕ್ರಮದ ಜೊತೆಗೆ ವಿಶೇಷವಾಗಿ ಸಾಧನೆಗೈದ ಪ್ರತಿಭೆಗಳಿಗೆ ಗೌರವಾರ್ಪಣೆ ನಡೆಯಿತು.

ಪಕಳಕುಂಜ ಮತ್ತು ತಾರಿದಳ ಅಂಗನವಾಡಿ ಕೇಂದ್ರದಲ್ಲಿ ಸುದೀರ್ಘ 30 ವರ್ಷ ಸೇವೆಯನ್ನು ಮಾಡಿದ ಅಧ್ಯಾಪಕಿ ರೇವತಿ ಕುಕ್ಕಾಜೆ ಅವರನ್ನು ಸನ್ಮಾನಿಸಲಾಯಿತು. ಸಾಧಕರಾದ ಸುದರ್ಶನ್ ತಾರಿದಳ, ಖದೀಜಾ ರಾಷ್ಮಿ ನಾಯರ್‌ಮೂಲೆ, ದೀಕ್ಷಾ ಟಿ. ತಚ್ಚಮೆ ಅವರನ್ನು ಗೌರವಿಸಲಾಯಿತು. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ ಮಾಣಿಲ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯರಾದ ಶ್ರೇಯಾ ಚೌಟ, ಹಿತಶ್ರೀ ಪಿ, ಆದ್ಯಶ್ರೀ ಅವರನ್ನು ಸನ್ಮಾನಿಸಲಾಯಿತು. ಮಾತೃಭೂಮಿ ಯುವ ವೇದಿಕೆ ಮಾಣಿಲ ಸಂಘದ ಅಧ್ಯಕ್ಷ ನವೀನ್ ಕುಮಾರ್ ಕಕ್ವೆ ಅಧ್ಯಕ್ಷತೆ ವಹಿಸಿದರು. ಪ್ರಮುಖರಾದ ಮುರುವ ನಡುಮನೆ ಮಹಾಬಲ ಭಟ್, ಅರುಣ್ ಕುಮಾರ್ ಪುತ್ತಿಲ, ರೇವತಿ ಪೆರ್ನೆ ಉಪಸ್ಥಿತರಿದ್ದರು. ಸಂಘದ ಕೋಶಾಧಿಕಾರಿ ಸುದೇಶ್ ಟಿ. ಸ್ವಾಗತಿಸಿ, ಸಂಘದ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕೊಂಕೋಡು ವಂದಿಸಿದರು. ಸಂಘದ ಸದಸ್ಯೆ ಅಶ್ವಿನಿ ಪೆರುವಾಯಿ ಕಾರ್ಯಕ್ರಮ ನಿರ್ವಹಿಸಿದರು.

ಕೊಳಚಿಕಂಬಳ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ



ಮುಲ್ಕಿ: ಕೊಳಚಿಕಂಬಳ ಶ್ರೀ ಬೊಬ್ಬರ್ಯ ದೈವಸ್ಥಾನದ ನೂತನ ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ಬೊಬ್ಬರ್ಯ ದೈವದ ಪುನರ್ ಪ್ರತಿಷ್ಠೆ ಹಾಗೂ ಕಲಶಾಭಿಷೇಕ ವಿಜೃಂಭಣೆಯಿಂದ ನಡೆಯಿತು .

ವಿದ್ವಾನ್ ಕೃಷ್ಣರಾಜ್ ಎನ್. ಭಟ್, ಬಪ್ಪನಾಡು ಪೌರೋಹಿತ್ಯದಲ್ಲಿ ಬುಧವಾರ ಬೆಳಿಗ್ಗೆ ಬೆಳಿಗ್ಗೆ 8ಕ್ಕೆ ಸ್ವಸ್ತಿ ಪುಣ್ಯಾಹ ವಾಚನ, ಗಣಪತಿ ಹವನ, ಪ್ರತಿಷ್ಠಾ ಹೋಮ, ಕಲಶಾಧಿವಾಸ ಹೋಮ. 10:27ಕ್ಕೆ ಮಿಥುನ ಲಗ್ನದಲ್ಲಿ ದೈವ ಪ್ರತಿಷ್ಠೆ ಕಲಶಾಭಿಷೇಕ, ಪ್ರಸನ್ನ ಪೂಜೆ ಹಾಗೂ ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.

ಗುರಿಕಾರ ಸುಜಿತ್ ಎಸ್.ಅಮೀನ್ ರೇಖಾ ಸುಜಿತ್,ಬಪ್ಪನಾಡು ಮೊಗವೀರ ಮಹಾ ಸಭಾದ ಅಧ್ಯಕ್ಷ ಪುಂಡರಿಕಾಕ್ಷ ಎಸ್. ಕೋಟ್ಯಾನ್, ಕಾರ್ಯದರ್ಶಿ ಸಂದೀಪ್ ಕೋಟ್ಯಾನ್, ಕೋಶಾಧಿಕಾರಿ ಸೀತಾರಾಮ ಬಂಗೇರ, ಮಹಿಳಾ ಸಭಾದ ಅಧ್ಯಕ್ಷೆ ಪ್ರೇಮಾ ಎಂ. ಕುಂದರ್, ದೈವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ನಾಗೇಶ್ ಬಂಗೇರ, ಗೌರವಾಧ್ಯಕ್ಷ ನವೀನ್ ಕೋಟ್ಯಾನ್, ವಿಕ್ರಂರಾಜ್, ಬಪ್ಪನಾಡು ಮೊಗವೀರ ಸಭಾ ಮುಂಬೈ ಸಮಿತಿ ಅಧ್ಯಕ್ಷ ನಾರಾಯಣ ತಿಂಗಳಾಯ , ಹಾಗೂ ಸಮಿತಿ ಸದಸ್ಯರಾದ ಶ್ರೀನಿವಾಸ ಸುವರ್ಣ,ಪ್ರಕಾಶ್ ಕೋಟ್ಯಾನ್, ಶರತ್ ಕೋಟ್ಯಾನ್, ಮುಖೇಶ್ ಬಂಗೇರ, ದಿಲೀಪ್ ಮುಲ್ಕಿ ಪ್ರೀತಿ ಹರೀಶ್ ಶ್ರೀಯಾನ್, ಪ್ರಮುಖರಾದ ಗುರಿಕಾರ ಡಾ.ಹರಿಶ್ಚಂದ್ರ ಪಿ.ಸಾಲ್ಯಾನ್, ಕೃಷ್ಣ ಕೋಟ್ಯಾನ್, ಮುಲ್ಕಿ ನಾಕು ಪಟ್ನ ಮೊಗವೀರ ಮಹಾಸಭಾದ ಪೂರ್ವಾಧ್ಯಕ್ಷ ಸುಜಿತ್ ಸಾಲ್ಯಾನ್, ರೋಹಿತ್ ಎಸ್. ಅಮೀನ್, ಹರೀಶ್‌ರಾಜ್ ಮಲ್ಪೆ ಶಿಲ್ಪಿ ಕೆ.ಗೋಪಾಲ್ ಕಾರ್ಕಳ, ಎಂಜಿನಿಯರ್ ಸುಹಾನ್ ಕರ್ಕೇರ ಇದ್ದರು. ಸಂಜೆ ಧ್ವಜಾರೋಹಣ, ರಾತ್ರಿ 10ಕ್ಕೆ ಬೊಬ್ಬರ್ಯ ದೈವದ ನೇಮ ನಡೆಯಲಿದೆ.

ನ್ಯಾಯವಾದಿಗಳ ಸೌಹಾರ್ದ ಸಹಕಾರಿ ಸಂಘದ ಶಾಖೆ ಉದ್ಘಾಟನೆ



ಬಂಟ್ವಾಳ: ಮಂಗಳೂರು ನ್ಯಾಯವಾದಿಗಳ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ನೂತನ ಶಾಖೆಯು ಬಂಟ್ವಾಳದ ನ್ಯಾಯಾಲಯದ ಆವರಣದಲ್ಲಿ ಉದ್ಘಾಟನೆಗೊಂಡಿತು.

ಮಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎಸ್.ಪಿ. ಚೆಂಗಪ್ಪ ರವರು ಬಂಟ್ವಾಳ ಶಾಖೆಯನ್ನು ಉದ್ಘಾಟಿಸಿ ಶುಭಹಾರೈಸಿದರು.

ಬಂಟ್ವಾಳ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಅನಿಲ್ ಪ್ರಕಾಶ್ ಎಂ ಪಿ., ಮಂಗಳೂರು ನ್ಯಾಯವಾದಿಗಳ ಸಹಕಾರಿ ಸಂಘದ ಅಧ್ಯಕ್ಷರಾದ ವಿನಯ್ ಕುಮಾರ್ ,ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ನಂದನ್ ಬಿ. ಲ.ಎನ್. ಅತಿಥಿಗಳಾಗಿ ಭಾಗವಹಿಸಿದ್ದರು.

ಬಂಟ್ವಾಳ ವಕೀಲರ ಸಂಘ (ರಿ) ಅಧ್ಯಕ್ಷ ರಿಚಾರ್ಡ್ ಕೋಸ್ತ ಎಂ., ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಎನ್ . ಭಂಡಾರಿ ವಂದಿಸಿದರು.ನ್ಯಾಯವಾದಿ ವೀರೇಂದ್ರ ಎಮ್ ಸಿದ್ದಕಟ್ಟೆ ಅವರು ಕಾರ್ಯಕ್ರಮ ನಿರೂಪಿಸಿದರು.ನಿಯಮಿತದ ನಿರ್ದೇಶಕರುಗಳು, ಹಿರಿಯ, ಕಿರಿಯ ವಕೀಲರು ಹಾಜರಿದ್ದರು.

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವದ ಸವಿನೆನಪಿಗಾಗಿ ವಿನೂತನ ಯೋಜನೆ | ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೂ ತರಬೇತಿ

ಅಂಬಿಕಾ ವಿದ್ಯಾಸಂಸ್ಥೆಯಲ್ಲಿ ಸರ್ಕಾರಿ ಶಾಲೆಗಳ 10 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ

ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವದ ಸವಿನೆನಪಿಗಾಗಿ ಪುತ್ತೂರು ತಾಲೂಕಿನ ಸರ್ಕಾರಿ ಶಾಲೆಗಳ ಆರ್ಥಿಕ ಸವಾಲುಗಳಿರುವ ಪ್ರತಿಭಾನ್ವಿತ ಆಯ್ದ 10 ವಿದ್ಯಾರ್ಥಿಗಳಿಗೆ ಉಚಿತ ಪದವಿ ಪೂರ್ವ ಶಿಕ್ಷಣವನ್ನು ಒದಗಿಸಿ ಕೊಡಲಾ ಗುತ್ತಿದೆ.

ಅದರನ್ವಯ ಬಪ್ಪಳಿಗೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯದಲ್ಲಿ ಇತ್ತೀಚೆಗೆ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸಲಾಗಿತ್ತು. ಈ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು ಆಯ್ಕೆಯಾದ 10 ಮಂದಿಗೆ ಉಚಿತ ಶಿಕ್ಷಣವನ್ನು ಘೋಷಿಸಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಾಲೇಜ್ ಶುಲ್ಕ ಮಾತ್ರವಲ್ಲದೆ ಸಿಇಟಿ, ನೀಟ್, ಜೆಇಇ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಚಿತ ತರಬೇತಿ ದೊರೆಯಲಿದೆ.

ಸವಣೂರಿನ ಪುನೀತ್ ಕೆ., ಮನೀಶ್, ಪುಂಚಪ್ಪಾಡಿಯ ಯತೀಶ್ ಪಿ., ಜಸ್ವಿತ್ ಎಂ.ಟಿ., ಚಿಕ್ಕಮುಡ್ನೂರಿನ ಶ್ರಾವಣ್ಯ ರೈ ಎನ್., ಪಟ್ಟೆಯ ತೀಕ್ಷಾ ಎಸ್.ಪಿ., ಇರ್ದೆಯ ಸ್ವಾತಿ ಡಿ., ಬೆಟ್ಟಂಪಾಡಿಯ ಧನ್ವಿತಾ, ಸೂತ್ರಬೆಟ್ಟುವಿನ ಭಾನುಪ್ರಿಯ ಎಂ., ಹಾಗೂ ಕಬಕದ ಶಿಲ್ಪ ವಿಧಾತ್ರಿ ನಂದೇರಾ ಆಯ್ಕೆಯಾದ ವಿದ್ಯಾರ್ಥಿಗಳು.

ಮೊದಲ ಸಂಸ್ಥೆ

ಉಚಿತ ಶಿಕ್ಷಣದ ಕಲ್ಪನೆ 2010ರಲ್ಲಿ ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯ ಆರಂಭಗೊಂಡಿತು. ಶಿಕ್ಷಣ ಕ್ಷೇತ್ರದಲ್ಲೇ ಅದೊಂದು ವಿನೂತನ ಹಾಗೂ ವಿದ್ಯಾರ್ಥಿಸ್ನೇಹಿ ಯೋಜನೆಯೆನಿಸಿತ್ತು. ತದನಂತರ ಹಲವು ಸಂಸ್ಥೆಗಳಲ್ಲಿ ಅಂತಹ ಯೋಜನೆ ಜಾರಿಗೊಂಡು ಇಂದು ಇಡಿಯ ವಿದ್ಯಾರ್ಥಿ ಸಮುದಾಯಕ್ಕೇ ಪ್ರಯೋಜನಕಾರಿಯಾಗಿ ಪರಿಣಮಿಸಿರುವುದರ ಹಿಂದೆ ಅಂಬಿಕಾದ ದೂರದೃಷ್ಟಿಯನ್ನು ಹಲವು ವಿದ್ಯಾರ್ಥಿ ಹೆತ್ತವರು ಸ್ಮರಿಸುತ್ತಿದ್ದಾರೆ. ಇದೀಗ ಸರ್ಕಾರಿ ಶಾಲಾ ಪ್ರತಿಭಾನ್ವಿತರಿಗೆ ಉಚಿತ ಶಿಕ್ಷಣ ಘೋಷಣೆಯ ಮೂಲಕ ಅಂಬಿಕಾ ಮತ್ತೊಂದು ಹೊಸತನದ ಹಾದಿಗೆ ಅಡಿಯಿಟ್ಟಿದೆ.



ಉಚಿತ ಶಿಕ್ಷಣ ಯೋಜನೆಗೆ ಆಯ್ಕೆಯಾದ ಹತ್ತು ಮಂದಿ ವಿದ್ಯಾರ್ಥಿಗಳು

ಉಚಿತ ಶಿಕ್ಷಣದ ಕಲ್ಪನೆ ಜಾರಿಗೆ ತಂದ ಮೊದಲ ಸಂಸ್ಥೆ

ಇಂದು ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣದ ಕಲ್ಪನೆ ಜಾರಿಯಲ್ಲಿದೆ. ಆದರೆ, ಪುತ್ತೂರಿನಲ್ಲಿ ಮೊದಲ ಬಾರಿಗೆ ಈ ಕಲ್ಪನೆಯನ್ನು ಸಾಕಾರಗೊಳಿಸಿದ ಕೀರ್ತಿ ಅಂಬಿಕಾ ಶಿಕ್ಷಣ ಸಂಸ್ಥೆಗೆ ಸಲ್ಲುತ್ತದೆ. 2010ರಲ್ಲಿ ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯ ಆರಂಭಗೊಂಡಾಗ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿತ್ತು.

ಆತ್ಮತೃಪ್ತಿಯಿದೆ



ಅಂಬಿಕಾ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ರೂ.1 ಕೋಟಿಗೂ ಮೀರಿ ವಿದ್ಯಾರ್ಥಿ ವೇತನ ಒದಗಿಸಿ ಕೊಡಲಾಗುತ್ತಿದೆ. ಇದೀಗ ರಜತ ಮಹೋತ್ಸವದ ಸವಿನೆನಪಿಗಾಗಿ ಪ್ರತಿಭಾನ್ವಿತ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಒದಗಿಸಿ ಕೊಡಲಾಗುತ್ತಿದೆ. ಅರ್ಹರಿಗೆ ಸಹಕಾರಿಯೆನಿಸುವ ಯೋಜನೆ ಜಾರಿಗೆ ತರುವುದರಲ್ಲಿ ಆತ್ಮತೃಪ್ತಿಯಿದೆ.

• ಸುಬ್ರಹ್ಮಣ್ಯ ನಟ್ಟೋಜ, ಅಧ್ಯಕ್ಷರು, ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳು

ಸುತ್ತ ಮುತ್ತ

ಸರ್ಕಾರ ಉಳಿಯುದು ಎಂದು ಎಡರಂಗಕ್ಕೆ ಖಚಿತವಾಗಿದೆ: ಅಶ್ವಿನಿ

ಕಾಸರಗೋಡು: ಆಡಳಿತ ಉಳಿಯುವುದಿಲ್ಲ ಎಂದು ಶಿಸಾರಾಯಿ ವಿಜಯನ್ ಮತ್ತು ಎಡರಂಗಕ್ಕೆ ಖಚಿತವಾಗಿದೆ. ಲೋಡ್ ಶೆಡ್ಡಿಂಗ್, ಹಾಲಿನ ದರ ಏರಿಕೆ ಸೇರಿದಂತೆ ಜನವಿರೋಧಿ ನಿರ್ಧಾರಗಳು ಅದರ ಸೂಚನೆಯಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಆಘೋಷಿತವಾಗಿ ನಡೆಸುತ್ತಿದ್ದ ಪವರ್‌ಕಟ್ಟನ್ನು ಚುನಾವಣೆಯಲ್ಲಿ ಸೋಲು ಖಚಿತವಾದಾಗ ಘೋಷಿತವಾಗಿ ನಡೆಸುತ್ತಿದ್ದಾರೆ ಎಂದು ಆಪ್ಪಿಸಿದ್ದಾರೆ. ಹಾಲಿನ ದರವನ್ನು ಪ್ರತೀ ಲೀ.ಗೆ 4 ರೂ. ಹೆಚ್ಚಿಸುವ ನಿರ್ಧಾರ ಜನದ್ರೋಹವಾಗಿದೆ. ಕ್ಷೀರ ಕೃಷಿಕರಿಗೆ ಸಬ್ಸಿಡಿ ಹೆಚ್ಚಿಸಿ ಮತ್ತು ತೆಂಗಿನ ಕಡತಗೋಳಿಗಳ ಬೆಲೆ ಏರಿಕೆಯನ್ನು ತಪ್ಪಿಸಲು ಸರ್ಕಾರ ಯಾವುದೇ ಪ್ರಯತ್ನ ಮಾಡಲಿಲ್ಲ. ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಶೂನ್ಯ ಪ್ರತಿಶತವಾದಾಗ ಅದಕ್ಕೆ ಅನುಗುಣವಾಗಿ ಹಾಲಿನ ದರ ಕಡಿಮೆ ಮಾಡಲು ಸಿದ್ಧವಾಗದ ಏಕೈಕ ರಾಜ್ಯ ಕೇರಳ ಎಂದು ಅಶ್ವಿನಿ ಅವರು ಬೆಟ್ಟು ಮಾಡಿದರು.



ಬೆಳಿಂಜ ಗುತ್ತು ಪುನರ್ ಪ್ರತಿಷ್ಠೆ, ತರವಾಡು ಮನೆಯ ಗೃಹ ಪ್ರವೇಶ

ಕಾಸರಗೋಡು: ಬೆಳಿಂಜ ಗುತ್ತು ಪುನರ್ ಪ್ರತಿಷ್ಠೆ ಮತ್ತು ನೂತನ ತರವಾಡು ಮನೆಯ ಗೃಹಪ್ರವೇಶ ಬ್ರಹ್ಮಕಲಶ ಹಾಗೂ ಧರ್ಮ ನೇಮೋತ್ಸವದ ಅಂಗವಾಗಿ ಧಾರ್ಮಿಕ ಸಭೆ ನಡೆಯಿತು. ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಒಡಿಯೂರು ಅವರು ದೀಪ ಬೆಳಗಿಸಿ ಉದ್ಘಾಟಿಸಿ ಆಶೀರ್ವಚನ ನೀಡಿದರು. ಬಾಲಕೃಷ್ಣ ಆಳ್ವ ಆರಂಬೂರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಧಾರ್ಮಿಕ ಭಾಷಣ ಮಾಡಿದರು. ಬಂಟರ ಸಂಘ ಕಾಸರಗೋಡು ಜಿಲ್ಲಾ ಅಧ್ಯಕ್ಷ ಸುಬ್ಬಯ್ಯ ರೈ, ಕುಂಬ್ಡಾಜೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ರವೀಂದ್ರ ರೈ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ರಾಮಣ್ಣ ಶೆಟ್ಟಿ ಉದ್ಯಮಿ ಹರಿಪ್ರಸಾದ ರೈ, ಲೀಲಾವತಿ. ಪುತ್ರಕಳ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ತರವಾಡಿನಲ್ಲಿ ಸೇವೆಗೈದಂತಹ ಹಲವು ಮಹನೀಯರನ್ನು ಗೌರವಿಸಲಾಯಿತು. ರವೀಂದ್ರನಾಥ ಶೆಟ್ಟಿ ಸ್ವಾಗತಿಸಿ, ದಯಾನಂದ ರೈ ಕಳುವಾಜೆ ವಂದಿಸಿದರು. ರಾತ್ರಿ ಕುಪ್ಪೆ ಪಂಜುರ್ಲಿ ಹಾಗೂ ಕಲ್ಲುರ್ಟಿ ದೈವದ ಕೋಲ, ಮುಂಜಾನೆ ಕೊರತಿ ದೈವ, ಬಿರ್ನಾಳ ದೈವದ ನೇಮ ನಡೆಯಿತು.

ಮೇ 4: ನೀರ್ಚಾಲು ಶ್ರೀ ಪೂಮಾಣಿ ಕಿನ್ನಿಮಾಣಿ ದೈವಗಳ ನೇಮ

ಕಾಸರಗೋಡು: ನೀರ್ಚಾಲು ಶ್ರೀ ಪೂಮಾಣಿ ಕಿನ್ನಿಮಾಣಿ ದೈವಗಳ ಕಾಲಾವಧಿ ನೇಮೋತ್ಸವವು ಮೇ 4ರಿಂದ 6ರ ವರೆಗೆ ಜರಗಲಿದೆ. ಮೇ 4ರಂದು ರಾತ್ರಿ 7.30ಕ್ಕೆ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಿಂದ ಪಿಲಿಭೂತದ ಭಂಡಾರ ಹೊರಡುವುದು, 8ಕ್ಕೆ ಪೆರಡಾಲಗುತ್ತಿನಿಂದ ಕರುವಾಳು ಸಮೇತ ಪೆಲತ್ತಡ್ಕ ದೈವದ ಭಂಡಾರ ಹೊರಟು ಸ್ವಾನಕ್ಕೆ ಆಗಮನ, 9 ಗಂಟೆಗೆ ನೀರ ತಂಬಿಲ, 9.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ. ಮೇ 5ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಕಿನ್ನಿಮಾಣಿ ದೈವದ ನೇಮ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ, ಸಂಜೆ 3.30ಕ್ಕೆ ಶ್ರೀ ಪೂಮಾಣಿ ದೈವದ ನೇಮ, ರಾತ್ರಿ 7.30ಕ್ಕೆ ಬೀರಡಂಬಿಲ ನಡೆಯಲಿದೆ. ಮೇ 6ರಂದು ಬೆಳಗ್ಗೆ 10.30ಕ್ಕೆ ಪಿಲಿಭೂತ ದೈವದನೇಮ, ಮಧ್ಯಾಹ್ನ 1ರಿಂದ ಅನ್ನ ಸಂತರ್ಪಣೆ, 2 ಗಂಟೆಗೆ ಪೆಲತ್ತಡ್ಕ ದೈವಗಳ ನೇಮ, ಸಂಜೆ 4ಕ್ಕೆ ಅವಭೃತ ನಡೆಯಲಿದೆ.

ಇಂದು ಬಾಕ್ಸೈಟ್ ಗಣಿಗಾರಿಕೆ ವಿರುದ್ಧ ಮಾನವ ಸರಪಳಿ ಚಳವಳಿ

ಕಾಸರಗೋಡು: ಕಾರಡ್ಕ ಗ್ರಾಮ ಪಂಚಾಯತಿನ ವಿವಿಧ ಪ್ರದೇಶಗಳಲ್ಲಿ ನಡೆಸಲು ತೀರ್ಮಾನಿಸಿರುವ ಬಾಕ್ಸ್ ಗಣಿಗಾರಿಕೆಯನ್ನು ಪ್ರತಿಭಟಿಸಿ ಕಾರಡ್ಕದಲ್ಲಿ ಮೇ 1ರಂದು ಮಾನವ ಸರಪಳಿ ಚಳವಳಿ ನಡೆಸುವುದಾಗಿ ಹೋರಾಟ ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ. ಕಾಸರಗೋಡು ಪ್ರೆಸ್ ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ಹೋರಾಟ ಸಮಿತಿ ಪದಾಧಿಕಾರಿಗಳಾದ ಎ.ವಿಜಯಕುಮಾರ್, ಜಯನ್ ಕಾಡಗಂ, ಕೆ.ಪಿ.ಸುಜಲ, ಕೆ.ಶಂಕರನ್, ಸಿ.ಕೆ.ವಿಜಯಕುಮಾರ್ ಮತ್ತು ರಂಜಿತಾ ಕಾಡಗಂ ತಿಳಿಸಿದ್ದಾರೆ. ಅದರಂತೆ ಮೇ 1 ರಂದು ಸಂಜೆ 6ಕ್ಕೆ ಕಾರಡ್ಕ ಕದಿಮೂರನೇ ಮೈಲಿನ ಅಂತಾರಾಜ್ಯ ರಸ್ತೆ ಬಳಿಯ ಕಾಟದಾನ ಫ್ಲಾಟ್ ಪರಿಸರದಲ್ಲಿ ಈ ಚಳವಳಿ ನಡೆಯಲಿದೆ. ಬಾಕ್ಸೈಟ್ ಗಣಿಗಾರಿಕೆ ನಡೆದಲ್ಲಿ ಅದು ಕಾರಡ್ಕ ಗ್ರಾಮ ಪಂಚಾಯತ್ ಗೊಳಪಟ್ಟ ಕರ್ಮಂತೋಡಿ, ಕಲ್ಲಂಕಲ್, ಕೊಟ್ಟಂಗುಳಿ, ಕುಂತತ್ತ, ನಾರಂಗ, ಪಾಣತ್ತೂರು, ವಣ್ಣಾಕ್ಕೂವು, ಶಾಂತಿನಗರ ಮೊದಲಾದ ಪ್ರದೇಶಗಳ ಸಮಗ್ರ ಮನೆಗಳು ಮತ್ತು ಅಲ್ಲಿ ವಾಸಿಸುತ್ತಿರುವ ಕುಟುಂಬಗಳ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರಲಿದೆ. ಇದು ಭಾರೀ ಜನಸಾಂದ್ರತೆ ಹಾಗೂ ಕೃಷಿಭೂಮಿಗಳನ್ನು ಒಳಗೊಂಡಿರುವ ಪ್ರದೇಶವೂ ಆಗಿದೆ. ಗಣಿಗಾರಿಕೆ ಜನರ ಮೇಲೆ ಮಾತ್ರವಲ್ಲದೆ ನೈಸರ್ಗಿಕತೆಯ ಮೇಲೂ ಪರಿಣಾಮ ಬೀರಲಿದೆ. ಆದ್ದರಿಂದ ಈ ಗಣಿಗಾರಿಕೆ ಯೋಜನೆಯನ್ನು ಕೈಬಿಡಬೇಕೆಂದು ಆಗ್ರಹಿಸಿ ಸಿಪಿಎಂ ಕಾರಡ್ಕ ಲೋಕಲ್ ಸಮಿತಿ ನೇತೃತ್ವದಲ್ಲಿ ಇತ್ತೀಚೆಗೆ ಕಾಸರಗೋಡು ಕಲೆಕ್ಟರೇಟ್‌ಗೆ ಮಾರ್ಚ್ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಅದಕ್ಕೆ ಪೂರಕವಾದ ಕ್ರಮ ಈ ತನಕ ಉಂಟಾಗಿಲ್ಲ. ಆದ್ದರಿಂದ ಮಾನವ ಸರಪಳಿ ಚಳವಳಿ ನಡೆಸುವ ತೀರ್ಮಾನಕ್ಕೆ ಬರಲಾಗಿದೆಯೆಂದು ಹೋರಾಟ ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ.

ಮಂಗಳೂರು ವರೆಗೆ ರೈಲುಗಳನ್ನು ವಿಸ್ತರಿಸಲು ಆಗ್ರಹ | ಪ್ರಯಾಣ ಸಮಸ್ಯೆಗೆ ಪರಿಹಾರ ಸಾಧ್ಯತೆ

ಕಾಸರಗೋಡು ಸಹಿತ ಮಲಬಾರ್‌ಗೆ ಹೆಚ್ಚುವರಿ ರೈಲಿನ ನಿರೀಕ್ಷೆ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಮಲಬಾರ್ ಪ್ರದೇಶಕ್ಕೆ ಹೆಚ್ಚುವರಿ ರೈಲುಗಾಡಿಗಳನ್ನು ಓಡಿಸಲು ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂಬ ಅಂಶ ಸಂತಸ ಮೂಡಿಸಿದೆ. ಇದೇ ವೇಳೆ ಮಲಬಾರ್ ಪ್ರದೇಶಕ್ಕೆ ಇನ್ನಷ್ಟು ರೈಲುಗಾಡಿಗಳನ್ನು ಸಂಚರಿಸುವಂತೆ ಮಾಡುವ ವಿಚಾರದಲ್ಲಿ ವಿಶೇಷ ಆದ್ಯತೆ ನೀಡಲಾಗುವುದು ಎಂದು ದಕ್ಷಿಣ ರೈಲ್ವೆ ವಿಭಾಗವು ಪುನರುಚ್ಚರಿಸಿದೆ.
ಈ ಮೂಲಕ ಕಾಸರಗೋಡು ಸಹಿತ ಉತ್ತರ ಕೇರಳದ ರೈಲು ಪ್ರಯಾಣ ಸಮಸ್ಯೆಗೆ ಪರಿಹಾರ ಲಭಿಸುವ ನಿರೀಕ್ಷೆಗಳಿಗೆ ಮತ್ತಷ್ಟು ಬಲ ಬಂದಿದೆ. ಕೆಲವು ದಿನಗಳ ಹಿಂದೆ ಪಾಲಕ್ಕಾಡು ರೈಲ್ವೆ ವಿಭಾಗೀಯ ವ್ಯವಸ್ಥಾಪಕ ಮಧುಕರ ರೋಟ್ ಅವರು ಜಿಲ್ಲೆಯ ವಿವಿಧ ರೈಲು ನಿಲ್ದಾಣಗಳಿಗೆ ಭೇಟಿ ನೀಡಿದ್ದರು. ಮಂಜೇಶ್ವರ, ಉಪ್ಪಳ, ಕಾಸರಗೋಡು, ಕಾಞಂಗಾಡು ಸೇರಿದಂತೆ ವಿವಿಧ ರೈಲು ನಿಲ್ದಾಣಗಳನ್ನು ಸಂದರ್ಶಿಸಿದ ಅವರು ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಜಿಲ್ಲೆಯ ಎಲ್ಲಾ ರೈಲು



ನಿಲ್ದಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದಾಗಿ ತಿಳಿಸಿದ್ದರು. ಮಾತ್ರವಲ್ಲದೆ ಪಾಲಕ್ಕಾಡು - ಕಣ್ಣೂರು ಎಕ್ಸ್‌ಪ್ರೆಸ್ (16611) ರೈಲುಗಾಡಿಯನ್ನು ಕಾಸರಗೋಡು ವರೆಗೆ ಅಥವಾ ಮಂಗಳೂರು ತನಕ ವಿಸ್ತರಿಸುವ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದಾಗಿ ಹೇಳಿದ್ದರು. ದಕ್ಷಿಣ ರೈಲ್ವೆ ವಿಭಾಗವು ಕಾಸರಗೋಡು ಸೇರಿದಂತೆ ಕೇರಳದಲ್ಲಿ ಹೆಚ್ಚುವರಿ ರೈಲು ಸೇವೆಗಳನ್ನು ಆರಂಭಿಸುವುದಾಗಿ ಘೋಷಿಸಿತು. ಈ ಭರವಸೆಗಳು

ಕುಂಬಳೆಗೆ ಭೇಟಿ ನೀಡದ ಅಧಿಕಾರಿಗಳು

ರೈಲುಗಾಡಿಗಳ ಅಭಾವ ವಿಷಯದಲ್ಲಿ ಹಲವಾರು ಬಾರಿ ಕೇಂದ್ರ ರೈಲ್ವೆ ಸಚಿವರು ಹಾಗೂ ಸಂಬಂಧಪಟ್ಟವರಿಗೆ ಮನವಿಗಳನ್ನು ಸಲ್ಲಿಸಲಾಗಿದೆ. ಈ ನಡುವೆ ರೈಲ್ವೆ ವಿಭಾಗೀಯ ವ್ಯವಸ್ಥಾಪಕರ ಕಾಸರಗೋಡು ಜಿಲ್ಲಾ ಭೇಟಿಯ ಸಂದರ್ಭ ಅಭಿವೃದ್ಧಿಗಾಗಿ ಕಾಯುತ್ತಿರುವ ಕುಂಬಳೆ ರೈಲ್ವೆ ನಿಲ್ದಾಣವನ್ನು ಸಂದರ್ಶಿಸದೆ ತೆರಳಿರುವುದು ಪ್ರಯಾಣಿಕರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು, ನಾಗರಿಕರು ಅಲ್ಲದೆ ಇನ್ನಿತರ ಸಂಘ ಸಂಸ್ಥೆಗಳ ಪ್ರಮುಖರ ಅಸಮಾಧಾನಕ್ಕೆ ಕಾರಣವಾಗಿದೆ.

ಕಾರ್ಯರೂಪಕ್ಕೆ ಬಂದರೆ ಉತ್ತರ ಕೇರಳದ ರೈಲು ಪ್ರಯಾಣ ಸಮಸ್ಯೆಗೆ ಪರಿಹಾರ ಲಭಿಸಲಿದೆ ಎಂಬ ನಿರೀಕ್ಷೆ ಪ್ರಯಾಣಿಕರದ್ದಾಗಿದೆ.

ಕುಂಬಳೆ ರೈಲು ನಿಲ್ದಾಣದ ಅಭಿವೃದ್ಧಿಗೆ ಆಗ್ರಹ

ಜಿಲ್ಲೆಯ ಪ್ರಮುಖ ನಿಲ್ದಾಣಗಳಲ್ಲಿ ಒಂದಾದ ಕುಂಬಳೆ ರೈಲು ನಿಲ್ದಾಣವನ್ನು ಆಧುನಿಕ ಮಾದರಿಯಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಬೇಕೆಂಬ ಆಗ್ರಹ ವ್ಯಾಪಕಗೊಂಡಿದೆ. ಮಾತ್ರವಲ್ಲದೆ ಸಂಸುಮಾರು 37 ಎಕ್ರೆಯಷ್ಟು ಭೂಮಿ ಹೊಂದಿರುವ ಕುಂಬಳೆ ನಿಲ್ದಾಣದಲ್ಲಿ ಇನ್ನಷ್ಟು ರೈಲ್ವೆ ಟ್ರ್ಯಾಕ್‌ಗಳನ್ನು ನಿರ್ಮಿಸುವ ಬಗ್ಗೆಯೂ ಸಾರ್ವಜನಿಕರು ಬೇಡಿಕೆ ಮುಂದಿರಿಸಿದ್ದಾರೆ. ಈ ವಿಷಯದಲ್ಲೂ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳದಿರುವುದು ವಿಪರ್ಯಾಸವಾಗಿದೆ.

ಕಾಸರಗೋಡು ಜಿಲ್ಲೆಗೆ ಹೆಚ್ಚುವರಿ ರೈಲುಗಳನ್ನು ಮಂಜೂರುಗೊಳಿಸುವುದು, ಕೋಯಿಕ್ಕೋಡು, ಕಣ್ಣೂರು ವರೆಗಿನ ಟ್ರೈನ್‌ಗಳನ್ನು ಕಾಸರಗೋಡು ಅಥವಾ ಮಂಗಳೂರು ತನಕ ವಿಸ್ತರಿಸುವುದು ಉತ್ತರ ಕೇರಳದ ರೈಲು ಪ್ರಯಾಣಿಕರ ದೀರ್ಘಕಾಲದ ಬೇಡಿಕೆಯಾಗಿದೆ. ಇದರಲ್ಲಿ ಒಂದು ರೈಲಿನ ವಿಚಾರದಲ್ಲಿ ಪಾಲಕ್ಕಾಡು ರೈಲ್ವೆ ವಿಭಾಗೀಯ ವ್ಯವಸ್ಥಾಪಕರು ಈಗಾಗಲೇ ಭರವಸೆ ನೀಡಿರುವುದು ಪ್ರಯಾಣಿಕರಿಗೆ ನೆಮ್ಮದಿ ಲಭಿಸಿದಂತಾಗಿದೆ. ಅಲ್ಲದೆ ಅವರು ಈ ವಿಷಯವನ್ನು ಪ್ಯಾಸೆಂಜರ್ಸ್ ಅಸೋಸಿಯೇಶನ್ ಪದಾಧಿಕಾರಿಗಳಿಗೆ ತಿಳಿಸಿದ್ದಾರೆ. ಇದು ಶುಭಸೂಚನೆ ಎಂದು ಜಿಲ್ಲೆಯ ಪ್ರಯಾಣಿಕರು ಸಂತಸ ವ್ಯಕ್ತಪಡಿಸಿದ್ದಾರೆ. ಕಾಸರಗೋಡು ಸಹಿತ ಕೇರಳದಲ್ಲಿ ನೂತನವಾಗಿ ಆರಂಭಿಸುವ ರೈಲುಗಳಲ್ಲಿ ಉತ್ತಮ ಆದಾಯ ಮತ್ತು ಹೆಚ್ಚು ಪ್ರಯಾಣಿಕರು ಇರುವ ಹಿನ್ನೆಲೆಯಲ್ಲಿ ಹೆಚ್ಚುವರಿ ರೈಲುಗಳನ್ನು ದಕ್ಷಿಣ ರೈಲ್ವೆ ಪರಿಗಣಿಸುತ್ತಿದೆ. ಮಲಬಾರ್ ವಲಯದಲ್ಲಿ ಸಂಜೆ ಹೊತ್ತಿನಲ್ಲಿ ರೈಲುಗಾಡಿಗಳು ಇಲ್ಲದಿರುವುದರಿಂದ ಅನುಭವಿಸುತ್ತಿರುವ ಸಮಸ್ಯೆಯನ್ನು ಪ್ರಯಾಣಿಕರು ರೈಲ್ವೆ ವಿಭಾಗೀಯ ವ್ಯವಸ್ಥಾಪಕರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ವಿದ್ಯಾಭ್ಯಾಸ ಹಕ್ಕು ಖಚಿತಪಡಿಸುವ ಉದ್ದೇಶ: ದಿವ್ಯಾಂಗ ಮಕ್ಕಳ ಸಮೀಕ್ಷೆ



ಮಂಜೇಶ್ವರ: ದಿವ್ಯಾಂಗ ಮಕ್ಕಳ ಶಿಕ್ಷಣವನ್ನು ಖಚಿತಪಡಿಸುವ ಉದ್ದೇಶದಿಂದ ಸಮಗ್ರ ಶಿಕ್ಷಣ ಕಾಸರಗೋಡು ಮಂಜೇಶ್ವರ ಬಿಆರ್‌ಸಿ ಅವರ ನೇತೃತ್ವದಲ್ಲಿ ಮಂಜೇಶ್ವರ ಉಪಜಿಲ್ಲೆಯ ಅಂಗನವಾಡಿಗಳನ್ನು ಕೇಂದ್ರವಾಗಿಸಿಕೊಂಡು ಸಮೀಕ್ಷೆ ಆರಂಭಿಸಲಾಗಿದೆ.
ದಿವ್ಯಾಂಗ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಖಚಿತಪಡಿಸುವುದರ ಜೊತೆಗೆ ಅವರನ್ನು ಸಮಾಜದ ಮುಂಚೂಣಿಗೆ ತರಲು ಸಿದ್ಧಗೊಳಿಸುವುದೇ ಈ ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ.
ಮಂಜೇಶ್ವರ ಬಿಆರ್‌ಸಿ ಅಧೀನದಲ್ಲಿ 178 ಅಂಗನವಾಡಿಗಳನ್ನು ಕೇಂದ್ರವಾಗಿಸಿಕೊಂಡು ನಡೆಯುತ್ತಿರುವ ಈ ಸಮೀಕ್ಷೆಯ ಉದ್ಘಾಟನೆ ಉಪ್ಪಳದ ಟೌನ್ ಅಂಗನವಾಡಿಯಲ್ಲಿ ನಡೆಯಿತು.
ಮಂಜೇಶ್ವರ ಎಇಒ ಜಾರ್ಜ್ ಕ್ರಾಸ್ಟ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಮಂಜೇಶ್ವರ ಬಿಆರ್‌ಸಿ ಬಿಪಿಸಿ ರಾಜಗೋಪಾಲನ್ ಅಧ್ಯಕ್ಷತೆ ವಹಿಸಿದ್ದರು. ಮುಳಿಂಜ ಜಿಎಲ್‌ಪಿ ಶಾಲೆಯ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ, ಬಿಆರ್‌ಸಿ ಟ್ರೈನರ್ ಸುಮಯ್ಯ, ವಿಶೇಷ ಶಿಕ್ಷಕರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿಆರ್‌ಸಿಯ ವಿಶೇಷ ಹಾಗೂ ತಜ್ಞ ಶಿಕ್ಷಕರಾದ ಬಿಂದ್ಯ ಎನ್., ರೀಮ ಜೆಸಿಂತ ಮೊಂತೆರೊ, ಅನಿತಾ ವೇಗಸ್, ಅನುಶ್ರೀ ಕೆ.ವಿ., ಭವ್ಯಾ ಬಿ.ಎಸ್., ಸರಿತಾ ಹಾಗೂ ಸಿಆರ್‌ಸಿ ಸಂಯೋಜಕರು ಸೇರಿ ಈ ಸಮೀಕ್ಷೆಯನ್ನು ಪೂರ್ಣಗೊಳಿಸಲಿದ್ದಾರೆ.

ಬಿಸಿಲಿನ ತಾಪಮಾನ ಏರಿಕೆ: ತಂಪು ಪಾನೀಯಕ್ಕೆ ಬೇಡಿಕೆ ಹೆಚ್ಚಳ


ಕಾಸರಗೋಡು: ಜಿಲ್ಲೆಯಲ್ಲಿ ಬಿಸಿಲಿನ ತೀವ್ರತೆ ಹೆಚ್ಚುತ್ತಿರುವುದರಿಂದ ಜ್ಯೂಸ್ ಸಹಿತ ತಂಪು ಪಾನೀಯಗಳಿಗೆ ಬೇಡಿಕೆ ವಿಪರೀತಗೊಂಡಿದೆ. ಜ್ಯೂಸ್ ಅಂಗಡಿ ಮಾತ್ರವಲ್ಲದೆ ರಸ್ತೆ ಬದಿಯ ಕಬ್ಬು ಜ್ಯೂಸ್, ಎಳನೀರು, ಕಲ್ಲಂಗಡಿ ಜ್ಯೂಸ್ ಇತ್ಯಾದಿ ಮಾರಾಟ ಭರ್ಜರಿಯಾಗಿ ನಡೆಯುತ್ತಿದೆ.
ಬೇಕರಿಗಳಲ್ಲಿ, ಜ್ಯೂಸ್ ಪಾರ್ಲರ್‌ಗಳಲ್ಲಿ, ಕೋಲ್ಡ್ ಹೌಸ್‌ಗಳಲ್ಲಿ ಫ್ರೆಶ್ ಲೈಮ್, ಲೆಮನ್ ಸೋಡಾ, ಫ್ರೆಶ್ ಜ್ಯೂಸ್‌ಗಳು, ಮಿಲ್ಕ್ ಶೇಕ್‌ಗಳಿಗೆ ಬೇಡಿಕೆ ಏರಿಕೆಯಾಗಿದೆ. ಫ್ರೆಶ್ ಜ್ಯೂಸ್‌ಗಳಿಗೆ 40ರಿಂದ 60ರೂ. ತನಕ ಸರಾಸರಿ ಬೆಲೆಯಿದೆ.
ಪ್ರವಾಸಿಗರು ಮತ್ತು ವಾಹನ ಪ್ರಯಾಣಿಕರನ್ನು ಗಮನದಲ್ಲಿರಿಸಿಕೊಂಡು ರಸ್ತೆ ಬದಿಯಲ್ಲಿ ಕಬ್ಬು ಜ್ಯೂಸ್, ಕಲ್ಲಂಗಡಿ ವ್ಯಾಪಾರ ನಡೆಯುತ್ತಿದೆ. ಲಿಂಬೆ ಹಣ್ಣಿನ ಬೆಲೆ ಹೆಚ್ಚಿದರೂ ಲಿಂಬೆ ಜ್ಯೂಸ್‌ಗೆ ಬೇಡಿಕೆ ಕಡಿಮೆಯಾಗಿಲ್ಲ. ಕಾಸರಗೋಡು ನಗರ ಹಾಗೂ ಗ್ರಾಮೀಣ ಭಾಗಗಳಲ್ಲೂ ವ್ಯಾಪಕ ಪ್ರಮಾಣದಲ್ಲಿ ಪಾನೀಯ ಮಾರಾಟ ಮುಂದುವರಿದಿದೆ.
ಇನ್ನೊಂದೆಡೆ ಕಾಳುಮೆಣಸು, ಶುಂಠಿ, ಕೊತ್ತಂಬರಿ ಸೊಪ್ಪು, ಉಪ್ಪು ಸೇರಿಸಿದ ಮಜ್ಜಿಗೆ ಕೂಡಾ ಅಲ್ಲಲ್ಲಿ ಧಾರಾಳವಾಗಿ ಮಾರಾಟಕ್ಕಿದೆ. ಪುನರ್ಪುಳಿ ಶರ್ಬತ್, ಫ್ಯಾಶನ್ ಫ್ರೂಟ್ ಶರ್ಬತ್‌ಗಳ ಮಾರಾಟವೂ ಜೋರಾಗಿದೆ. ಇದಲ್ಲದೆ ಮಾವು, ಪಪ್ಪಾಯ, ಅನನಾಸು, ಬಾಳೆಹಣ್ಣು, ಕಲ್ಲಂಗಡಿಗಳನ್ನು ತುಂಡರಿಸಿ ಮಾರಾಟ ಮಾಡಲಾಗುತ್ತದೆ. ಇದಕ್ಕೆ ಪ್ಲೇಟ್‌ಗೆ 30ರೂ. ದರ ವಿಧಿಸಲಾಗುತ್ತದೆ. ಕಾಸರಗೋಡು ಜಿಲ್ಲೆಯಲ್ಲಿ ಉಷ್ಣಾಂಶ ಹೆಚ್ಚಿರುವುದರಿಂದ ಜನರಿಗೆ ಆಹಾರ ಸೇವನೆಯಲ್ಲಿ ಆಸಕ್ತಿ ಕಡಿಮೆಯಾಗಿ ಪಾನೀಯ, ಹಣ್ಣುಗಳನ್ನು ಹೆಚ್ಚಾಗಿ ಸೇವಿಸುತ್ತಿರುವುದು ಕಂಡುಬರುತ್ತಿದೆ.

ಇಂದು ಎಡನೀರು ಮಠದಲ್ಲಿ ಮಹಾ ಶ್ರೀಚಕ್ರ ನವಾವರಣ ಪೂಜೆ

ಕಾಸರಗೋಡು: ಶ್ರೀ ಎಡನೀರು ಮಠದಲ್ಲಿ ಮೇ 1ರಂದು ಮಧ್ಯಾಹ್ನ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಶೀರ್ವಾದದೊಂದಿಗೆ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ಮುಲ್ಲಪ್ಪಳ್ಳಿ ಕೃಷ್ಣನ್ ನಂಬೂದಿರಿ ನೇತೃತ್ವದಲ್ಲಿ ಮಹಾ ಶ್ರೀಚಕ್ರ ನವಾವರಣ ಪೂಜೆ ಜರಗಲಿದೆ. ಮಧ್ಯಾಹ್ನ 2ರಿಂದ ನವಾವರಣ ಕೃತಿ ಆಲಾಪನೆಯು ಎನ್.ಜೆ.ನಂದಿನಿ ಮತ್ತು ಬಳಗದವರಿಂದ ನಡೆಯಲಿದೆ. ವಯಲಿನ್‌ನಲ್ಲಿ ವಿದ್ವಾನ್ ವಿಠಲ ರಾಮಮೂರ್ತಿ ಚೆನ್ನೈ, ಮೃದಂಗದಲ್ಲಿ ಆನೂರು ಅನಂತಕೃಷ್ಣ ಶರ್ಮಾ ಬೆಂಗಳೂರು, ಮೋರ್ಸಿಂಗ್‌ನಲ್ಲಿ ಪಯ್ಯನ್ನೂರು ಗೋವಿಂದ ಪ್ರಸಾದ್ ಜೊತೆಗೂಡಲಿದ್ದಾರೆ. ಸಂಜೆ 6ರಿಂದ ಅಷ್ಟಾವಧಾನ, ರಾತ್ರಿ 7.30ರಿಂದ ಮಹಾಪೂಜೆ ನೆರವೇರಲಿದೆ.

ಕಾಸರಗೋಡು ಮತ ಎಣಿಕೆ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಭೇಟಿ

ಕಾಸರಗೋಡು: ವಿಧಾನಸಭಾ ಚುನಾವಣೆಯ ಭಾಗವಾಗಿ ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕಾಸರಗೋಡು ಸರಕಾರಿ ಕಾಲೇಜಿನ ಮತ ಎಣಿಕೆ ಕೇಂದ್ರಗಳಿಗೆ ಗುರುವಾರ ಭೇಟಿ ನೀಡಿ ಮಂಜೇಶ್ವರ, ಕಾಸರಗೋಡು ಮತ್ತು ಉದುಮ ಕ್ಷೇತ್ರಗಳ ಮತ ಎಣಿಕೆ ಕೇಂದ್ರಗಳಲ್ಲಿನ ಸಿದ್ಧತೆಗಳನ್ನು ಸಮಗ್ರವಾಗಿ ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದರು.
ಚುನಾವಣಾ ಅಧಿಕಾರಿಗಳಿಗೆ ಅಗತ್ಯದ ಸೂಚನೆಗಳನ್ನು ನೀಡಲಾಯಿತು.
ಕಾಸರಗೋಡು ಸರಕಾರಿ ಕಾಲೇಜಿನ ಮೂರು ಕೇಂದ್ರಗಳಲ್ಲಿ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಅಂಚೆ ಮತಪತ್ರಗಳನ್ನು ಎಣಿಸಲು ವಿಶೇಷ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ. ಸ್ಟ್ರಾಂಗ್ ರೂಮ್‌ಗಳಿಂದ ಇಲೆಕ್ಟ್ರಾನಿಕ್ಸ್ ಮತಯಂತ್ರಗಳನ್ನು ತರಲು ಪ್ರತ್ಯೇಕ ಮಾರ್ಗಗಳನ್ನು ಸಿದ್ಧಪಡಿಸಲಾಗಿದೆ. ಮತ ಎಣಿಕೆಗೆ ನಿಯೋಜಿಸಲಾದ ಅಧಿಕಾರಿಗಳು ಮತ್ತು ಮತ ಎಣಿಕೆ ಏಜೆಂಟ್‌ಗಳಿಗೆ ಪ್ರತ್ಯೇಕ ವ್ಯವಸ್ಥೆಗಳನ್ನು ಏರ್ಪಡಿಸಲಾಗಿದೆ.
ಮತ ಎಣಿಕೆ ಕೇಂದ್ರಗಳಿಗೆ ಪ್ರವೇಶಿಸುವವರಿಗೆ ಮೂರು ಹಂತದ ಭದ್ರತಾ ತಪಾಸಣೆ ಇರುತ್ತದೆ. ಮತ ಎಣಿಕೆಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಸ್ಥಾಪಿಸಲಾಗಿದೆ. ಮತ ಎಣಿಕೆ ಕೇಂದ್ರಗಳ ಭಾಗವಾಗಿ ಸಂವಹನ ಕೇಂದ್ರ ಮತ್ತು ಮಾಧ್ಯಮ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.



ಚುನಾವಣಾಧಿಕಾರಿಗಳಾದ ರಘುಮಣಿ, ಬಿನು ಜೋಸೆಫ್, ಲಿಪು ಎಸ್. ಲಾರೆನ್ಸ್, ಚುನಾವಣಾ ಉಪ ಕಲೆಕ್ಟರ್ ಎನ್.ಗೋಪಕುಮಾರ್, ಸಹಾಯಕ ಚುನಾವಣಾಧಿಕಾರಿಗಳು ಜಿಲ್ಲಾಧಿಕಾರಿಗಳೊಂದಿಗಿದ್ದರು. ಇದೇ ವೇಳೆ ತೃಕ್ಕರೀಪ್ಪುರ ಮತ್ತು ಕಾಞಂಗಾಡು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆಯಲಿದೆ.

ಎಣಿಕೆ ಸಿಬ್ಬಂದಿಗೆ ತರಬೇತಿ

ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳ ಸಹಾಯಕ ಸಿಬ್ಬಂದಿಗಳಿಗೆ ಮತ್ತು ವಿಧಾನಸಭಾ ಚುನಾವಣೆಯ ಮತ ಎಣಿಕೆಗೆ ಸಂಬಂಧಿಸಿದಂತೆ ಅಂಚೆ ಮತಪತ್ರದ ಮತಗಳನ್ನು ಎಣಿಸುವವರಿಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ಉದುಮ, ಕಾಸರಗೋಡು, ಮಂಜೇಶ್ವರ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳ ಸಹಾಯಕ ಸಿಬ್ಬಂದಿಗಳಿಗೆ ಜಿಲ್ಲಾ ಮಾಹಿತಿ ಕಚೇರಿ ಪಿಆರ್ ಚೇಂಬರ್‌ನಲ್ಲಿ ನಡೆದ ತರಬೇತಿಯಲ್ಲಿ ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್ ಇದ್ದರು. ತರಬೇತಿ ನೇತೃತ್ವವನ್ನು ನೋಡಲ್ ಅಧಿಕಾರಿ ಕೆ.ಬಿ.ರಾಮು ವಹಿಸಿದ್ದರು. ಚುನಾವಣಾ ಅಧಿಕಾರಿಗಳಾದ ವಿ.ಪಿ.ರಘುಮಣಿ, ಲಿಪು ಎಸ್.ಲಾರೆನ್ಸ್ ಮತ್ತು ಬಿನು ಜೋಸೆಫ್ ಪಾಲ್ಗೊಂಡಿದ್ದರು. ಮಾಸ್ಟರ್ ತರಬೇತುದಾರರಾದ ಜಿ.ಅಜಿತ್ ಕುಮಾರ್, ಕೆ.ಜಯರಾಜನ್ ಮತ್ತು ಕೆ.ಪದ್ಮನಾಭನ್ ತರಗತಿ ನಡೆಸಿಕೊಟ್ಟರು. ಎರಡನೇ ಹಂತದ ತರಬೇತಿ ಮತ ಎಣಿಕೆಯ ದಿನವಾದ ಮೇ 4ರಂದು ಬೆಳಗ್ಗೆ 6.30ಕ್ಕೆ ಆಯಾ ಮತ ಎಣಿಕೆ ಸಭಾಂಗಣಗಳಲ್ಲಿ ಜರಗಲಿದೆ.

ಕೃಷಿ ಭವನಗಳು ಇನ್ನು ಸ್ಮಾರ್ಟ್, ಕೃಷಿಕರಿಗೆ ಸ್ಮಾರ್ಟ್ ಕಾರ್ಡ್: ಸರ್ಕಾರದ ತೀರ್ಮಾನ

ಕಾಸರಗೋಡು: ರಾಜ್ಯದ ಕೃಷಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಅದಕ್ಕಾಗಿ ರಾಜ್ಯದ ಕೃಷಿ ಭವನಗಳನ್ನು ಸ್ಮಾರ್ಟ್ ಕೃಷಿ ಭವನಗಳಾಗಿ ಭಡ್ತಿಗೊಳಿಸಲಾಗುತ್ತಿದೆ. ಆರಂಭಿಕ ಹಂತದಲ್ಲಿ 70 ಕೃಷಿ ಭವನಗಳನ್ನು ಸ್ಮಾರ್ಟ್ ಕೃಷಿ ಭವನಗಳಾಗಿ ಭಡ್ತಿಗೊಳಿಸಲಾಗುವುದು.
ಸ್ಮಾರ್ಟ್ ಕೃಷಿ ಭವನಗಳ ವ್ಯಾಪ್ತಿಗೊಳಪಟ್ಟ ಕೃಷಿಕರಿಗೆ ಸ್ಮಾರ್ಟ್ ಕಾರ್ಡ್ ನೀಡಲಾಗುವುದು. ಸ್ಮಾರ್ಟ್ ಕಾರ್ಡ್‌ಗಳಲ್ಲಿ ಕೃಷಿ ಭವನಗಳಿಗೆ ಸಂಬಂಧಪಟ್ಟ ಮಾಹಿತಿ ಮತ್ತು ಸೇವೆ ಲಭಿಸಲಿವೆ. ಕೃಷಿ ಸಂಬಂಧಿತ ಸೇವೆ ಸಂಯೋಜನಗೊಳಿಸುವುದು ಈ ಕಾರ್ಡ್ ಯೋಜನೆಯ ಪ್ರಧಾನ ಉದ್ದೇಶವಾಗಿದೆ. ಇಂತಹ ಕಾರ್ಡ್‌ಗಳನ್ನು ಈ ವರ್ಷದಿಂದಲೇ ವಿತರಿಸಲಾಗುವುದು.
ಕೃಷಿಕರ ವೈಯಕ್ತಿಕ ಮಾಹಿತಿಗಳು, ಫೋಟೋ, ಫೋನ್ ನಂಬ್ರ, ಕೃಷಿ ತೋಟದ ಮಾಹಿತಿಗಳು ಇತ್ಯಾದಿಗಳನ್ನು ಡಿಜಿಟಲ್ ರೂಪದಲ್ಲಿ ಒಳಪಡಿಸಲಾಗುವುದು. ಇಂತಹ ಕಾರ್ಡ್ ಲಭಿಸುವ ರೈತರಿಗೆ ಸರಕಾರಿ ಸೇವೆಗಳು ಅತೀ ಶೀಘ್ರವಾಗಿ ಲಭಿಸಲಿದೆಯೆಂದು ರಾಜ್ಯ ಕೃಷಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.
ಕೃಷಿ ನೋಂದಣಿ, ಕೃಷಿ ಅಗತ್ಯಗಳಿಗಿರುವ ಧನ ಸಹಾಯಕ್ಕಾಗಿರುವ ಅರ್ಜಿ, ಬೆಲೆ ವಿಮೆ ಯೋಜನೆ, ಬೀಜ, ಗೊಬ್ಬರ ಇತ್ಯಾದಿಗಳ ವಿತರಣೆ, ಕೃಷಿ ಉಪಕರಣಗಳಿಗೆ ಲಭಿಸುವ ಸಬ್ಸಿಡಿ ಇತ್ಯಾದಿ ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಲಭಿಸುವಂತೆ ಮಾಡುವುದು ಈ ಯೋಜನೆಯ ಪ್ರಧಾನ ಉದ್ದೇಶ. ರೈತರಿಗೆ ಪ್ರತಿ ಸೇವೆಗಳಿಗೆ ಸಂಬಂಧಪಟ್ಟ ಸಲ್ಲಿಸಬೇಕಾಗಿರುವ ಸ್ಥಿತಿಯೂ ಇದರಿಂದ ಇನ್ನು ಇಲ್ಲದಾಗಲಿದೆ. ಆರಂಭದಲ್ಲಿ ಸ್ಮಾರ್ಟ್ ಕೃಷಿ ಹೆಸರು ಭವನದಲ್ಲಿ ನೋಂದಾಯಿಸಿದವರಿಗೆ ಮಾತ್ರ ಈ ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು. ಕೃಷಿ ಇಲಾಖೆ ನೇತೃತ್ವದಲ್ಲಿ ಕೇರಳ ಲ್ಯಾಂಡ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ಈ ಯೋಜನೆ ಜಾರಿಗೊಳಿಸುತ್ತಿದೆ. ಸ್ಮಾರ್ಟ್ ಕಾರ್ಡ್‌ನ್ನು ಕೆಲ್ಟ್ರೋನ್ ತಯಾರಿಸುತ್ತಿದೆ.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ಗುರುವಾರ ಬ್ರಹ್ಮಕಲಶೋತ್ಸವವು ಜರಗಿತು. ಶ್ರೀ ಕೇತ್ರದ ತಂತ್ರಿವರ್ಯ ಶ್ರೀ ಕೃಷ್ಣ ಗುರೂಜಿ ಕುಕ್ಕಾಜೆ ಅವರ ನೇತೃತ್ವದಲ್ಲಿ ಬ್ರಹ್ಮಕಲಶಾಭಿಷೇಕ ಜರಗಿತು. ಇದರ ಅಂಗವಾಗಿ ಗಣಪತಿ ಹೋಮ, ಸಾಮೂಹಿಕ ಪ್ರಾರ್ಥನೆ, ಕವಾಟೋದ್ಘಾಟನೆ, ನಿತ್ಯ ನೈಮಿತ್ತಿಕ ಕಾರ್ಯಗಳ ನಿರ್ಣಯ ಮತ್ತು ಮಹಾಪೂಜೆ ಇತ್ಯಾದಿಗಳೊಂದಿಗೆ ಬ್ರಹ್ಮಕಲಶೋತ್ಸವವು ಶ್ರದ್ಧಾಭಕ್ತಿಯಿಂದ ಸಂಭ್ರಮಗೊಂಡಿತು.
ಶ್ರೀ ಕ್ಷೇತ್ರದ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಮತ್ತು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ಸಲಹಾ ಸಮಿತಿಯ ರಘು ಮೀಪುಗುರಿ, ಭಾಸ್ಕರ ಕಾಳ್ಯಂಗಾಡು, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಕಾರ್ಯದರ್ಶಿಗಳಾದ ರಂಜಿತ್ ಮನ್ನಿಪ್ಪಾಡಿ, ಗೋವಿಂದ ನಾಯ್ಕ್ ಕಾಳ್ಯಂಗಾಡು, ಕೋಶಾಧಿಕಾರಿ ಶಾಂತಕುಮಾರ್ ಮುಂಡ್ಯತ್ತಡ್ಕ ಜೊತೆ ಕೋಶಾಧಿಕಾರಿ ಪುನೀತ್ ಕೆಮ್ಮಣ್ಣು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನರಾಜ್ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ಮಾತೃ ಸಮಿತಿ ಮತ್ತು ಇತರ ಸಮಿತಿಗಳ ಪದಾಧಿಕಾರಿಗಳು ಮತ್ತು ಸಮಸ್ತರು ಹಾಗೂ ಅಸಂಖ್ಯಾತ ಮಂದಿ ಭಕ್ತರು ಪಾಲ್ಗೊಂಡಿದ್ದರು. ಶ್ರೀ ಸರಸ್ವತಿ ಮಂಟಪದಲ್ಲಿ ವಿವಿಧ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆದವು.



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಸ್ಥಾನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಅಂಗವಾಗಿ ಹೊಸ ದಿಗಂತ ಪತ್ರಿಕೆಯು ಗುರುವಾರ ಹೊರತಂದ ವಿಶೇಷ ಪುಟವನ್ನು ಶ್ರೀ ಕ್ಷೇತ್ರದ ಪದಾಧಿಕಾರಿಗಳು ಶ್ರೀ ಕ್ಷೇತ್ರದಲ್ಲಿ ಬಿಡುಗಡೆಗೊಳಿಸಿದರು.



ಕ್ಯಾಂಪ್ಕೋ ಸಂಸ್ಥೆಯ ಸಾಂತ್ವನ ಯೋಜನೆಯಡಿ ಕ್ಯಾಂಪ್ಕೋ ಪೆರ್ಲ (ಬದಿಯಡ್ಕ) ಶಾಖೆಯ ಸಕ್ರಿಯ ಸದಸ್ಯ ದಾಮೋದರ ಮೊಳ್ಳ ಬಜಕೂಡ್ಲು ಅವರ ಪಾಯಿಂ ಆಂಜಿಯೋಪ್ಲಾಸ್ಟಿ ಚಿಕಿತ್ಸೆಗೆ ಸಂಸ್ಥೆಯ ವತಿಯಿಂದ ನೀಡಲಾಗುವ ಸಹಾಯ ಧನದ ಮೊತ್ತ 50,000ರೂ. ಚೆಕ್‌ನು ಸಂಸ್ಥೆಯ ನಿರ್ದೇಶಕ ವೆಂಕಟ್ರಮಣ ಭಟ್ ಅವರು ಸದಸ್ಯರ ಮನೆಗೆ ತೆರಳಿ ಹಸ್ತಾಂತರಿಸಿದರು. ಈ ಸಂದರ್ಭ ಬದಿಯಡ್ಕ ಪ್ರಾದೇಶಿಕ ವ್ಯವಸ್ಥಾಪಕ ಚಂದ್ರ ಎಂ., ಶಾಖಾ ವ್ಯವಸ್ಥಾಪಕ ಶ್ಯಾಮ ಪ್ರಶಾಂತ ಬದಿಯಡ್ಕ ಉಪಸ್ಥಿತರಿದ್ದರು.

ಮಳೆಗಾಲ ಪೂರ್ವ ಸಮಗ್ರ ಸ್ವಚ್ಛತೆ | ಕಾಸರಗೋಡು ಜಿಲ್ಲಾಮಟ್ಟದ ಅಧಿಕಾರಿಗಳು, ಕ್ಲೀನ್ ಕೇರಳ ಪ್ರತಿನಿಧಿಗಳ ವಿಶೇಷ ಸಭೆ

ಸರ್ಕಾರದ ವಿವಿಧ ಇಲಾಖೆಗಳ ಕಚೇರಿ, ಆವರಣ ಸ್ವಚ್ಛತೆ ಕೈಗೊಳ್ಳಲು ತೀರ್ಮಾನ

ಕಾಸರಗೋಡು: ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಕ್ಲೀನ್ ಕೇರಳ ಕಂಪೆನಿಯ (ಸಿಕೆಸಿಎಲ್) ಪ್ರತಿನಿಧಿಗಳ ವಿಶೇಷ ಸಭೆಯು ಜಿಲ್ಲಾ ಮಾಹಿತಿ ಕಚೇರಿಯ ಪಿಆರ್ ಚೇಂಬರ್‌ನಲ್ಲಿ ಗುರುವಾರ ಜರಗಿತು.
ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯದ ಭಾಗವಾಗಿ ಮೇ 6ರಂದು ಸಿವಿಲ್ ಸ್ಟೇಷನ್‌ನಲ್ಲಿರುವ ವಿವಿಧ ಇಲಾಖೆಗಳ ಕಚೇರಿಗಳು ಮತ್ತು ಆವರಣಗಳನ್ನು ಸ್ವಚ್ಛಗೊಳಿಸಲು ನಿರ್ಧರಿಸಲಾಯಿತು. ಇಲೆಕ್ಟ್ರಾನಿಕ್, ಪೇಪರ್ ಮತ್ತು ಸ್ಕ್ರಾಪ್ ತ್ಯಾಜ್ಯಗಳನ್ನು ತೆರವುಗೊಳಿಸಲು ಕ್ಲೀನ್ ಕೇರಳ ಕಂಪೆನಿಯ ಸಹಯೋಗದೊಂದಿಗೆ ಅಗತ್ಯದ ಕ್ರಮಗಳನ್ನು ಕೈಗೊಳ್ಳಲಾಗುವುದು. ಮೇ 8ರಂದು ಎಲ್ಲಾ ಕಚೇರಿಗಳಿಂದ ಇ-ತ್ಯಾಜ್ಯವನ್ನು



ಸಂಗ್ರಹಿಸಲು ಸಹ ತೀರ್ಮಾನಿಸಲಾಯಿತು.
ಮೇ 6ರಂದು ಕಲೆಕ್ಟರೇಟ್ ವ್ಯಾಪ್ತಿಯ ಎಲ್ಲಾ ಕಚೇರಿಗಳು ಮತ್ತು ಆವರಣಗಳನ್ನು ಹಸಿರು ಕ್ರಿಯಾ ಸೇನೆ ಸದಸ್ಯರು ಮತ್ತು ಚೆಂಗಳ ಗ್ರಾಮ ಪಂಚಾಯತ್ ಸಹಕಾರದೊಂದಿಗೆ ಸ್ವಚ್ಛಗೊಳಿಸಲಾಗುವುದು.

ಇಲೆಕ್ಟ್ರಾನಿಕ್ ತ್ಯಾಜ್ಯ ಸಂಗ್ರಹ

ಮೇ 8 ರಂದು ಕಲೆಕ್ಟರೇಟ್ ವ್ಯಾಪ್ತಿಯ ಎಲ್ಲಾ ಕಚೇರಿಗಳಿಂದ ಇಲೆಕ್ಟ್ರಾನಿಕ್ ತ್ಯಾಜ್ಯವನ್ನು ಸಂಗ್ರಹಿಸಿ ಕ್ಲೀನ್ ಕೇರಳ ಕಂಪೆನಿಗೆ ಹಸ್ತಾಂತರಿಸಲಾಗುವುದು. ಇಲೆಕ್ಟ್ರಾನಿಕ್ ತ್ಯಾಜ್ಯ, ಕಾಗದದ ತ್ಯಾಜ್ಯ ಮತ್ತು ಆರೋಗ್ಯ

ಸಮರ್ಪಕ ತ್ಯಾಜ್ಯ ನಿರ್ವಹಣೆ

ಸಾವಯವ ಮತ್ತು ಅಜೈವಿಕ ತ್ಯಾಜ್ಯವನ್ನು ಪ್ರತ್ಯೇಕವಾಗಿ ಇಡಬೇಕು ಮತ್ತು ಎಲ್ಲೆಂದರಲ್ಲಿ ಎಸೆಯಬಾರದು. ಅಜೈವಿಕ ತ್ಯಾಜ್ಯವನ್ನು ಹಸಿರು ಕ್ರಿಯಾ ಸೇನೆಗೆ ಹಸ್ತಾಂತರಿಸಬೇಕು ಎಂದು ಸಭೆಯಲ್ಲಿ ಆದೇಶಿಸಲಾಯಿತು. ಸಾವಯವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಜಿಲ್ಲಾ ನೈರ್ಮಲ್ಯ ಮಿಷನ್ ಕಚೇರಿಯ ಬಳಿ ಪ್ರಾರಂಭಿಸಲಾದ ಜೈವಿಕ ಅನಿಲ ಸ್ಥಾವರ, ಕಲೆಕ್ಟರೇಟ್ ಅಕ್ಷರ ಗ್ರಂಥಾಲಯದ ಬಳಿಯ ತುಂಬೂರ್ಮುಳಿ ತ್ಯಾಜ್ಯ ಸಂಸ್ಕರಣಾ ವ್ಯವಸ್ಥೆ, ಚೆಂಗಳ ಗ್ರಾ.ಪಂ.ನ ರಿಂಗ್ ಕಾಂಪೋಸ್ಟ್ ವ್ಯವಸ್ಥೆಗಳಲ್ಲಿ ಸಾವಯವ ತ್ಯಾಜ್ಯವನ್ನು ಸಂಸ್ಕರಿಸಬಹುದು ಎಂದು ಸೂಚಿಸಲಾಯಿತು.

ಹಾಗೂ ಪರಿಸರಕ್ಕೆ ಅಪಾಯವನ್ನುಂಟುಮಾಡುವ ಪಾದರಸ ಮತ್ತು ಸೀಸದಂತಹ ಅಪಾಯಕಾರಿ ತ್ಯಾಜ್ಯಗಳನ್ನು ಸರಿಯಾಗಿ ಬೇರ್ಪಡಿಸಿ ವಿಲೇವಾರಿ ಮಾಡಬೇಕು ಎಂದು ಸೂಚಿಸಲಾಯಿತು.
ಸಂಗ್ರಹವಾದ ತ್ಯಾಜ್ಯವನ್ನು ಮೌಲ್ಯವರ್ಧಿತ ಉತ್ಪನ್ನಗಳಾಗಿ ಪರಿವರ್ತಿಸಲು ಎಲ್ಲಾ ವಲಯಗಳು ಸಮನ್ವಯದಿಂದ ಕೆಲಸ ಮಾಡಬೇಕೆಂದು ಸಭೆಯು ಆದೇಶಿಸಿತು. ಉಪ ಕಲೆಕ್ಟರ್ ಲಿಪು ಎಸ್. ಲಾರೆನ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲಾ ಶುಚಿತ್ವ ಮಿಷನ್ ಸಂಯೋಜಕ ಪಿ.ಜಯನ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಕ್ಲೀನ್ ಕೇರಳ ಕಂಪೆನಿ ಪ್ರತಿನಿಧಿಗಳಾದ ಅಬ್ದುಲ್ ಹಕೀಮ್ ಮತ್ತು ಸೌರವ್ ಮಾತನಾಡಿದರು. ವಿವಿಧ ಇಲಾಖಾ ಮುಖ್ಯಸ್ಥರು ಭಾಗವಹಿಸಿದ್ದರು.

ಸುತ್ತಮುತ್ತ

ಮೇ 3ರಂದು ನಲಿ ಕುಣಿ ಸಮಾರೋಪ

ಕೋಟ: ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ– ಐರೋಡಿ ಕಳೆದ 20 ದಿವಸಗಳಿಂದ ಆಯೋಜಿಸಿದ್ದ ಯಕ್ಷಗಾನ ಅಭಿನಯ ಮತ್ತು ಹೆಜ್ಜೆ ತರಬೇತಿ ಶಿಬಿರವು ಮೇ 3ರಂದು ಸಮಾಪ್ತಿಗೊಳ್ಳಲಿದೆ. ಅಂದು ಸಂಜೆ ಗಂಟೆ 4.30ರಿಂದ ಮಕ್ಕಳು ಶಿಬಿರದಲ್ಲಿ ಕಲಿತ ವಿದ್ಯೆಯ ಪ್ರದರ್ಶನ ನಡೆಯಲಿದೆ. 5.30ರಿಂದ ಆನಂದ ಸಿ.ಕುಂದರ್ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಕಿರಣ್ ಕುಮಾರ ಕೊಡ್ಗಿ, ಶ್ರೀ ಗುರುನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ ಕಾರಂತ, ಸಾಲಿಗ್ರಾಮದ ಉದ್ಯಮಿ ಚಂದ್ರಶೇಖರ ಕಾರಂತ, ಹೆಬ್ರಿಯ ರಾಘವೇಂದ್ರ ಚಾರಿಟೇಬಲ್ ಟ್ರಸ್ಟ್‌ನ ಭಾರ್ಗವಿ ಆರ್ ಐತಾಳ, ಕಲಾಕೇಂದ್ರದ ಆರ್ಥಿಕ ಸಮಿತಿಯ ಅಧ್ಯಕ್ಷ ಅನಂತ ಪದ್ಮನಾಭ ಐತಾಳ ಹಾಗೂ ಪ್ರಾಚಾರ್ಯ ಸದಾನಂದ ಐತಾಳರು ಉಪಸ್ಥಿತರಿರುವರು. ಗಂಟೆ 6.30 ರಿಂದ ಪುನಃ ಮಕ್ಕಳ ಪ್ರತಿಭಾ ಪ್ರದರ್ಶನ ನಡೆಯಲಿದೆಯೆಂದು ಕಲಾಕೇಂದ್ರದ ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ್ ತಿಳಿಸಿದ್ದಾರೆ.

ಮೇ 5ರಂದು ಕೆಡಿಪಿ ಸಭೆ

ಉಡುಪಿ: ಕಾಪು ತಾಲೂಕು ಪಂಚಾಯತ್‌ನ ಪ್ರಸಕ್ತ ಸಾಲಿನ ತಾಲೂಕು ಮಟ್ಟದ ಪ್ರಥಮ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ) ಪ್ರಗತಿ ಪರಿಶೀಲನಾ ಸಭೆಯು ಮೇ 5ರಂದು ಬೆಳಗ್ಗೆ 10.30 ಕ್ಕೆ ಕಾಪು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಕಾಪು ತಾಲೂಕು ಪಂಚಾಯತ್ ಕಚೇರಿ ಪ್ರಕಟಣೆ ತಿಳಿಸಿದೆ.

ಐಟಿಐ ಪ್ರವೇಶಾತಿಗೆ ಅರ್ಜಿ ಆಹ್ವಾನ

ಉಡುಪಿ: ಬೈಂದೂರು ಇಲ್ಲಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಲೆಕ್ಟ್ರೀಷಿಯನ್, ಫಿಟ್ಟರ್ ಮತ್ತು ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್ ವೃತ್ತಿಗಳ ಪ್ರವೇಶಾತಿಗೆ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮೇ 8 ಕೊನೆಯ ದಿನ. ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.cite.karnataka.gov.in ಅಥವಾ ಪ್ರಾಚಾರ್ಯರು, ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬೈಂದೂರು ಮೊಬೈಲ್ ನಂ: 9980305173, 9741847649 ಹಾಗೂ 9483593148 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರ ಕಚೇರಿ ಪ್ರಕಟಣೆ ತಿಳಿಸಿದೆ.

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ

ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ಗಣಪತಿ ದೇವರ ಬಿಂಬಪ್ರತಿಷ್ಠೆ







ಪಡುಬಿದ್ರಿ: ರೂ.33 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ಗಣಪತಿ ದೇವರ ಬಿಂಬಪ್ರತಿಷ್ಠೆಯು ಶ್ರೀ ಕ್ಷೇತ್ರದ ತಂತ್ರಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಗುರುವಾರ ಜರಗಿತು.

ಆ ಪ್ರಯುಕ್ತ ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾ ರುದ್ರಯಾಗ, ವೃಷಭಾಧಿವಾಸ ಯಾಗ, ಗಣಪತಿ ದೇವರ ಪ್ರತಿಷ್ಠಾ ಯಾಗ, ಪೀಠಿಕಾ ಯಾಗ, ಶಕ್ತಿ ಯಾಗ, ಬೆಳಿಗ್ಗೆ 8–02ಕ್ಕೆರ ವೃಷಭಲಗ್ನ ಸುಮುಹೂರ್ತದಲ್ಲಿ ಗಣಪತಿ ದೇವರ ಬಿಂಬಪ್ರತಿಷ್ಠೆ, ಅಷ್ಟಬಂಧ ಲೇಪನ, ಕಲಶಾಭಿಷೇಕ, ಪ್ರತಿಜ್ಞಾವಿಧಿ, ಧ್ವಜದೇವತಾ ಪ್ರತಿಷ್ಠೆ, ಸೃಷ್ಟಿಬಲಿ, ಧ್ವಜಾರೋಹಣ, ರುದ್ರದೇವರ ಶಾಂತಿ ಪ್ರಾಯಶ್ಚಿತ್ತ ಯಾಗ, ಪಂಚಬ್ರಹ್ಮ ಯಾಗ, ನವಕ ಪ್ರಧಾನ ಯಾಗ, ಕಲಶಾಭಿಷೇಕ, ಪ್ರಸನ್ನ ಪೂಜೆ, ಮಹಾಪೂಜೆ, ಬಲಿ ಜರಗಿತು.

ಸಂಜೆ ಬ್ರಹ್ಮಕಲಶಮಂಟಪಸಂಸ್ಕಾರ, ದುರ್ಗಾರಾಧನೆ, ರಾತ್ರಿ ಪೂಜೆ, ಬಲಿ, ಮಹಾರಂಗಪೂಜೆಯು ನೆರವೇರಿತು. ಜಗದ್ಗುರು ಶ್ರೀಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀ ಚಿತ್ರಾಪುರ ಮಠದ ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರ ದಿವ್ಯಸಾನಿಧ್ಯ ಮತ್ತು ಸಂಸ್ಥಾನ ಪೂಜೆಯು ಜರಗಿತು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ. ಕೆ.ಪ್ರಕಾಶ್ ಶೆಟ್ಟಿ ನೇತೃತ್ವದಲ್ಲಿ ದಾನಿಗಳನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ಕೊರ್ನಾಯ ಪದ್ಮನಾಭ ರಾವ್, ಆನುವಂಶಿಕ ಮೊಕ್ತೇಸರ ರತ್ನಾಕರರಾಜ ಅರಸು ಕಿನ್ನಕ್ಕ ಬಲ್ಲಾಳ್, ಪೇಟೆಮನೆ ಭವಾನಿಶಂಕರ್ ಹೆಗ್ಡೆ, ಕೊರ್ನಾಯ ಶ್ರೀಪತಿ ರಾವ್, ಕಾರ್ಯ ನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಅರ್ಚಕ ಎಚ್. ಪದ್ಮನಾಭ ಭಟ್, ವೈ. ಗುರುರಾಜ ಭಟ್, ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ರಾಘವೇಂದ್ರ ನಾವಡ, ಕಾರ್ಯದರ್ಶಿಗಳಾದ ಶ್ರೀನಾಥ್ ಹೆಗ್ಡೆ ನಡ್ಸಾಲ್ ಗುತ್ತು, ವೈ. ಸುಕುಮಾರ್, ಸಹ ಕಾರ್ಯದರ್ಶಿಗಳಾದ ನವೀನ್‌ಚಂದ್ರ ಜೆ. ಶೆಟ್ಟಿ ಸುಚರಿತ, ಖಜಾಂಚಿ ಕಾರ್ಯನಿರ್ವಾಹಕ ಅಧಿಕಾರಿ ರಾಜಗೋಪಾಲ ಉಪಾಧ್ಯಾಯ, ಉಪಾಧ್ಯಕ್ಷರಾದ ರವೀಂದ್ರನಾಥ ಜಿ. ಹೆಗ್ಡೆ, ಸದಾಶಿವ ಪಡುಬಿದ್ರಿ, ಪ್ರಶಾಂತ್ ಶೆಣೈ, ಭಾಸ್ಕರ್ ಕೆ, ಪ್ರಕಾಶ್ ದೇವಾಡಿಗ, ಸುಕುಮಾರ್ ಶ್ರೀಯಾನ್, ಸದಸ್ಯರಾದ ವೈ ಗುರುರಾಜ್ ಭಟ್, ರಾಜೇಶ್ ಪಿ., ಪಿ.ಕೆ. ಸದಾನಂದ, ಬ್ರಹ್ಮಕಲಶೋತ್ಸವಸಮಿತಿಯಪ್ರಧಾನಕಾರ್ಯದರ್ಶಿ ಮುರಳಿನಾಥ ಶೆಟ್ಟಿ, ಉಪಾಧ್ಯಕ್ಷರಾದ ವೈ.ಎನ್. ರಾಮಚಂದ್ರ ರಾವ್, ಕೃಷ್ಣ ಶೆಟ್ಟಿ ಕಂಕಣಗುತ್ತು, ಪಿ.ಕೆ. ಸದಾನಂದ, ಅಶೋಕ್ ಸಾಲ್ಯಾನ್, ಪ್ರಶಾಂತ್ ಶೆಣೈ, ಭರತ್ ದೇವಾಡಿಗ, ಕಾರ್ಯದರ್ಶಿಗಳಾದ ಪ್ರಕಾಶ್ ದೇವಾಡಿಗ, ರಮಾಕಾಂತ್ ರಾವ್, ಗುರುಪ್ರಸಾದ್ ರಾವ್, ಪ್ರಮುಖರಾದ ಆಶಾ ಪ್ರಕಾಶ್ ಶೆಟ್ಟಿ ಶಕುಂತಳಾ ಬಿ. ಹೆಗ್ಡೆ, ಕೃಷ್ಣಾಪುರ ಶಾಖಾ ಮಠದ ಶ್ರೀನಿವಾಸ ಉಪಾಧ್ಯಾಯ, ಮಿಥುನ್ ಹೆಗ್ಡೆ, ಜಯ ಶೆಟ್ಟಿ ಪದ್ರ, ಉದಯ ಶೆಟ್ಟಿ ದರಟಗುತ್ತು, ಪೇಟೆಮನೆ ಪ್ರಕಾಶ್ ಶೆಟ್ಟಿ, ಮುರುಡಿ ಜಗದೀಶ್ ರಾವ್, ಸದಾಶಿವ ಆಚಾರ್, ವಿಷ್ಣುಮೂರ್ತಿ ಆಚಾರ್ಯ, ಬ್ರಹ್ಮಕಲಶೋತ್ಸವ, ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು, ವಿವಿಧ ಉಪಸಮಿತಿಗಳ ಸಂಚಾಲಕರು, ಸದಸ್ಯರು ಊರಿನ ಹತ್ತು ಸಮಸ್ತರು, ಭಕ್ತರು ಇದ್ದರು.

ಬೈಂದೂರು, ಕುಂದಾಪುರ ತಾಲೂಕಿನ ರೈತರಿಗೆ ಹೊರರಾಜ್ಯ ಅಧ್ಯಯನ ಪ್ರವಾಸ



ಬೈಂದೂರು: ಕುಂದಾಪುರ ತೋಟಗಾರಿಕೆ ಇಲಾಖೆ ವತಿಯಿಂದ ಬೈಂದೂರು ಹಾಗೂ ಕುಂದಾಪುರ ಭಾಗದ ರೈತರಿಗೆ ಎರಡು ದಿನಗಳ ಹೊರರಾಜ್ಯ ಅಧ್ಯಯನ ಪ್ರವಾಸ ಆಯೋಜಿಸಲಾಗಿತ್ತು.

ಮೊದಲನೇ ದಿನದಲ್ಲಿ ರೈತರು ಪಲ್ಲತಡ್ಕ ಅನಂತಕೃಷ್ಣ ಅವರ ತೋಟಕ್ಕೆ ಭೇಟಿನೀಡಿ ದೂಪದ ಮರದ ಮೇಲೆ ಕಾಳುಮೆಣಸು ಬೆಳೆಯನ್ನು ಉತ್ತಮ ರೀತಿಯಲ್ಲಿ ಬೆಳೆದಿರುವುದನ್ನು ಹಾಗೂ ಆಧುನಿಕ ನೀರಾವರಿ ವ್ಯವಸ್ಥೆಯನ್ನು ವೀಕ್ಷಿಸಿದರು.

ಕಾಸರಗೋಡು ಕೃಷಿ ಕೇಂದ್ರದಲ್ಲಿ ತೆಂಗು ಬೆಳೆಯಲ್ಲಿ ಅಂತರ ಬೆಳೆಯಾಗಿ ಜಾಯಿಕಾಯಿ, ಕೊಕ್ಕೋ, ಬಾಳೆ ಬೆಳೆಗಳನ್ನು ಮಾದರಿಯಾಗಿ ಬೆಳೆದಿರುವ ಪ್ರಾತ್ಯಕ್ಷಿತೆ ವೀಕ್ಷಿಸಿ ನುರಿತ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು. ಎರಡನೇ ದಿನ ಕಣ್ಣೂರು ಜಿಲ್ಲೆಯ ಪಯ್ಯನ್ನೂರು ಕೃಷಿ ಕೇಂದ್ರಕ್ಕೆ ಭೇಟಿನೀಡಿ ಕಾಳುಮೆಣಸು ಸಹಿತ ವಿವಿಧ ತಳಿಗಳನ್ನು ಹಾಗೂ ಸಸ್ಯ ಅಭಿವೃದ್ಧಿಗಳನ್ನು ಬೇರೆ ಬೇರೆ ಪದ್ಧತಿಗಳಲ್ಲಿ ಬೆಳೆದಿರುವುದನ್ನು ವೀಕ್ಷಿಸಿದರು.

ಕುಂದಾಪುರ ಸಹಾಯಕ ಕೃಷಿ ಅಧಿಕಾರಿಗಳಾದ ಪ್ರವೀಣ್ ಕುಮಾರ್, ಉಮೇಶ್, ಹಿರಿಯ ರೈತರಾದ ವೆಂಕಟೇಶ್ ಹೆಬ್ಬಾರ್ ಹೊಸ್ಕೋಟೆ. ರಾಮಯ್ಯ ಶೆಟ್ಟಿ ಗೌತಮ್ ಶೆಟ್ಟಿ ಚಂದ್ರ ಪೂಜಾರಿ ಸಳ್ಕೊಡು, ಸಾಯಿಕುಮಾರ್ ಗೋಳಿಹೊಳೆ. ಜೇಕಬ್ ಜಡ್ಕಲ್, ಶರತ್, ಪ್ರಭಾಕರ, ಬೋಜು ಪೂಜಾರಿ, ಮಂಜನಾಥ, ನಿರಂಜನ್ ಭಾಗವಹಿಸಿ ವಿವಿಧ ಮಾಹಿತಿ ಪಡೆದರು.

ಮೂಡ್ಲಕಟ್ಟೆ 'ಸಾವಿಷ್ಕರ್'ನಲ್ಲಿ ಬಂಟಕಲ್ಲು ಕಾಲೇಜಿಗೆ ಸಮಗ್ರ ಚಾಂಪಿಯನ್‌ಶಿಪ್ ಪ್ರಶಸ್ತಿ



ಶಿರ್ವ: ಕುಂದಾಪುರ ಮೂಡ್ಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಯೋಜಿಸಿದ್ದ ತಾಂತ್ರಿಕ ಮತ್ತು ಸಾಂಸ್ಕೃತಿಕ ಹಬ್ಬ ಸಾವಿಷ್ಕರ್ – 2026ರಲ್ಲಿ ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಸಮಗ್ರ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಪಡೆದಿದ್ದಾರೆ.

ಗಣಕ ಯಂತ್ರ ವಿಭಾಗದ ವಿದ್ಯಾರ್ಥಿಗಳಾದ ಗುರು ಗಣೇಶ್ ಎನ್. ಭಟ್, ಕಾಮಾಕ್ಷಿ ಜಿ. ನಾಯಕ್, ನಾಗರಾಜ, ಸಾತ್ವಿಕ್ ಜೆ. ಮತ್ತು ಸಂಜನಾ ಇವರು ಸಿನಿಕ್ಯಾಪ್ಚರ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್ ವಿಭಾಗದ ವಿದ್ಯಾರ್ಥಿಗಳಾದ ನಾಗರಾಜ, ಸಾತ್ವಿಕ್ ಜೆ. ಮತ್ತು ಸಂಜನಾ ಇವರು ದ್ವಿತೀಯ ಬಹುಮಾನವನ್ನು ಪಡೆದಿದ್ದಾರೆ. ಪ್ರಾಂಪ್ಟ್ ಸ್ಪರ್ಧೆಯಲ್ಲಿ ವಿಷ್ಣುಪ್ರಸಾದ್ ಮತ್ತು ಕಲಾ ಸಮ್ಮಿಲನಾ ಚಿತ್ರಕಲೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಸಮೂಹ ನೃತ್ಯ ಸ್ಪರ್ಧೆಯಲ್ಲಿ ಗಂಕಯಂತ್ರ ವಿಭಾಗ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಡಾಟಾ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಾದ ಅನನ್ಯ, ಸ್ಫೂರ್ತಿ, ಗ್ಲೆನ್‌ಸ್ಟನ್ ಕ್ರಿಸ್ ಡಯಾಸ್ ಮತ್ತು ಕಾರ್ತಿಕ್ ಪ್ರಥಮ ಹಾಗೂ ಗಾನವಿ ಸುಷ್ಮಾ ಕಾವ್ಯ, ಅನುಶ್ರೀ ಪಿ. ತಂತ್ರಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ದಮ್ ಚಾರಡೇಸ್‌ನಲ್ಲಿ ಗಣಕಯಂತ್ರ ವಿಭಾಗದ ವಿದ್ಯಾರ್ಥಿಗಳಾದ ಗಾನವಿ ಸುಷ್ಮಾ ಕಾವ್ಯ, ಅನುಶ್ರೀ ಪಿ. ತಂತ್ರಿ, ಚಂದ್ರಕಲಾ ಪ್ರಥಮ ಹಾಗೂ ಶ್ರೀಧನ್ಯ, ಶ್ರೇಯಾ, ಸೌಂದರ್ಯ, ಸೌಜನ್ಯ ದ್ವಿತೀಯ ಬಹುಮಾನ ಪಡೆದಿದ್ದಾರೆ.